ಕಸ್ತೂರಿ

ಜನೆವರಿ, ೧೯೮೨

ಬೆಲೆ : ರೂ. ೨-೫೦



ವೈಜ್ಞಾನಿಕವಾಗಿ ನಿಮ್ಮ ಭವಿಷ್ಯತ್ತು

'ವಿಜ್ಞಾನ ವಿಕಾಸ'ವು ಕಳೆದ ಸಪ್ಟೆಂಬರ ತಿಂಗಳಲ್ಲಿ ಆರಂಭಿಸಿದ ಹಸ್ತಸಾಮುದ್ರಿಕ ವಿಭಾಗವು ವಿಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ನಡೆಸಿದ ಸಂಶೋಧನೆಗಳ ಅನುಭವದಿಂದ ಸಾರ್ವಜನಿಕರಿಗೆ ಭವಿಷ್ಯತ್ತಿನ ಬಗ್ಗೆ ಸಲಹೆ ಸೂಚನೆಗಳನ್ನು ನೀಡುತ್ತಾ ಬಂದಿದೆ.

ನೀವು ನಿಮ್ಮ ಎರಡೂ ಹಸ್ತಗಳ ಮುದ್ರಿಕೆಗಳನ್ನು (Palm Prints) ಬಿಳಿ ಹಾಳೆಗಳ ಒಂದೇ ಮಗ್ಗುಲಲ್ಲಿ ತೆಗೆದು ಭವಿಷ್ಯತ್ತಿನ ಬಗ್ಗೆ ನಿಮಗಿಷ್ಟವಾದ ಯಾವುದೇ ಮೂರು ಪ್ರಶ್ನೆಗಳನ್ನು ನಿಮ್ಮ ಜನ್ಮ ದಿನಾಂಕ, ಪೂರ್ಣ ಹೆಸರು, ವಿಳಾಸ, ಎದುರಿಸುತ್ತಿರುವ ಸಮಸ್ಯೆಗಳು ಮುಂತಾದ ಬಗ್ಗೆ ಒಂದು ಪುಟಕ್ಕೆ ಮೀರದಂತೆ ಕನ್ನಡ ಯಾ ಇಂಗ್ಲೀಷ್‌ನಲ್ಲಿ ಬರೆದು ರೂಪಾಯ ೮-೦೦ ರ ಪೋಸ್ಟಲ್ ಆರ್ಡರನ್ನು "ವಿಜ್ಞಾನ ವಿಕಾಸ, ಧಾರವಾಡ-೮ ಹೆಸರಿನಲ್ಲಿ ಕ್ರಾಸ್‌ಮಾಡಿ ಲಗತ್ತೀಕರಿಸಿ ನಮ್ಮ ಕೆಳಕಂಡ ವಿಳಾಸಕ್ಕೆ ಕಳುಹಿಸಿರಿ. ನಿಮ್ಮ ಪ್ರಶ್ನೆಗಳಿಗೆ ನಿಖರವಾದ ಉತ್ತರವನ್ನು ನಮ್ಮಲ್ಲಿನ ಸಂಶೋಧಕರು ಹಾಗೂ ಹಸ್ತರೇಖಾ ತಜ್ಞರ ಅಭಿಪ್ರಾಯದಂತೆ ಪೋಸ್ಟ್ ಮುಖಾಂತರ ತಿಳುಹಿಸಲಾಗುವುದು.

ಹಸ್ತರೇಖಾ ಮುದ್ರಿಕೆಗಳನ್ನು ತೆಗೆಯುವ ವಿಧಾನ :—

೧) ಸ್ಟ್ಯಾಂಪ್ ಪ್ಯಾಡ್ (Stamp Pad) ಮಸಿಯನ್ನು ನಿಮ್ಮ ಪೂರ್ಣ ಹಸ್ತಕ್ಕೆ ಬಳಿದುಕೊಂಡು, ಅಥವಾ ಸಾಮಾನ್ಯ ಶಾಯಿಯನ್ನು ಹತ್ತಿಯಲ್ಲದ್ದಿ ತೆಳುವಾಗಿ ಲೇಪಿಸಿ ಸಮತಟ್ಟಾದ ಜಾಗದಲ್ಲಿರಿಸಿದ ಬಿಳಿ ಕಾಗದದ ಮೇಲೆ ಒಂದು ಹಸ್ತವನ್ನಿರಿಸಿ ಇನ್ನೊಂದು ಕೈಯಿಂದ ಹಸ್ತದ ಹಿಂಭಾಗವನ್ನು ಒತ್ತಿರಿ.

೨) ಮೇಲಿನಂತೆ ಮತ್ತೊಂದೊಂದು ಮುದ್ರಿಕೆಗಳನ್ನು ತೆಗೆಯುವಾಗ, ಹಸ್ತವನ್ನು ಕಾಗದದಿಂದ ಮೇಲೆತ್ತುವ ಮುನ್ನ ಕಿರಿಬೆರಳ ಕಡೆ ಹೊರಳಿಸಿ, ಕಿರಿಬೆರಳ ಪಾರ್ಶ್ವದ ಅಂಗೈ ಹೊರ ಅಂಚಿನಲ್ಲಿರುವ ರೇಖೆಗಳು ಮೂಡುವಂತೆ ಮಾಡಿ.

೩) ಪೂರ್ಣ ಹಸ್ತಗಳ ಎರಡೆರಡು ಮುದ್ರಿಕೆಗಳನ್ನು ತೆಗೆದಾದ ನಂತರ ಮತ್ತೊಂದೆಡೆ ಹತ್ತೂ ಬೆರಳುಗಳ ತುದಿ ಪಲ್ಲವದ ಮುದ್ರಿಕೆಗಳನ್ನು ಹೆಬ್ಬೆಟ್ಟಿನ ಮುದ್ರೆಯೊತ್ತುವಂತೆ ತೆಗೆಯಿರಿ.

೪) ಹಸ್ತ ಅಥವಾ ಮುಖದ ಯಾವುದೇ ಭಾಗದಲ್ಲಿ ಕಪ್ಪು ಚುಕ್ಕೆಯನ್ನು ಹೊಂದಿರುವವರು ಆ ಬಗ್ಗೆ ನಮೂದಿಸಿರಿ.

ವಿಶೇಷ ಸೂಚನೆ :—

೧) ತಮ್ಮ ಸಮಗ್ರ ಭವಿಷ್ಯತ್ತಿನ ರೂಪರೇಷೆಯನ್ನರಿಯ ಬಯಸುವವರು ರೂಪಾಯ ೧೦-೦೦ ರ ಕ್ರಾಸ್ಡ್ ಪೋಸ್ಟಲ್ ಆರ್ಡರನ್ನು ಕಳುಹಿಸತಕ್ಕದ್ದು.

೨) ರಿಜಿಸ್ಟರ್ಡ್ ಪೋಸ್ಟ್ ಮುಖಾಂತರ ಉತ್ತರ ಕಳುಹಿಸಬೇಕಿದ್ದಲ್ಲಿ ರೂಪಾಯ ೩-೦೦ ರ ಹೆಚ್ಚಿಗೆ ಕಳುಹಿಸಿರಿ.

೩) ೧೬ ವರ್ಷಕ್ಕಿಂತ ಕಿರಿಯರ ಮುದ್ರಿಕೆಗಳನ್ನು ಕಳುಹಿಸುವಾಗ ರೂಪಾಯ ೫-೦೦ ರ ಪೋಸ್ಟಲ್ ಆರ್ಡರನ್ನು ಮಾತ್ರ ಕಳುಹಿಸಿ.

೪) ನಿಮ್ಮ ಪತ್ರವನ್ನು ಅಂಚೆಪೆಟ್ಟಿಗೆಗೆ ಹಾಕುವ ಮುನ್ನ ಸಾಕಷ್ಟು ಅಂಚೆ ಚೀಟಿ ಹಚ್ಚಿರಿ.

ನಮ್ಮ ವಿಳಾಸ : —

Dept. of Palmistry, 'VIJNANA VIKAS'

P. B. No. 204, DHARWAD-580008 (Karnatak S

ಹೆಣ್ಣು-ಸೊಳ್ಳೆಯನ್ನು ಎದುರಿಸುವುದು ನಿಮಗೆ ಸಾಧ್ಯವೇ?




3BN ರಿಪೆಲ್ಲೆಂಟ್‌ಯುಕ್ತ ಸುಧಾರಿಸಲ್ಪಟ್ಟ, ಓಡೊಮಸ್ ಎದುರಿಸಬಲ್ಲುದು.

ಗಂಡು ಸೊಳ್ಳೆಗಳು ಮನುಷ್ಯರಿಗೆ ಕಚ್ಚುವುದಿಲ್ಲ ಎಂಬ ಸಂಗತಿ ನಿಮಗೆ ಗೊತ್ತಿತ್ತೇ? ಕಚ್ಚುವುದು ಹೆಣ್ಣು ಸೊಳ್ಳೆ ಮಾತ್ರ. ಅಷ್ಟೇ ಅಲ್ಲ, ಹೆಣ್ಣು ಸೊಳ್ಳೆಗಳು ಭಯಾನಕವಾದ ಮಲೇರಿಯಾ ಮತ್ತು ಶೀತ ಜ್ವರದ ಕ್ರಿಮಿಗಳ ಸಮರ್ಥ ವಾಹಕಗಳಾಗಿವೆ. ಇಂತಹ ಸೊಳ್ಳೆಯ ಒಂದು ಕಡಿತ ಸಹ ನಿಮಗೂ ನಿಮ್ಮ ಮನೆ ಜನರಿಗೂ ಮಾರಕವಾಗಬಹುದು.

ನೀವು ಮಾಡಬೇಕಾದ್ದು ಇಷ್ಟೇ: 3 BN ರಿಪೆಲ್ಲೆಂಟ್‌ಯುಕ್ತ ಸುಧಾರಿಸಲ್ಪಟ್ಟ ಓಡೊಮಸ್ ಕೊಂಡುಕೊಳ್ಳಿರಿ. ಅದನ್ನು ಶರೀರದ ಆವರಣವಿರದ ಭಾಗಗಳಿಗೆಲ್ಲ ವ್ಯಾನಿಶಿಂಗ್ ಕ್ರೀಮ್‌ನ ಹಾಗೆ ಹಚ್ಚಿಕೊಳ್ಳಿರಿ. ಮಗುವಿನ ಕೋಮಲ ಚರ್ಮಕ್ಕೆ ಕೂಡ ಇದು ಅತ್ಯಂತ ಸುರಕ್ಷಿತವಾಗಿದೆ. ಇಂದೇ ಓಡೊಮಸ್ ಕೊಳ್ಳಿರಿ, ಮತ್ತು ರಾತ್ರಿಯಿಡೀ ಸುಖ ನಿದ್ರೆ ಪಡೆಯಿರಿ.

ಈಗ 100 ಗ್ರಾಮ್ [illegible] ಪ್ಯಾಕ್‌ನಲ್ಲಿಯೂ ದೊರೆಯುತ್ತದೆ.

ಓಡೊಮಸ್ ಲೇಪನ, ಸೊಳ್ಳೆಗಳ ಪಲಾಯನ!



ಬಲ್ಸಾರಾ
ಸುಖಮಯ ಜೀವನಕ್ಕೆ ಆಧುನಿಕ ಸಾಧನಗಳು

CHAITRA-BLS-438 R KAN

ಮದ್ಯಪಾನ ಒಂದು ಸಾಮಾಜಿಕ ಪಿಡುಗು. ಕುಡಿತದ ಚಟಕ್ಕೆ ಬಲಿಯಾಗಿ ನರಳುತ್ತಿರುವ ಕುಟುಂಬಗಳು ಸಾವಿರಾರು. ಈ ಚಟಕ್ಕೆ ತುತ್ತಾಗಿರುವವರಲ್ಲಿ ಬಡಕೂಲಿಕಾರರು ಮತ್ತು ಕಾರ್ಮಿಕ ಕುಟುಂಬಗಳೇ ಹೆಚ್ಚಾಗಿರುವುದು ದುರ್ದೈವದ ಸಂಗತಿ.

ಕುಡಿಯುವ ಚಟ ಸಾಮಾನ್ಯವಾಗಿ ಆರಂಭವಾಗುವುದು ಮೋಜಿಗಾಗಿ. ನಂತರ ಇದೊಂದು ಅಭ್ಯಾಸವಾಗಿ ಪರಿಣಮಿಸಿ ದುರ್ವ್ಯಸನದಲ್ಲಿ ಕೊನೆಗೊಳ್ಳುತ್ತದೆ. ಇದರಿಂದಾಗುವ ದುಷ್ಪರಿಣಾಮಗಳೂ ಭಯಂಕರ. ಆರ್ಥಿಕವಾಗಿ, ಸಾಮಾಜಿಕವಾಗಿ ಈ ಕುಡಿತಕ್ಕೆ ಬಲಿಯಾದ ವ್ಯಕ್ತಿ ಹಾಗೂ ಅವನ ಕುಟುಂಬದವರು ಸಂಕಷ್ಟ ಪರಿಸ್ಥಿತಿಗೊಳಗಾಗುತ್ತಾರೆ. ಮದ್ಯಪಾನ ಚಟಕ್ಕೆ ಬಲಿಯಾದವರ ಮತ್ತು ಅವರ ಕುಟುಂಬಗಳ ಪರಿಸ್ಥಿತಿ ಹೀಗಿದ್ದರೆ ಕಳ್ಳಭಟ್ಟಿ ಕುಡಿಯುವವರ ಕುಟುಂಬಗಳ ಗೋಳು ಇನ್ನೂ ಶೋಚನೀಯ. ಈ ಕೀಳುದರ್ಜೆಯ ಮದ್ಯ ಸೇವಿಸಿ ಅಪಮೃತ್ಯುಗೀಡಾಗುವ ದುರ್ಘಟನೆಗಳೂ ಆಗಿಂದಾಗ್ಗೆ ಕೇಳಿಬರುತ್ತವೆ. ೧೯೮೧ರ ಜುಲೈ ೭ರಂದು ಬೆಂಗಳೂರಿನಲ್ಲಿ ನಡೆದ ಭೀಕರ ಘಟನೆಯಂತೂ ಮೈ ನಡುಗಿಸುವಂಥದು. ಕಳ್ಳಭಟ್ಟಿ ಕುಡಿದು ಮೂರು ನೂರಕ್ಕೂ ಹೆಚ್ಚು ಜನರ ಸಾವು. ಕಳ್ಳಭಟ್ಟಿ ಕುಡಿದು ಸಾವಿನಂಚಿನಲ್ಲಿ ತೊಳಲಾಡುತ್ತಿದ್ದ ಜನರ ಚಿಕಿತ್ಸೆಗಾಗಿ ಸರಕಾರ ವಿಶೇಷ ವ್ಯವಸ್ಥೆಯನ್ನೇ ಮಾಡಬೇಕಾಯಿತು. ಸತ್ತವರ ಕುಟುಂಬಗಳಿಗೆ ಸರಕಾರ ಒಂದು ಸಾವಿರ ರೂಪಾಯಿ ಪರಿಹಾರ ನೀಡಿತು. ಇದಲ್ಲದೆ ಭಾರತದ ಪ್ರಧಾನಿಯವರ ಫಂಡನಿಂದ ತಲಾ ಎರಡು ಸಾವಿರ ರೂಪಾಯಿಗಳ ಸಹಾಯ ನೀಡಲಾಯಿತು. ಮದ್ಯಪಾನವು ಶರೀರದ ಪ್ರತಿಯೊಂದು ಅಂಗವನ್ನು ಪೀಡಿಸುತ್ತದೆ. ವಿವೇಚನೆ ಮತ್ತು ನಿರ್ಣಯ ಸಾಮರ್ಥ್ಯಗಳು ಕುಗ್ಗಿ ಅಂತಿಮವಾಗಿ ವ್ಯಕ್ತಿತ್ವವನ್ನೇ ಹಾಳು ಮಾಡುತ್ತದೆ. ಕಾರ್ಯದಕ್ಷತೆಯೂ ಕುಗ್ಗುತ್ತದೆ. ಅತಿಯಾದ ಮದ್ಯಪಾನ ಸರ್ವ ನಾಶಕ್ಕೆ ನಾಂದಿಯಾಗುತ್ತದೆ.

ಮದ್ಯಪಾನದಿಂದಾಗುವ ದುಷ್ಪರಿಣಾಮಗಳು

ಬುದ್ಧಿಯ ಮತ್ತು ದೇಹದ ಶಕ್ತಿ ಹಾನಿ. ಹೃದಯ, ಮಿದುಳು, ಕರುಳು, ಕಣ್ಣು ಹಾಗೂ ನರಮಂಡಲ ಮುಂತಾದ ಅಂಗಗಳಿಗೆ ಗುಣಪಡಿಸಲಾಗದಷ್ಟು ಪ್ರಬಲ ಹಾನಿ. ಕುಡಿತದ ಅಮಲಿನಿಂದಾಗಿ ರಸ್ತೆ ಅಪಘಾತ ಹಾಗೂ ದುರಂತ ಮರಣ. "ಕುಡುಕ. ಹೆಂಡ ಕುಡುಕ" ಎಂಬ ಬಿರುದು. ಕುಡುಕನನ್ನು ಮಾತ್ರವಲ್ಲದೆ ಅವನ ಕುಟುಂಬದವರನ್ನೂ ಸಮಾಜ ಹೀನವಾಗಿ ಕಾಣುತ್ತದೆ.

ಎಚ್ಚರಿಕೆ

ಕುಡಿತ ಒಂದು ರೋಗ. ಅತಿ ಕುಡಿತ ಮಹಾರೋಗ. ಈ ಚಟವನ್ನು ಬಿಡಲೇಬೇಕು. ಚಟ ಬಿಡುವುದು ಕಷ್ಟವೇನಲ್ಲ. ಅದಕ್ಕೂ ಮಾರ್ಗಗಳಿವೆ. ಸಂಯಮದಿಂದ ಇದು ಸಾಧ್ಯ. ವೈದ್ಯರೂ ನಿಮಗೆ ನೆರವಾಗುತ್ತಾರೆ. ಈ ಪಿಡುಗು ನಿವಾರಣೆಗೆ ಕೇವಲ ಸರಕಾರದ ಪ್ರಯತ್ನಗಳಷ್ಟೇ ಸಾಲದು. ಸಮಾಜವೂ ಈ ಕಾರ್ಯದಲ್ಲಿ ಸಕ್ರಿಯ ಪಾತ್ರ ವಹಿಸಬೇಕು. ನಾವೆಲ್ಲರೂ ಈ ಚಟಕ್ಕೆ ಬಲಿಯಾದ ವ್ಯಕ್ತಿಗಳನ್ನು ಹೀಯಾಳಿಸದೇ, ದುಷ್ಪರಿಣಾಮಗಳನ್ನು ಅವರಿಗೆ ತಿಳಿಯ ಹೇಳಿ ಅಂಥವರನ್ನು ಈ ಚಟದಿಂದ ದೂರ ಮಾಡಬೇಕು.

ಡಿಐಪಿ/969/81-82

ಪ್ರಕಟಣೆ: ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ

ಕಸ್ತೂರಿ

ಕನ್ನಡ ಡೈಜೆಸ್ಟ್

ಸಹಾಯಕ ಸಂಪಾದಕ :

ಮಾಧವ ನಾ. ಮಹಿಷಿ

ಕಲೆ :

ಕೆ. ಬಿ. ಕುಲಕರ್ಣಿ

ಮುಖಪುಟ :

ಬಿಹಾರಿ ಶಿಲ್ಪಿ

ಚಿತ್ರ :

ಎನ್. ಸಿ. ದೇಸಾಯಿ

ಜನೆವರಿ ೧೯೮೨ ರಿಂದ ಜಾರಿಯಲ್ಲಿ ಬರುವ ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

KASTURI January 1982

ಬೆಳಕಿಂಡಿ

ಮಾನವನ ಜ್ಞಾನ ಸಂದೇಹದ ಜನಕ.
—ಗ್ರೆವಿಲ್

*

ಆಲಸ್ಯವೆಂದರೆ ಏನು? ಅದು ಜೀವಂತ ವ್ಯಕ್ತಿಯ ಗೋರಿ. —ಜೆರೆಮಿ ಟೇಲರ್

*

ದೈವವು ಭಾಗ್ಯದ ಪುಸ್ತಕವನ್ನು ಯಾರಿಗೂ ಕಾಣದ ಹಾಗೆ ಯಾವಾಗಲೂ ಮುಚ್ಚಿ ಇಟ್ಟಿರುತ್ತದೆ. —ಶೇಕ್ಸ್‌ಪಿಯರ್

*

ಗುಲಾಬಿ ಹೂವು ಅರಳಲು ಬಿಸಿಲು, ಗಾಳಿ, ಆಕಾಶ ಹಾಗೂ ಫಲವತ್ತಾದ ಮಣ್ಣು ಹೇಗೆ ಅವಶ್ಯವೋ ಹಾಗೆಯೆ ಬುದ್ಧಿ, ಪ್ರೇರಣೆ, ಪ್ರೇಮ, ವ್ಯಾಪಕವಾದ ದೃಷ್ಟಿಕೋನ ಹಾಗೂ ಸರಿಯಾದ ಮಾರ್ಗದರ್ಶನಗಳು ಆತ್ಮವಿಕಾಸಗೊಳ್ಳಲು ಅವಶ್ಯ.
—ಹಜರತ್ ಇನಾಯತ್‌ಖಾನ್
(ಸೂಫಿ ತತ್ತ್ವಜ್ಞ ಹಾಗೂ ಸಂಗೀತಗಾರ)

*

ಯಾವ ಕೆಲಸವನ್ನೇ ಆಗಲಿ, ನಾಳೆ ಮಾಡುತ್ತೇನೆ ಎಂದುಕೊಳ್ಳಬೇಡ. ನಿನ್ನ ಪಾಲಿಗೆ ನಾಳೆ ಬರುವುದೇ ಇಲ್ಲವೋ ಯಾರಿಗೆ ಗೊತ್ತು? ಇಂದು ಇದ್ದದ್ದೇ ನಿಶ್ಚಿತವಾದದ್ದು. ನಾಳೆಯೆನ್ನುವುದೆಲ್ಲ ಪೂರಾ ಅನಿಶ್ಚಿತ. —ಶತಪಥ ಬ್ರಾಹ್ಮಣ

ಪ್ರಿಯ ಓದುಗರೆ,

ನಿಮ್ಮ ನೆಚ್ಚಿನ 'ಕಸ್ತೂರಿ'ಯ ಮುಖಬೆಲೆಯನ್ನೂ ಚಂದಾದರವನ್ನೂ ಪುನವಿಮರ್ಶಿಸಬೇಕಾಗಿ ಬಂದುದು ಕಠೋರ ಆರ್ಥಿಕ ಸತ್ಯ. ಅನಿವಾರ್ಯವಿದ್ದುದರಿಂದ ಮಾತ್ರವೇ ಈ ಕ್ರಮವನ್ನು ಇದೇ ತಿಂಗಳಿನಿಂದ ಜಾರಿಗೆ ತರಬೇಕಾಯಿತು. ಸಹಕರಿಸುವಿರಷ್ಟೆ?

ನಿಮ್ಮ,

ವ್ಯವಸ್ಥಾಪಕ

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ವ್ಯವಸ್ಥೆ

ಶ್ರೀಯುತ ಡಿ. ಆರ್. ಬಾಲುರವರ ಕಥೆ ನಡೆದು ಎಂಟು ಹತ್ತು ವರ್ಷಗಳಾದುದರಿಂದ ಸೃಜನಶೀಲತೆಯಿದೆ. ಘಟನೆಗಳ ಹಿನ್ನೆಲೆಯಲ್ಲಿ ವಿಷಾದದ ಛಾಯೆಯಿದೆ.

ಆದರೆ ಅದೇ ವ್ಯವಸ್ಥೆ ಈಗ ನೂರಕ್ಕೆ ನೂರು ತಾರುಮಾರಾಗಿದೆ. ಶ್ರದ್ಧೆ ಕೆಲಸಗಾರನಿಗಿಲ್ಲ; ದುಡಿದು ಉಣಬೇಕೆಂಬ ಛಲ ಯಜಮಾನನಿಗೆ ಮೊದಲೇ ಇಲ್ಲ.

ಆದ್ದರಿಂದಲೇ ಈಗ ಹೀಗಾಗುತ್ತಿದೆ–ಯಾರ–ದ್ದೋ ತಲೆ ಒಡೆದು ಹೇಗೋ ದಿನ ಕಳೆದರೆ ಸಾಕೆಂಬ ಭಾವ; ಕಷ್ಟಪಡದೆ, ವಹಿಸಿಕೊಂಡ ಕೆಲಸ ನಿರ್ವಹಿಸದೆ, ಸುಲಭವಾಗಿ ಅಪರಿಮಿತ ಸಂಪತ್ತಿಗೆ ಕ್ಷಣಾರ್ಧದಲ್ಲಿ ಒಡೆಯನಾಗಬೇಕೆಂಬ ಲಂಚ್ಚಾ ನ್ಯಾಯ.

ಇದು ಸುಳ್ಳೆಂಬ ಭಾವನೆ ಇದ್ದಲ್ಲಿ ಇತ್ತೀಚಿನ ಏಳೆಂಟು ವರ್ಷಗಳಲ್ಲಿ ಶಹರುಗಳಲ್ಲಿ ಏರಿದ ಮಹಲುಗಳನ್ನಾಗಲಿ ದುಡಿದು ತಿನ್ನುವ ಕಾರ್ಮಿಕರ ಮುರ್ಜಿಗಳನ್ನು ಮತ್ತನ್ನಾಗಲಿ ವೀಕ್ಷಿಸಿದರೆ ಸಾಕು.

ನೆಲಮಂಗಲ — ಕೆ. ಆರ್. ಉಡುಪ

ಅಭಾವವೆ ?

ನವೆಂಬರ್ ೧೯೮೧ರ 'ಕಸ್ತೂರಿ'ಯಲ್ಲಿನ 'ಕಾಶಿಮಾನಿ'ಯವರ "ಅರಣ್ಯ ಅಧಿಕಾರಿಯ ದಿನಚರಿಯಿಂದ," ಲೇಖನವನ್ನು ಕೆಲ ವರ್ಷದ ಹಿಂದಿನ ಕಸ್ತೂರಿಯಲ್ಲಿ "ಕಾಡಿಗಂಜಿ ಲೇಖಕನಾದೆ" ಎಂಬ ಹೆಸರಿನಲ್ಲಿ ಓದಿ ಹಾಗೆ ನೆನಪಿದೆಯಲ್ಲಾ. "ಕಸ್ತೂರಿ"ಗೆ ಲೇಖನಗಳ ಅಭಾವವೇ ?

ಚಂಡೀಗಢ — ಮಹಾಬಲೇಶ್ವರ ಬಿ.ಎಲ್.

ಶಿಕ್ಷಣ

ಎಚ್. ಪಾಂಡುರಂಗ ವಿಠಲರು, ದಿಕ್ಕು ತಪ್ಪಿದ ಶಿಕ್ಷಣದ ಬಗ್ಗೆ ಗಮನ ಸೆಳೆಯುವ ಒಂದು ವಿವೇಚನೆಯನ್ನು "ನಮ್ಮ ಶಿಕ್ಷಣ ಎತ್ತ ಸಾಗಿದೆ?" ಡಿಸೆಂಬರ್ ೮೧ರ ಸಂಚಿಕೆ) ಒದಗಿಸಿದ್ದಾರೆ. ಸ್ವಾತಂತ್ರ್ಯೋತ್ತರ ರಾಜಕಾರಣವು ಅಧಿಕಾರಮೋಹಿನಿಗಾಗಿ ರಾಷ್ಟ್ರಹಿತವನ್ನೇ ನಿರ್ಲಕ್ಷಿಸಿದ್ದ ಫಲವಾಗಿ ಉಂಟಾಗಿರುವ ದೂರಗಾಮಿ ದುಷ್ಪರಿಣಾಮಗಳಲ್ಲಿ ಶಿಕ್ಷಣದ ಅಕ್ಷಮ್ಯ ನಿರ್ಲಕ್ಷ್ಯ ಮತ್ತು ರಾಜಕೀಯೀಕರಣ ಎದ್ದುಕಾಣುತ್ತದೆ. ಸ್ವಾತಂತ್ರ್ಯದ ಬೆಲೆ ತಿಳಿಯದ, ಆದರೆ ರಾಜಕೀಯ ಮಾಡುವುದರ ಬೆಲೆ ಅನಾಯಾಸವಾಗಿ ತಿಳಿಯುವಂತಹ ಕಾರ್ಯ ನೀತಿಯನ್ನುಳ್ಳ ಆಳುವ ಪಕ್ಷದ ರಾಜಕಾರಣ, ಶಿಕ್ಷಣದ ದುರವಸ್ಥೆಯ ಬಗ್ಗೆ ಚಿಂತಿಸಲು ಬಿಡುವಿಲ್ಲದ ವಿರೋಧ ಪಕ್ಷಗಳ ರಾಜಕಾರಣ– ಎರಡೂ ಸೇರಿಯೋ ಶಿಕ್ಷಣ ರಂಗದ "ಉಪಯೋಗ" ಮಾಡಿಕೊಂಡಿವೆಯೋ ವಿನಾ ಶಿಕ್ಷಣ ರಂಗದ ಇತರ ದೋಷಗಳ ಬಗ್ಗೆ ತಲೆಹರಿಸಿಯೋ ಇಲ್ಲ.

ಕತ್ಕಾರೆ — ಶ್ರೀಶೈಲ

ಗೊತ್ತು ಗುರಿಯಿಲ್ಲದೆ ಸಾಗಿರುವ ಇಂದಿನ ಶಿಕ್ಷಣ ಕ್ರಮದಲ್ಲಿನ ನ್ಯೂನತೆಗಳನ್ನು ಸಾದ್ಯಂತವಾಗಿ ವಿವರಿಸಿ, ತನ್ಮೂಲಕ ಗುರು ಶಿಷ್ಯ ಹಾಗೂ ಪೋಷಕರ ಹೊಣೆಗಾರಿಕೆಯೇನೆಂಬುದನ್ನು ಚೆನ್ನಾಗಿ ಮನವರಿಕೆ ಮಾಡಿಕೊಟ್ಟಿರುವ ಶ್ರೀ ಎಚ್. ಪಾಂಡುರಂಗ ವಿಠಲ ಅವರ "ಒಂದು ವಿವೇಚನೆ" ಸಕಾಲಿಕವೂ ಸ್ವಾಗತಾರ್ಹವೂ ಆಗಿದೆ. ಆದರಲ್ಲೂ, "ಮೊಸಲಾತಿ" ಬಗೆಗಿನ ಅವರ ನಿಲುವು ಬಹಳ ಸಮಂಜಸವಾಗಿದೆ.

ಶೋಷಣೆಯ ವಿರುದ್ಧ ಸಮರ ಸಾರಲು ಹಂಬಲಿಸುವ ನಿಸ್ವಾರ್ಥ ಕೈಗಳನ್ನು ಪಟ್ಟಭದ್ರ ಹಿತಾಸಕ್ತಿಗಳು ಹೇಗೆ ದುರ್ಬಲಗೊಳಿಸುತ್ತವೆಂಬುದಕ್ಕೆ ಶ್ರೀ ಡಿ.ಆರ್.ಬಾಲು ಅವರ 'ವ್ಯವಸ್ಥೆ' ಒಂದು ಜ್ವಲಂತ ಸಾಕ್ಷ್ಯ. ಕಥೆ ಓದುತ್ತಿದ್ದಂತೆ ಅಲ್ಲಲ್ಲಿ ಬರುವ ಕೆಲವು ಸನ್ನಿವೇಶಗಳು ಹಿಂದೆ ಎಲ್ಲೋ ಓದಿದ ನೆನಪು ತರುತ್ತದೆ.

ಬೆಂಗಳೂರು — ನ. ಅ. ರಾವ್

ಬೇಂದ್ರೆ

ಶ್ರೀ ಎಸ್. ಆರ್. ವಿಜಯಶಂಕರ ಬರೆದ "ಬೇಂದ್ರೆ: ವ್ಯವಹಾರ ಮತ್ತು ವೈರಾಗ್ಯದ ನಡುವಿನ ಸಂವೇದನೆ, ಡಾ. ದ. ರಾ. ಬೇಂದ್ರೆ

ಅವರ ಜೀವನದ ಅತ್ಯಂತ ಹೃದಯಸ್ಪರ್ಶಿ ಶಬ್ದಚಿತ್ರ. "ಸುಖಾದ ಜೋಡಿ ನೋವು. ನೋವಿನ ಜೋಡಿ ನಲಿವು." ಇದನ್ನೋದಿದರೆ ಶ್ರೀ ಬೇಂದ್ರೆಯವರ ಜೀವನ ಎಂಥಾದಿತ್ತು ಅಂತ ತಿಳಿದಿತು. ಶ್ರೀ ಎಸ್. ಆರ್. ವಿಜಯಶಂಕರರಿಗೆ ಧನ್ಯವಾದಗಳು.

ಹಂಪಿ. ಡಿ. ಎಸ್. ಖುಲವಿ.

ಶಬ್ದಭಾಂಡಾರ

'ಕಸ್ತೂರಿ'ಯ 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' ವಿಭಾಗದಿಂದ ಪ್ರಯೋಜನ ಪಡೆಯುತ್ತಿರುವವರಲ್ಲಿ ನಾನೂ ಒಬ್ಬ. ಕನ್ನಡಭಾಷಾ ಜ್ಞಾನವನ್ನು ವರ್ಧಿಸುವಲ್ಲಿ ಇದು ತುಂಬಾ ಪ್ರಯೋಜನಕರವಾಗಿದೆ. ಶಬ್ದಭಂಡಾರದಂತೆಯೇ 'ಕಸ್ತೂರಿ'ಯಲ್ಲಿ ಪ್ರತಿ ತಿಂಗಳೂ ವೈಜ್ಞಾನಿಕ, ತಾಂತ್ರಿಕ, ಆರ್ಥಿಕ–ಮುಂತಾದ ವಿಷಯಗಳಿಗೆ ಸಂಬಂಧಿಸಿದ ಇಂಗ್ಲೀಷ್ ಪದಗಳಿಗೆ ಸಮಾನವಾದ ಕನ್ನಡ ಪದಗಳನ್ನೂ ನೀವು ಪ್ರಕಟಿಸುತ್ತಾ ಬಂದರೆ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣವನ್ನು ಪಡೆಯುತ್ತಿರುವ ನನ್ನಂತಹ ಕನ್ನಡಿಗರಿಗೆ ತುಂಬಾ ಪ್ರಯೋಜನವಾದೀತು.

ಮುಂಬಯಿ. ಸೋಮನಾಥ ಎಸ್. ಕರ್ಕೇರ,

(ಸಲಹೆ ಸ್ವಾಗತಾರ್ಹವಾಗಿದೆ. ಆದರೆ ಈಗಿರುವ ತೊಂದರೆಯೆಂದರೆ ಕನ್ನಡದಲ್ಲಿ ಇಂಗ್ಲೀಷ್ ಪದಗಳಿಗೆ ಸಮಾನಾರ್ಥಕವಾದ ಪ್ರಮಾಣೀಕೃತವಾದ ಶಬ್ದಗಳಿಲ್ಲದಿರುವುದು. –ಸಂ.)

ಮೊಂಡಗೈ ಭೀಮರಾಯ

ನವೆಂಬರ್ ಸಂಚಿಕೆಯಲ್ಲಿ ಮೊಂಡಗೈ ಭೀಮರಾಯನ ಬಗ್ಗ ಸರಿಯಾದ ತಿಳುವಳಿಕೆ ನೀಡಿದ್ದೀರಿ. ಭೀಮರಾಯ ಒಬ್ಬ ಹೋರಾಟಗಾರ; ಹೋರಾಟದಲ್ಲಿ ತನ್ನ ಬಲಗೈಯನ್ನು ಕಳೆದುಕೊಂಡು ಮೊಂಡಗೈ ಭೀಮರಾಯನಾದನೆಂದಷ್ಟೇ ತಿಳಿದ ನಮ್ಮಂತಹ ಅನೇಕ ಜನರಿಗೆ ಅವನು ಡಂಬಳ ದೇಸಗತಿಯಲ್ಲಿ ಹೇಗೆ ಹೋರಾಡಿದ ಮತ್ತು ತನ್ನ ಸಹಚರರ ಕೈಗಳನ್ನುಳಿಸಿ ತನ್ನ ಕೈಯನ್ನು ಹೇಗೆ ಬಲಿ ಕೊಟ್ಟ ಎಂಬ ವಿಷಯವನ್ನು ತಿಳಿಸಿ ಅವನ ಸರಿಯಾದ ಇತಿಹಾಸವನ್ನು ತಿಳಿಯುವಂತೆ ಮಾಡಿದ್ದೀರಿ.

ಡಂಬಳ ಬಸವರಾಜ ಗಣಪ್ಪನವರ

ಡೊಂಕು

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ 'ಡೊಂಕು' ಓದಿ ಮನಸ್ಸಿಗೆ ಸಂತೋಷವಾಯಿತು. ಇದು 'ಕಸ್ತೂರಿ'ಯಲ್ಲಿ ಪ್ರಕಟವಾಗುತ್ತಿರುವ ಶ್ರೇಷ್ಠ ಕಥೆಗಳಲ್ಲಿ ಒಂದು ಎಂದು ನಿಸ್ಸಂಶಯವಾಗಿ ಹೇಳಬಹುದು. ಸಾಕಷ್ಟು ಉತ್ತಮ ಕಥೆಗಳು ತೆಲುಗಿನಿಂದ ಅನುವಾದಿತವಾಗುತ್ತಲಿದ್ದು ತೆಲುಗು ಕಥೆ ಎಂದಾಕ್ಷಣ ಇದೊಂದು ಒಳ್ಳೆಯ ಕಥೆ ಎಂದು ಓದುವ ಮುನ್ನವೇ ನಿರ್ಧರಿಸಿ ಓದುವೆನು. ಕನ್ನಡ ಬರಹಗಾರರಿಗೆ ಏನಾಗಿದೆ? ಈ ಮಟ್ಟದ ಕಥೆಗಳನ್ನು ಕನ್ನಡದ ಲೇಖನಿಯಿಂದ ಇಳಿದು ಬಂದಿದ್ದು ಅತಿ ವಿರಳ. ಹೋಗಲಿ, ತೆಲುಗಿನಲ್ಲಾದರೂ ಶ್ರೇಷ್ಠಮಟ್ಟದ ಲೇಖಕರಿದ್ದಾರಲ್ಲ, ಅದೇ ಸಂತೋಷದ ಸಂಗತಿ. ಈ ಕಥೆಯನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿ ನಮಗೆ ಓದಲು ಅನುವುಮಾಡಿಕೊಟ್ಟ ಶ್ರೀಮತಿ ಶರ್ವಾಣಿಯವರಿಗೆ ನನ್ನ ವಂದನೆಗಳು.

"ಅರಣ್ಯ ಅಧಿಕಾರಿಯ ದಿನಚರಿಯಿಂದ" ಓದಿದ. ಅನುಭವಗಳು ಸೊಗಸಾಗಿ ಮೂಡಿಬಂದಿವೆ. ಆದರೆ ಭಾಷೆಯ ಕಳಂಕವೇಕೆ ನುಸುಳಿದೆ? "ಕೊಡಲಿಯನು ಮಡಗಿಕೊಂಡು" ಮತ್ತು "ಕೆಂಡವನ್ನು ಅವುಗಳ ಮೇಲೆ ಮಡಗ್ಗಿ" ಎಂದು ಪ್ರಕಟವಾಗಿದೆ. ಕನ್ನಡ ಮಾಸಪತ್ರಿಕೆಗಳಲ್ಲಿಯೇ ಶ್ರೇಷ್ಠ ಮಟ್ಟದ್ದೆನ್ನಿಸುವ "ಕಸ್ತೂರಿ"ಯಲ್ಲಿ ಈ ರೀತಿಯ ಕಳಪೆಯ ಆಡುಭಾಷೆಯನ್ನು ಬಳಸಿ "ಕಸ್ತೂರಿ"ಯ ಅಭಿಮಾನಿಗಳ ಮನಸ್ಸಿಗೆ ಅಸಂತೋಷ ಉಂಟುಮಾಡುತ್ತಿದ್ದೀರಿ.

ಬೆಂಗಳೂರು.

(ಭಾಷೆಯ ಬಳಕೆಯಲ್ಲಿ ಮಡಿವಂತಿಕೆ ಬೇಡ. ಕೆಲವು ಸಂದರ್ಭಗಳಲ್ಲಿ ಆಡುಭಾಷೆಯ ಬಳಕೆ ಅನಿವಾರ್ಯವೇ ಆಗುತ್ತದೆಯೆನ್ನುವುದಕ್ಕೆ ಶ್ರೇಷ್ಠ ಮಟ್ಟದವೆನ್ನಿಸಿಕೊಂಡ ಬೇಂದ್ರೆಯವರ ಕವನಗಳೆ ಸಾಕ್ಷಿ. –ಸಂ.)

ಕಸ್ತೂರಿ

ವರ್ಷ : ೨೬ ಜನವರಿ, ೧೯೮೨ ಸಂಚಿಕೆ ; ೫

ಪ್ರಾಮಾಣಿಕತೆ

ಎಸ್. ವಿಶ್ವನಾಥ

ಎಷ್ಟೋ ವರ್ಷಗಳ ಹಿಂದಿನ ಮಾತು. ಒಬ್ಬ ವಿಧವೆ ಮತ್ತು ಆಕೆಯ ಚಿಕ್ಕ ಮಗ. ಅಮೇರಿಕದ ಪಟ್ಟಣವೊಂದರ ಸುಮಾರು ಮೂರು ಮೈಲಿಗಳ ದೂರದ ಒಂದು ಚಿಕ್ಕ ಮನೆಯಲ್ಲಿ ವಾಸಿಸುತ್ತಿದ್ದರು. ಅವರಲ್ಲಿ ಸಾಕಷ್ಟು ಹಣ ಇರಲಿಲ್ಲ. ಹೀಗಾಗಿ ಕೆಲವು ಬಾರಿ ಹೊಟ್ಟೆ ತುಂಬ ತಿನ್ನಲೂ ಅವರಿಗೆ ಸಿಗುತ್ತಿರಲಿಲ್ಲ.

ಆದೊಂದು ದಿನ ಅಡುಗೆ ಸಾಮಾನುಗಳೆಲ್ಲ ಮುಗಿದುಹೋಗಿತ್ತು. ಆದುದರಿಂದ ಅಡುಗೆ ಮಾಡಲು ತಾಯಿ ತನ್ನ ಮಗನನ್ನು ಅಂಗಡಿಯಿಂದ ಸಾಮಾನುಗಳನ್ನು ಕೊಂಡು ತರಲು ಕಳುಹಿಸಿದಳು.

"ಹಿಟ್ಟು, ಉಪ್ಪು, ಸಕ್ಕರೆ ಮತ್ತು ಚಹಾಪುಡಿಗಳನ್ನು ಸ್ವಲ್ಪ ಸ್ವಲ್ಪ ಮಗನಿಗೆ ಕೊಡುತ್ತಾ, "ಆದರೆ ಹುಶಾರ್!...ಈ ಹಣವನ್ನು ದಾರಿಯಲ್ಲಿ ಕಳೆದುಕೊಂಡು ಬರಬೇಡ," ಎಂದು ಆಕೆಗೆ ಅವನಿಗೆ ಕೆಲ ನಾಣ್ಯಗಳನ್ನು ಕೊಟ್ಟಳು.

"ನಮ್ಮಲ್ಲೀಗ ಇರುವುದು ಇಷ್ಟೇ ಹಣ ಆದುದರಿಂದ ಅದರ ಒಂದೊಂದು ಪೆನ್ನಿಯೂ ನಮಗೆ ಬೇಕಾಗುತ್ತದೆ. ನೀನು ಜಾಗ್ರತೆಯಿಂದ ಅಂಗಡಿಗೆ ಹಣ ಕೊಟ್ಟು, ಉಳಿದ ಚಿಲ್ಲರೆ ತರಬೇಕು. ತರುತ್ತೀಯಲ್ಲವೇ ಮಗು?" ತಾಯಿ ತನ್ನ ಮಗನನ್ನು ಪ್ರಶ್ನಿಸಿದಳು.

"ಹೌದಮ್ಮ, ಖಂಡಿತವಾಗಿಯೂ ತರುತ್ತೇನೆ," ಅಂಗಡಿಯತ್ತ ಹೆಜ್ಜೆ ಹಾಕುತ್ತಾ ಮಗ ಹೇಳಿದ.

ಮನೆಗೆ ಆತ ಹಿಂದಿರುಗಿ ಬಂದಾಗ ರಾತ್ರಿಯಾಗಿ ಹೋಗಿತ್ತು. ಬುಟ್ಟಿಯಿಂದ ಸಾಮಾನುಗಳನ್ನು ತೆಗೆದು, ಶೆಲ್ಫಿನ ಮೇಲೆ ಒಂದೊಂದಾಗಿ ಜೋಡಿಸಿಕೊಂಡಳು. ನಂತರ ಮಗ ವಾಪಸ್ಸು ತಂದಿದ್ದ ಚಿಲ್ಲರೆ ನಾಣ್ಯಗಳನ್ನು ಎಣಿಸಲಾರಂಭಿಸಿದಳು.

ಮಗನಿಂದ ಲೆಕ್ಕ ಕೇಳಿದ ನಂತರ ಆಕೆ, "ಕೆಲ ನಾಣ್ಯಗಳು ಕಳೆದುಹೋದಂತೆ ಕಾಣುತ್ತದೆ

ಮಗೂ, ನೀನು ಚಿಲ್ಲರೆಯನ್ನು ದಾರಿಯಲ್ಲಿ ಕೆಡವಿಕೊಂಡು ಬಂದಿಲ್ಲತಾನೇ?" ಎಂದು ಮಗನನ್ನು ಕೇಳಿದಳು.

"ಇಲ್ಲಮ್ಮ...ನಾನು ಉಳಿದ ಹಣವನ್ನೆಲ್ಲ ಹಿಂದಿರುಗಿ ತಂದಿದ್ದೇನೆ. ದಾರಿಯಲ್ಲಿ ಬರುವಾಗ ಮಿಠಾಯಿ ತೆಗೆದುಕೊಳ್ಳುವುದಕ್ಕೆ ತುಂಬಾ ಆಸೆಯೂ ಆಯಿತು. ಆದರೂ ನಮಗೆ ಹಣ ಮುಂದಕ್ಕೆ ಬೇಕಾಗುತ್ತದೆ ಎಂದು ಮಿಠಾಯಿ ಕೊಂಡುಕೊಳ್ಳಲಿಲ್ಲ," ಮಗ ವಿವರಣೆ ನೀಡಿದ.

"ಹೋಗಲಿ ಬಿಡು. ಪಾಪ, ಆರು ಮೈಲಿಗಳಷ್ಟು ದೂರ ನಡೆದು ದಣಿದು ಬಂದಿದ್ದೀಯೆ. ನೀನು ತುಂಬಾ ಹಸಿದಿರಬೇಕು. ಕೈಕಾಲು ಮುಖ ತೊಳೆದುಕೋ; ಅಷ್ಟರಲ್ಲಿ ನಾನು ಅಡಿಗೆ ತಯಾರಿಸಿಡುತ್ತೇನೆ," ಎಂದು ತಾಯಿ ಸಾಂತ್ವನ ಹೇಳಿದಳು.

ತಾಯಿ–ಮಗ ಇಬ್ಬರೂ ಟೇಬಲ್ ಬಳಿ ಕುಳಿತು ಊಟ ಮಾಡಲಾರಂಭಿಸಿದ್ದೇ ತಡ, ಯಾರೋ ಬಾಗಿಲು ತಟ್ಟಿದ ಶಬ್ದ ಕೇಳಿಸಿತು. ಯಾರು ಬಂದಿದ್ದಾರೆ ಎಂದು ನೋಡಲು ತಾಯಿ ಬಾಗಿಲ ಬಳಿ ಹೋದಳು.

ಒಬ್ಬ ಉದ್ದನೆಯ ವ್ಯಕ್ತಿ ಬಾಗಿಲ ಬಳಿ ನಿಂತಿದ್ದ. ಆತ ನಗುತ್ತಾ ತನ್ನ ಕೈಯನ್ನು ಮುಂಚಾಚಿದ. ಅವನ ಕೈಯಲ್ಲಿ ಚಿಲ್ಲರೆ ಹಣ ಇತ್ತು.

"ಸಂಜೆ ಅಂಗಡಿಯ ಬಾಗಿಲು ಹಾಕುವ ಮೊದಲು ಬಂದ ಹಣವನ್ನೆಲ್ಲ ಎಣಿಸಿದೆ. ಹಣ ಜಾಸ್ತಿ ಇತ್ತು. ಹಾಗಾಗಿ ಈ ಮಧ್ಯಾಹ್ನ ಏನೇನು ಮಾರಿದೆ, ಯಾರಾರಿಗೆ ಮಾರಿದೆ, ಎಂದು ನೆನಸಿಕೊಳ್ಳಲಾರಂಭಿಸಿದ. ಆಗ ನನಗೆ ನಿಮ್ಮ ಮಗ ಕೊಂಡ ಸಾಮಾನುಗಳಿಗೆ ಅನುದ್ದಿಶ್ಯವಾಗಿ ಹೆಚ್ಚು ಬೆಲೆ ತೆಗೆದುಕೊಂಡಿದ್ದು ಜ್ಞಾಪಕಕ್ಕೆ ಬಂತು. ಆ ಹಣ ಇಲ್ಲಿದೆ, ತೆಗೆದುಕೊಳ್ಳಿ. ಈ ಅಚಾತುರ್ಯಕ್ಕೆ ನನ್ನನ್ನು ಕ್ಷಮಿಸಬೇಕು," ಎಂದು ಆತ ಹೇಳಿದ. ಮತ್ತೆ ಮೂರು ಮೈಲುಗಳಷ್ಟು ದೂರ ಆ ಕಾರ್ಗತ್ತಲಲ್ಲಿ ನಡೆದು ಹಿಂದಿರುಗಿದ.

ಆತನ ಹೆಸರು ಅಬ್ರಹಾಂ ಲಿಂಕನ್–ಮುಂದೆ ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷನಾದವನು. ★

ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಚಿಂತಾಮಣರಾವ್ ದೇಶಮುಖರನ್ನು ಕಾಲೇಜಿನ ಪ್ರಿನ್ಸಿಪಾಲರು ಲೋಕಮಾನ್ಯ ಟಿಳಕರ ಬಳಿಗೆ ಕಳುಹಿದರು. ಅಲ್ಲಿ ಟಿಳಕರು ಹೇಳಿದ್ದನ್ನು ಯಥಾವತ್ತಾಗಿ ಬರೆದುಕೊಳ್ಳಬೇಕಾಗಿತ್ತು.

ಚಿಂತಾಮಣರಾವ್ ದೇಶಮುಖರು ಸರಿಯಾಗಿ ಆ ದಿನ ಸಾಯಂಕಾಲ ೫ ಗಂಟೆಗೆ ಅವರು ಲೋಕಮಾನ್ಯರ ಮನೆಗೆ ಹೋದರು. ಆಗ ಟಿಳಕರನ್ನು ಕಾಣಲು ಹಲವರು ಪ್ರತಿಷ್ಠಿತ ವ್ಯಕ್ತಿಗಳು ಬಂದಿದ್ದರು. ಆದುದರಿಂದ ಲೇಖನವನ್ನು ಬರೆಸಲು ಟಿಳಕರಿಗೆ ಸಮಯವಿರಲಿಲ್ಲ. ಪರಿಸ್ಥಿತಿಯನ್ನು ಅರಿತ ದೇಶಮುಖರು, "ತಮಗೆ ಏನು ಬರೆಯುವದಿದೆಯೋ ಅದರ ಕೆಲವು ರೂಪರೇಷೆಗಳನ್ನು ನನಗೆ ತಾವು ದಯವಿಟ್ಟು ಹೇಳಬೇಕು. ನಾನು ಸ್ವತಃ ಲೇಖನವನ್ನು ಸಿದ್ಧಪಡಿಸಿಕೊಂಡು ತರುವೆ," ಎಂದರು.

ಟಿಳಕರಿಗೆ ವಿದ್ಯಾರ್ಥಿಯ ಯೋಗ್ಯತೆಯ ಬಗ್ಗೆ ಅಷ್ಟು ಭರವಸೆ ಬರಲಿಲ್ಲ. ಆದರೂ ಬಂದವರಿಗೆ ಅವಮಾನವಾಗಬಾರದೆಂದು ಟಿಳಕರು ಲೇಖನದ ಹಲವು ರೂಪರೇಷೆಗಳನ್ನು ಹೇಳಿದರು.

ಮಾರನೆಯ ದಿನ ಲೇಖನವನ್ನು ಸಿದ್ಧಪಡಿಸಿಕೊಂಡು ದೇಶಮುಖರು ಟಿಳಕರ ಮನೆಗೆ ಹೋದರು. ಲೇಖನವನ್ನು ಓದಿ ಟಿಳಕರಿಗೆ ಮಹದಾನಂದವಾಯಿತು. ಅವರು ಚಿಂತಾಮಣರಾವ್ ದೇಶಮುಖರನ್ನು ಆಶೀರ್ವದಿಸುತ್ತ, "ನೀನು ಒಂದಿಲ್ಲೊಂದು ದಿನ ಸ್ವತಂತ್ರ ಭಾರತದ ಅರ್ಥಮಂತ್ರಿಯಾಗುವೆ," ಎಂದು ಭವಿಷ್ಯ ನುಡಿದರು. ಮುಂದೆ ಶ್ರೀ ಚಿಂತಾಮಣರಾವ್ ದ. ದೇಶಮುಖರು ಭಾರತದ ಅರ್ಥಮಂತ್ರಿಯಾದಾಗ ಲೋಕಮಾನ್ಯ ಟಿಳಕರ ಭವಿಷ್ಯ ಅಕ್ಷರಶಃ ನಿಜವಾಯಿತು.

— ಗೋಪಿನಾಥ

ಫಿಜಿ:

ಭಾರತೀಯವಾದ ಅಭಾರತೀಯ ದ್ವೀಪ

ಡಾ. ಸರೋಜಿನಿ ಮಹಿಷಿ

ಫಿಜಿ ಹಾಗೂ ಟೊಂಗಾ ಆಸ್ಟ್ರೇಲಿಯದ ಆಚೆಗಿರುವ ನಡುಗಡ್ಡೆಗಳು. ಶಾಂತ ಮಹಾಸಾಗರವನ್ನು ದಾಟಿ ಹೋಗಬೇಕು. ಇಂದು ಫಿಜಿಯಲ್ಲಿ ನೂರಕ್ಕೆ ಐವತ್ತೊಂದರಂತೆ ಭಾರತೀಯರಿದ್ದಾರೆ. ನೂರು ವರುಷಗಳ ಹಿಂದೆ ಹೇಗೋ ಕಣ್ಣುಕಟ್ಟಿನಿಂದ ಅಲ್ಲಿ ತಲುಪಿದ ಭಾರತೀಯರದು ಇಂದು ಮೂರನೆಯ ಪೀಳಿಗೆಯೋ ನಾಲ್ಕನೆಯ ಪೀಳಿಗೆಯೋ. ಮಕ್ಕಳಿರುವಾಗ, ಯುವಕರಿರುವಾಗ ಫಿಜಿದ್ವೀಪವನ್ನು ತಲುಪಿದ ಭಾರತೀಯರಿಗೆ ತಾವು ಎಲ್ಲಿ ಹೋಗುತ್ತಿದ್ದೇವೆ ಎಂಬುದರ ಅರಿವೂ ಇರಲಿಲ್ಲವಂತೆ!

ಒಂದು ಶತಮಾನದ ಹಿಂದಿನ ಮಾತು! ೧೮೭೭–೭೮ ರ ಸುಮಾರಿಗೆ ಭಾರತದ ಹಳ್ಳಿ ಹಳ್ಳಿಗಳಲ್ಲಿ ಮನೆಬಿಟ್ಟು ಹೊರಗೆ ಹೋದ ಮಕ್ಕಳು ಪುನಃ ಮನೆಯನ್ನು ತಲುಪಲೇ ಇಲ್ಲ! ಹತ್ತು ಹನ್ನೆರಡು ವರುಷದ ಮಕ್ಕಳು ಹದಿನೆಂಟರ ಯುವಕರು ಅನೇಕ ಮಧ್ಯವಯಸ್ಕನವರು ಕೂಡ ಎಲ್ಲಿ ಹೋದರೋ ತಿಳಿಯಲಿಲ್ಲ. ಉಳಿದೆಲ್ಲ ಪ್ರಾಂತದವರಿಗಿಂತ ಇಂದಿನ ಉತ್ತರ ಪ್ರದೇಶ, ಬಿಹಾರ, ತಮಿಳು ನಾಡುಗಳಿಂದ ಹೋದವರ ಸಂಖ್ಯೆಯೇ ಹೆಚ್ಚು. ಬಿಳಿಯರ ಏಜಂಟರಾಗಿ ನಮ್ಮಲ್ಲಿನ ಜನರೂ ಕೆಲಸ ಮಾಡಿದರು. ಮನೆಯಿಂದ ಹೊರಗಿದ್ದ ಮಕ್ಕಳಿಗೆ ತಿಂಡಿ, ತಿನಸು, ಬಟ್ಟೆ ಬರೆ ಕೊಡುವುದಾಗಿ ಮನವೊಲಿಸಿ ಅವರನ್ನು ಎತ್ತಿಕೊಂಡೇ ನಡೆದರು. ಯುವಕರಿಗೆ ಕೈತುಂಬ ಸಂಬಳ ಬರುವ ನೌಕರಿ ಕೊಡುವುದಾಗಿ ಆಶ್ವಾಸನವಿತ್ತು ಕರೆದೊಯ್ದರು. ಹೆಚ್ಚು ಕೂಲಿಕೊಡುವೆವೆಂದು ಕೆಲವು ಜನ ದೊಡ್ಡಮಕ್ಕಳ ಮನವೊಲಿಸಿದರು. ಕೂಲಿಗಾಗಿ ದುಡಿಯುತ್ತಿದ್ದ ಗಂಡ ಹೆಂಡಿರನ್ನು ಕೆಲ ಸಂದರ್ಭಗಳಲ್ಲಿ ಒಟ್ಟಿಗೇ ಕರೆದೊಯ್ದರು. ಹಳ್ಳಿ ಶಹರಗಳಿಂದ ಕಲೆ ಹಾಕಿ ಅವರಿಗೆ ತಿಂಡಿ ಕೊಟ್ಟು ಬಟ್ಟೆ ತೊಡಿಸಿ, ದೊಡ್ಡ ಶಹರಕ್ಕೆ ಕರೆತಂದರು. ಬಂದರವೊಂದರಿಂದ ಅವರನ್ನೆಲ್ಲ ಹಡಗಿನ ಮೂಲಕ ಶಾಂತ ಸಾಗರದಲ್ಲಿ ತೇಲಿಬಿಡಬೇಕಿತ್ತು: ದೊಡ್ಡ ಪಟ್ಟಣದಲ್ಲಿ ಹಳ್ಳಿಯ ಈ ಯುವಕರನ್ನೂ ಹುಡುಗರನ್ನೂ ಬರಾಕಿನಲ್ಲಿ ಸೇರಿಸಿಬಿಟ್ಟರು.

ಹೀಗೆ ಒಟ್ಟುಗೂಡಿಸಲ್ಪಟ್ಟ ೪೯೮ ಜನ ಕೂಲಿಗಳನ್ನು ಹೊತ್ತು ಇನ್ನೂರು ಟನ್ ಭಾರದ 'ಲಿಯೋನಿದಾಸ್' ಹಡಗು ೧೮೭೯ರ ಫೆಬ್ರುವರಿ ೨೮ ರಂದು ಕಲಕತ್ತೆಯ ಹುಗಳಿ ಬಂದರದಿಂದ ಫಿಜಿದ್ವೀಪದತ್ತ ಹೊರಟಿತು.

೭೩ ದಿನಗಳ ಸಮುದ್ರ ಪ್ರಯಾಣದ ನಂತರ ಲಿಯೋನಿದಾಸ್ ಫಿಜಿ ದ್ವೀಪದ ಲೇವುಕಾ ಬಂದರವನ್ನು ತಲುಪಿತು. ರಭಸದ ಬಿರುಗಾಳಿಯಿಂದ ಸಮುದ್ರ ಅಲ್ಲೋಲಕಲ್ಲೋಲವಾಗಿ ಪ್ರಯಾಣಿಕರಿಗೆ ಇಳಿಯಲು ಸಾಧ್ಯವಾಗಲಿಲ್ಲ. ಇಷ್ಟೇ ಅಲ್ಲ, ಕೂಲಿಯಾಳುಗಳಲ್ಲಿ ಕಾಲರಾ ಹಾಗೂ ಮೈಲಿಬೇನೆ ಪ್ರಾರಂಭವಾಗಿವೆ ಎಂಬ ಸುದ್ದಿ ಬೇರೆ ಹರಡಿತು. ಇಷ್ಟು ಜನ ಕೂಲಿಗಳು ಬರಬಹುದೆಂಬ ಕಲ್ಪನೆ ಬ್ರಿಟಿಶ್ ಅಧಿಕಾರಿಗಳಿಗೂ ಇರಲಿಲ್ಲ. ಹೆಚ್ಚೆಂದರೆ ೩೫೦ ಜನ ಬರಬಹುದೆಂದು ತಿಳಿದು ಯಾನುಕಾ ಲೈಲೈ ಎಂಬ ಚಿಕ್ಕ ಬಂದರದಲ್ಲಿ ಇಳಿಯುವ ಏರ್ಪಾಡು ಮಾಡಿದ್ದರು. ಇರಲು ಮನೆಗಳನ್ನು ಅದೇ ದ್ವೀಪದಲ್ಲಿ ಕಟ್ಟಿದ್ದರು. ಈಗ ಗವ್ಹರ್ನರರ ಆಜ್ಞೆಯ ಮೇರೆಗೆ ಹೆಚ್ಚು ಮನೆಗಳನ್ನು ಕಟ್ಟಬೇಕಾಯಿತು.

ಆ ಹಡಗದಲ್ಲಿದ್ದ ಪುರುಷರಲ್ಲಿ ಎಲ್ಲಕ್ಕಿಂತ ದೊಡ್ಡವನೆಂದರೆ ೩೮ ವರ್ಷದವರು. ಸ್ತ್ರೀಯರಲ್ಲಿ ದೊಡ್ಡವಳೆಂದರೆ ೩೫ ವರುಷದವಳು. ಸುಮಾರು ೮೦ ಜನ ಚಿಕ್ಕಮಕ್ಕಳೂ ಈ ಹಡಗಿನಲ್ಲಿ ಸೇರಿದ್ದರು. ಅವರಲ್ಲಿ ಉತ್ತರ ಪ್ರದೇಶದ ಪೂರ್ವದ ಜಿಲ್ಲೆಗಳಾದ ಬಸ್ತಿ, ಗೊಂಡಾ, ಆಝಮ ಹಾಗೂ ಬನಾರಸದ ಬಂದವರೇ ಜಾಸ್ತಿ. ಧರ್ಮಾಂತರ–ಮತಾಂತರಗಳ ಭೀತಿ, ಆಪ್ತೇಷ್ಟರಿಂದ ಅಗಲುವಿಕೆ, ಮಕ್ಕಳ ಭವಿಷ್ಯ ಮುಂತಾದ ಕಾರಣಗಳಿಂದ ಭಾರತದ ರೈತರು ಸಾಮಾನ್ಯವಾಗಿ ತಾವಿದ್ದ ಸ್ಥಳವನ್ನು ಬಿಟ್ಟು ಹೋಗಲು ಹಿಂಜರಿಯುತ್ತಾರೆ. ಆದರೆ ಬಡತನ ಇವೆಲ್ಲಕ್ಕೂ ಮಿಗಿಲಾದ ಶಕ್ತಿಯಿಂದ ಅವರನ್ನು ಕೂಲಿಯಾಳುಗಳೆಂದು ಫಿಜಿದ್ವೀಪಕ್ಕೆ ಅಟ್ಟಿತು. ಬ್ರಿಟಿಶರ ಕೂಳು–ಆಶ್ವಾಸನೆಗಳು ಅವರನ್ನು ಮರುಳು ಮಾಡಿದವು. ಮತ್ತೆ ಹೆಚ್ಚು ಸಂಖ್ಯೆಯಲ್ಲಿ ಕೂಲಿಯಾಳುಗಳನ್ನು ತುಂಬಲು ಫಿಜಿ ದ್ವೀಪಕ್ಕೆ ಹೋದ ಕೆಲವರಿಗೆ ದುಡ್ಡು ಕೊಟ್ಟು ಭಾರತಕ್ಕೆ ಕಳಿಸಿದ್ದೂ ಉಂಟು. ಅಂಥವರ ಸಿರಿವಂತಿಕೆಯನ್ನು ನೋಡಿ ಮರುಳಾದವರೂ ಎಷ್ಟೋ ಜನ! ಆಗ್ರಾದ ಬಳಿಯ ಹಳ್ಳಿಯಲ್ಲಿ "ಫಿಜಿ ದ್ವೀಪಕ್ಕೆ ಹೋಗಬೇಡಿ" ಎಂದು ಹೇಳಲು ಬಂದ ಸ್ಥಳೀಯ ಮುಖಂಡರನ್ನು ನಂಬದೆ ಬ್ರಿಟಿಶ್ ಸಾಹೇಬರನ್ನು ನಂಬಿ ಕೂಲಿಯಾಳುಗಳು ಹೋದದ್ದಕ್ಕೆ ಆ ಸಾಹೇಬನಿಗೇ ಆಶ್ಚರ್ಯ. ಫಿಜಿಯನ್ನು ಮುಟ್ಟಿದ ಮೇಲೆ ಸ್ಥಳೀಯ ಮುಖಂಡನ ಮಾತು ಕೂಲಿಯಾಳುಗಳಿಗೆ ಅರ್ಥವಾಯಿತು. ಆದರೆ ಆಗಲೇ ಕಾಲ ಮಿಂಚಿ ಹೋಗಿತ್ತು.

ಕೂಲಿಯಾಳುಗಳನ್ನು ಭರ್ತಿ ಮಾಡುವಾಗ ನೂರಕ್ಕೆ ನಾಲ್ವತ್ತರಂತೆ ಯುವತಿಯರನ್ನು ಭರ್ತಿ ಮಾಡುತ್ತಿದ್ದರು. ಕುಟುಂಬ ಸಮೇತ ಕೂಲಿಯಾಳುಗಳನ್ನು ಭರ್ತಿ ಮಾಡುವುದು ಭಾರತದಲ್ಲಿ ಬಹಳ ಕಠಿಣವಾಗುತ್ತಿತ್ತು. ಬ್ರಿಟಿಶರಿಗೆ ಮನೆಯಿಂದ ಹೊರಗೆ ಸಿಕ್ಕ ಯುವಕರನ್ನು ಹಾಗೇ ಕರೆತರುತ್ತಿದ್ದುದರಿಂದ ಅವರ ಹೆಂಡಂದಿರನ್ನು ಕರೆತರುವದು ಸಾಧ್ಯವಾಗುತ್ತಿರಲಿಲ್ಲ. ಇಂತಹ ಹೆಂಡಂದಿರು ೧೮–೨೦ ವರುಷಗಳ ಕಾಲ ಗಂಡಂದಿರ ದಾರಿ ನೋಡುತ್ತ ಕಾಲ ಕಳೆಯುತ್ತಿದ್ದರೆಂದು ಬ್ರಿಟಿಶ್ ವರದಿಗಳು ಹೇಳುತ್ತವೆ. ೧೦೦ಕ್ಕೆ ೪೦ರಂತೆ ಇದ್ದ ಸ್ತ್ರೀಯರ ಸಂಖ್ಯೆಯನ್ನು ೩೩ಕ್ಕೆ ಇಳಿಸಬೇಕೆಂದರು, ಭರ್ತಿ ಮಾಡುವ ಅಧಿಕಾರಿಗಳು. ಅವರವರ ಕುಟುಂಬ ಹಾಗೂ ಮಕ್ಕಳನ್ನು ಪೋಷಿಸಲು ನಾವು ಭಾರತೀಯ ಕೂಲಿಯಾಳುಗಳನ್ನು ಕರೆತರುತ್ತಿದ್ದೇವೆಯೆ ಎಂಬುದು ಅವರ ವಾದ! ಆದರೆ ಭಾರತದಲ್ಲಿದ್ದ ಅಂದಿನ ಸರಕಾರವು ಈ ಮಾತನ್ನು ಒಪ್ಪಲಿಲ್ಲ. ಗಂಡಸರು ಹೆಂಡತಿ ಮಕ್ಕಳನ್ನು ಹಿಂದೆ ಬಿಟ್ಟು ಹೋಗುವುದರಿಂದ ಉಂಟಾಗುವ ಸಾಮಾಜಿಕ ಅನಿಷ್ಟಗಳ ಪರಿಣಾಮವು ಭೀಕರವಾಗಿತ್ತು.

೧೮೭೯ರಿಂದ ೧೯೧೬ರ ವರೆಗೆ ಭಾರತದಿಂದ ಒಟ್ಟು ೮೭ ಸಲ ಹಡಗುಗಳಲ್ಲಿ ಅರವತ್ತು ಸಾವಿರಕ್ಕೂ ಮಿಕ್ಕಿ ಕೂಲಿಯಾಳುಗಳನ್ನು ತರಲಾಯಿತು. ಎರಡೂವರೆ ತಿಂಗಳು ಪ್ರವಾಸದಲ್ಲಿ ಹಡಗಿನಲ್ಲಿ [illegible] ಜನರು [illegible]



ಗಿರಮಿಟನ ಶತಮಾನೋತ್ಸವದ ಸಂದರ್ಭದಲ್ಲಿ ಪ್ರೇಕ್ಷಕವೃಂದಕ್ಕೆ ಅಲ್ಲಿನ ಭಾರತೀಯ ಸಾಂಸ್ಕೃತಿಕ ಕೇಂದ್ರ ಬ್ಯಾಲೆ ಕಾರ್ಯಕ್ರಮವನ್ನು ಅರ್ಪಿಸುತ್ತಿರುವುದು.

ಫಿಜಿಯನ್ನು ತಲುಪಿದರು. ಹಡಗದಲ್ಲಿ ಜಾತಿ ಮತಗಳ ಭೇದವೆಲ್ಲ ತೊಲಗಿಹೋಗಿದೆಯೆಂದು ತಿಳಿಯಲಾಗಿದ್ದರೂ ಆಗಾಗ ಅದು ತಲೆದೋರುತ್ತಿತ್ತು. ಆದರೆ ಕೊಂಚ ಸಂಘರ್ಷದ ತರುವಾಯ ಆರಿಹೋಗುತ್ತಿತ್ತು.

ಈ ಕೂಲಿಯಾಳುಗಳೆಲ್ಲ ತಾವು 'ಗಿರಿಮಿಟ' ನಲ್ಲಿ ಬಂದವರೆಂದು ಹೇಳಿಕೊಳ್ಳುತ್ತಿದ್ದರು. 'ಗವರ್ನಮೆಂಟಿನ ಕೂಲಿ' ಎಂದು ಹೇಳುವದಕ್ಕೆ ಬದಲಾಗಿ 'ಗಿರಿಮಿಟ' ಎಂದು ಹೇಳಿದರೇನೋ. ಈಗಲೂ ಫಿಜಿದ್ವೀಪದ ಸಾಮಾಜಿಕ, ಆರ್ಥಿಕ ಹಾಗೂ ಐತಿಹಾಸಿಕ ಜೀವನದಲ್ಲಿ 'ಗಿರಿಮಿಟ'ನ ತಹಳದಿ ಭಗ್ನವಾಗಿದೆ.

ಗಿರಿಮಿಟನ ನೂರು ವರ್ಷಗಳು ಕಳೆದುಹೋದವು. ಉದ್ದೇಶದ ಅರಿವಾಗದೇ ಅಂದು ಹಡಗಿನಲ್ಲಿ ಫಿಜಿದ್ವೀಪಕ್ಕೆ ಹೋದವರಲ್ಲಿ ಕೆಲವರು ಮಾತ್ರ ಬದುಕಿದ್ದಾರೆ. ಉಳಿದವರ ಮೂರನೆಯ ಪೀಳಿಗೆಯೋ ನಾಲ್ಕನೆಯ ಪೀಳಿಗೆಯೋ ದ್ವೀಪಗಳಲ್ಲಿ ನೆಲಸಿ ಇಂದು ಒಳ್ಳೆಯ ಸ್ಥಿತಿಯಲ್ಲಿದೆ. ಸ್ವಂತ ವ್ಯವಸಾಯಗಳನ್ನು ನಡೆಸುವವರು ಕೆಲವರು; ವ್ಯಾಪಾರ ಉದ್ಯೋಗಗಳಲ್ಲಿ ತೊಡಗಿದವರು ಇನ್ನು ಕೆಲವರು. ಪೂರ್ವಜರ ಕರುಣ ಕಥೆಯ ಮೇಲೆ ತಮ್ಮ ಸಂಪತ್ತು ನಿಂತಿದೆ ಎಂದು ಆಗಾಗ ನೆನಪು ಮಾಡಿಕೊಡಲು ಎಲ್ಲರ ಮನೆಗಳಲ್ಲೂ ಹಿರಿಯರ ಫೋಟೋಗಳು; ಭಾರತೀಯ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಪ್ರಯತ್ನ ನಡೆದಿದ್ದರೂ ಪಾಶ್ಚಾತ್ಯ ಸಂಸ್ಕೃತಿ ಹಬ್ಬಿಕೊಂಡಿರುವುದು ಅಲ್ಲಿ ನಿಚ್ಚಳವಾಗಿ ಕಾಣುತ್ತದೆ. ಆದರೆ ಅತಿಥಿಸತ್ಕಾರದಲ್ಲೂ ಊಟ ತಿಂಡಿಗಳ ವಿಷಯದಲ್ಲೂ ಅವರು ಅಪ್ಪಟ ಭಾರತೀಯರಾಗಿಯೇ ಉಳಿದಿದ್ದಾರೆ.

ಸುವಾ, ಲಾಟೋಕಾ, ನಾಡಿ, ಬಾ ಮುಂತಾದ ನಗರಗಳಲ್ಲಿ ಉದ್ಯೋಗ ಮಾಡಿಕೊಂಡು ಒಳ್ಳೆಯ ಸ್ಥಿತಿಗೆ ಬಂದವರು ಕೆಲವರಿದ್ದರೆ ಇನ್ನೂ ಹಳ್ಳಿಗಳಲ್ಲಿಯೇ ಇದ್ದು ನೋಡಿಕೊಳ್ಳುವವರಿಲ್ಲದೆ ಗುಡಿಸಲುಗಳಲ್ಲಿ ಇರುವವರೂ ತುಂಬ ಜನ. ಗಿರಮಿಟಿನಲ್ಲಿ ಬಂದು ೭೫ ವರ್ಷಕ್ಕೂ

ಹೋಲ್ಪಟ್ಟು ವಯಸ್ಸಾದವರಿಗೆಲ್ಲ ಊರುಗೋಲುಗಳನ್ನು ಕೊಡುವ ಒಂದು ಚಿಕ್ಕ ಉತ್ಸವವನ್ನು ಲೌಟೋಕಾದ ಬಳಿ ಹಳ್ಳಿಯಲ್ಲಿ ಆಚರಿಸಲಾಯಿತು. ಗಿರಮಿಟಿನ ಶತಮಾನೋತ್ಸವದಲ್ಲಿ ಇದೂ ಒಂದು ಭಾಗ! ಊರುಗೋಲು ಪಡೆದವರು ಏನು ಮಾತನಾಡಿಕೊಳ್ಳುತ್ತಿದ್ದಾರೋ ಕೇಳೋಣವೆಂದು ನಾನು ಅಲ್ಲಲ್ಲಿ ಅವರ ಬಳಿ ಹೋದೆ. ಕೆಲವರು ಅದನ್ನು ತಮಗೆ ಯಾಕೆ ಕೊಟ್ಟರೆಂದು ಕೇಳುತ್ತಿದ್ದರು. ಇನ್ನು ಕೆಲವರು ಚೆನ್ನಾಗಿಯೆಂದರು. ಅವರಲ್ಲನೇಕರಿಗೆ ಕಿವಿ ಕೇಳುತ್ತಿರಲಿಲ್ಲ; ಕೂಗಿ ಕೂಗಿ ಹೇಳಬೇಕಾಗಿತ್ತು. ಬಹಳ ಜನರಲ್ಲಿ ನೆನಪಿನ ಶಕ್ತಿಯೇ ಉಡುಗಿಹೋಗಿತ್ತು. ಗಿರಿಮಿಟಿನಲ್ಲಿ ಬಾರುಕೋಲಿನ ಹೊಡೆತದಿಂದಾಗಿ ಹಾಗಾಗಿದೆ ಎಂದು ಅಲ್ಲಿದ್ದವರು ಹೇಳಿದರು. ಫಿಜಿ ಸರಕಾರದಲ್ಲಿ ಮಂತ್ರಿಯಾಗಿದ್ದ ಗಿರಮಿಟ ಸಂತತಿಯವರೊಬ್ಬರು ಸಮಾರಂಭದಲ್ಲಿ ಹಾಜರಿದ್ದರು.

ಫಿಜಿದ್ವೀಪದ ಸುವಾದಲ್ಲಿ ಗಿರಮಿಟ ಶತಮಾನೋತ್ಸವ ವಿಜೃಂಭಣೆಯಿಂದ ನಡೆಯಿತು. ೧೦೦ಕ್ಕೆ ೫೧ರಂತೆ ಜನಸಂಖ್ಯೆಯಿದ್ದ ಭಾರತೀಯರು ಶತಮಾನೋತ್ಸವವನ್ನು ಆಚರಿಸಲು ನಿರ್ಧರಿಸಿದರು. ಫಿಜಿ ದ್ವೀಪದ ಆರ್ಥಿಕ ವಿಕಾಸದಲ್ಲಿ ನೂರು ವರುಷಗಳಿಂದ ಶ್ರಮಿಸಿದ ಭಾರತೀಯರು ಈ ನಿರ್ಣಯವನ್ನು ಕೈಕೊಂಡಾಗ ಫಿಜಿ ಸರಕಾರಕ್ಕೆ ಇಲ್ಲವೆನ್ನಲು ಆದೀತೇ? ಫಿಜಿ ಸರಕಾರ ಹಾಗೂ ಅಲ್ಲಿನ ಉತ್ಸವ ಸಮಿತಿಯು ಪ್ರತಿನಿಧಿಗಳನ್ನು ಕಳಿಸಬೇಕೆಂದು ಭಾರತ ಸರಕಾರವನ್ನು ಕೇಳಿಕೊಂಡವು. ಆಮೇರೆಗೆ ನಾನು ಹಾಗೂ ಡಾ. ಸುಶೀಲಾ ನಯ್ಯರ್ ಉತ್ಸವದಲ್ಲಿ ಭಾಗವಹಿಸಲು ಫಿಜಿದ್ವೀಪಕ್ಕೆ ಹೋದೆವು; ಅಲ್ಲಿ ಶ್ರೀಮತಿ ಸೋನು ಕೋಚರ್ ಎಂಬವರು ಹೈಕಮೀಶನರ್ ಆಗಿದ್ದಾರೆ. ಆಗಲೂ ಅವರೇ ಇದ್ದರು. ಹೈಕಮೀಶನರೂ ಒಬ್ಬ ಮಹಿಳೆ; ಭಾರತದಿಂದ ಪ್ರತಿನಿಧಿಯಾಗಿ ಹೋದವರೂ ಇಬ್ಬರು ಮಹಿಳೆಯರು; ಇದನ್ನು ನೋಡಿದವರು ಭಾರತದಲ್ಲಿ ಮಹಿಳೆಯರಿಗೆ ಸ್ಥಾನ ಉಂಟು ಎಂದುಕೊಂಡಿರಬಹುದು!

ಮದ್ರಾಸ, ಸಿಂಗಾಪುರ, ಸಿಡ್ನಿಗಳ ಮಾರ್ಗವಾಗಿ ಫಿಜಿ ತಲುಪಿದ ನಮಗೆ ಸಂಜೆಯೇ ಲೌಟೋಕಾದಲ್ಲಿ ಜರುಗುವ ಸಮಾರಂಭದಲ್ಲಿ ಭಾಗವಹಿಸುವ ಅವಕಾಶ. ಭಾರತೀಯ ಪುರುಷರೂ ಮಹಿಳೆಯರೂ ದೊಡ್ಡ ಸಂಖ್ಯೆಯಲ್ಲಿ ಕೂಡಿದ್ದರು. ಭಾರತದಿಂದ ಬಂದ ಇಬ್ಬರೂ ಮಹಿಳೆಯರು ಭಾರತ ಸರಕಾರದಲ್ಲಿ ಮಂತ್ರಿಗಳಾಗಿ ಸೇವೆ ಸಲ್ಲಿಸಿದವರು, ಸಂಸತ್ತಿನ ಸದಸ್ಯರು ಎಂಬುದನ್ನು ತಿಳಿದು ಅಲ್ಲಿಯ ಜನಕ್ಕೆ ಅಪಾರ ಸಂತೋಷ. ನಮ್ಮ ಕಡೆಗೆ ಮನ್ನಣೆಕೊಟ್ಟು ಬಂದಿರಲ್ಲ ಎಂದು ಎಲ್ಲರೂ ಸಂತೋಷ ಪಡುವವರೇ!

ಕೇರಳ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವಂತೆ ಸಮುದ್ರ ತೆಂಗಿನಮರಗಳು, ಹಸಿರು ಮೆರೆಯುವ ಭೂಮಿ. ವಿವಿಧ ಬಗೆಯಲ್ಲಿ ಭಾರತೀಯ ವೇಷಭೂಷಣಗಳನ್ನು ತೊಟ್ಟ ಮಹಿಳೆಯರು ಪುರುಷರು ಇವನ್ನೆಲ್ಲ ನೋಡಿದಾಗ ಅದು ಭಾರತದ್ದೇ ಒಂದು ತುಂಡು ಎಂಬ ಭಾವನೆ ನಮಗೆ ಮೂಡಿದ್ದು ಸ್ವಾಭಾವಿಕವೆ.

ಮರುದಿನ ಬೆಳಿಗ್ಗೆ ೧೦ ಗಂಟೆಗೆ ನಡೆದ ಸಮಾರಂಭದಲ್ಲಿ ಲೌಟೋಕಾದ ಮೇಯರರು ನಮ್ಮನ್ನು ಸ್ವಾಗತಿಸಿ ಮಾತನಾಡಲು ಹೇಳಿದಾಗ ಕರತಾಡನವೇ ಕರತಾಡನ. ನಾವು ಸಮಸ್ತ ಭಾರತೀಯರ ಸದ್ಭಾವನೆಗಳನ್ನು ನಿಮಗೆ ಕೊಡಲು ತಂದಿದ್ದೇವೆ, ಎಂದಾಗ ನೆರೆದ ಜನರ ಆನಂದಕ್ಕೆ ಪಾರವೇ ಇಲ್ಲ.


ಸಮುದ್ರ ತೀರದ ಆ ಜನರು – ಜೀವನಗಳನ್ನು ನೆನೆದರೆ. ಮಂಗಳೂರಲ್ಲೋ ಮುಂಬಯಿಯಲ್ಲೋ ಇದ್ದಂತೆ ಭಾಸವಾಗುತ್ತಿತ್ತು. ಅಲ್ಲಿಯ ಜನ ಯಾವುದನ್ನೂ ನಿಧಾನವಾಗಿ, ಶಾಂತವಾಗಿ ಮಾಡುತ್ತಾರಂತೆ; ಏಳುವದರಲ್ಲೂ ಕೇಳುವುದರಲ್ಲೂ, ಹೇಳುವುದರಲ್ಲೂ, ಎಲ್ಲದರಲ್ಲೂ ಅಷ್ಟೇ! ಶಾಂತ ಮಹಾಸಾಗರದ ಮಧ್ಯದಲ್ಲಿರುವ ದ್ವೀಪಗಳೇ ಹಾಗೆ: ಅದಕ್ಕೆ ಪ್ಯಾಸಿಫಿಕ್ ವೇ (ಪ್ರಶಾಂತ ರೀತಿ) ಅನ್ನುತ್ತಾರೆ. ಯಾರಿಗಾದರೂ ಇಷ್ಟೇಕೆ ವಿಲಂಬವಾಯಿತು ಎಂದು ಕೇಳಿದರೆ ಅವಕ್ಕೆ [illegible]

ಫಿಕ್ ವೇ ಎಂದು ಹೇಳಿಬಿಡುತ್ತಾರೆ. ಈ ಪ್ಯಾಸಿಫಿಕ್ ವೇದ ಸ್ವಭಾವ ಭಾರತೀಯರ ಮೇಲೆಯೇ ಹೆಚ್ಚಾದ ಹಾಗಿದೆ; ಆಸ್ಟ್ರೇಲಿಯ ದಲ್ಲಿ ಭಾರತೀಯ ಡಾಕ್ಟರುಗಳು ಹೆಚ್ಚು ಜನಪ್ರಿಯರಾಗಿದ್ದಾರೆ. ಅವರು ಐದೇ ನಿಮಿಷ ಮಾತನಾಡಬೇಕು ಎಂದು ಬೋರ್ಡು ಹಾಕಿಲ್ಲ. ಬಿಳಿಯ ಡಾಕ್ಟರರಾದರೆ ರೋಗಿಯೊಡನೆ ಐದು ನಿಮಿಷಕ್ಕಿಂತ ಹೆಚ್ಚು ಮಾತೇ ಇಲ್ಲ. ಭಾರತೀಯ ಡಾಕ್ಟರರು ಪ್ಯಾಸಿಫಿಕ್ ವೇನಲ್ಲಿ ಅರ್ಧಗಂಟೆಯ ವರೆಗೂ ಮಾತನಾಡಿ ಗೊತ್ತುಮಾಡಿದ ಫೀಯನ್ನೇ ತೆಗೆದುಕೊಳ್ಳುತ್ತಾರೆ. ಜನಪ್ರಿಯ-ತೆಯ ಗುಟ್ಟು ಇರುವುದು ಇಲ್ಲಿ.

ಫಿಜಿ ದ್ವೀಪದಲ್ಲಿ ಮೂರು ದಿನಗಳ ವರೆಗೆ ಎಲ್ಲಿ ನೋಡಿದಲ್ಲಿ ಉತ್ಸವ. ಸರಕಾರದ ಪರ ವಾಗಿಯೂ ಅಧಿಕೃತವಾಗಿ ಒಂದು ಸಮಾ ರಂಭ ನೆರವೇರಿತು. ಫಿಜಿಯ ಪ್ರಧಾನಮಂತ್ರಿ, ಒಂದು ಶತಮಾನದ ಹಿಂದೆ ಬಂದು ಫಿಜಿಯಲ್ಲಿ ದುಡಿದು ನಾಡನ್ನು ಕಟ್ಟಿದ ಭಾರತೀಯರನ್ನು ಅಭಿನಂದಿಸಿದರು. ಗಿರಮಿಟಿನಲ್ಲಿದ್ದ ಕೆಲವು ಭಾರ ತೀಯ ವೃದ್ಧರಿಗೆ ಸನ್ಮಾನ ಮಾಡಿದರು. ಭಾರ ತೀಯ ಮಕ್ಕಳು ಹಿಂದಿಯಲ್ಲಿ ಹಾಡಿದರು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದರು.

ಈ ಮಹೋತ್ಸವವನ್ನು ಏರ್ಪಡಿಸದಿದ್ದರೆ ಸರಕಾರವು ಇನ್ನೇನು ಮಾಡೀತು? ಹಾಗೆ ನೋಡಿದರೆ ಕಳೆದ ಸಲ ನಾವೇ ಸರಕಾರ ರಚಿಸಬೇಕಾಗಿತ್ತು, ಎಂದು ಫಿಜಿಯ ಭಾರ ತೀಯ ಮುಖಂಡರು ಹೇಳಿದರು. "ಮತ್ತೆ ನಾಯಿತು?" ಎಂದು ನಾವು ಕುತೂಹಲದಿಂದ ಕೇಳಿದರೆ, ಮತ್ತೇನಾಗಬೇಕು, ಭಾರತದಲ್ಲಿ ಮುಖಂಡರು ಬಡಿದಾಡಿ ಸರಕಾರ ಉಳಿಯು ದಂತೆ ನೋಡಿಕೊಳ್ಳುತ್ತಾರಲ್ಲವೇ? ಆ ಗುಣ ನಮ್ಮಲ್ಲಿಯೂ ಬಂದು ಬಿಟ್ಟಿದೆ" ಎಂದರು ಆಂಧ್ರ ಮೂಲದವರಾದ ಜಯರಾಮ ರೆಡ್ಡಿ, ಕೇರಳದ ಕೋಯಾ, ಗುಜರಾತಿನ ಓರಿಯರಾದ ಮೆಹತಾ ಇವರೆಲ್ಲ ಮುಖಂಡರು. ಪ್ರಧಾನ ಮಂತ್ರಿ ಯಾರಾಗಬೇಕು? ಎಂಬ ಬಗ್ಗೆ ಭಿನ್ನಾಭಿ-ಪ್ರಾಯ ಬಂದು ಅದು ದೂರಾಗುತ್ತದೇನೋ ಎನ್ನುವಷ್ಟರಲ್ಲೇ ಬಿಳಿಯರ ಪ್ರತಿನಿಧಿ ಗವರ್ನರ್ ಜನರಲ್ಲರು ಮತ್ತೆ ಚುನಾವಣೆಯನ್ನು ಸಾರಿ ಬಿಟ್ಟರು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಈಗಿನ ಸರಕಾರದಲ್ಲಿ ನಾಲ್ಕು ಜನ ಭಾರತೀಯ ಮೂಲದವರಿದ್ದಾರೆ.

ಫಿಜಿದ್ವೀಪದ ಆರ್ಥಿಕ ಪ್ರಗತಿ ಅಲ್ಲಿಯ ಭಾರತೀಯ ಮೂಲದವರನ್ನು ಬಹಳವಾಗಿ ಅವಲಂಬಿಸಿದೆ. ಸಿರಿವಂತಿಕೆ ಬಂದಂತೆ ಜಾತಿ ಧರ್ಮಗಳ ವಿಚಾರ ಸ್ವಲ್ಪ ಮಟ್ಟಿಗೆ ಜೀವನದಲ್ಲಿ ನುಸುಳಿಕೊಳ್ಳುತ್ತಿದೆ. ಇಲ್ಲದೆ ಹೋದರೆ ಭಾರತ ದಲ್ಲಿ ಅವರ ಪೂರ್ವಜರು ಯಾವ ಪ್ರಾಂತದವರು ಅನ್ನುವ ವಿಚಾರವನ್ನು ಬಿಟ್ಟರೆ ಉಳಿದದ್ದು ಯಾವುದೂ ಹೆಚ್ಚಾಗಿ ಗೊತ್ತಿಲ್ಲ. ಇವರಲ್ಲಿ ಹಿಂದು ಗಳೇ ಹೆಚ್ಚು, ಮುಸಲ್ಮಾನರು ಕಡಿಮೆ. ಕಬ್ಬಿನ



"ರಾತ್ರಿ ಸರಿಯಾಗಿ ನಿದ್ದೆ ಬರಬೇಕಾದ್ರೆ ಏನ್ಮಾಡ್ಬೇಕೂಂತ ಕೇಳ್ತಿದ್ದೀರಾ ... ಹಗಲು ಹೊತ್ತು ನಿಮ್ಮಾಫೀಸ ನಿದ್ದೆ ಮಾಡಲು ಬಿಡಬೇಡಿ..."

ತೋಟವಲ್ಲಿ ಭಾರತೀಯ ಮೂಲದ ಜನಕ್ಕೆ ದುಡಿಮೆಯ ಗುಟ್ಟು ಗೊತ್ತಾದಂತೆ ಫಿಜಿಯ ಮೂಲನಿವಾಸಿಗಳಿಗೆ ಗೊತ್ತಿಲ್ಲ; ಇತ್ತೀಚೆ ಕೆಲವು ಮೂಲ ನಿವಾಸಿಗಳು ಸ್ವತಂತ್ರವಾಗಿ ಕಬ್ಬಿನ ತೋಟವನ್ನು ಮಾಡಿದ್ದರೂ ಅವ್ರ ಅಷ್ಟು ಯಶಸ್ವಿಯಾಗಿಲ್ಲ. ಫಿಜಿ ರಾಷ್ಟ್ರದ ಜೀವನದಲ್ಲಿ ಬೇರ್ಪಡಿಸಲು ಬಾರದಂತೆ ಅಲ್ಲಿನ ಭಾರತೀಯರು ಬೆರೆತು ಕೊಂಡಿದ್ದಾರೆ. ಕಬ್ಬಿನ ತೋಟಗಳ ಮಾಲೀಕರೂ ಆಗಿದ್ದಾರೆ ಹಲವೆಡೆಗಳಲ್ಲಿ.

ವ್ಯಾಪಾರೋದ್ಯಮಗಳಲ್ಲಿ ಆರ್ಥಿಕ ಸಹಾಯ ಸಲ್ಲಿಸಬೇಕಾದಾಗ ಫಿಜಿ ಮೂಲನಿವಾಸಿಗಳಲ್ಲಿ ಹಾಗೂ ಭಾರತೀಯ ಮೂಲದವರಲ್ಲಿ ಅಲ್ಲಿಯ ಸರಕಾರ ಭೇದಭಾವ ಮಾಡುತ್ತಿದೆಯೆಂದು ಭಾರತೀಯ ಮೂಲದವರ ಆಪಾದನೆ. ಈ ಆಪಾದನೆಗಳ ಹಿಂದೆ ಬಂಡುಗುಳಿತನದ ಆರೋಪವೂ ಇದ್ದದ್ದೆ! 'ಬ್ಯಾಂಕ್ ಆಫ್ ಆಸ್ಟ್ರೇಲಿಯಾ' ಮೊದಲಾದವುಗಳನ್ನು ಫಿಜಿಯ ಭಾರತೀಯರು ವಿದೇಶೀ ಬ್ಯಾಂಕುಗಳೆಂದು ಪರಿಗಣಿಸುತ್ತಾರೆ. ಮೂರು ವರ್ಷಗಳ ಹಿಂದೆ ಫಿಜಿಗೆ ಹೋದ 'ಬ್ಯಾಂಕ್ ಆಫ್ ಬರೋಡಾ' ಬಗ್ಗೆ ಭಾರತೀಯರಿಗೆ ತಮ್ಮ ಬ್ಯಾಂಕು ಎಂಬ ಅಭಿಮಾನ. "ಈ ಬ್ಯಾಂಕು ಫಿಜಿಗೆ ಬಂದ ಮೇಲೆ ನಮಗೆಷ್ಟೋ ಸಾಮರ್ಥ್ಯ ಬಂದಿದೆ," ಅನ್ನುತ್ತಾರೆ ಅವರು.

ಮೊದಮೊದಲು ಫಿಜಿ ಮೂಲನಿವಾಸಿಗಳನ್ನು ತೋಟಗಳಲ್ಲಿ ದುಡಿಮೆಗೆ ಹಚ್ಚುವದು ಕಷ್ಟವಾಯಿತಂತೆ. ನಾವೇ 'ಸೋಮಾರಿಗಳು ಅಂದರೆ ಅವರು ನಮಗಿಂತ ಸೋಮಾರಿಗಳು. ಗ್ರಾಮೀಣ ಪ್ರದೇಶದ ಅವರ ಜೀವನದಲ್ಲೂ ಹೆಚ್ಚಿನ ವ್ಯತ್ಯಾಸವಿಲ್ಲ. ಫಿಜಿ ಮೂಲ ನಿವಾಸಿಗಳನ್ನು ನೋಡಬೇಕೆನ್ನುವ ಕುತೂಹಲದಿಂದ ಸುವಾದಿಂದ ೧೫–೨೦ ಮೈಲು ದೂರದಲ್ಲಿರುವ ಒಂದೆರಡು ಹಳ್ಳಿಗಳಿಗೆ ಹೋದೆವು. ನಾವು ಬರುವ ವಿಚಾರವನ್ನು ಅವರಿಗೆ ಮೊದಲೇ ತಿಳಿಸಲಾಗಿತ್ತು. ಯುವಕರು ಹಿರಿಯರು ಎಲ್ಲರೂ ಒಂದೆಡೆ ಸೇರಿದರು. ಅವರೆಲ್ಲ ತಮ್ಮ ಭಾಷೆಯಲ್ಲಿ ಸ್ವಾಗತಿಸುವ ಒಂದು ಹಾಡು ಹೇಳಿದರು. ಬಳಿಕ ಅವರಲ್ಲಿಯ ಪ್ರಮುಖ ಕಟ್ಟಿಗೆಯ ಒಂದು ಕೋಣವಿಮ್ಮಗೆಯಂತಹ ಪಾತ್ರೆಯನ್ನು ತಂದು ನೀರು ಹಾಕಿ ಒಂದು ತರಹದ ಬೇರಿನ ಪುಡಿಯನ್ನು ಹಾಕಿ ತೆಂಗಿನ ಪರಟೆಯಿಂದ ಕಲಕಿದರು. ಗುಂಡಿಗೆ ಅದನ್ನು ಕಲಸುವಾಗ ಎಲ್ಲರೂ ಸೇರಿ ಮಂತ್ರ ಹೇಳಿದಂತೆ ಹೇಳುತ್ತಿದ್ದರು. ಹೀಗೆ ಮಾಡುವುದು ಅತಿಥಿಗಳ ಸನ್ಮಾನಕ್ಕಾಗಿ. ಈ ಪೇಯಕ್ಕೆ ಯಾಕೊನಾ ಎಂದು ಹೆಸರು. ಅವರು ಪರಟೆಯಲ್ಲಿ ತಂದು ನಮ್ಮ ಕೈಲಿ ಕೊಡಲು ಬಂದಾಗ ನಾವು ಅದನ್ನು ಸ್ವೀಕರಿಸಲೇಬೇಕು. ಬೇಡ ಅಂದರೆ ಅವರಿಗೆ ದೊಡ್ಡ ಅಪಮಾನ. ಪರಟೆಗೆ ಬಾಯಿಹಚ್ಚಿ ಕುಡಿಯುವದೇ ಅಲ್ಲಿಯ ಪದ್ಧತಿ! ಅಮೇರೆಗೆ ನಾವಿಬ್ಬರೂ ಯಾಕೊನಾ ಕುಡಿದೆವು. ಬಳಿಕ ತೂತು ಮಾಡಿ ಹಗ್ಗ ಹಾಕಿದ ತಿಮಿಂಗಿಲಿನ ಒಂದು ಹಲ್ಲನ್ನು ತಂದು ಕೈಯಲ್ಲಿಟ್ಟರು. ಆ ಹಲ್ಲಿಗೆ ತಬುವಾ ಅನ್ನುತ್ತಾರೆ. ಅದು ಮನೆಯಲ್ಲಿರುವುದು ಶುಭಸೂಚಕ ಎಂದು ತಿಳಿಯಲಾಗುತ್ತದೆ. ಭಾರತದಲ್ಲಿಯೂ ಗೆಂಡಾಮೃಗದ ಮೂಗಿನ ಮೇಲಿರುವ ಕೊಂಬನ್ನು ಮನೆಯಲ್ಲಿಟ್ಟರೆ ಬೇಕಾದಷ್ಟು ಐಶ್ವರ್ಯ ಬರುತ್ತದೆಂಬ ತಿಳುವಳಿಕೆ ಇದೆ. ಕೊಂಬಿನ ಬೆಲೆ ೧೦,೦೦೦ ರೂಪಾಯಿಗಳ ವರೆಗೂ ಹೋಗುತ್ತದೆ. ಇದು ಅಸಾಮಿನಲ್ಲಿ ಮಾತ್ರ ಸಿಗುತ್ತದೆ.

ಫಿಜಿಯ ಒಂದು ಹಳ್ಳಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಊದುಬತ್ತಿಯನ್ನು ಮಾಡುವ ಕಾರಖಾನೆಯಿದೆ. ಮಹಿಳೆಯರೇ ಅಲ್ಲಿ ಹೆಚ್ಚಾಗಿ ದುಡಿಯುವರು. ಊದುಬತ್ತಿಗೆ ಬೇಕಾಗುವ ಕಚ್ಚಾ ಮಾಲು ಮೈಸೂರಿನಿಂದ ಹೋಗುತ್ತದೆ ಎಂಬುದನ್ನು ಕಾರಖಾನೆಯ ಮ್ಯಾನೇಜರರು ಕೊಟ್ಟ ಕಾಗದ ಪತ್ರ ನೋಡಿ ತಿಳಿದುಕೊಂಡಾಗ ಆಶ್ಚರ್ಯವಾಯಿತು.

ಫಿಜಿ ದೇಶದ ವೈಭವ ಬೆಳೆಯುತ್ತಿದೆ. ಗಿರಮಿಟಿನ ಶತಮಾನೋತ್ಸವ ಒಂದೆಡೆ. ಅದರ ತಳಹದಿಯಲ್ಲಿದ್ದ ಕರುಣಕಥೆಯ ಇತಿಹಾಸ ಇನ್ನೊಂದೆಡೆ. ಗಿರಿಮಿಟಿನಲ್ಲಿ ಸೇವೆ ಸಲ್ಲಿಸಿ ಇಂದು ನಿರಾಶ್ರಿತರಾಗಿರುವವರಿಗಾಗಿ ವಸತಿಗೃಹಗಳನ್ನು ಕಟ್ಟಿಸಿದ್ದಲ್ಲದೆ ಜೀವನದ ಏರ್ಪಾಡನ್ನೂ ಫಿಜಿ ಸರಕಾರ ಮಾಡಿದೆ. ಆಸ್ಪತ್ರೆಯ ಸಾಮಾನ್ಯ ವಾರ್ಡಿನ ಹಾಸಿಗೆಯೇ ಅವು ಕಾಣುತ್ತವೆ. ಅವಶ್ಯಕತೆಗನುಗುಣವಾಗಿ ಅವು

ರಾದರೂ ವೃದ್ಧ ರೋಗಿಗಳಂತೆ ಕಾಣುತ್ತಾರೆ. ಒಬ್ಬೊಬ್ಬರಿಗೆ ಕಟ್ಟಿಗೆಯ ಹಲಗೆಯ ಒಂದು ಮಂಚ; ಅವರ ಪಕ್ಕದಲ್ಲಿ ಅವರ ಎಲ್ಲ ಸಾಮಾನುಗಳು; ಪಕ್ಕದ ಗೋಡೆಯ ಮೇಲೆ ಭಗವಾನ್ ಕೃಷ್ಣನ ಭಾವಚಿತ್ರವನ್ನು ತಗಲಿಸಿ ಹೂಗಳನ್ನು ಏರಿಸಿ ಜಪಮಾಲೆಯನ್ನು ಹಾಸಿಗೆಯ ಮೇಲೆ ಇಟ್ಟುಕೊಂಡು ಕುಳಿತಿದ್ದ ಒಬ್ಬನನ್ನು, "ನಿನ್ನ ಹೆಸರೇನು?" ಎಂದು ಕೇಳಿದಾಗ ಅವನು, "ಹುಸೇನ್ ಅಲಿ" ಎಂದು ಹಿಂದಿಯಲ್ಲಿ ಹೇಳಿದ.

"ಮತ್ತೆ ಈ ಪೂಜೆಯನ್ನು ಮಾಡುತ್ತೀಯಲ್ಲ?" ಎಂದು ಶ್ರೀಕೃಷ್ಣನ ಫೋಟೋದೆಡೆಗೆ ಕೈಮಾಡಿ ಕೇಳಿದೆ. ಅವನ ಕಣ್ಣಲ್ಲಿಗೆ ನೀರು ಬಂತು.

"ನನ್ನ ಹೆಸರು ಬಾಲಕೃಷ್ಣ. ಮದ್ರಾಸಿನ ಹತ್ತಿರ ಅರ್ಕಾಟ ಜಿಲ್ಲೆಯಲ್ಲಿ ನನ್ನ ಊರು. ೧೩ ವರ್ಷದವನಿದ್ದಾಗಲೇ ಬಂದುಬಿಟ್ಟೆ. ಸಾಹೇಬರು ನಿನ್ನ ಹೆಸರು ಹುಸೇನ ಅಲಿ, ಹಾಗೆಂದೆ ನೀನು ಹಾಜರಿ ಹಾಕಬೇಕು ಎಂದರು. ಅವರು ಅಧಿಕಾರಿಗಳು, ನಾವು ಇಲ್ಲ ಅನ್ನೋಕಾಗುತ್ತದೆಯೆ?" ಎಂದಾತ ಹೇಳಿದ.

ಹೆಸರನ್ನೆ ಬದಲಿಸಿ ತಮ್ಮ ಜನರ ಜೊತೆಗೆ ಯಾವುದೇ ತರಹದ ಸಂಪರ್ಕವಿರದಂತೆ ಬ್ರಿಟಿಶ್ ಅಧಿಕಾರಿಗಳು ನೋಡಿಕೊಂಡರು. ಮೊದಲ ಐದು ವರುಷಗಳಲ್ಲೆ ಅಸುನೀಗಿದವರು ಎಷ್ಟೋ ಜನ. ಚಾಚೂ ತಪ್ಪಿದರೂ ಅವರಿಗೆ ಚಾಟಿ ಏಟು!

"ನಿನ್ನ ಹತ್ತಿರದವರು ಇಲ್ಲಿ ಮತ್ತೆ ಯಾರಿದ್ದಾರೆ?" ಎಂದೆ.

"ಒಬ್ಬ ಮಗಳಿದ್ದಾಳೆ. ಆಗಾಗ ಬರುತ್ತಾಳೆ. ಅವಳ ಸ್ಥಿತಿ ಚೆನ್ನಾಗಿಲ್ಲ," ಅಂದ ಬಾಲಕೃಷ್ಣ.

"ಈಗೇನು ಹೆಸರು ಬರೆಯುತ್ತೀಯಾ?" ಎಂದೆ.

"ಅದೇ, ಹುಸೇನ್ ಅಲಿ. ಯಾವ ಹೆಸರೇನಂತೆ ಒಂದು ಹಿಡಿ ಅನ್ನಕ್ಕೆ?" ಅಂದ.

ಫಿಜಿ ಸರಕಾರ ಗಿರಮಿಟ ಶತಮಾನೋತ್ಸವಕ್ಕಾಗಿಯೇ ಈ ವೃದ್ಧಾಶ್ರಮಗಳ ಸಂಖ್ಯೆಯನ್ನು ಹೆಚ್ಚು ಮಾಡಿದೆ.

೮೭ ವರ್ಷಗಳ ಒಬ್ಬನ ಹೆಸರು ಅಬ್ದುಲ್ಲಾ. ಮಂಗಳೂರಿನವನು. ಮಲೆಯಾಳಿ, ಹಿಂದಿ, ಫಿಜಿ, ಭಾಷೆಗಳನ್ನು ಬಲ್ಲ ಅವನ ಹೆಂಡತಿ ಮುಸ್ತಾನಬಿ ಲೋಟೋಕಾ (ಲೌಟೋಕಾ)ದಲ್ಲಿರುತ್ತಾಳೆ. ೧೯೧೩ ರಲ್ಲಿ ಮದ್ರಾಸಿನಿಂದ 'ಸತಲಜ-೪' ಎಂಬ ಹಡಗಿನಲ್ಲಿ ಅವನು ಬಂದ. ಚಿನ್ನಮ್ಮಾ, ಅಚ್ಚಮ್ಮ, ಸುಗ್ಗ ಎಲ್ಲರೂ ೮೫ ವರ್ಷಗಳನ್ನು ದಾಟಿ ಹಣ್ಣಾಗಿದ್ದಾರೆ. ಫಗ್ಗು ೯೦ ವರ್ಷದವನು; ಓರಿಸ್ಸಾದಿಂದ ಬಂದವನು. ಜಾತ್ರೆಗೆ ಹೋಗುತ್ತೇನೆಂದು ಹೇಳಿ ಮನೆ ಬಿಟ್ಟವನು ನೇರವಾಗಿ ಫಿಜಿಗೇ ತಲುಪಿದ. ಭರ್ತಿಮಾಡುವ ಅಧಿಕಾರಿಗಳು ಏನೇನೋ ಸುಳ್ಳು ಹೇಳಿದರು. 'ಗಂಗಾ-೬' ಹಡಗಿನಲ್ಲಿ ಅವನನ್ನು ತುಂಬಿದರು. ಫಿಜಿ ತಲುಪಿದಾಗ ಎಲ್ಲ ಕಗ್ಗತ್ತಲು. ಐದು ವರ್ಷ ಒಂದೇ ಸವನೆ ಕೂಲಿ. ರಾತ್ರಿ ೧ ಗಂಟೆಗೆದ್ದು ಅಡಿಗೆ ಊಟ ತೀರಿಸಿ ನಸುಕಿನ ನಾಲ್ಕಕ್ಕೆ ತೋಟದಲ್ಲಿ ಹಾಜರು. ಇಲ್ಲದಿದ್ದರೆ ಚಾಟಿ ಏಟು.

ಭೋಲಾ ಸಾಧು ಹಾಗೂ ಅವನ ಪತ್ನಿ ಮಹಿಗಾನಾದೇವಿ ಬಾ ನಗರದ ರಾಣಿರಾವಿ ಎಂಬಲ್ಲಿದ್ದವರು. ಇಬ್ಬರೂ ೧೦೦ ವರ್ಷಗಳನ್ನು ದಾಟಿದ್ದಾರೆ. "ತುಂಬಿದ ಬಸುರಿಯರು ತಮ್ಮ ಕೂಲಿಯ ಕರಾರನ್ನು ಪೂರ್ತಿ ಮಾಡಲು ತೋಟಗಳಲ್ಲಿ ದುಡಿಯುತ್ತಿರುವಾಗಲೇ ಹೆರಿಗೆಯಾದದ್ದನ್ನು ನಾನೇ ನೋಡಿದ್ದೇನೆ," ಎನ್ನುತ್ತಾಳೆ ಮಹಿಗಾನಾ ದೇವಿ. ಕರುಣೆಯೆಂಬುದು ಅಧಿಕಾರಿಗಳಿಗೆ ಗೊತ್ತೇ ಇರಲಿಲ್ಲ.

೧೯೦೩ ರಲ್ಲಿ 'ಎಲ್ಬೆ-೩' ರಲ್ಲಿ ಮದ್ರಾಸಿನಿಂದ ದಕ್ಷಿಣ ಭಾರತದಿಂದ ಕೂಲಿಯಾಳುಗಳೆಂದು ಭರ್ತಿ ಮಾಡಿ ೬೦೦ ಜನರನ್ನು ತುಂಬಿದರು. ಹೆಚ್ಚು ಕಡಿಮೆ ಎಲ್ಲಿಗೆ ಹೊರಟಿದ್ದೇವೆಂಬುದು ತಿಳಿಯದೇ ಹೊರಟವರು ಅವರೆಲ್ಲ. ಫಿಜಿ ದ್ವೀಪದಲ್ಲಿ ಒಂದು ಚಿಕ್ಕ ಭಾರತ ಎನ್ನಿಸುವಂತೆ ಎಲ್ಲ ಧರ್ಮಗಳ, ಎಲ್ಲ ಭಾಷೆಗಳ, ಜನ ಕೂಡಿದರು. ದಬ್ಬಾಳಿಕೆಗೆ ಒಳಗಾಗಿ ವಿಚಾರಕ್ಕೂ ತೊಡಗಿದರು. 'ಇಷ್ಟಾದರೂ ದಕ್ಷಿಣ ಭಾರತದ 'ಸನ್ಮಾರ್ಗ ಐಕ್ಯ ಸಂಗಮ' ಎಂಬ ಶೈಕ್ಷಣಿಕ-ಸಾಂಸ್ಕೃತಿಕ ಸಂಸ್ಥೆ ಸ್ಥಾಪಿತವಾಗಿ ಮಕ್ಕಳಿಗೆ ಪ್ರಾಥಮಿಕ ಶಾಲೆಗಳು ಪ್ರಾರಂಭವಾಗಬೇಕಿದ್ದರೆ ೧೯೨೬ರ ವರೆಗೂ ಕಾಯ-

ಬೇಕಾಯಿತು. ಸಾಧು ಕುಪ್ಪು ಸ್ವಾಮಿ, ಎಂ. ಎನ್. ನಾಯುಡು ಇವರೆಲ್ಲ ಅವರ ಪ್ರಚಾರದಲ್ಲಿ ಮಹತ್ವದ ಪಾತ್ರ ವಹಿಸಿದರು. ೧೯೨೦ರ ಜನವರಿಯಲ್ಲಿ ಒತ್ತಾಯದಿಂದ ಕೂಲಿಯಾಳುಗಳನ್ನು ಭರ್ತಿ ಮಾಡಕೂಡದೆಂದು ಕಾನೂನು ಪಾಸಾಗಿ ಭಾರತದಲ್ಲಿ ಕೂಲಿಯಾಳುಗಳ ಭರ್ತಿಗೆ ತಡೆಯುಂಟಾದುದು ಒಂದು ಐತಿಹಾಸಿಕ ಘಟನೆ. ಅಮಾನುಷವಾಗಿ, ಪಾಶವಿಕವಾದ ರೀತಿಯಲ್ಲಿ ಕೂಲಿಯಾಳುಗಳನ್ನು ಕಲೆ ಹಾಕುತ್ತಿದ್ದುದು ಅಂದೇ ಕೊನೆಗೊಂಡಿತು. ಅಂದು ೧೯೨೦ರ ಜನವರಿ ೧ನೇಯ ದಿನ! ಆಗಲೇ ಹೋದ ಭಾರತೀಯ ಕೂಲಿಯಾಳುಗಳು ಫಿಜಿದ್ವೀಪದಲ್ಲಿ ನೆಲೆಯಿರುತ್ತಲಿದ್ದರು!

ಅಲ್ಲಿಂದೀಚೆಗೆ ಭಾರತೀಯ ಮಕ್ಕಳಿಗಾಗಿ ಶಿಕ್ಷಣದ ಏರ್ಪಾಡು ನಡೆಯಿತು. ಕಳೆದ ೫೦ ವರುಷಗಳಲ್ಲಿ ಶಿಕ್ಷಣ, ಸಂಸ್ಕೃತಿ, ಸಮಾಜ, ಉದ್ಯೋಗ ಎಲ್ಲ ದೃಷ್ಟಿಗಳಿಂದಲೂ ಭಾರತೀಯರೂ ಪ್ರಗತಿಪಥದಲ್ಲಿದ್ದಾರೆ. ಗುಜರಾತಿ ಸಮಾಜ, ಮುಸ್ಲಿಂಲೀಗು, ಸನಾತನಧರ್ಮ ಪ್ರತಿನಿಧಿ ಸಭಾ, ಸಿಖ ಗುರುದ್ವಾರ ಸಂಸ್ಥೆ, ಕಬೀರಪಂಥ ಸಮ್ಮೇಲನ ಮಹಾಸಭಾ, ಆರ್ಯ ಪ್ರತಿನಿಧಿ ಸಭಾ, ಫಿಜಿ ಗಿರಮಿಟ್ ಅಸೋಸಿಯೇಶನ್ ವಿವೇಕಾನಂದ ಸಂಸ್ಕೃತಿ ಸಭೆ ಇವೆಲ್ಲ ಫಿಜಿ ದ್ವೀಪವನ್ನು ಆವರಿಸಿ ಬಿಟ್ಟು ಭಾರತದ ವಾತಾವರಣವನ್ನೇ ನಿರ್ಮಿಸಿವೆ. ಸುವಾದಲ್ಲಿ ೧೯೭೪ ರಲ್ಲಿ ಸ್ಥಾಪಿತವಾದ ಭಾರತೀಯ ಸಂಸ್ಕೃತಿ ಕೇಂದ್ರ ವಿಧವಿಧದ ಸಂಗೀತ, ಸಾಹಿತ್ಯ, ಪ್ರವಚನಗಳನ್ನು ಏರ್ಪಡಿಸಿ ಸಾಂಸ್ಕೃತಿಕ ತಳಹದಿಯನ್ನು ಭದ್ರಗೊಳಿಸಿದೆ.

ಫಿಜಿಯ ಭಾರತೀಯರಿಗೆ ಭಾರತದ ಬಗ್ಗೆ, ಭಾರತೀಯರ ಬಗ್ಗೆ ಬಹಳ ಅಭಿಮಾನ! "ಫಿಜಿಯ ಮೂಲ ನಿವಾಸಿಗಳೆದುರು. ಬಿಳಿಯರ ಎದುರು ಭಾರತದ ಹಿರಿಮೆಯನ್ನು ನಾವು ಸಾಕಷ್ಟು ಹೇಳುತ್ತೇವೆ. ಭಾರತವು ಏರ್ ಇಂಡಿಯಾದ ವಿಮಾನ ಸೇವೆಯನ್ನು ನೇರ ಫಿಜಿಯ ವರೆಗೆ ಬೆಳೆಸಿ ನಮ್ಮ ನೈತಿಕ ಬಲವನ್ನು ಹೆಚ್ಚಿಸಬಾರದೆ? ವ್ಯಾಪಾರೋದ್ಯಮಗಳ ಸಂಬಂಧದಲ್ಲಿ ಭಾರತೀಯ ಹಡಗು ವರುಷಕ್ಕೊಮ್ಮೆ ಸಲ ಫಿಜಿದ್ವೀಪ ತಲುಪಿದರೂ ನಮಗೆಷ್ಟು ಸಂತೋಷವಾಗುತ್ತದೆ!" ಎನ್ನುತ್ತಾರೆ ಅವರು. ●

ಮೊನ್ನೆ ಮೊನ್ನೆ ನವರಾತ್ರಿಗೆ ಮೈಸೂರಿಗೆ ಹೋಗಿದ್ದೆ. ಅರಮನೆ ಮುಂದೆ ಹೋಗುತ್ತಿರುವಾಗ, ನನ್ನ ಮುಂದೆ ನಾಲ್ಕಾರು ಸ್ವಲ್ಪ ಕಲಿತ ಹಳ್ಳಿಯ ಮಹಿಳೆಯರು ಮಾತನಾಡುತ್ತಾ ಮುಂದೆ ಸಾಗಿದ್ದರು: "ನೋಡೇ ಗಿರಿಜಾ, ನಾವು ದೇವರನ್ನ ಪೂಜೆ ಮಾಡ್ತೀವಿ, ಚಾಮುಂಡೇಶ್ವರೀ ಅಂತೀವಿ, ಆಂಜನೇಯ ಅಂತೀವಿ, ಶಿವಾ ಅಂತೀವಿ, ನಾರಾಯಣ ಅಂತೀವಿ, ಗಣಪತಿ ಅಂತೀವಿ, ನಮ್ಮ ಹಳ್ಳಿ ದೇವರನ್ನೂ ಪೂಜಿಸ್ತೀವಿ, ಮಾರಮ್ಮ, ಕಲ್ಲಮ್ಮ, ಮಾಂಕಾಳಮ್ಮ, ಒಂದಲ್ಲ ನೂರಾರು ದೇವರನ್ನ ಪೂಜೆ ಮಾಡ್ತೀವಿ. ನಮ್ಮ ಮಕ್ಕಳೇನಾದ್ರು ಕಾಯಿಲೆ ಬಿದ್ರೆ ಅಥವಾ ಇನ್ನೇನಾದ್ರೂ ನಮಗೆ ಅನುಕೂಲ ಆಗ್ಬೇಕಾದ್ರೆ ನಮಗೆ ಬೇಕಾದ ದೇವರ್ಗೆ ಹರಕೆ ಕಟ್ಕೊಡ್ತೀವಿ. ಆಗ ಆ ದೇವರುಗಳು ಏನು ಮಾಡ್ತಾರೆ ಗೊತ್ತಾ"

"ಆಗ ಮತ್ತೊಬ್ಬಳು ಕೇಳಿದಳು, "ಏನು ಮಾಡ್ತಾರೆ?"

"ನಾವು ಕಲ್ಲಮ್ಮಂಗೆ ಹರಕೆ ಕಟ್ಟಿದ್ದು ಅಂತಿಟ್ಕೊ. ಬಾಕಿ ದೇವರ್ಗಳೆಲ್ಲ ನಮಗೇನು? ಆ ದೇವರೇ ನಿಗಾ ಮಾಡಿ ಅಂತ ಉದಾಸೀನ ಮಾಡೋದೂ ಅಲ್ದೆ, ನಮ್ಮನ್ನ ಬೇಡ್ಕೊಳ್ಳಿಲ್ಲಲ್ಲಾ ಅಂತ ದೂಷಣೇನೂ ಮಾಡ್ತಾವೆ. ಆಗ ನಮ್ಮ ಮಕ್ಕಳ ಕಾಯಿಲೆ ಹುಷಾರಾಗೋದಿಲ್ಲ; ಇನ್ನೂ ಹೆಚ್ಚಾಗುತ್ತೆ. ಅದೇ ಮುಸ್ಲಿಮರಾಗಲೀ ಕ್ರಿಶ್ಚಿಯನ್ ಆಗ್ಲೀ ಅಲ್ಲಾ ಅಥವಾ ಯೇಸು ಅಂತಾರೆ. ಆಗ ಅವರ ಪಾಲಿಗೆ ಒಬ್ಬನೇ ಆಗಿರುವ ಆ ಭಗವಂತ ತಕ್ಷಣ ಅವರ ಕೇಳಿಕೆ ನೆರವೇರಿಸಿ ಕೊಡ್ತಾನೆ. ನೂರಾರು ದೇವ್ರು ಕಟ್ಕೊಂಡಿರೋ ನಾವು ಒಂದು ನೆಲೆ ಇಲ್ದೆ ಪರದಾಡ್ತೀವಿ," ಅಂದಳು.

ಆಕೆಯಾಡಿದ ಮಾತು ಅದೆಷ್ಟು ಸತ್ಯ! —ಎಸ್. ಜಯಾ ಸೂರ್ಯನಾರಾಯಣ

ಆಯುರ್ವೇದ ಜಪಾನಿಗೆ ಬಂತು!

ಡಾ. ಕೃಷ್ಣ ಯು. ಕೆ.

ಭಾರತ ಜಗತ್ತಿಗೆ ಕೊಟ್ಟ ಅಮೂಲ್ಯ ಕಾಣಿಕೆಗಳಲ್ಲಿ ಆಯುರ್ವೇದವೂ ಒಂದು. ಸಾವಿರಾರು ವರ್ಷಗಳಷ್ಟು ಪ್ರಾಚೀನವಾದ ಪರಂಪರೆಯುಳ್ಳ ಈ ವೈದ್ಯಕೀಯ ವಿಜ್ಞಾನ ಸಾಕಷ್ಟು ಏರು ತಗ್ಗುಗಳನ್ನು ಕಂಡು ಪರಿವರ್ತನೆಗೆ ಒಳಪಟ್ಟಿತು. ಕಾಲ ತನ್ನ ಗರ್ಭದಲ್ಲಿ ನಿರುಪಯುಕ್ತವಾದ ಎಲ್ಲಾ ವಸ್ತುಗಳನ್ನು ತಿಂದು ಜೀರ್ಣಿಸುವ ಸ್ವಭಾವ ಉಳ್ಳದ್ದು. ಆದರೂ ಆಯುರ್ವೇದ ಇಂದಿಗೂ ಜೀವಂತವಾಗಿರುವುದೇ ಇದು ಉಪಯುಕ್ತವಾಗಿರುವುದಕ್ಕೆ ಸಾಕ್ಷಿ.

ಇತ್ತೀಚೆಗಿನ ವರ್ಷಗಳಲ್ಲಿ ಅಂತರಾಷ್ಟ್ರೀಯ ರಂಗದಲ್ಲಿ ಇದರ ಮಹತ್ವ ಗುರುತಿಸಲ್ಪಡಲಾರಂಭವಾಗಿದ್ದು ದೇಶದ ಜನರಲ್ಲೂ ಆಯುರ್ವೇದದ ಬಗ್ಗೆ ಜಾಗ್ರತಿ ಉಂಟಾಗುತ್ತಿರುವುದು ಒಳ್ಳೆಯ ಲಕ್ಷಣ.

ವಿದೇಶೀಯರ ಆಸಕ್ತಿ

೧೯೭೮ ರಲ್ಲಿ ಕೆನಡಾದ ಸೌತ್ ಇಲಿನಾಯಿಸ್ ವಿಶ್ವವಿದ್ಯಾಲಯದಿಂದ ೭ ಜನ ವೈದ್ಯರುಗಳ ತಂಡವೊಂದು ಡಾ. ಗ್ಲೆನ್ ಡಬ್ಲ್ಯು. ಡೇವಿಡ್ಸನ್ನರ ನೇತೃತ್ವದಲ್ಲಿ ಆಯುರ್ವೇದವನ್ನು ಅಭ್ಯಸಿಸಲು ಭಾರತಕ್ಕೆ ಬಂದಿತು.

ಆ ವೈದ್ಯಕೀಯ ತಂಡ ಭಾರತದ ಪ್ರಮುಖ ಆಯುರ್ವೇದ ವಿದ್ಯಾಕೇಂದ್ರ, ಆಸ್ಪತ್ರೆ, ಸಂಶೋಧನಾ ಕೇಂದ್ರಗಳನ್ನು ಸಂದರ್ಶಿಸಿ, ವ್ಯಾಪಕವಾದ ಅಭ್ಯಾಸ ನಡೆಸಿ, ಈ ಶಾಸ್ತ್ರ ವೈಜ್ಞಾನಿಕವಾಗಿದೆಯೆಂಬುದನ್ನೂ ಅದರ ಉಪಯೋಗಗಳನ್ನೂ ಗುರುತಿಸಿತು. ಶಿಕಾಗೋ, ನ್ಯೂಯಾರ್ಕ್ ಮತ್ತು ಕ್ಯಾಲಿಫೋರ್ನಿಯಾ ಮುಂತಾದ ಪ್ರಮುಖ ಪಟ್ಟಣಗಳಲ್ಲಿ ಆಯುರ್ವೇದ ಚಿಕಿತ್ಸಾ ಕೇಂದ್ರಗಳನ್ನು ಆರಂಭಿಸುವಂತೆ ತನ್ನ ಸರಕಾರಕ್ಕೆ ವರದಿ ಒಪ್ಪಿಸಿತು.

ಜರ್ಮನಿಯಿಂದ ಡಾ. ಎಫ್. ಎಚ್. ಕಂಪರ್ ಅವರ ನೇತೃತ್ವದಲ್ಲಿ ನಿಯೋಗವೊಂದು ೧೯೭೪ರ ಫೆಬ್ರವರಿಯಲ್ಲಿ ಭಾರತವನ್ನು ಸಂದರ್ಶಿಸಿತು. ಆ ವಿದೇಶೀ ಚಿಕಿತ್ಸಕರು ಆಯುರ್ವೇದದ ಗಿಡ ಮೂಲಿಕೆಗಳ ಅಧ್ಯಯನದಲ್ಲಿ ವಿಶೇಷ ಆಸಕ್ತಿ ತಳೆದರು. ಏಶಿಯಾಖಂಡದ ಇತರ ರಾಷ್ಟ್ರಗಳಾದ ಬರ್ಮಾ, ಶ್ರೀಲಂಕಾ, ಥ್ಯಾಲ್ಯಾಂಡ್, ನೇಪಾಳಗಳಿಂದಲೂ ಸರಕಾರೀ ವೈದ್ಯಕೀಯ ಅಧಿಕಾರಿಗಳು ಆಯುರ್ವೇದ ಅಧ್ಯಯನಕ್ಕಾಗಿ ಜಾಮನಗರದಲ್ಲಿರುವ ಗುಜರಾತ್ ಆಯುರ್ವೇದ ವಿಶ್ವವಿದ್ಯಾಲಯವನ್ನು ಕಳೆದ ಎರಡು ವರ್ಷಗಳಲ್ಲಿ ಸಂದರ್ಶಿಸಿದರು.

ವಿಶ್ವಸಂಸ್ಥೆಯ ಮಾನ್ಯತೆ

ವಿಶ್ವ ಆರೋಗ್ಯ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕರಾದ ಡಾ. ವಿ. ಟಿ. ಎಚ್. ಗುಣರತ್ನೆಯವರು ೧೯೭೫ ನೆಯ ಜೂನ್ ತಿಂಗಳಲ್ಲಿ ತಮ್ಮ ಸಹಾಯಕರೊಂದಿಗೆ ಭಾರತಕ್ಕೆ ಸಂದರ್ಶನವಿತ್ತರು. ಮುಂಬರಲಿರುವ ಎರಡು ದಶಕಗಳಲ್ಲಿ ಸಾಮಾಜಿಕ ಆರೋಗ್ಯ ಸುಧಾರಣೆಯ ಕಾರ್ಯಕ್ರಮವನ್ನಿರಿಸಿಕೊಂಡ ವಿಶ್ವ ಆರೋಗ್ಯ ಸಂಸ್ಥೆಯು ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಆಯುರ್ವೇದದ ಉಪಯುಕ್ತತೆಯನ್ನು ಮನಗಂಡಿತು. ಫಲವಾಗಿ ಆಯುರ್ವೇದದ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆಯನ್ನು ಗಳಿಸಿತು. ವಿಶ್ವ ಆರೋಗ್ಯ ಸಂಸ್ಥೆಯ ತಜ್ಞರ ಸಲಹಾ ಸಮಿತಿಯಲ್ಲಿ ಮೊತ್ತ ಮೊದಲ ಬಾರಿಗೆ ಆಯುರ್ವೇದದ ಪ್ರತಿನಿಧಿಗೆ ಸದಸ್ಯತ್ವವನ್ನು ನೀಡಲಾಯಿತು. ಗ್ರಾಮೀಣ ಆರೋಗ್ಯ ಸಂರಕ್ಷಣೆಯ ಬಗ್ಗೆ ಆಯುರ್ವೇದದ ಸಹಯೋಗದೊಂದಿಗೆ ಸಂಶೋಧನೆ ನಡೆಸಲು ವಿಶ್ವ ಆರೋಗ್ಯ ಸಂಸ್ಥೆ ಅನುಮತಿಯನ್ನು ಇತ್ತುದಲ್ಲದೆ ಅದಕ್ಕೆ ಬೇಕಾದ ಆರ್ಥಿಕ ಸಹಾಯವನ್ನೂ ಕೊಡಲು ಮುಂದಾಯಿತು.

ಜಪಾನಿನಲ್ಲಿ ಆಯುರ್ವೇದ

೧೯೮೯ ರ ಸೆಪ್ಟೆಂಬರ್ ತಿಂಗಳಲ್ಲಿ ಎಮಿತ್ಸು ಹಿರೋ ಉಷಿಯೋರವರ ನೇತೃತ್ವದಲ್ಲಿ ಭಾರತವನ್ನು ಸಂದರ್ಶಿಸಿದ ಏಳು ಜನರ ತಂಡ ಭಾರತದ ಪ್ರಮುಖ ಆಯುರ್ವೇದ ವಿದ್ಯಾ ಸಂಸ್ಥೆ ಮತ್ತು ಚಿಕಿತ್ಸಾಲಯಗಳಿಗೆ ಭೇಟಿ ಕೊಟ್ಟು ಆಯುರ್ವೇದ ವಿದ್ವಾಂಸರ ಮತ್ತು ಸಂಶೋಧನೆಯಲ್ಲಿ ನಿರತರಾದ ವಿದ್ಯಾರ್ಥಿಗಳ ಜೊತೆಗೆ ವಿಚಾರ ವಿಮರ್ಶೆಯನ್ನು ನಡೆಸಿ ಆಯುರ್ವೇದದಲ್ಲಿ ಸ್ನಾತಕೋತ್ತರ ಪದವಿ ಪಡೆದ ಭಾರತದ ವಿದ್ಯಾರ್ಥಿಯೋರ್ವನನ್ನು ಸಂದರ್ಶನಕ್ಕಾಗಿ ಜಪಾನಿಗೆ ಆಹ್ವಾನಿಸಲು ನಿಶ್ಚಯಿಸಿತು. ಒಕ ಯಾಮಾ ಯುನಿವರ್ಸಿಟಿಯ 'ಏಷ್ಯಾದ ಸಾಂಪ್ರದಾಯಿಕ ವೈದ್ಯಕ ಸಂಸ್ಥೆ'ಯ ಆಶ್ರಯದಲ್ಲಿ ಏರ್ಪಡಿಸಲಾದ ಈ ಕಾರ್ಯಕ್ರಮಕ್ಕೆ ಇಂಟರ್ ನ್ಯಾಶನಲ್ ಮೆಡಿಕಲ್ ಫೌಂಡೇಶನ್ ಆಫ್ ಜಪಾನ್ ಆರ್ಥಿಕ ಸಹಾಯ ನೀಡಲು ಮುಂದಾಯಿತು. ಜಪಾನಿನ ವಿದ್ಯಾರ್ಥಿಗಳಿಗೆ ಆಯುರ್ವೇದದ ಜ್ಞಾನ ಮಾಡಿಸಿಕೊಡುವುದು ಅಲ್ಲಿನ ಚಿಕಿತ್ಸಾ ಪದ್ಧತಿಗಳನ್ನು ಅರಿಯುವುದು ಮತ್ತು ಉಭಯ ರಾಷ್ಟ್ರಗಳ ವೈದ್ಯಕೀಯ ಸಮಸ್ಯೆಗಳ ಚರ್ಚೆ ನಡೆಸುವುದು ಭೇಟಿಯ ಮುಖ್ಯ ಉದ್ದೇಶವಾಗಿತ್ತು.

ಆಧುನಿಕ ಚಿಕಿತ್ಸಾ ಪದ್ಧತಿಯ ಬಗೆಗೆ ಹೇಳುವುದಾದರೆ ಸಾಕಷ್ಟು ಯಂತ್ರ ಸೌಲಭ್ಯಗಳುಳ್ಳ, ವೈಜ್ಞಾನಿಕ ಚಿಕಿತ್ಸೆ ನೀಡುತ್ತಿರುವ ರಾಷ್ಟ್ರ ಜಪಾನ್. ಶರೀರದಲ್ಲಿನ ವಿಷಮತೆಯನ್ನು ವಿವಿಧ ಯಂತ್ರಗಳ ಸಹಾಯದಿಂದ ಅಲ್ಲಿನ ಚಿಕಿತ್ಸಕರು ಹೆಚ್ಚು ನಿರ್ದಿಷ್ಟವಾಗಿ ಕಂಡುಹಿಡಿಯಬಲ್ಲರು. ಕಂಪ್ಯೂಟರ್ ನಿಯಂತ್ರಿತ ಟೋಮೋಗ್ರಫಿ, ರೇಡಿಯೋ ಐಸೋಟೋಪ್‌ಗಳನ್ನು ಉಪಯೋಗಿಸಿ ಕಂಪ್ಯೂಟರ್‌ನಿಂದಲೇ ರೋಗವನ್ನು ಕಂಡುಹಿಡಿಯುತ್ತಾರೆ. ಇಂತಹ ಆಧುನಿಕ ಯಂತ್ರ ಸೌಲಭ್ಯಗಳನ್ನು ಅಲ್ಲಿನ ಆಸ್ಪತ್ರೆಗಳಲ್ಲಿ ಸರ್ವ ಸಾಮಾನ್ಯವಾಗಿ ಕಾಣಬಹುದು.

ರಾಷ್ಟ್ರೀಯ ಬಾಲರೋಗ ಕೇಂದ್ರದಲ್ಲಿ ಮುಖ್ಯ ಚಿಕಿತ್ಸಕರಾಗಿರುವ ಡಾ. ಯಮನೋಚಿ ಅಂತರಾಷ್ಟ್ರೀಯ ಖ್ಯಾತಿ ಪಡೆದ ವ್ಯಕ್ತಿ. ಈ ಆಸ್ಪತ್ರೆಯ ಪರಿಸರದ ವಿಸ್ತಾರದಲ್ಲಿ ಮಕ್ಕಳ ಮರಣದ ಪ್ರಮಾಣ ಜಗತ್ತಿನಲ್ಲೆ ಅತಿ ಕಡಿಮೆಯಾಗಿದ್ದು, ಇದು ಈ ಆಸ್ಪತ್ರೆಯ ಕಾರ್ಯಕ್ಷಮತೆಗೆ ಸಾಕ್ಷಿ. ದಿನ ತುಂಬುವ ಮೊದಲೇ ಜನನವಾದ ಶಿಶುಗಳನ್ನು ಸಂರಕ್ಷಿಸುವ ವಿಶೇಷ ಶಾಖೆ ಅಲ್ಲಿದ್ದು ೭೦೦ ಗ್ರಾಂನಷ್ಟು ತೂಕದ ಶಿಶುವನ್ನೂ ರಕ್ಷಿಸಿ ಬೆಳೆಸಲಾಗುತ್ತಿದೆ. ಸ್ವಯಂಚಾಲಿತ ರಕ್ತಸಂಚಾಲಕ ಮತ್ತು ಶ್ವಾಸೋಚ್ಛ್ವಾಸ ನಿಯಂತ್ರಣಗಳನ್ನು ಅಳವಡಿಸಲಾದ ಗಾಜಿನ ತೊಟ್ಟಿಗಳಲ್ಲಿ ಮಕ್ಕಳನ್ನು ರಕ್ಷಿಸಲಾಗುತ್ತಿದೆ. ಡಾ. ಯಮನೋಚಯವರೇ ಕಂಡುಹಿಡಿದ ರಕ್ತದಲ್ಲಿನ ಬಿಲಿರುಬಿನ್ ಪ್ರಮಾಣವನ್ನು ಗೊತ್ತುಪಡಿಸುವ ವಿಶೇಷ ವಿಧಾನವೊಂದು ಅಮೇರಿಕದ ಪಿಡಿಯೊಟ್ರಿಕ್ಸ್ ಪತ್ರಿಕೆಯಿಂದ ಪುರಸ್ಕೃತವಾಗಿದೆ. ತಾಯಿಯ ಎದೆ ಹಾಲೇ ಮಕ್ಕಳಿಗೆ ಶ್ರೇಷ್ಠ ಆಹಾರವೆನ್ನುವ ಡಾ. ಯಮನೋಚಿಯವರ ಸಿದ್ಧಾಂತ ಜಪಾನಿನಲ್ಲಿ ಪ್ರಸಿದ್ಧವಾಗಿದೆ.

ಡಾ. ಸೋಮುರ ಕ್ಯಾನ್ಸರಿನ ಚಿಕಿತ್ಸೆ ಮತ್ತು ನಿಯಂತ್ರಣದ ಬಗ್ಗೆ ಜಪಾನಿನಲ್ಲಿ ಸಂಶೋಧನೆ ನಡೆಸುತ್ತಿದ್ದು ಇದಕ್ಕೆ ಜಪಾನಿನ ಸರಕಾರ ಮತ್ತು ವಿಶ್ವ ಆರೋಗ್ಯ ಸಂಸ್ಥೆ ಸಹಾಯ ಮಾಡುತ್ತಿವೆ. ವಿಶೇಷ ಜಾತಿಯ ಇಲಿಗಳ ಮೇಲೆ ಪ್ರಯೋಗ ನಡೆಸುತ್ತಿರುವ ಅವರು ಕ್ಯಾಫೀನ್‌ನಲ್ಲಿ ಕ್ಯಾನ್ಸರ್ ನಿಯಂತ್ರಕ ಗುಣವಿದೆಯೆಂದು ಕಂಡುಹಿಡಿದಿದ್ದಾರೆ.

ಸಾಂಪ್ರದಾಯಿಕ ವೈದ್ಯಕ

ಮೂಲತಃ ಚೀನದಿಂದ ಪ್ರಸಾರವಾದ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಯನ್ನೂ ಜಪಾನಿನಲ್ಲಿ ಕಲಿಸಲಾಗುತ್ತಿದೆ. ಇದರಲ್ಲಿ ಅಕ್ಯುಪಂಕ್ಚರ್, ಮೊಕ್ಸಕಾಟರೈಝೇಶನ್ ಮತ್ತು ಮಸಾಜ್‌ಗಳೆಂಬ ಮೂರು ವಿಭಾಗಗಳಿವೆ. ವಿವಿಧ ಗಾತ್ರದ ಸೂಜಿಗಳನ್ನು ವಿಶಿಷ್ಟ ಸ್ಥಳಗಳಲ್ಲಿ ಚುಚ್ಚಿ ಅದರಿಂದಲೇ ಬೇರೆ ಬೇರೆ ರೋಗಗಳನ್ನು ಗುಣಪಡಿಸುವ ಅಕ್ಯುಪಂಕ್ಚರ್ ಜಪಾನಿನಲ್ಲೂ ಜನಪ್ರಿಯವಾಗಿದೆ. ಈ ಚಿಕಿತ್ಸೆಯಿಂದ

ರೋಗಗಳನ್ನು ಗುಣಪಡಿಸುವುದೇ ಅಲ್ಲದೆ ಶಸ್ತ್ರಚಿಕಿತ್ಸೆಯಲ್ಲಿ ಸಂಜ್ಞಾನನಾಶಕವಾಗಿಯೂ ಪ್ರಯೋಗಿಸುತ್ತಾರೆ. ಆಂತರಿಕ ಚಿಕಿತ್ಸೆಯಲ್ಲಿ ವಿವಿಧ ಗಿಡಮೂಲಿಕೆಗಳ ಚೂರ್ಣ ಮತ್ತು ಕಷಾಯಗಳನ್ನು ರೋಗಿಗೆ ಸೇವಿಸಲು ಕೊಡುತ್ತಾರೆ. ಈ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗೂ ತನ್ನದೇ ಆದ ಸಿದ್ಧಾಂತವಿದೆ. ಅದಕ್ಕನುಸಾರವಾಗಿ ಯಂಗ್, ಯಿಂಗ್ ಮತ್ತು ಸಿ ಎಂಬ ಮೂರು ಮುಖ್ಯತತ್ವಗಳು ನಮ್ಮ ಶರೀರದಲ್ಲಿವೆ ಎಂಬ ವರ್ಣನೆಯಿದ್ದು ಇವು ಆಯುರ್ವೇದದ ವಾತ ಪಿತ್ಥ ಮತ್ತು ಕಫಗಳನ್ನು ಹೋಲುತ್ತವೆ, ಅಲ್ಲದೆ ಜಪಾನೀ ವೈದ್ಯರು ಆಯುರ್ವೇದ ಮತ್ತು ಚೀನೀ ಚಿಕಿತ್ಸಾ ಪದ್ಧತಿಗಳ ನಡುವೆ ಸಾಮ್ಯವಿದೆಯೆಂಬುದನ್ನು ಒಪ್ಪುತ್ತಾರೆ. ಆಧುನಿಕ ವೈದ್ಯಕವನ್ನು ಅಭ್ಯಾಸಿಸಿದ ಜಪಾನೀ ಚಿಕಿತ್ಸಕರಲ್ಲಿ ಹಲವರು ಚೀನೀ ಸಾಂಪ್ರದಾಯಿಕ ಔಷಧಗಳನ್ನು ಕೊಡುತ್ತಾರೆ ಮತ್ತು ಇಂತಹ ಡಾಕ್ಟರುಗಳಿಗೆ ಅಲ್ಲಿ ಭಾರೀ ಬೇಡಿಕೆಯಿದೆ.

ಆಯುರ್ವೇದದತ್ತ ಒಲವು

ಕೇವಲ ಒಂದೇ ಚಿಕಿತ್ಸಾ ಪದ್ಧತಿ ಎಲ್ಲಾ ರೋಗಗಳನ್ನು ಎಲ್ಲಾ ಸಂದರ್ಭಗಳಲ್ಲಿ ಗುಣಪಡಿಸಲಾರದು. ಪ್ರತಿಯೊಂದು ವೈದ್ಯಕಕ್ಕೂ ತನ್ನದೇ ಆದ ಗುಣ ಮತ್ತು ದೋಷಗಳಿವೆ. ಇಂದು ಮಾನವ ಪ್ರಕೃತಿಯಿಂದ ದೂರ ಸರಿಯುತ್ತಿದ್ದು, ಆತ ಹಲವು ಹೊಸ ಕಾಯಿಲೆಗಳಿಗೆ ಗುರಿಯಾಗುವುದರ ಮೂಲಕ ತನ್ನ ಪ್ರಗತಿಗೆ ಪ್ರತಿಯಾಗಿ ಭಾರೀ ಬೆಲೆಯನ್ನೇ ತೆರುತ್ತಿದ್ದಾನೆ. ರೋಗಕಾರಕ ಜೀವಾಣುಗಳ ಔಷಧಗಳನ್ನು ಸಾತ್ಮ್ಯಗೊಳಿಸಿಕೊಳ್ಳುತ್ತಿವೆ. ಆದ್ದರಿಂದ ಈ ಯಂತ್ರಯುಗದಲ್ಲಿ ಪ್ರಕೃತಿಗೆ ಹತ್ತಿರವಾಗಿದ್ದು ರೋಗವನ್ನು ಬಿಟ್ಟು ರೋಗಿಯನ್ನು ಚಿಕಿತ್ಸಿಸುವ ಆಯುರ್ವೇದದದ ಕಡೆಗೆ ಮುಂದುವರಿದ ರಾಷ್ಟ್ರಗಳ ಗಮನ ಹರಿದುದು ಸ್ವಾಭಾವಿಕವೆ. ನೀರೋಗಿ ಜೀವನವನ್ನು ಸಾಗಿಸಲು ಆಯುರ್ವೇದ ಬೋಧಿಸಿದ ಹಲವೊಮ್ಮೆ ನಿಧಾನವಾದರೂ ಉಪದ್ರವ ಅಪಾಯಗಳಿಲ್ಲದೆ ರೋಗವನ್ನು ಗುಣಪಡಿಸುವ ತತ್ವಗಳು ವಿದೇಶೀಯರನ್ನು ಆಕರ್ಷಿಸಿದವು.

ಜಪಾನಿನ ಒಸಾಕಾದಲ್ಲಿ ಡಾ. ಮೆರುಯಮ ಅವರ ನೇತೃತ್ವದಲ್ಲಿ 'ರಿಸರ್ಚ್ ಸೊಸೈಟಿ ಫಾರ್ ಆಯುರ್ವೇದ ಇನ್ ಜಪಾನ್' ಎಂಬ ಸಂಸ್ಥೆ ಸ್ಥಾಪಿತವಾಗಿದ್ದು, ಈ ಸಂಸ್ಥೆ ಈಗಾಗಲೇ ಆಯುರ್ವೇದದ ಮೂಲ ಸಿದ್ಧಾಂತಗಳನ್ನು ಜಪಾನಿ ಭಾಷೆಗಳಲ್ಲಿ ಪ್ರಕಟಿಸಿದೆ. ರೋಗ ನಿದಾನವನ್ನು ವಿವರಿಸುವ 'ಮಾಧವ ನಿಧಾನ' ಎಂಬ ಗ್ರಂಥ ಜರ್ಮನ್ ಭಾಷೆಗೆ ತರ್ಜುಮೆಯಾಗಿದ್ದು ಅದನ್ನು ಜಪಾನೀಯರು ತಮ್ಮ ಭಾಷೆಯಲ್ಲಿ ಪುನಃ ಭಾಷಾಂತರಿಸಿದ್ದಾರೆ. ಆಯುರ್ವೇದ ವಿಷಯದಲ್ಲಿನ ಸೈದ್ಧಾಂತಿಕ ಸಂಶೋಧನೆ ಈಗಾಗಲೇ ಅಲ್ಲಿ ಸಾಕಷ್ಟು ಮುಂದುವರಿದಿದೆ. ಭಾರತದ ಶ್ರೇಷ್ಠ ವೈದ್ಯರಾಗಿದ್ದ ಪಿ. ಪಂಡಿತ ಶಿವಶರ್ಮರು ಜಪಾನಿನಲ್ಲಿ ಹಲವರಿಗೆ ಆಯುರ್ವೇದ ಚಿಕಿತ್ಸೆಯನ್ನು ನೀಡಿ ಸಫಲರಾಗಿದ್ದರು.

ಬರಲಿರುವ ವರ್ಷಗಳಲ್ಲಿ ಜಪಾನಿನಲ್ಲಿ ಆಯುರ್ವೇದ ಚಿಕಿತ್ಸಾಲಯಗಳೂ ಸಂಶೋಧನಾ ಕೇಂದ್ರಗಳೂ ಸ್ಥಾಪನೆಗೊಂಡು ಜಗದ್ವಿಖ್ಯಾತವಾದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ತಾಂತ್ರಿಕ ಪ್ರಗತಿಯ ತುತ್ತ ತುದಿಯಲ್ಲಿರುವ ಪುಟ್ಟದಾದರೂ ಸತ್ವಶಾಲಿಯಾದ ಆ ರಾಷ್ಟ್ರ ಸಾವಿರಾರು ವರ್ಷ ಪುರಾತನವಾಗ ಭರತ ಭೂಮಿಯ ತಪಸ್ವಿಗಳಿಂದ ಸಂಸ್ಕರಿಸಲ್ಪಟ್ಟ ಆಯುರ್ವೇದದ ಬಗೆಗೆ ಆಸಕ್ತಿ ತಳೆದಿರುವುದು ನಿಜಕ್ಕೂ ಭಾರತೀಯರು ಹೆಮ್ಮೆಪಡುವ ವಿಷಯ. ಆದರೆ ಭವಿಷ್ಯದಲ್ಲಿ ನಮ್ಮ ರಾಷ್ಟ್ರದಿಂದ ಬಿಟ್ಟುಕೊಡಲ್ಪಟ್ಟ ಆಯುರ್ವೇದವನ್ನು ಅಭ್ಯಸಿಸಲು ನಾವು ಅವರ ರಾಷ್ಟ್ರಕ್ಕೆ ಪಯಣಿಸಬೇಕಾಗುವ ವಿಷಯರ್ಯಾಸಕ್ಕೆ ಮಾತ್ರ ಎಡೆಗೊಡಬಾರದು. ●

ದಿಬ್ಬಣದ ಜೊತೆಗೆ ನೀನೂ ಹೋಗುತ್ತಿರುವೆ ಎಂಬುದು ತಿಳಿದುಬಂದಾಗ ನನ್ನ ಕಿವಿಗಳನ್ನೇ ನಾನು ನಂಬಲಿಲ್ಲ. ನನ್ನ ಸಂಭ್ರಮ ಮಾತುಗಳಲ್ಲಿ ಹಿಡಿಯುವಂತಹದಾಗಿರಲಿಲ್ಲ. ನಾನು ಅವಸರಕ್ಕೆ ಬಿದ್ದೆ. ಎರಡು ಕೆಲಸಗಳನ್ನು ನಾನು ಅತ್ಯಂತ ನಾಜೂಕಾಗಿ ನಿರ್ವಹಿಸಬೇಕಿತ್ತು. ದಿಬ್ಬಣದ ಜೊತೆಗೆ ನನ್ನನ್ನು ಹೋಗಗೊಡುವಂತೆ ನನ್ನ ಗಂಡನನ್ನು ಪುಸಲಾಯಿಸುವುದಲ್ಲದೆ, ನೀನೂ ಹೋಗುತ್ತಿರುವುದು ಅವನಿಗೆ ಗೊತ್ತಾಗದಂತೆ ಜಾಗ್ರತೆ ವಹಿಸುವದು. ಇನ್ನೊಂದೆಂದರೆ ನಾನು ಬರುತ್ತಿರುವದು ಕೊನೆಯ ಕ್ಷಣದ ವರೆಗೆ ನಿನಗೆ ಗೊತ್ತಾಗದಂತೆ ಎಚ್ಚರ ವಹಿಸುವದಾಗಿತ್ತು. ಊಟ ಮುಗಿಸಿದವರೆಲ್ಲ ಬಸ್ಸಿನಲ್ಲಿ ಸೀಟು ಗಿಟ್ಟಿಸಲು ಗುಂಪುಗುಂಪಾಗಿ ಹೋಗತೊಡಗಿದ್ದರು. ಊಟ ಮುಗಿಸದೆ ಇದ್ದವರ ಸಂಖ್ಯೆಯೂ ಸಾಕಷ್ಟು ದೊಡ್ಡದಿತ್ತು. ಚಪ್ಪರದ ತುಂಬಾ ನಾಲ್ಕು ಸಾಲುಗಳಲ್ಲಿ ಬಡಿಸುವುದು ನಡೆದೇ ಇತ್ತು. ನನಗೆ ಊಟದ ಬಗ್ಗೆ ಗಮನವಿದ್ದಿರಲಿಲ್ಲ. ಊಟ ಮುಗಿಸಿ ಕಂಚಿಮರದ ಕೆಳಗೆ ಬೀಡಿ ಎಳೆಯುತ್ತ ಎದುರು ನಿಂತವರ ಜೊತೆಗೆ ಪೋಲಿಮಾತುಗಳನ್ನಾಡುತ್ತ ಅವರನ್ನು ನಗಿಸುವುದರಲ್ಲಿ ತಲ್ಲಿನನಾಗಿದ್ದ ನನ್ನ ಗಂಡನ ಬಳಿಗೆ ಹೋಗಿ, "ಅವರೆಲ್ಲ ತುಂಬಾ ಒತ್ತಾಯ ಮಾಡ್ತಿದಾರೆ. ನಾನೂ ದಿಬ್ಬಣದ ಜೊತೆಗೆ ಹೋಗ್ತೇನೆ. ಬೆಳಿಗ್ಗೇನೇ ಬಂದುಬಿಡ್ತೇನೆ." ಎಂದಾಗ ಆತ, "ಬರೇ ದಿಬ್ಬಣದ ಜೊತೆಗೋ ಅಥವಾ..." ಎಂದು ಹೇಳಿ ನಕ್ಕ. ಒಬ್ಬ ಕುಡುಕನ ಬಾಯಲ್ಲಿ ಬರಬೇಕಾದ ಹೊಲಸು ಮಾತುಗಳೇ. ನನಗೆ ವ್ಯಥೆಯಾಗಲಿಲ್ಲ. ಒಂದು ರೀತಿಯಿಂದ ಆತ ಹೇಳಿದ್ದು ನಿಜವಾಗಿತ್ತು. ಮನಸ್ಸಿನ ತುಂಬ ನಿನ್ನನ್ನು ತುಂಬಿಕೊಂಡು ದೈಹಿಕವಾಗಿ ಮಾತ್ರ ಈ ಕುಡುಕನ ಜೊತೆಗೆ ನಾನು ಏಗುತ್ತಿದ್ದೆ. ಈ ಹತ್ತು ವರ್ಷಗಳಲ್ಲಿ ನಾನು ಅನುಭವಿಸಿದ ಮಾನಸಿಕ ಹಿಂಸೆ ನನಗೊಬ್ಬಳಿಗೇ ಗೊತ್ತು. ನನಗವರಿಂದ ಬಿಡುಗಡೆ ಬೇಕಿತ್ತು. ಆದ್ದರಿಂದಲೇ ನಾನಿಂದು ನಿನ್ನ ಹಿಂದೆ ಹೊರಟದ್ದಾಗಿತ್ತು.



ಎಂ. ಎಚ್. ನಾಯಕ, ಬಾಡ

ಮಾನಸಿಕ ಹಿಂಸೆ ಎಂದೆನಲ್ಲ. ಹೌದು. ಹೆಂಡ ದಂಗಡಿಯಲ್ಲಿ ಪರಿಚಯವಾದವನನ್ನು ಮನೆಗೂ ಕರೆತಂದು ನನ್ನನ್ನು ಕೊಟ್ಟು ಮದುವೆ ಮಾಡು ತ್ತೇನೆಂದು ನನ್ನಪ್ಪ ಹೇಳಿದಾಗ ನನ್ನ ಮನ ಸ್ಥಿತಿಯೇನಾಗಿರಬೇಡ? ಗಲಾಟೆ ಮಾಡಿದೆ. ಅತ್ತೆ. ಊಟ ಬಿಟ್ಟೆ. ಆತ್ಮಹತ್ಯೆ ಮಾಡಿಕೊಳ್ಳು ತ್ತೇನೆಂದು ಬೆದರಿಕೆ ಹಾಕಿದೆ. ಅವನೇನಂದ ಗೊತ್ತೆ? "ಅಷ್ಟೆಲ್ಲ ತೊಂದರೆ ನೀನ್ಯಾಕೆ ತೆಗೆದು ಕೊಳ್ತೀಯ ನೀನೇನಾದ್ರೂ ಈ ಮದುವೆಗೆ ಒಪ್ಪಿಕೊಳ್ಳದಿದ್ದರೆ ನಾನೇ ನಿನ್ನನ್ನು ತುಂಡು ಮಾಡಿ ಬಾವಿಗೆ ಹಾಕ್ತೇನೆ," ಅಂತ ಅವಸರ ಪಟ್ಟು ನಾನು ನಿನ್ನ ಬಳಿಗೆ ಧಾವಿಸಿದೆ. ನನಗೆ ನಿನ್ನ ಮೇಲೆ ಭರವಸೆಯಿತ್ತು. ಪರಿಸ್ಥಿತಿ ಎಂತಹ ದಾದರೂ ನೀನು ನನ್ನ ಕೈಬಿಡುವದಿಲ್ಲವೆಂಬ ಆತ್ಮವಿಶ್ವಾಸವಿತ್ತು. ಆದರೆ ನಿನ್ನ ಸ್ಥಿತಪ್ರಜ್ಞತೆ ನೋಡಿ ನಾನು ನಡುಗಿಹೋದೆ. ನನ್ನನ್ನು ಕಳೆದುಕೊಳ್ಳುತ್ತಿರುವೆನೆಂದು ನಿನಗೆ ಏನೂ ಅನ್ನಿಸಲಿಲ್ಲವೇನು? ನಿನ್ನ ಪ್ರೀತಿ ಪ್ರೇಮವೆಲ್ಲ ಬರಿಯ ನಟನೆಯಾಗಿತ್ತೇನು? ಎಂಥ ಕಲ್ಲು ಹೃದಯ ನಿನ್ನದು! ಅಥವಾ ನಿನಗೆ ಹೃದಯ ವೆನ್ನುವದು ಇದ್ದಿರಲೇ ಇಲ್ಲವಾಗಿತ್ತೇನು? ನಿನ್ನನ್ನು ನೆನೆದು ರಾತ್ರಿಯೆಲ್ಲ ತಲೆದಿಂಬನ್ನು ಕಣ್ಣೀರಿನಿಂದ ತೊಯ್ಯಿಸುವದನ್ನುಳಿದು ನನಗೆ ಬೇರೇನೂ ಉಳಿದಿರಲಿಲ್ಲ. ನನ್ನನ್ನು ಕಟ್ಟಿ ಕೊಂಡು ನೀನೇಕೆ ಎಲ್ಲಿಯಾದರೂ ಓಡಿ ಹೋಗಲಿಲ್ಲ? ನಾನು ಪುನಃ ಹೋಗಿ ಆ ಕಟು– ಕರಿಗೆ ನನ್ನನ್ನೊಪ್ಪಿಸಿಕೊಂಡೆ. ನಾನು ಗಂಡನ ಮನೆಗೆ ಬಂದೆ. ನೀನೆಲ್ಲಿ ಹೋದೆ, ಏನಾದೆ ಎನ್ನುವ ಯಾವ ಸಂಗತಿಯೂ ನನಗೆ ತಿಳಿಯ ಲಿಲ್ಲ. ನನ್ನ ಮದುವೆಯ ನಂತರದ ಒಂದೆರಡು ತಿಂಗಳಲ್ಲೇ ಓದಿಕೊಳ್ಳಲೆಂದು ನೀನಿದ್ದ ಮನೆ ಯವರಿಗೆ ಹೇಳದೇ ಕೇಳದೇ ಹೊರಟು ಹೋದೆಯಂತೆ. ಮೊದಲ ಸಲ ತೌರಿಗೆ ಬಂದಾಗ ನನ್ನ ಕಣ್ಣುಗಳು ನಿನಗಾಗಿ ನಡೆ

ಸಿದ ಹುಡುಕಾಟ ವ್ಯರ್ಥವಾದದ್ದಾಗಿತ್ತು ಎಂದು ತಿಳಿಯಲು ಹೆಚ್ಚು ಸಮಯ ಬೇಕಾಗ ಲಿಲ್ಲ. ನಿನ್ನ ಸ್ನೇಹಿತರನ್ನು ಕೇಳಿದೆ. ನೀನಿದ್ದ ಮನೆಯವರನ್ನು ಕೇಳಿದೆ. ನಿನ್ನಲ್ಲಿಗೆ ಪಾಠಕ್ಕೆ ಹೋಗುತ್ತಿದ್ದ ಮಕ್ಕಳನ್ನು ಕೇಳಿದೆ. ಎಲ್ಲರದೂ ಒಂದೇ ಉತ್ತರ, 'ಗೊತ್ತಿಲ್ಲ.' ನಾನೇಕೆ ನಿನ್ನ ಬಗ್ಗೆ ಇಲ್ಲದ ಆಸಕ್ತಿವಹಿಸಬೇಕು? ನೀನ್ಯಾರೋ ನಾನ್ಯಾರೋ, ಎಂದೆಲ್ಲ ಮನಸ್ಸನ್ನು ಗಟ್ಟಿ ಮಾಡತೊಡಗಿದೆ. ನೀನೊಬ್ಬ ಹೇಡಿ ಹೃದಯ- ಹೀನ, ಎಂದೆಲ್ಲ ನಿನ್ನ ಬಗ್ಗೆ ಜಿಗುಪ್ಸೆ ತಾಳಲು ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ. ನಿನ್ನ ಬಗ್ಗೆ ದ್ವೇಷ ಭಾವನೆಯನ್ನು ಬೆಳೆಸಿಕೊಂಡಂತೆಲ್ಲ ನೀನು ನನ್ನ ಮನಸ್ಸಿನಲ್ಲಿ ಇನ್ನೂ ಆಳ ವಾಗಿ ನೆಲಸತೊಡಗಿದೆ. ನಿನ್ನ ನೆನಪನ್ನು ಹೊರಹಾಕಲು ಪ್ರಯತ್ನಿಸಿದಂತೆಲ್ಲ ನೀನು ನನ್ನ ಹೃದಯದಲ್ಲಿ ಗಟ್ಟಿಯಾಗತೊಡಗಿದೆ. ಮನೆ ಬಿಟ್ಟು ಹೊರಗೆ ಹೋದಾಗಲೆಲ್ಲ ನಿನಗಾಗಿ ನನ್ನ ಹುಡುಕಾಟ ಇದ್ದೇ ಇರುತ್ತಿತ್ತು. ದಾರಿ ಯಲ್ಲಿ ಹೋಗುತ್ತಿರುವಾಗ, ಇದ್ದಕ್ಕಿದ್ದಂತೆ ನೀನು ಎದುರಾದಂತೆ; ಬಸ್ಸಿನಲ್ಲಿ ಪ್ರಯಾಣಿ ಸುವಾಗ ಪಕ್ಕದ ಸೀಟಿನಿಂದ ನೀನು ಎದ್ದು ಬಂದಂತೆ. ಮದುವೆಯ ಚಪ್ಪರದಲ್ಲಿ ನಿನ್ನನ್ನು ಕಂಡಾಗ ನನ್ನ ವರ್ಷಗಳ ತಪಸ್ಸು ವ್ಯರ್ಥ ವಾಗಲಿಲ್ಲವೆನ್ನಿಸಿತು. ಎಂತಹ ಆಕಸ್ಮಿಕ ಭೇಟಿ ನಮ್ಮದು! ನನ್ನ ಗಂಡನ ಒತ್ತಾಯಕ್ಕೆ ಮಣಿ ಯದೆ ನಾನೀ ಮದುವೆಗೆ ಬಂದಿರದಿದ್ದರೆ ಎಂತಹ ಅಚಾತುರ್ಯವಾಗುತ್ತಿತ್ತು ಎಂದೆಲ್ಲ ಆ ಕ್ಷಣ ಯೋಚಿಸಿದೆ. ನಾನು ನೇರವಾಗಿ ನಿನ್ನ ಬಳಿಗೆ ಧಾವಿಸಿ 'ಶ್ರೀ' ಎಂದೆ. ಹಾಗೆ ಹೇಳು ವಾಗ ನನ್ನ ಗಂಟಲು ತುಂಬಿಬಂದಿತ್ತು. ಯಾರದೋ ಜೊತೆಗೆ ಮಾತಾಡುತ್ತಿದ್ದ ನೀನು ನನ್ನತ್ತ ತಿರುಗಿದಾಗ ನಾನು ಭಾವನೆಗಳ ಸುಳಿಯಲ್ಲಿ ಸಿಲುಕಿ ಸಣ್ಣಗೆ ಕಂಪಿಸುತ್ತಿದ್ದೆ. ನಿನ್ನೆದುರು ನಿಂತಾಗ ನಾನು ಸುಮಾರು ಹತ್ತು ಹನ್ನೆರಡು ವರ್ಷಗಳಷ್ಟು ಚಿಕ್ಕವಳಾಗಿಬಿಟ್ಟಿದ್ದೆ. ನಿನ್ನ ಮೋರೆಯ ಮೇಲೆ ಮಂದಹಾಸವಿತ್ತು. "ಚೆನ್ನಾಗಿದ್ದೀಯಾ?" ಎಂದು ಕೇಳಿದೆ ನೀನು. "ಇವಳು ನಿನ್ನ ಮಗಳಾ?" ಎಂದೆ. ನನ್ನ ಸೆರ

ಗಿಗೆ ಆಂಟಿಕೊಂಡು ನಿಂತಿದ್ದ ಪುಟ್ಟ ಮಗಳ ಮೂಗನ್ನು ಎಳೆದು, "ಹೆಸರೇನೇ ಪುಟ್ಟಿ?" ಎಂದೆ. ನಿನ್ನನ್ನು ಇಡಿಯಾಗಿ ನೋಡುತ್ತ ನಿಲ್ಲುವದಲ್ಲದೆ ನನ್ನಿಂದ ಮತ್ತೇನೂ ಸಾಧ್ಯವಿದ್ದಿರಲಿಲ್ಲ. ಚಪ್ಪರದ ತುಂಬ ಜನರಿದ್ದರು. ನಿನ್ನ ಸುತ್ತ ಗುಂಪಿತ್ತು. ಸನಿಹದಲ್ಲೇ ನನ್ನ ಗಂಡ ನಿಂತಿದ್ದ. ನಾನು ಜಗಲಿಹತ್ತಿ ಹೆಂಗಸರ ಗುಂಪಿನಲ್ಲಿ ಕುಳಿತು ನಿನ್ನ ನಿಲುವನ್ನು ಕಣ್ಣುಗಳಲ್ಲಿ ತುಂಬಿಕೊಳ್ಳತೊಡಗಿದೆ. ಹಳೆಯ ನೆನಪುಗಳ ಗಂಟನ್ನು ಬಿಡಿಸಿ ಬಿಡಿಸಿ ಅವಕ್ಕೆ ಜೀವ ತುಂಬತೊಡಗಿದೆ.

*

ದಿಬ್ಬಣದ ಜನರನ್ನು ತುಂಬಿಕೊಂಡ ಬಸ್ಸುಗಳೆರಡೂ ಧಕ್ಕೆಯಮೇಲೆ ಜನರನ್ನಿಳಿಸಿ ಹಿಂತಿರುಗಿದವು. ಹೊಳೆ ದಾಟಿಸಲು ಎರಡು ದೊಡ್ಡ ದೋಣಿಗಳು ರೆಡಿಯಾಗಿ ನಿಂತಿದ್ದವು. ಮದುಮಕ್ಕಳ ಜೋಡಿಯೊಂದಿಗೆ ತೀರ ಹತ್ತಿರದವರೆಲ್ಲ ದೋಣಿ ಹತ್ತಿದರು. ಉಳಿದವರೆಲ್ಲ ಇನ್ನೊಂದು ದೋಣಿಗಾಗಿ ಕಾಯುತ್ತ ಸಿಕ್ಕಸಿಕ್ಕಲ್ಲಿ ಗುಂಪಾದರು. ನೀನು ಹಿಂದುಳಿದೆಯೆಂದು ನಾನೂ ದೋಣಿ ಹತ್ತಲಿಲ್ಲ. ಕೆಂಪು ಸೂರ್ಯ ಕಡಲಿಗಿಳಿಯುತ್ತಿದ್ದ. ಕಡಲಿಗೆ ತೆಕ್ಕೆ ಬೀಳಲು ಅಘನಾಶಿನಿ ಒಯ್ಯಾರದಿಂದ ಹರಿಯುತ್ತಿದ್ದಳು. ಹೊಳೆಯಲ್ಲಿ ಪುಟ್ಟ ಅಲೆಗಳು. ದಂಡೆಗೆ ಹತ್ತಿರದಲ್ಲಿ ಹೊಳೆಯಲ್ಲಿ ಈಜು ಹೊಡೆಯುತ್ತಿದ್ದ ಬರಿಮೈಯ ಪುಟ್ಟ ಪುಟ್ಟ ಮಕ್ಕಳು. ಹೊಳೆಯ ಮಧ್ಯದಲ್ಲಿ ಅಲ್ಲೊಂದು ಇಲ್ಲೊಂದು ಮೀನು ಹಿಡಿಯುವ ಪಾತಿ ದೋಣಿಗಳು. ಕಡಲ ದಿಕ್ಕಿನಿಂದ ಬೀಸುವ ತಂಪಾದ ಗಾಳಿ. ಹೊಳೆಗಿಳಿ [illegible] ದಿಕ್ಕಿನಲ್ಲಿ ಸಾಗಿದ್ದ ಬೆಳ್ಳಕ್ಕಿಗಳ ಸಾಲೆ ಸಾಲೆ ಸಾಲು. ಧಕ್ಕೆಗೆ ಸಾಕಷ್ಟು ದೂರದಲ್ಲಿ ಹೊಳೆಗೆ ಬಾಗಿದ ತೆಂಗಿನ ಮರಕ್ಕೆ ಆನಿಸಿಕೊಂಡು ನೀನು ಸಂಜೆಯ ಸೂರ್ಯನನ್ನು ದಿಟ್ಟಿಸುತ್ತ ನಿಂತಿದ್ದೆ. ಸಂಜೆಯ ಕೆಂಪು ನಿನ್ನ ಮೋರೆಯನ್ನು ರಂಗಾಗಿ ಮಾಡಿತ್ತು. ಅಪರ ಮಾದುಕತೆ ನನ್ನನ್ನು ಪೂರ್ತಿಯಾಗಿ ಆವರಿಸಿತ್ತು. ನಾನು ಮೆಲ್ಲಮೆಲ್ಲನೆ ನಿನ್ನ ಹಿಂದಿನಿಂದ- ಬಂದವಳು ನಿನಗೆ ಒತ್ತಿಕೊಂಡು ಅದೇ ಮರಕ್ಕೆ ಒರಗಿದೆ. ನೀನು ದೃಷ್ಟಿ ಬದಲಿಸದೆ, "ಒಬ್ಬಳೇ ಬಂದೆಯಾ? ನಿನ್ನ ನಿನ್ನ ಮಗಳೆಲ್ಲಿ?" ಎಂದು ಕೇಳಿದೆ. ನಮ್ಮಿಬ್ಬರಿಗೆ ನೇರವಾಗಿ ಸಂಬಂಧಿಸಿದ ಯಾವ ಮಾತೂ ನನಗೆ ಆ ಕ್ಷಣಕ್ಕೆ ಬೇಕಿರಲಿಲ್ಲ. ನಾನು ನಿನ್ನನ್ನು ಗಟ್ಟಿಯಾಗಿ ಅಪ್ಪಿಕೊಂಡೆ. ಆದರೆ... ಆದರೆ...! ಯಾವೊಂದು ಉದ್ವೇಗವನ್ನೂ ತೋರಿಸದೆ ನನ್ನ ಹಿಡಿತದಿಂದ ತನ್ನನ್ನು ಮೆಲ್ಲನೆ ಬಿಡಿಸಿಕೊಳ್ಳುತ್ತ ಕಡಲ ದಿಕ್ಕಿಗಿದ್ದ ನಿನ್ನ ದೃಷ್ಟಿಯನ್ನು ಬದಲಿಸಿದೆ. ನೀನು ಹೇಳತೊಡಗಿದೆ. "ಇದರಿಂದ ನನಗೆ ಆಶ್ಚರ್ಯವಾಗುತ್ತಿಲ್ಲ. ಬೆಳಗ್ಗಿನಿಂದ ನಿನ್ನನ್ನು ಗಮನಿಸುತ್ತಿದ್ದೆನಾದ್ದರಿಂದ ಇಂತಹದೊಂದು ಘಟನೆಯನ್ನು-ಅಥವಾ ಸಂದರ್ಭವೆನ್ನು ಬೇಕಾದರೆ-ನಾನು ನಿರೀಕ್ಷಿಸಿದ್ದೆ ಕೂಡ. ಆದರೆ ಇಂತಹ ಒದ್ದಾಟದ ಎರಡು ದೋಣಿಗಳಲ್ಲಿ ಕಾಲಿಟ್ಟು ಬದುಕುವಂತಹ ಈ ಪ್ರವೃತ್ತಿಯಾದರೂ ಏಕೆ? ತಲೆಯೆತ್ತರಕ್ಕೆ ಬೆಳೆದ ನಿಂತ ಮಗಳಿದ್ದಾಳೆ; ನಮ್ಮಿಬ್ಬರಿಗೂ ಸಾಕಷ್ಟು ವಯಸ್ಸಾಯಿತು; ಇನ್ನು ಕೆಲವೇ ವರ್ಷಗಳಲ್ಲಿ ನಾವು ಅಜ್ಜಿ-ಅಜ್ಜರಾಗಿ ಬಿಡ್ತೇವೆ. ಪ್ರೀತಿ, ಪ್ರೇಮ. ನೆನಪು ಎಂದೆಲ್ಲ ಕೆಲಸಕ್ಕಾಗಿ ಬಾರದ ಕಡತಗಳನ್ನು ತಲೆಯಲ್ಲಿ ತುಂಬಿಕೊಂಡು ನಮ್ಮನ್ನೇ ಹಿಂಸಿಸಿಕೊಳ್ಳುತ್ತ ನಮ್ಮ ನಮ್ಮ ವೃತ್ತಗಳು ಬೇರೆಯಾದಮೇಲೂ ಒದ್ದಾಡುವದರಲ್ಲಿ ಅರ್ಥವೇನಿದೆ? ನೋಡಲ್ಲಿ, ದೋಣಿ ಬಂತು. ಬರಲ್ಲವಾ?" ಎಂದು ಉತ್ತರಕ್ಕೂ ಕಾಯದೆ ನೀನು ಸರಸರನೆ ಕೆಳಗಿಳಿದು ಪ್ಯಾಂಟಿನ ಕೆಳಭಾಗ ನೀರಿಗೆ ತಗಲದಂತೆ ಎಚ್ಚರಿಕೆಯಿಂದ ನಡೆಯುತ್ತ ಹೋಗಿ ದೋಣಿ ಹತ್ತಿ ಕುಳಿತು ಗುಂಪಿನೊಳಗೊಬ್ಬನಾದೆ.

ತುಂಬಿದ ಕಣ್ಣುಗಳನ್ನು ಒರೆಸಿಕೊಳ್ಳುತ್ತ ಅಲ್ಲಿಂದ ನಡೆದು ಧಕ್ಕೆ ದಾಟಿ ಮುಂದೆ ಬಂದವಳು ಊರಿಗೆ ಹಿಂತಿರುಗಲು ಬಸ್ಸೇನಾದರೂ ಇದೆಯಾ ಎಂದು ಖಾತ್ರಿಪಡಿಸಿಕೊಳ್ಳುವಾಗ ಮನಸ್ಸಿನಲ್ಲಿ ನನ್ನ ಗಂಡ ಹಾಗೂ ಮಗಳ ಆಕಾರ ರೂಪುಗೊಳ್ಳುತ್ತ ಗಟ್ಟಿಯಾಗತೊಡಗಿದ್ದವು.

ಒಂದು ಮುಂಜಾನೆ ಎಂದಿನಂತೆ ಎಲ್ಲ ಪೋಲೀಸರು ಪರೇಡು ಮುಗಿಸಿಕೊಂಡು ಕಚೇರಿಗೆ ಬಂದಾಗ ಡಿ.ವೈ.ಎಸ್.ಪಿ. ಸಾಹೇಬರು ಎಲ್ಲರನ್ನೂ ಕರೆದು, ರಾಜಕೀಯ ಕೈದಿ ಹಾಗೂ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಾದ ಗರುಡಶರ್ಮಾ ಅವರನ್ನು ಮಧ್ಯಪ್ರದೇಶದ ಈಸಾಪೂರ ಜೈಲಿಗೆ ತಲುಪಿಸಬೇಕಾಗಿದೆ ಎಂದು ಹೇಳಿದರು.

ಈಸಾಪೂರದಲ್ಲಿಯ ಪೋಲೀಸರು ಅವರ ಮೇಲೆ ಎರಡು ಮೊಕದ್ದಮೆಗಳನ್ನು ಹೂಡಿದ್ದರು. ಅವರು ಜೈಲಿನಿಂದ ತಪ್ಪಿಸಿಕೊಂಡು

ಈ ಕೆಲಸಕ್ಕೆ ಮುಂದೆ ಬಂದೆವು. ನನ್ನ ಸಹೋದ್ಯೋಗಿ ಪೋಲೀಸರು, "ನಿನ್ನ ನೌಕರಿಯ ಆಶೆ ಬಿಟ್ಟುಬಿಡು. ನೌಕರಿ ಹೋದಂತೆಯೇ," ಎಂದು ಹೇಳತೊಡಗಿದರು. ನಾನು, "ನೌಕರಿ ಹೋದರೆ ಹೋಯಿತು. ನಾವು ಶರ್ಮಾರ ಹಿಂದೆ ಚಳುವಳಿಯಲ್ಲಿ ಸೇರಿ ಅವರ ಜೊತೆಯೇ ಓಡಿ ಹೋಗುತ್ತೇವೆ," ಎಂದೆ! ಅವರೆಲ್ಲ ಸುಮ್ಮನಾದರು.

ಗರುಡಶರ್ಮಾರನ್ನು ಕರೆದುಕೊಂಡು ರೈಲಿನಲ್ಲಿ ಪ್ರಯಾಣಿಸಿದೆವು. ಶರ್ಮಾ ಸ್ವಾತಂತ್ರ್ಯ ಹೋರಾಟಗಾರರ ಮುಖಂಡರು. ಅವರು ಬರುತ್ತಾರೆಂದು

ಅನಾಮಧೇಯ ಪೋಲೀಸನೊಬ್ಬನ ಅನುಭವ

ಬಹಿರಂಗದಲ್ಲಿ ಖಾಕಿ ಅಂತರಂಗದಲ್ಲಿ ಖಾದಿ

ನಿರೂಪಣೆ; **ಬಾಲಕೃಷ್ಣ ಕುಲಕರ್ಣಿ**

ಫರಾರಿಯಾಗಿ ಗದುಗಿಗೆ ಬಂದಿದ್ದರು. (ಇಲ್ಲಿ ಅವರನ್ನು ಬಂಧಿಸಲಾಗಿತ್ತು.) ಹಾಗೂ ಈ ಹಿಂದೊಮ್ಮೆ ಅವರನ್ನು ಈಸಾಪೂರ ಜೈಲಿಗೆ ತಲುಪಿಸುವಾಗ ರೈಲಿನಿಂದ ಓಡಿಹೋಗಿದ್ದರು. ಅವರನ್ನು ಕರೆದುಕೊಂಡು ಹೋಗಿದ್ದ ಪೋಲೀಸರನ್ನು ಅದಕ್ಷರೆಂದು ನೌಕರಿಯಿಂದ ತೆಗೆದುಹಾಕಲಾಗಿತ್ತು. ಹೀಗಾಗಿ ಶರ್ಮಾ ಅವರನ್ನು ಆ ಜೈಲಿಗೆ ತಲುಪಿಸಲು ಕರೆದೊಯ್ಯುವುದಕ್ಕೆ ಎಲ್ಲರೂ ಹಿಂಜರಿಯುತ್ತಿದ್ದರು.

ಆಗ ನಾನು, ರಾಮುಗುರಾಚಾರಿ ಪೋಲೀಸ, ಮತ್ತು ತುಳಜಾರಾಮ ಹವಾಲ್ದಾರ ಮೂವರೂ

ತಿಳಿದ ಜನ ಪ್ರತಿ ಸ್ಟೇಶನ್ನಿನಲ್ಲಿ ಕಿಕ್ಕಿರಿದು ತುಂಬಿದ್ದರು. ಶರ್ಮಾರಿಗೆ ಎಷ್ಟು ಗೌರವ! ಎಷ್ಟು ಮಾಲಾರ್ಪಣೆ! ಹವಾಲ್ದಾರನಿಗೆ ನಮ್ಮ ರೈಫಲ್ ಮುಂತಾದವುಗಳನ್ನು ಒಪ್ಪಿಸಿ ನಾನು, ರಾಮು ಗುರಾಚಾರಿ ಖಾದಿ ತೊಟ್ಟೆವು. ಇದನ್ನು ನೋಡಿ ಶರ್ಮಾರಿಗೆ ಆಶ್ಚರ್ಯವಾಯ್ತು. ವಿಷಯ ತಿಳಿಸಿದೆವು.

ಅವರು ನಮ್ಮ ಪೂರ್ಣ ಪರಿಚಯ ಮಾಡಿಕೊಂಡರು. ನಾನು ವಾಮನರಾವ ಬಿದರಿ ಅವರ ದೂರದ ಸಂಬಂಧಿ ಎಂದು ಪರಿಚಯಿಸಿಕೊಂಡೆ. ಅವರು ತುಂಬ ಸಂತೋಷಪಟ್ಟುಕೊಂಡದ್ದಲ್ಲದೆ

ನಾವು ಪೋಲೀಸರೆಂಬುದನ್ನು ಮರೆತು ತಮ್ಮ ಅನುಚರರಂತೆ ಭಾವಿಸಿದರು. "ನಾನು ಮೊದಲಿನ ಹಾಗೆ ಓಡಿಹೋಗುವದಿಲ್ಲ. ನಿಮ್ಮ ನೌಕರಿಯೇನೂ ಹೋಗುವುದಿಲ್ಲ. ಹೆದರಬೇಡಿ," ಎಂದು ನಗುತ್ತ ಹೇಳಿದರು. ನಾವು ನೌಕರಿ ಬಿಟ್ಟು ಚಳುವಳಿ ಸೇರುವ ವಿಚಾರವನ್ನು ಅವರಿಗೆ ಅರುಹಿದೆವು.

ಮಿರಜ್ ಬಂದಿತು. ಹವಾಲ್ದಾರನನ್ನು ಅಲ್ಲಿಯೇ ಕೂಡಿಸಿ ಶರ್ಮಾ ನಮ್ಮನ್ನು ಜತೆಗೂಡಿ ತಿರುಗಾಡಿ ಬರೋಣ ಎಂದು ಕರೆದೊಯ್ದರು. ಊರಲ್ಲಿ ತಮ್ಮ ಅನುಯಾಯಿಗಳನ್ನು ಪರಿಚಯಿಸಿದರು. ನಮಗೆ ಊಟ ಮಾಡಿಸಿದರು. ಆಗಲೇ ಶರ್ಮಾರೊಂದಿಗಿನ ನಮ್ಮ ಸಂಬಂಧ ಗುರು ಶಿಷ್ಯರದಾಗಿತ್ತು.

ಶರ್ಮಾರೊಂದಿಗೆ ನಾವು ರೇಲ್ವೆ ಸ್ಟೇಶನ್ನಿಗೆ ಮರಳಿ ಬಂದಾಗ ಹವಾಲ್ದಾರನು, "ನೀವು ಓಡಿ ಹೋಗಿರಬಹುದುದೆಂದು ತಿಳಿದಿದ್ದೆ. ಅಂತೂ ಬಂದಿರಿ ಸಾಕು," ಅಂದ. ಮುಂದೆ ನಾವು ಪುಣೆಗೆ ಹೋದೆವು. ಅಲ್ಲಿಯೂ ಇದೇ ಅನುಭವ. ಪುಣೆಯನ್ನು ನೋಡಲು ಹೊರಟಾಗ ಶರ್ಮಾರಿಗೆ ಅವರ ಸಂಗಾತಿಗಳು, "ಇವರಾರು?" ಎಂದು ನಮ್ಮತ್ತ ಕೈ ಮಾಡಿದಾಗ ಶರ್ಮಾ, "ನನ್ನ ಶಿಷ್ಯರು," ಎಂದು ಪರಿಚಯಿಸಿದರು. ಅಲ್ಲದೆ ಅಲ್ಲಿ ನಮಗೆ ಮದ್ದು ಗುಂಡು ತಯಾರಾಗುವ ಭೂಗತ ಕಾರ್ಖಾನೆ, ರಾನಡೆ ಇಂಡಸ್ಟ್ರೀಜ್ ಮತ್ತು ಕಾಂಗ್ರೆಸ್ಸಿನ ವರ್ತಮಾನ ಪತ್ರಿಕೆಯ ಕಾರ್ಯಾಲಯ ಮುಂತಾದ ಗುಪ್ತ ಸ್ಥಳಗಳಿಗೂ ಕರೆದೊಯ್ದರು. ನಂತರ ಅಲ್ಲಿ ವಸ್ತ್ರಪ್ಪ ಖಾದಿ ಅರಿವೆಗಳನ್ನು ಪುಕ್ಕಟೆಯಾಗಿ ಕೊಡಿಸಿದರು. ಅವರ ಮಾತಿಗೆ ಅವರ ರಾಷ್ಟ್ರಾಭಿಮಾನಕ್ಕೆ ನಾವು ತಲೆಬಾಗಿದೆವು.

ರಾತ್ರಿ ನಾವು ರೇಲ್ವೆ ಸ್ಟೇಶನ್ನಿಗೆ ಬಂದಾಗ ಹವಾಲ್ದಾರನನ್ನು ಅಲ್ಲಿಯ ರೇಲ್ವೆ ಇನ್‌ಸ್ಪೆಕ್ಟರ್ ಏನೇನೋ ಪ್ರಶ್ನಿಸುತ್ತಿದ್ದುದು ಕಂಡುಬಂತು. ನಾವು ಹೋದಾಗ ಅವನು, "ನಿಮ್ಮ ಡ್ರೆಸ್ ಎಲ್ಲಿ? ಹೀಗೇಕೆ ಖಾದಿ ಅರಿವೆ ಹಾಕಿಕೊಂಡು ತಿರಗುತ್ತಿದ್ದೀರಿ ? ನೀವು ಸರಕಾರಿ ಜನರಲ್ಲವೆ ?" ಎಂದು ಮುಂತಾಗಿ ಬಯ್ಯಹತ್ತಿದರು. ಗರುಡ ಶರ್ಮಾರಿಗೆ ಇದನ್ನು ಸಹಿಸಲಾಗಲಿಲ್ಲ. ಅವರು ಆ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು, "ಇದನ್ನು ಕೇಳಲು ನೀನ್ಯಾರು ? ನಿನಗೇನು ಅಧಿಕಾರ? ಅವರಿಗೆ ನನ್ನನ್ನು ಜೈಲಿಗೆ ತಲುಪಿಸಲು ತಿಳಿಸಿದ್ದಾರೆ. ಹಾಗೆ ಅವರು ಮಾಡುತ್ತಾರೆ. ಅವರು ಹೇಗಿದ್ದರೇನು? ಯಾವ ಬಟ್ಟೆ ತೊಟ್ಟರೇನು?" ಎಂದು ಇಂಗ್ಲೀಷಿನಲ್ಲಿ ಬೈದರು. ಇನ್‌ಸ್ಪೆಕ್ಟರ್ ತಣ್ಣಗಾಗಿ ತಲೆತಗ್ಗಿಸಿ ಅಲ್ಲಿಂದ ಹೋಗಿ ಬಿಟ್ಟರು. ರಾತ್ರಿ ೧೨ಕ್ಕೆ ಈಸಾಪೂರಕ್ಕೆ ಹೋಗುವ ರೈಲು ಬಂದಿತು. ಹತ್ತಿ ಕುಳಿತೆವು. ಆಗ ಶರ್ಮಾ, "ನೀವು ಮಲಗಿಕೊಳ್ಳಿರಿ ನಾನೇನು ಓಡಿಹೋಗುವುದಿಲ್ಲ," ಎಂದರು ನಗುತ್ತ. ನಾವು ಹಾಗೇ ಮಾಡಿದೆವು.

ಮುಂಜಾನೆ ಈಸಾಪೂರ ಸಮೀಪಿಸುತ್ತಿದ್ದ ಹಾಗೆಯೇ ಶರ್ಮಾ ನಮ್ಮನ್ನೆಬ್ಬಿಸಿ, "ಹುಡುಗರೆ ನಿಮ್ಮ ಡ್ರೆಸ್ ಹಾಕಿಕೊಳ್ಳಿರಿ. ಇಲ್ಲಿ ಪೋಲೀಸರು ಬಹಳ ತೀಕ್ಷ್ಣ ಇರುತ್ತಾರೆ," ಎಂದರು. ನಾವು ಡ್ರೆಸ್ ಹಾಕಿಕೊಂಡೆವು. ಈಸಾಪೂರದಲ್ಲಿ ಇಳಿದು ಜೈಲನ್ನು ತಲುಪಿದೆವು. ಜೈಲಿನ ಅಧಿಕಾರಿಗಳು ಪೋಲೀಸರು ನಮ್ಮನ್ನು ನೋಡಿ ಗಾಬರಿ ಆಶ್ಚರ್ಯ ವ್ಯಕ್ತಪಡಿಸಿದರು. ಶರ್ಮರನ್ನು ನಾವು ಕರೆದು ತಂದದ್ದು ಅವರಿಗೆ ದಂಗುಬಡಿಸಿತ್ತು. "ಇವರು ನಡುವೆಯೇ ಓಡಿ ಹೋಗುವವರು ಹೇಗೆ ಕರೆದುತಂದಿರಿ?" ಎಂದು ಕೇಳಿದಾಗ ನಾನು, "ನಾವೇನು ತರಲಿಲ್ಲ, ಅವರೇ ಬಂದಿದ್ದಾರೆ," ಎಂದೆ.

ನಾವು ಮರಳಿ ಬರುವಾಗ ಶರ್ಮಾ ಗದುಗಿನ ತಮ್ಮ ಸಂಗಾತಿಗಳಾದ ಬೆಟಗೇರಿ ಕೃಷ್ಣಾಚಾರಿ, ಮುಲ್ಲಾಸಾಬ, ಬೆಟಗೇರಿ, ದಿವಾಕರ ಮುಂತಾದವರಿಗೆ ಪತ್ರಕೊಟ್ಟು ತಲುಪಿಸಲು ತಿಳಿಸಿದರು. ನಾವು ಹಾಗೇ ಮಾಡಿದೆವು. ನಾವು ಶರ್ಮಾರನ್ನು ತಲುಪಿಸಿ ಬಂದು ಕೆಲಸಕ್ಕೆ ರಿಪೋರ್ಟು ಮಾಡಿಕೊಂಡದ್ದು ನೋಡಿ ಇಲ್ಲಿಯವರಿಗೆ ಆಶ್ಚರ್ಯವಾಯಿತು. ಅವರನ್ನು ತಲುಪಿಸಿದ್ದಕ್ಕಾಗಿ ಮುನ್ನೂರು ರೂಪಾಯಿಗಳ ಬಹುಮಾನವನ್ನು ಸರಕಾರ ನಮಗೆ ನೀಡಿತು. ನಮ್ಮಂಥ ಎಷ್ಟು ಪೋಲೀಸರು ಸ್ವಾತಂತ್ರ್ಯ ಹೋರಾಟಗಾರರಿಗೆ ಸಹಾನುಭೂತಿ ತೋರಿಸಿದರೋ, ಸಹಕಾರ ವಿತ್ತರೋ ಯಾರಿಗೆ ಗೊತ್ತು ?

ಜ್ಯೋತಿಪ್ರಿಯಾ
ಪಶ್ಚಿಮದ ಅನುಪಮ ಕೊಡುಗೆ

ಆರ್. ಜಿ. ದೇಸಾಯಿ

ವೇದಗಳು ಭಾರತದ ಎಲ್ಲ ತತ್ತ್ವಜ್ಞಾನಗಳಿಗೆ ತವರುಮನೆ. ಪಾಶ್ಚಾತ್ಯರು ತಿಳಿದುಕೊಂಡ ಅರ್ಥಕ್ಕಿಂತ ಆಳವಾದ ಇನ್ನೊಂದು ಅರ್ಥ ವೇದಗಳಿಗೆ ಇರಲೇಬೇಕು. ಭಾರತದಲ್ಲಿ ಅದು ನನಗೆ ಸಿಗುವುದೆಂದು ಆಶೆ. ಅದಕ್ಕಾಗಿಯೆ ನಾನು ಎಂ. ಎ. ಪರೀಕ್ಷೆಗೆ ಈ ವಿಷಯವನ್ನು ಆರಿಸಿಕೊಂಡಿದ್ದೇನೆ. ನೀವು ದಯವಿಟ್ಟು ನನಗೆ ವೇದಗಳ ಗೂಢಾರ್ಥವನ್ನು ಹೇಳಿಕೊಡುವಿರಾ?"

ಬನಾರಸ ಹಿಂದು ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಕೋಣೆಯಲ್ಲಿ ಹೀಗೆ ಹೇಳಿದವಳು ಮಧ್ಯವಯಸ್ಸಿನ ಒಬ್ಬ ಅಮೇರಿಕನ್ ಮಹಿಳೆ. ಆಕೆಯ ಹೆಸರು ಜುಡಿತ್ ಟೈಬರ್ಗ್. ಇದನ್ನು ಕೇಳಿ ತತ್ತ್ವಜ್ಞಾನದ ಪ್ರಾಧ್ಯಾಪಕರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಆ ಕಾಲದ ಪಂಡಿತರಲ್ಲಿ ವೇದಾರ್ಥದ ಬಗ್ಗೆಯೇ ಭಿನ್ನಾಭಿಪ್ರಾಯಗಳಿದ್ದವು. ಆದ್ದರಿಂದ ಪರೀಕ್ಷೆಗೆ ಬೇರೆ ವಿಷಯವನ್ನು ಆಯ್ದುಕೊಳ್ಳಲು ಅವರು ಆವಳಿಗೆ ಸಲಹೆ ನೀಡಿದರು. ಇದನ್ನು ಕೇಳಿ ಆ ಮಹಿಳೆಯ ಉತ್ಸಾಹ ಜರ್ರನೆ ಇಳಿದು ಹೋಯಿತು. "ನಾನು ಅಮೇರಿಕದಿಂದ ಇಲ್ಲಿಯವರೆಗೆ ಬಂದ ಉದ್ದೇಶ ಪೂರ್ಣವಾಗಲಿಲ್ಲವಲ್ಲ," ಎನ್ನುತ್ತಾ ಆಕೆ ಕೋಣೆಯಿಂದ ಹೊರಬಿದ್ದಳು. ಆಗಲೇ ಒಬ್ಬ, "ಮೇಡಂ, ಒಂದು ನಿಮಿಷ ತಾಳುತ್ತೀರಾ?" ಎಂದು ಕೂಗಿದ. ಅದನ್ನು ಕೇಳಿ ಜುಡಿತ್ ನಿಂತುಕೊಂಡಳು. "ನಿಮಗೆ ಸಹಾಯ ಮಾಡಬಲ್ಲ ವ್ಯಕ್ತಿ ಒಬ್ಬನೇ ಒಬ್ಬ ಎಂದು ನನಗೆ ಅನಿಸುತ್ತದೆ. ಅರವಿಂದರ ಹೆಸರನ್ನು ನೀವು ಕೇಳಿದ್ದೀರಾ?" ಆತ ಕೇಳಿದ.

"ಇಲ್ಲವಲ್ಲ," ಆ ಮಹಿಳೆ ಉತ್ತರಿಸಿದಳು.

"ಅವರು ಈ ವಿಷಯದ ಬಗ್ಗೆ ಒಂದು ಪುಸ್ತಕವನ್ನೇ ಬರೆದಿದ್ದಾರೆ. ಬೇಕಾದರೆ ಅದನ್ನು ನಿಮಗೆ ನಾಳೆ ತಂದುಕೊಡುತ್ತೇನೆ."

"ಖಂಡಿತವಾಗಿಯೂ ಬೇಕು."

ಪುಸ್ತಕ ತಂದುಕೊಡುವುದಾಗಿ ಆಶ್ವಾಸನೆ ನೀಡಿದವರು ಅಲ್ಲಿನ ತರುಣ ಪ್ರಾಧ್ಯಾಪಕ ಅರವಿಂದ ಬಸು ಅವರು.

ಮರುದಿನ ಅವರು "Secret of Veda" (ವೇದ ರಹಸ್ಯ) ಎಂಬ ಗ್ರಂಥದ ಬೆರಳಚ್ಚಿನ

ಪ್ರತಿಯನ್ನೂ "Bases of Yoga" (ಯೋಗದ ಮೂಲಾಧಾರಗಳು) ಎಂಬ ಪುಸ್ತಕವನ್ನೂ ಆಕೆಗೆ ತಂದುಕೊಟ್ಟರು. ಆಕೆ ಅವುಗಳನ್ನು ರಾತ್ರಿಯಿಡೀ ಓದಿ ಆನಂದಿಸಿದಳು. "ಇಲ್ಲಿಯವರೆಗೆ ಹುಡುಕುತ್ತಿದ್ದುದು ಇಂದು ದೊರೆತಂತಾಯಿತು" ಎಂದು ಮರುದಿನ ಆವಳು ಬಸು ಅವರಿಗೆ ಹೇಳಿದಳು.

ಜುಡಿತ್ತಳಿಗೆ ಬಾಲ್ಯದಿಂದಲೂ ಅಧ್ಯಾತ್ಮದ ಹುಚ್ಚು. ಆಕೆ ಪ್ರಾರಂಭದಿಂದ ಆಧ್ಯಾತ್ಮಿಕ ವಾತಾವರಣದಲ್ಲಿ ಬೆಳೆದದ್ದು ಒಂದು ರೀತಿಯಲ್ಲಿ ಯೋಗಾಯೋಗವೆಂದೇ ಹೇಳಬೇಕು. ೧೯೦೨ರಲ್ಲಿ ಕ್ಯಾಲಿಫೋರ್ನಿಯದಲ್ಲಿ ಜನಿಸಿದ ಅವಳ ಬಾಲ್ಯ ಪಾಯಿಂಟ್ ಲೋಮಾ ಎಂಬ ಸ್ಥಳದಲ್ಲಿ ಕಳೆಯಿತು. ಪಾಯಿಂಟ್ ಲೋಮಾದಲ್ಲಿ ಥಿಯಾಸೊಫಿಕಲ್ ಸೊಸೈಟಿಯ ಜಾಗತಿಕ ಕಾರ್ಯಾಲಯವಿತ್ತು. ಆಕೆಯ ತಂದೆ ತಾಯಿಗಳಿಗೆ ಪೌರಸ್ತ್ಯ ತತ್ತ್ವಜ್ಞಾನದಲ್ಲಿ ಅತೀವ ಆಸಕ್ತಿ. ಉಪನಿಷತ್ತು, ಗೀತೆಗಳ ಪ್ರಭಾವ ಆ ಕುಟುಂಬದ ಮೇಲೆ ತುಂಬಾ ಆಗಿತ್ತು.

ಚಿಕ್ಕವಯಸ್ಸಿನಲ್ಲಿಯೇ ಜುಡಿತಳಿಗೆ ಭಗವದ್ಗೀತೆಯ ಕೆಲವು ಭಾಗಗಳು ಕಂಠಪಾಠವಾಗಿದ್ದವು. ಆ ವಾತಾವರಣದಲ್ಲಿ ಅವಳು ಕಲಿತ ಮೊದಲನೆಯ ಪಾಠವೆಂದರೆ ಜೀವನವು ಆನಂದಮಯ ಎನ್ನುವುದು. ಆಕೆ ಅತ್ಯಂತ ಸುಖಿಯಾದರೂ ಗಂಭೀರಳಾಗಿರುತ್ತಿದ್ದಳು. ಉಳಿದ ಮಕ್ಕಳು ಕರಾವಳಿಯ ತೀರದಲ್ಲಿ ಆಡುತ್ತಿರುವಾಗ ಈಕೆ ಚೀನಿ ತತ್ತ್ವಜ್ಞಾನಿ ಲಾವೋತ್ಸೆಯ ಪುಸ್ತಕವನ್ನು ಅರಗಿಸಿಕೊಳ್ಳುವವರಲ್ಲಿ ಮಗ್ನಳಾಗಿರುತ್ತಿದ್ದಳು. ಅಲ್ಲಿಯ ರಾಜಯೋಗ ಪಾಠಶಾಲೆಯಲ್ಲಿ ಅನೇಕ ಕಲೆಗಳನ್ನೂ ಗಣಿತವನ್ನೂ ಸಂಸ್ಕೃತ, ಗ್ರೀಕ್ ಲ್ಯಾಟಿನ್ ಭಾಷೆಗಳಲ್ಲದೆ ಐದಾರು ಆಧುನಿಕ ಯುರೋಪಿಯನ್ ಭಾಷೆಗಳನ್ನೂ ಕಲಿತು ಪ್ರವೀಣಳಾದಳು. ವಿದ್ಯಾರ್ಥಿದೆಶೆಯಲ್ಲಿಯೇ ಆಕೆ ಕೆಳಗಿನ ವರ್ಗಗಳ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದಳು. ಮುಂದೆ ಆಕೆ ತಾನು ಕಲಿತ ಪಾಠಶಾಲೆಯಲ್ಲಿಯೆ ೧೯೩೨ರಿಂದ ಮೂರುವರ್ಷಗಳ ವರೆಗೆ ಶಿಕ್ಷಕಳಾಗಿ ಕೆಲಸ ಮಾಡಿದಳು. ೧೯೩೦ರಲ್ಲಿಯೂ ಸಂಸ್ಕೃತ ವಿಷಯದಲ್ಲಿ ಆವಳಿಗೆ ಥಿಯಾಸೊಫಿಕಲ್ ಯುನಿವ್ಹರ್ಸಿಟಿಯ ಡಾಕ್ಟರೇಟು ದೊರಕಿತ್ತು. ೧೯೪೦ರಲ್ಲಿ ಆಕೆ ಆ ವಿಶ್ವವಿದ್ಯಾಲಯದ ಸಂಸ್ಕೃತ ಮತ್ತು ಪೌರಸ್ತ್ಯ ತತ್ತ್ವಜ್ಞಾನ ವಿಭಾಗದ ಮುಖ್ಯಸ್ಥಳೂ ಆದಳು. ಆಕೆ ರಚಿಸಿದ ಪ್ರಥಮ ಪುಸ್ತಕ ಪಶ್ಚಿಮ ದೇಶಗಳಲ್ಲಿ ಅನೇಕ ಕಡೆ ಸಂಸ್ಕೃತದ ಪ್ರಥಮ ಪಠ್ಯ ಪುಸ್ತಕವಾಗಿ ಸ್ವೀಕರಿಸಲ್ಪಟ್ಟಿತು. ಇದರಲ್ಲಿ ಪೌರಸ್ತ್ಯ ತತ್ತ್ವಜ್ಞಾನ ಮತ್ತು ಗ್ರಂಥಗಳಲ್ಲಿ ಉಪಯೋಗಿಸಲ್ಪಟ್ಟ ೫೦೦ ಸಂಸ್ಕೃತ ಶಬ್ದಗಳ ಅರ್ಥ ಮತ್ತು ಉಚ್ಚಾರದ ವಿವರಣೆ ಇದೆ. ಈಕೆಯು ಪ್ರಯತ್ನದಿಂದಾಗಿ ಮೊಟ್ಟ ಮೊದಲಿಗೆ ಪ್ರಾಚೀನ ಸಂಸ್ಕೃತ ಭಾಷೆ ದೇವನಾಗರಿ ಲಿಪಿಯಲ್ಲಿ ಲೈನೋಟೈಪಿನಲ್ಲಿ ಮುದ್ರಿತವಾದಾಗ ಆ ಸುದ್ದಿ ಅಮೇರಿಕದ ವೃತ್ತಪತ್ರಗಳಲ್ಲಿ ಪ್ರಕಟವಾಯಿತು. 'ಲಾಸ್ ಎಂಜಲೀಸ್ ಟೈಮ್ಸ್' ಪತ್ರಿಕೆಯಲ್ಲಿ ಸುದ್ದಿಯೊಂದಿಗೆ ಈ ಪುಸ್ತಕದ ಒಂದು ಫೋಟೋ ಕೂಡ ಪ್ರಕಟವಾಯಿತು.

೧೯೪೫ರಲ್ಲಿ ಜುಡಿತ್ ಪಾಯಿಂಟ್ ಲೋಮಾ ಬಿಟ್ಟು ಲಾಸ್ ಎಂಜಲೀಸ್ ನಗರಕ್ಕೆ ಹೋಗಿ ಅಲ್ಲಿ ಸಂಸ್ಕೃತ ಭಾಷಾ ಕೇಂದ್ರ ಮತ್ತು ಪುಸ್ತಕದ ಅಂಗಡಿಯನ್ನು ತೆರೆದಳು. ಈ ಕೇಂದ್ರದಲ್ಲಿ ಅವಳು ಭಾರತಕ್ಕೆ ಸಂಬಂಧಿಸಿದ ತತ್ತ್ವಜ್ಞಾನ ಧರ್ಮ, ಭಾಷೆ, ಸಂಸ್ಕೃತಿ ಮುಂತಾದ ವಿಷಯಗಳನ್ನು ಆಸಕ್ತ ಜನರಿಗೆ ಕಲಿಸುತ್ತಿದ್ದಳು. ಕಾಲಕ್ರಮೇಣ ಇಂಥ ವಿಷಯಗಳಲ್ಲಿ ಆಸಕ್ತಿಯುಳ್ಳ ಅನೇಕ ವ್ಯಕ್ತಿಗಳನ್ನು ಒಟ್ಟುಗೂಡಿಸಿ ಸಂಸ್ಥೆಗಳ ಜಾಲವನ್ನೇ ಹಣೆದಳು. ಈ ಕೇಂದ್ರವನ್ನಲ್ಲದೆ ಜುಡಿತ್ ಟೈಬರ್ಗ್ ಹಲವು ಅಭ್ಯಾಸಮಂಡಳಗಳನ್ನೂ ನಡೆಸುತ್ತಿದ್ದಳು. ಡಾ. ವಿ. ಕೆ. ಗೋಕಾಕರು ಒಮ್ಮೆ ಅವಳ ಜೀವನವನ್ನು 'ಸತ್ಯದ ಸತತ ಶೋಧನೆ' ಎಂದು ವರ್ಣಿಸಿದರು.

೧೯೪೭ರಲ್ಲಿ ದಕ್ಷಿಣ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯವು ಬನಾರಸ ಹಿಂದೂ ವಿಶ್ವವಿದ್ಯಾಲಯದ ಉಪಾಧ್ಯಕ್ಷರಾಗಿದ್ದ ಡಾ. ರಾಧಾಕೃಷ್ಣನ್ನರ ಉಪನ್ಯಾಸ ಏರ್ಪಡಿಸಿತ್ತು. ಈ ಉಪನ್ಯಾಸ ಜುಡಿತ್ ಟೈಬರ್ಗ್‌ಳ ಮೇಲೆ ಎಂಥ ಪ್ರಭಾವವನ್ನು ಬೀರಿತೆಂದರೆ ೧೯೪೭ನೆಯ ಹೊಸ ವರ್ಷದ ಮೊದಲ ದಿವಸ ಬಸು

ರಸ ಹಿಂದು ವಿಶ್ವವಿದ್ಯಾಲಯದ ಅಧ್ಯಕ್ಷರಿಗೂ ಸಂಬಂಧಿಸಿದ ಅಧಿಕಾರಿಗಳಿಗೂ ಒಂದು ಪತ್ರ ಬರೆದು, ಆ ವಿಶ್ವವಿದ್ಯಾಲಯದ ಪೌರಸ್ತ್ಯ ವಿಭಾಗದಲ್ಲಿ ಸಂಶೋಧನೆ ಮಾಡಲು ಅವಕಾಶ ನೀಡುವಿರಾ? ಎಂದು ಕೇಳಿದಳು. ಆ ವರ್ಷ ಜೂನ್ ತಿಂಗಳಲ್ಲಿ ಭಾರತದ ಆರ್ಯಧರ್ಮ ಸೇವಾ ಸಂಘದ ಸದಸ್ಯಳಾಗಿ, ಮೂರು ವರ್ಷಗಳ ಬಿರ್ಲಾ ಶಿಷ್ಯವೃತ್ತಿಯನ್ನು ಪಡೆದು ಬನಾರಸ ಹಿಂದು ವಿಶ್ವವಿದ್ಯಾಲಯದಲ್ಲಿ ಅಭ್ಯಸಿಸಲು ಭಾರತಕ್ಕೆ ಬಂದಳು.

ಅಲ್ಲಿ ಈ ಮೊದಲು ವಿವರಿಸಿದಂತೆ ಅರವಿಂದ ಬಸು ಅವರ ಮುಖಾಂತರ ಅವಳಿಗೆ ಶ್ರೀ ಅರವಿಂದರ ಯೋಗದ ಪ್ರಥಮ ಪರಿಚಯವಾಯಿತು. ದಿನದಿನಕ್ಕೆ ಬಸು ಅವರ ಪರಿಚಯ ಹೆಚ್ಚಾಗಹತ್ತಿತು. ಅವರು ಆಗಾಗ ಶ್ರೀ ಅರವಿಂದರು ಅವರ ಆಶ್ರಮ ಮತ್ತು ಮಾತೆಯವರ ಬಗ್ಗೆ ಹೇಳಹತ್ತಿದರು. ಒಂದು ದಿನ ಜುಡಿತ್ ಟೈಬರ್ಗ್ ಬಸು ಅವರಿಂದ ಪರಿಚಯಪತ್ರವನ್ನು ಬರೆಸಿಕೊಂಡು ಶ್ರೀ ಅರವಿಂದರಿಗೆ ಅಂದೇ ಪತ್ರವನ್ನು ಬರೆದು ದರ್ಶನಕ್ಕಾಗಿ ಅಪ್ಪಣೆ ಕೊಡಬೇಕೆಂದು ಪ್ರಾರ್ಥಿಸಿದಳು. ಇದಾಗಿ ಎರಡು ದಿನಗಳ ಬಳಿಕ ಒಮ್ಮಿಂದೊಮ್ಮೆ ಮಲ್ಲಿಗೆಯ ವಾಸನೆ ಘಮ್ಮೆಂದು ಮೂಗಿಗೆ ಬಡಿಯಿತು. ಮಲ್ಲಿಗೆ ಹೂಗಳನ್ನು ಯಾರು ತಂದಿದ್ದಾರೆ ಎಂದು ಯೋಚಿಸುತ್ತ ಸುತ್ತಲೂ ನೋಡಿದಳು. ಎಲ್ಲಿಯೂ ಹೂಗಳು ಕಾಣಲಿಲ್ಲ. ಆದರೆ ಅವಳು ಹೋದಲ್ಲೆಲ್ಲ ಅದೇ ವಾಸನೆ. ಬಸು ಅರವಿಂದರ ಬಗ್ಗೆ ಮಾತಾಡುವಾಗ ಏಕೋ ಆ ವಾಸನೆ ಹೆಚ್ಚಾದಂತೆ ಅನಿಸುತ್ತಿತ್ತು. ಯೋಚಿಸಿದಷ್ಟೂ ಕಾರಣ ಗೂಢವಾದಾಗ ಆಕೆ ಬಸು ಅವರ ಮನೆಗೆ ಹೋಗಿ, "ಈ ವಿಚಿತ್ರ ಘಟನೆಗೆ ಏನಾದರೂ ಅರ್ಥವಿದೆಯೆ?" ಎಂದು ಕೇಳಿದಳು. "ನೀವು ನಿಮ್ಮ ಪತ್ರದಿಂದ ಮತ್ತು ತೀವ್ರ ಅಭೀಪ್ಸೆಯಿಂದ ಶ್ರೀ ಅರವಿಂದರ ಸಂಪರ್ಕಮಾಡಿಕೊಂಡಿರಿ ಅಲ್ಲವೆ? ಈ ವಾಸನೆಯ ಮುಖಾಂತರ ಶ್ರೀ ಅರವಿಂದರು ನಿಮ್ಮ ಸಂಪರ್ಕಮಾಡಿದ್ದಾರೆ. ಅವರಿಂದ ಬೇಗನೆ ನಿಮಗೆ ಪತ್ರ ಬರುವದು," ಎಂದರು. ಅವರು ಹೇಳಿದ ಹಾಗೆಯೆ ಮುಂದೆ ಕೆಲವೇ ದಿನಗಳಲ್ಲಿ. "ನೀವು ಯಾವಾಗ ಬೇಕಾದರೂ ಬರಬಹುದು. ನಿಮಗೆ ಸುಸ್ವಾಗತ" ಎಂಬ ಪತ್ರ ಆಶ್ರಮದಿಂದ ಬಂದಿತು.

೧೯೪೭ರ ಅಕ್ಟೋಬರ್ ತಿಂಗಳ ಲಕ್ಷ್ಮೀ ಪೂಜೆಯ ದಿನ ಸಾಯಂಕಾಲ ಆಕೆ ಆಶ್ರಮ ತಲುಪಿದಳು. ಮಾತೆ ಎಲ್ಲರಿಗೂ ಆಶೀರ್ವಾದ ಮಾಡುವ ಸಮಯ. ಅಲ್ಲಿ ನೆರೆದ ಸಾಧಕರ ದರ್ಶನಾರ್ಥಿಗಳ ಜೊತೆಯಲ್ಲಿ ಜುಡಿತ್ ಟೈಬರ್ಗಳೂ ಸಾಲಿನಲ್ಲಿ ನಿಂತು, ತನ್ನ ಸರದಿ ಬಂದಾಗ ಮಾತೆಯವರ ಮುಂದೆ ತಲೆಬಾಗಿದಳು. ಮಾತೆ ಆಕೆಯ ತಲೆಯ ಮೇಲೆ ಕೈಯಿರಿಸಿದರು. ಕೂಡಲೆ ಅಂಗಾಂಗಗಳಲ್ಲಿ ವಿದ್ಯುತ್ ಸಂಚಾರವಾದಂತಾಯಿತು.

ಮರುದಿನ ಮಾತೆಯನ್ನು ಭೇಟಿಯಾದಾಗ ಅವರು ಹಳೆಯ ಪರಿಚಯವಿದ್ದ ಹಾಗೆ, "ನಾವು ಬಹು ಕಾಲದಿಂದಲೂ ನಿನ್ನ ದಾರಿ ಕಾಯುತ್ತಿದ್ದೆವು," ಎಂದು ಹೇಳಿದರಂತೆ.

ಅರವಿಂದರ ದರ್ಶನವಾಗುವ ಯೋಗವೂ ಕೂಡಿಬಂತು (ನವೆಂಬರ್ ೨೪). ದರ್ಶನಕ್ಕಾಗಿ ಸಾಲಿನಲ್ಲಿ ನಿಂತಾಗ ಎತ್ತರ ನಿಲುವಿನ ಜುಡಿತ್ ದೂರದಿಂದಲೇ ಅರವಿಂದರನ್ನು ಕಂಡಳು. ತನ್ನ ಸರದಿ ಬಂದ ಕೂಡಲೇ ಅವರ ಮುಂದೆ ನಿಂತಾಗ, "ನನ್ನ ವ್ಯಕ್ತಿತ್ವ ಅನಂತದವರೆಗೆ ಚಾಚಿದಂತೆ ಅನಿಸಿತು. ಆಗ ನನಗೆ ಪರಮಾತ್ಮನ ಅನುಭವವಾಯಿತು," ಎಂದಾಕೆ ಹೇಳಿದ್ದಾಳೆ. ಅಂದಿನಿಂದ ಹೊಸ ಪ್ರಜ್ಞೆಯೊಂದು ಅವಳ ಜೀವನದ ಹರಿಕಾರನಾಗಿ ಬಂದಿತು. ಕೆಲವು ತಿಂಗಳು ಆಶ್ರಮದಲ್ಲಿಯೇ ಇದ್ದು ಸಾಧನೆಮಾಡಿದಳು. ಆಕೆಗೆ ಅರವಿಂದರು ಜ್ಯೋತಿಪ್ರಿಯಾ ಎಂದು ಹೊಸದಾಗಿ ನಾಮಕರಣ ಮಾಡಿದರು.

ವಾರಾಣಸಿಯಲ್ಲಿನ ಅಭ್ಯಾಸ ಅರ್ಧಕ್ಕೇ ನಿಂತಿತ್ತು. ಅದನ್ನು ಪೂರ್ಣಗೊಳಿಸಲು ಆಕೆ ಕೆಲವು ತಿಂಗಳುಗಳ ನಂತರ ವಾರಾಣಸಿಗೆ ಹೋಗಿ ಭಾರತೀಯ ತತ್ತ್ವಜ್ಞಾನದ ಎಲ್ಲ ವಿಭಾಗಗಳನ್ನೂ ಆಳವಾಗಿ ಅಭ್ಯಸಿಸಿದಳು. ಹಿಂದಿ, ಪಾಲಿ, ಭಾಷೆಗಳನ್ನು ಕಲಿತಳು. [illegible]

ಸ್ಟನಲ್ಲಿ ಶಾಸ್ತ್ರೀಯ ಸಂಗೀತವನ್ನು ಅಭ್ಯಸಿಸಿ ಅನಸರಲ್ಲಿ ಸಾಕಷ್ಟು ತರಬೇತಿಯನ್ನು ಪಡೆದಳು.

ಒಂದು ದಿನ ಜುಡಿತ್ ಟೈಬರ್ಗ್ ಅಮೇರಿಕನ್ ರಾಯಭಾರಿಯ ಮಿತ್ರರ ಮನೆಗೆ ಹೋದಾಗ ಅವರ ಮನೆಗೆ ಯೋಗಿಯೊಬ್ಬರು ಬಂದಿದ್ದರು. ಅವರು ಅವಳ ಮುಖವನ್ನು ಸ್ವಲ್ಪ ಹೊತ್ತು ದಿಟ್ಟಿಸಿ ನೋಡಿ, "ಅಮ್ಮಾ, ಸ್ವಲ್ಪ ನಿಮ್ಮ ಕೈತೋರಿಸುತ್ತೀರಾ?" ಎಂದು ಕೇಳಿದರು. ಈಕೆ ಸಂಕೋಚದಿಂದ ಕೈಚಾಚಿದಳು. ಯೋಗಿ ಅವಳ ಕೈಯನ್ನು ನೋಡಿ "ನೀವು ೧೯೦೨ರಲ್ಲಿ ಮೇ ೧೬ ರಂದು ಜನಿಸಿರುವಿರಲ್ಲವೇ?" ಎಂದು ಕೇಳಿ ಆಕೆಯನ್ನು ಬೆರಗುಗೊಳಿಸಿದರು. ಆಮೇಲೆ ಸ್ವಲ್ಪ ತಡೆದು "ಏಳು ಎತ್ತರದ ಮರಗಳಿಂದ ಆವೃತವಾದ ದೊಡ್ಡ ಸುಂದರ ಕಟ್ಟಡದಲ್ಲಿ ನೀವು ಕುಳಿತಿರುವಿರಿ. ಸಾವಿರಾರು ಜನರು ಹೋಗುತ್ತ ಬರುತ್ತ ಇರುತ್ತಾರೆ. ನೀವು ಜನರಿಗೆ ಕಲಿಸುತ್ತ ಇರುವಿರಿ", ಎಂದು ಹೇಳಿದರು.

"ಅಯ್ಯೋ, ನನ್ನ ಬಳಿ ಹೊಟ್ಟೆ ಬಟ್ಟೆಗೆ ಕೂಡ ಸಾಕಷ್ಟು ಇಲ್ಲ. ದೊಡ್ಡ ಕಟ್ಟಡವನ್ನು ಎಲ್ಲಿಂದ ತರಲಿ?" ಜುಡಿತ್ ಹೇಳಿದಳು.

"ಅದು ನನಗೆ ಗೊತ್ತಿಲ್ಲ. ನಾನು ಕಾಣುತ್ತಿರುವ ದೃಶ್ಯವನ್ನು ಮಾತ್ರ ನಿಮಗೆ ಹೇಳಿದೆ." ಎಂದರು ಯೋಗಿ. ಯೋಗಿವರ್ಯರೇ, "ಈಕೆ ಯಾವಾಗಲೂ ಕಷ್ಟದಲ್ಲಿಯೇ ಇರುತ್ತಾಳೆ. ಭವಿಷ್ಯದಲ್ಲಿ ಇವಳಿಗೆ ಹಣ ಅನುಕೂಲ ಏನಾದರೂ ಆಗಬಹುದೋ ಹೇಗೆ ಎಂಬುದನ್ನು ಹೇಳುತ್ತೀರಾ?" ಎಂದು ಅಮೇರಿಕನ್ ರಾಯಭಾರಿಯ ಪತ್ನಿ ಕೇಳಿದಳು. ಯೋಗಿಗಳು ಒಂದು ಕ್ಷಣ ಧ್ಯಾನಮಗ್ನರಾಗಿ, "ಆಧ್ಯಾತ್ಮಿಕ ಕಾರ್ಯಕ್ಕಾಗಿ ಆಕೆಗೆ ಸಾಕಷ್ಟು ಹಣ ದೊರೆಯುವುದು. ಆದರೆ ಈಕೆ ಮಾತ್ರ ಬಡವಿಯೆ. ಈಕೆಯ ವೈಯಕ್ತಿಕ ಉಪಯೋಗಕ್ಕೆಂದೂ ಅದು ದೊರೆಯದು," ಎಂದು ಹೇಳಿದರು.

೧೯೪೪ರಲ್ಲಿ ಎಂ. ಎ. ಪರೀಕ್ಷೆ ಮುಗಿದು ಜುಡಿತ್ ಟೈಬರ್ಗ್ ಪ್ರಥಮ ತರಗತಿಯಲ್ಲಿ ತೇರ್ಗಡೆಯಾದಳು. ಅನಂತರ ಪಾಂಡಿಚೇರಿಗೆ ಹೋಗಿ ಅಲ್ಲಿ ಕೆಲವು ತಿಂಗಳು ಆಶ್ರಮದಲ್ಲಿ ಕಳೆದಳು. ಅವಳಿಗೆ ಅರವಿಂದರ ಆಶ್ರಮ ಮತ್ತು ಅಲ್ಲಿಯ ಸಾಧಕರ ಬಗ್ಗೆ ಅಸೀಮ ಗೌರವ. ಸಾಧಕರಿಗಾದರೂ ಅವಳ ಬಗೆಗೆ ಅಷ್ಟೇ ಗೌರವ. ೧೯೪೪ರಲ್ಲಿ ಒಂದು ದಿನ ಪ್ರಸಿದ್ಧ ವೇದವಿದರಾದ ಪಂಡಿತ ಕಾಪಾಲಿ ಶಾಸ್ತ್ರಿಗಳನ್ನು ಕಂಡು ಮಂತ್ರ ಪಠನದ ರೀತಿಯನ್ನು ಕಲಿಸಬೇಕೆಂದು ಪ್ರಾರ್ಥಿಸಿದಳು. ಆಗ ಶಾಸ್ತ್ರಿಗಳು, "ಮೊದಲು ನನ್ನ ಬಳಿ ೧೫ ವರ್ಷ ಅಭ್ಯಾಸ ಮಾಡು; ಅನಂತರವೇ ಮಂತ್ರ ಪಠಣದ ವಿಚಾರ," ಎಂದು ಹೇಳಿದರು. ಆಗ ಜುಡಿತ್ ಟೈಬರ್ಗ್ ಈ ವಿಷಯವನ್ನು ಅರವಿಂದರ ಮುಂದೆ ಇಟ್ಟಾಗ ಅರವಿಂದರು, "ಆಕೆ ಏನು ಕಲಿಯಲು ಬಯಸುವಳೋ ಅದೆಲ್ಲವನ್ನೂ ಕಲಿಸಿರಿ. ಮುಂದೆ ಆಕೆ ಅಮೇರಿಕದಲ್ಲಿ ಒಳ್ಳೆ ಕಾರ್ಯ ಮಾಡುವವಳಿದ್ದಾಳೆ," ಎಂದು ಕಾಪಾಲಿಶಾಸ್ತ್ರಿಗಳಿಗೆ ಹೇಳಿದರು. ಅನಂತರ ದಿನಾಲು ಮುಂಜಾನೆ ಆಕೆ ಕೆಲವು ಗಂಟೆ ಶಾಸ್ತ್ರಿಗಳೊಡನೆ ಪ್ರಶ್ನೋತ್ತರ, ಅಭ್ಯಾಸಗಳಲ್ಲಿ ಕಳೆಯುತ್ತಿದಳು. ಕೆಲವೇ ದಿನಗಳ ಅಭ್ಯಾಸದ ನಂತರ ಗಾಯಿತ್ರಿಮಂತ್ರವನ್ನು ಅವರೆದುರಿಗೆ ಪಠಿಸಿದಾಗ, "ಬಿಲ್ಕುಲ್ ಠೀಕ್" ಎಂದು ಶಾಸ್ತ್ರಿಗಳು ಉದ್ಗರಿಸಿದರು.

ಕ್ರಿಸ್‌ಮಸ್ ಹಬ್ಬದ ಆಕೆ ೪೦೦ ಕ್ಕಿಂತ ಹೆಚ್ಚು ಸ್ನೇಹಿತರಿಗೆ ಶುಭಾಶಯ ಪತ್ರಗಳನ್ನು ಕಳಿಸುತ್ತಿದ್ದಳು. ಅವರೊಟ್ಟಿಗಿದ್ದ ಒಂದೊಂದು ಪತ್ರ ಟೈಪ್ ಮಾಡಿದ ೨೨ ಪುಟಗಳಷ್ಟು ದೀರ್ಘವಾಗಿರುತ್ತಿದ್ದುದನ್ನು ಕಂಡು ಸಾಧಕರೊಬ್ಬರು ಇಂಥ ಕೆಲಸಗಳನ್ನು ಬಿಟ್ಟು ಸ್ವಂತದ ಸಾಧನೆಯಲ್ಲಿ ವೇಳೆ ಕಳೆದರೆ ವೇಳೆಯ ಸದುಪಯೋಗವಾದೀತು ಎಂದು ಉದ್ಗರಿಸಿದರು. ಆಗ ಆಕೆ ಮಾತೆಯವರ ಸಲಹೆ ಕೇಳಿದಾಗ ಅವರು, "ಪರಮಾತ್ಮನು ನಿನ್ನಂಥವರ ಮೂಲಕವಾಗಿಯೆ ಕೆಲಸ ಮಾಡುವನಲ್ಲವೇ? ಏಕಾಂತ ಸಾಧನೆಯಿಂದ ನಿನ್ನ ಪ್ರಗತಿ ವೇಗದಿಂದ ಅತಿ, ಸಾಗಬಹುದು. ಆದರೆ ಬೇರೆಯವರನ್ನು ಜೊತೆಗೆ ಕರೆದುಕೊಂಡೇ ಮುಂದೆ ಸಾಗಿದರೆ, ಪ್ರಗತಿಯು ಮಂದಗತಿಯಲ್ಲಿ ಸಾಗಿದರೂ ಹೆಚ್ಚು ಸಮೃದ್ಧವೂ ಸುಂದರವೂ ಆಗುವುದು," ಎಂದು ಹೇಳಿದರು.

ಆಕೆಯ ಸಂಸ್ಕೃತ ಪಾಂಡಿತ್ಯವನ್ನೂ ಭಾರತೀಯ ಸಂಸ್ಕೃತಿಯ ಪ್ರೇಮವನ್ನೂ ಗಾಂಧೀಜಿ, ಅಬ್ದುಲ್ ಕಲಾಂ ಆಝಾದ್, ರಾಜಾಜಿಯಂತಹ ರಾಜಕಾರಣ ಧುರಂಧರರಲ್ಲದೆ ಮಾ ಆನಂದಮಯಿ, ಕೃಷ್ಣಪ್ರೇಮ, ರಮಣ ಮಹರ್ಷಿ ಮುಂತಾದ ಆಧ್ಯಾತ್ಮಿಕ ಮಹನೀಯರೂ ಕೊಂಡಾಡುತ್ತಿದ್ದರು.

೧೯೫೦ ರ ಮಾರ್ಚ್ ತಿಂಗಳಲ್ಲಿ ಅವಳು ಅಮೇರಿಕಕ್ಕೆ ತಿರುಗಿ ಹೊರಟಳು. ಅರವಿಂದರ ಬಳಿಗೆ ಕರೆದು ತಂದ ಬಸು ಅವರೆ ಅವಳನ್ನು ಕಲ್ಕತ್ತೆಯಲ್ಲಿ ಬೀಳ್ಕೊಟ್ಟರು. ತನ್ನ ದೇಶಕ್ಕೆ ಹಿಂದಿರುಗಿದ ಮೇಲೆ ಜುಡಿತ್ ಟೈಬರ್ಗ್ ಒಂದು ಸಣ್ಣ ಮನೆಯಲ್ಲಿ ಸಂಸ್ಕೃತ, ಪೌರಾತ್ಯ ತತ್ವಜ್ಞಾನ ಮುಂತಾದವುಗಳನ್ನು ಕಲಿಸತೊಡಗಿದಳು. ಭಾಷಣ ನೀಡಲು ಅವಳಿಗೆ ಸತತವಾಗಿ ಆಮಂತ್ರಣಗಳು ಬರುತ್ತಿದ್ದವು. ಕಲಿಯಲು ಬರುವ ವಿದ್ಯಾರ್ಥಿಗಳ ಸಂಖ್ಯೆ ದಿನ ದಿನಕ್ಕೆ ಹೆಚ್ಚಾಗುತ್ತಿತ್ತು. ಅಭ್ಯಾಸ ಕೇಂದ್ರಕ್ಕಾಗಿ ಆಕೆ ಪ್ರತ್ಯೇಕ ಕಟ್ಟಡ ಬೇಕೆಂದು ಕಷ್ಟಪಟ್ಟು ನಿಧಿಯನ್ನು ಕೂಡಿಸತೊಡಗಿದಳು. ಭಾರತದ ಯೋಗಿ ನುಡಿದ ಭವಿಷ್ಯದಂತೆ ಅವಳಿಗೆ ಏಳು ಹೆಮ್ಮರಗಳಿಂದ ಸುತ್ತುವರಿದ ಸೌಧವೂ ದೊರೆಯಿತು.


೧೯೫೩ರಲ್ಲಿ ಲಾಸ್ ಏಂಜೆಲೀಸಿನಲ್ಲಿ ಪಾಶ್ಚಾತ್ಯ ಪೌರಸ್ತ್ಯ ಸಾಂಸ್ಕೃತಿಕ ಕೇಂದ್ರವನ್ನು ಸ್ಥಾಪಿಸಿದಳು. ಈ ಸಂಸ್ಥೆಯಿದ್ದ ಓಣಿಯಲ್ಲಿ ರೇಡಿಯೋದಿಂದ ಕಿವಿಕೊರೆಯುವಂತೆ ರಾಕ್ ಮ್ಯೂಜಿಕ್ ಹೊರಹೊಮ್ಮುತ್ತಿತ್ತು. ಓಣಿಯ ತುಂಬಾ ಮಾಂಸದ ವಾಸನೆ ತುಂಬಿರುತ್ತಿತ್ತು. ಆದರೆ ಅವಳ ಅಭ್ಯಾಸ ಕೇಂದ್ರವನ್ನು ಪ್ರವೇಶಿಸಿದ ಕೂಡಲೇ ಬೇರೆ ಲೋಕವನ್ನು ಪ್ರವೇಶಿಸಿದಂತೆಯೇ ಭಾಸವಾಗುತ್ತದೆ. ಬಾಗಿಲಲ್ಲಿ ಸುಂದರ ಹೂಗಳೂ ಮಾತೆಯ ನಗುಮುಖದ ಭಾವಚಿತ್ರವೂ ನಿಮ್ಮನ್ನು ಸ್ವಾಗತಿಸುವವು. ಮೇಲಿನ ಅಂತಸ್ತಿನಲ್ಲಿ ಗ್ರಂಥಾಲಯವಿದೆ. ಅಲ್ಲಿ ಇನ್ನೂ ಹೆಚ್ಚು ಹೂಗಳು, ಊದುಬತ್ತಿಯ ಸುಗಂಧ ಅರವಿಂದರ ದೊಡ್ಡ ಭಾವಚಿತ್ರ ನಿಮ್ಮನ್ನು ಆನಂದಪರವಶರನ್ನಾಗಿಯೆ ಮಾಡುವವು. ಅಲ್ಲಿನ ಕೋಣೆಗಳಿಂದ ಯಾವಾಗಲೂ ಮಂತ್ರಘೋಷ ಹೊರಹೊಮ್ಮುತ್ತಿದೆ.

೧೯೬೭ರಲ್ಲಿ ಮತ್ತೆ ಭಾರತಕ್ಕೆ ಬಂದು ಆಕೆ ಮಾತೆಯವರ ದರ್ಶನ ಪಡೆದಳು. "ಭಗವಂತನ 'ಕಾರ್ಯ' ಮಾಡಲು ಜ್ಯೋತಿಪ್ರಿಯಾ ಅವಸರದಿಂದ ಭೂಮಿಗೆ ಬಂದಳು. ಹೀಗೆ ಅವಸರದಿಂದ ಬಂದಿದ್ದರಿಂದಲೆ ದೃಢವಾದ ದೇಹವನ್ನು ರಚಿಸಿಕೊಂಡು ಬರಲು ನಿಗಾವಹಿಸಲಿಲ್ಲ," ಎಂದು ಮಾತಾಜಿಯವರೊಮ್ಮೆ ನುಡಿದರಂತೆ. ಕೆಲವು ದಿನ ಪಾಂಡಿಚೇರಿಯ ಆಶ್ರಮದಲ್ಲಿ ಇದ್ದು ಅವಳು ಮತ್ತೆ ಅಮೇರಿಕಕ್ಕೆ ಮರಳಿದಳು.

೧೯೮೦ರ ಅಕ್ಟೋಬರಿನಲ್ಲಿ ದೇಹ ಬಿಡುವವರೆಗೆ ಆಕೆ ಅಮೇರಿಕದಲ್ಲಿ ಆಧ್ಯಾತ್ಮಿಕ ಶಿಕ್ಷಣದ ಕಾರ್ಯವನ್ನು ಅನವರತವಾಗಿ ಸಾಗಿಸಿದಳು. ಕೇವಲ ತತ್ವಜ್ಞಾನ ಅಷ್ಟೇ ಅಲ್ಲ ಪೌರಸ್ತ್ಯ ಸಂಗೀತ, ನೃತ್ಯ, ಮುಂತಾದವುಗಳನ್ನೂ ಕಲಿಸುತ್ತಿದ್ದಳು. ಮರಣದ ನಂತರ ದೇಹವನ್ನು ಭಾರತೀಯ ಪದ್ಧತಿಯಂತೆ ದಹಿಸಿ ಬೂದಿಯನ್ನು ಒಂದು ಸುಂದರ ಉಪವನದಲ್ಲಿ ಹೂಗಳ ಮಧ್ಯೆ ಪಸರಿಸಬೇಕೆಂದು ತನ್ನ ಮೃತ್ಯುಪತ್ರದಲ್ಲಿ ಬರೆದಿಟ್ಟಿದ್ದಳು.

ಮುತ್ತಿನಂಥ ಕೆಲವು ಪುಸ್ತಕಗಳನ್ನು ಆಕೆ ಬರೆದಿದ್ದಾಳೆ. 'Sanskrit Keys To The Wisdom Of Religion' ಎಂಬ ಗ್ರಂಥದ ಬಗ್ಗೆ ಮೊದಲು ವಿವರಿಸಲಾಗಿದೆ. The Language Of The Gods (ದೇವತೆಗಳ ಭಾಷೆ) ಎಂಬ ಪುಸ್ತಕ ಭಾರತೀಯ ತತ್ವಜ್ಞಾನವನ್ನು ಅಭ್ಯಾಸ ಮಾಡುವವರಿಗೆ ಉಪಯುಕ್ತವಾಗಿದೆ. ಅದರಲ್ಲಿ ತತ್ವಜ್ಞಾನದ ವಿವಿಧ ವಿಭಾಗಗಳ ಸಂಕ್ಷಿಪ್ತ ವಿವರಣೆ ಇದೆ.

ಭಗವಂತ ಯಾರ ಮೂಲಕವಾಗಿಯಾದರೂ ಕಾರ್ಯ ಮಾಡಿಸುತ್ತಾನೆನ್ನುವುದನ್ನು ಸುಳ್ಳು ಎನ್ನುವರಾರು ?



ಮನಸ್ಸಿದ್ದಲ್ಲಿ

ಮಾರ್ಗವಿದ್ದೇ ಇದೆ

ಕಂಗಳ ಕಾಂತಿ ಕುಂದಿದರೇನು...

ಪ್ರಕಾಶ ದೇಶಪಾಂಡೆ

ನ್ಯಾಯಾಂಗ ಹಾಗೂ ಕಾರ್ಯಾಂಗ ಒಂದ ಕ್ಕೊಂದು ಪೂರಕವಾಗಿರಬೇಕೇ ವಿನಾ ನ್ಯಾಯಾಂಗದ ಮೇಲೆ ಕಾರ್ಯಾಂಗ ತನ್ನ ಆಧಿಪತ್ಯ ಸ್ಥಾಪಿಸಕೂಡದು...

"ಈ ದೇಶದಲ್ಲಿ ನ್ಯಾಯದಾನ ನೀಡಿಕೆಯಲ್ಲಿ ಭಾರಿ ವಿಳಂಬವಾಗುತ್ತಿದೆ. ಇದು ನಿಜಕ್ಕೂ ನ್ಯಾಯ ದೇವತೆಯ ದುರ್ದೈವ. Justice delayed is justice denied. ಈ ವಿಳಂಬವನ್ನು ಹತೋಟಿಗೆ ತರಬೇಕು. ಅದಕ್ಕಾಗಿ ನ್ಯಾಯವಿದರು ಯೋಚಿಸಬೇಕು..."

ಹೀಗೇ ಹೇಳುತ್ತ ಹೋದರು ಶ್ರೀ ದಾಮೋದರ ವಾಡೇಗಾಂವಕರ. ಅವರ ಒಂದೊಂದು ಮಾತೂ ವಿಚಾರ ಶಕ್ತಿಗೆ ಸಾಣೆ ಹಿಡಿಯಬಲ್ಲವುಗಳು.

ಕಾನೂನಿನ ವಿಶ್ವಕೋಶವೇ ಆಗಿರುವ ವಾಡೇಗಾಂವಕರ ಮುಂಬೈ ಕಾನೂನು ಕಾಲೇಜಿನ ಸ್ನಾತಕೋತ್ತರ ವಿದ್ಯಾರ್ಥಿಗಳ ಗುರು. ಆ ಇಲಾಖೆಯ ಮುಖ್ಯಸ್ಥ. ಅಷ್ಟೇ ಅಲ್ಲ, ಸಂದರ್ಶಕ ಪ್ರಾಧ್ಯಾಪಕ ಕೂಡ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸಲ್ಪಡುವ ಕೆಲವೇ ಕಾನೂನು ಪಂಡಿತರಲ್ಲಿ ಒಬ್ಬರಾಗಿರುವ ಅವರು 'ಅಂತಾರಾಷ್ಟ್ರೀಯ ಬಾಹ್ಯಾಂತರಿಕ್ಷ ಕಾನೂನು' ಹಾಗೂ 'ಅಂತಾರಾಷ್ಟ್ರೀಯ ಕಾರ್ಮಿಕ ಶಾಸನಗಳಲ್ಲಿ ಅಧಿಕಾರವಾಣಿ (ಅಂತಾರಾಷ್ಟ್ರೀಯ ಕಾನೂನು ವ್ಯವಹಾರಗಳ ವಿಷಯದಲ್ಲಿ ಭಾರತದಲ್ಲಿ ಅವರು ಮಾತ್ರ ತಜ್ಞರು. ಅವ

ರಲ್ಲೊಬ್ಬರಾಗಿರುವ ವಾಡೇಗಾಂವಕರ 'ಬಾಹ್ಯಾಂತರಿಕ್ಷ ಕಾನೂನು' ವಿಷಯದಲ್ಲಿ ಏಕಮೇವ ಭಾರತೀಯ ತಜ್ಞ). ಅಂತೆಯೇ ಅವರು ನಮ್ಮ ದೇಶದ ಹೆಮ್ಮೆಯ ವ್ಯಕ್ತಿ.

ಕೃಶಕಾಯ, ಎತ್ತರದ ನಿಲುವು, ಗೌರವರ್ಣ. ಸದಾ ಹಸನ್ಮುಖಿ, ಅವರಲ್ಲಿ ಅಪೂರ್ವ ತೇಜಸ್ಸು. ಮಾತಿಗೆ ಪರಿಮಿತಿಯಿಲ್ಲ, ತುಟಿ ತೆರೆದಾದರೆ ಗಂಟೆಗಟ್ಟಲೆ ಮಾತಿನ ಮಳೆ; ಅದು ಅನುಭವಯುಕ್ತ. ಸಾದಾ-ಸೀದಾ ವ್ಯಕ್ತಿತ್ವ. ಮನಸ್ಸು 'ತೆರೆದ ಪುಸ್ತಕ.' ಈ ಚಲಿಸುವ ಕಾನೂನು ಕೋಶದೊಡನೆ ಸಂಭಾಷಣೆ ನಡೆಸಿದರೆ ಆಗುವ-ಸಿಗುವ ಜ್ಞಾನಾನಂದದ ಜೊತೆಗೇ ಅವರ ಆ ಕಣ್ಣುಗಳನ್ನು ನೋಡಿದಾಗ ಮಾತ್ರ ದುಃಖ ಉಕ್ಕೇರುತ್ತದೆ. ಮನ ಮರುಗುತ್ತದೆ. ವಾಡೇಗಾಂವಕರರಿಗೆ ಎಲ್ಲ ಇದೆ. ಆದರೆ ಕಣ್ಣುಗಳ ಕಾಂತಿಯೇ ಕುಂದಿದೆ.

ಆದರೇನು? ಹೃದಯದೇಗುಲದಲ್ಲಿ ವಿದ್ಯಾನಿಧಿಯೇ ಅಡಗಿದೆಯಲ್ಲ; 'ಕಂಗಳಕಾಂತಿ ಕುಂದಿದರೇನು, ಮಿನುಗುತಿದೆ ಜ್ಞಾನದ ಪರಂಜ್ಯೋತಿ...'

ಎಲ್ಲರಂತೆ ತನಗೆ ದೃಗ್ಶಕ್ತಿಯಿಲ್ಲವಲ್ಲ ಎಂದು ದಾಮೋದರ ಎಂದೂ ಕೊರಗಿಲ್ಲ. ಒಂದು ವೇಳೆ ತಾನು ಅಂಧನಾಗಿರದಿದ್ದರೆ ಇಷ್ಟು ಮುಂದುವರಿಯುತ್ತಿರಲಿಲ್ಲವೇನೋ ಎನ್ನುತ್ತಾರೆ. "ಅಂಧತ್ವ ನನ್ನ ಪಾಲಿಗೆ ಬಂದ ಪಂಚಾಮೃತ. ದೈವದತ್ತ ವರ."

"ಹಾಗಾದರೆ. ನ್ಯಾಯದಾನ ನೀಡಿಕೆಯಲ್ಲಿನ ವಿಳಂಬವನ್ನು ತಪ್ಪಿಸಲು ಏನು ಮಾಡಬೇಕು ಎಂದು ನೀವು ಸೂಚಿಸುತ್ತೀರಿ?" ನಾನು ಕೇಳಿದೆ.

"ಛೆ, ಛೆ, ನಾನೇಕೆ ಸೂಚಿಸಲಿ? ಅದೂ ನಿಮ್ಮ-ಅಂದರೆ ಪತ್ರಿಕೆಗಳ ಮೂಲಕ ನಾನೇಕೆ ಸೂಚಿಸಲಿ? ಅವರಿವರಿಂದ ಉಚಿತ ಸಲಹೆ-ಸೂಚನೆಗಳನ್ನು ಪಡೆದು ಸರಕಾರಕ್ಕೆ-ಸಾರ್ವಜನಿಕರಿಗೆ ಹಂಚುವುದು ನಿಮ್ಮಂಥವರಿಗೆ (ಪತ್ರಕರ್ತರಿಗೆ) ಒಂದು ಚಟವಾಗಿಬಿಟ್ಟಿದೆ..." ಎಂದರು ಚುಚ್ಚುವಂತೆ. ಆದರೆ ಆ ಚುಚ್ಚುವಿಕೆ ಮೆಚ್ಚುವಂಥದಾಗಿತ್ತು.

ವಾಡೆಗಾಂವಕರರೊಂದಿಗೆ ನಾನು ಸಂಭಾಷಿಸಲು ಅನುಕೂಲವಾದದ್ದು ಹುಕ್ಕೇರಿಯಲ್ಲಿ ಕೆಲ ವರ್ಷಗಳ ಹಿಂದೆ ಅವರು ಇಲ್ಲಿ ಬಂದಾಗ ಹುಕ್ಕೇರಿಯ ಖ್ಯಾತ ನ್ಯಾಯವಾದಿ ಅಪ್ಪಾಸಾಹೇಬ ನಾಯಿಕರೂ ವಾಡೇಗಾಂವಕರರೂ ಸ್ನೇಹಿತರು; ಮುಂಬೈಯಲ್ಲಿ ಇಬ್ಬರೂ ಸಹಾಧ್ಯಾಯಿಗಳು. ಕಾನೂನು ಅಭ್ಯಾಸವನ್ನು ಒಟ್ಟಿಗೇ ಮಾಡಿದವರು. ಬಹುದಿನಗಳ ನಂತರ ಮಿತ್ರನೊಂದಿಗೆ ಕೆಲ ದಿನ ಕಳೆಯಲು ಬಂದ ಅವರ ಐದು ದಿನಗಳ ವಾಸ್ತವ್ಯದಲ್ಲಿ ಆಗೀಗ ನಾನು ಅವರೊಂದಿಗೆ ಮಾತಾಡಿ ಅವರನ್ನು ಅರಿತುಕೊಂಡೆ.

ಮಹಾರಾಷ್ಟ್ರದ ವಿದರ್ಭನಾಡಿನ ಕಿರೀಟ ನಾಗಪುರ ದಾಮೋದರರ ಹುಟ್ಟೂರು. ಬಾಲ್ಯದಿಂದಲೂ ಜಾಣ ಹುಡುಗ ಎನಿಸಿದ ದಾಮೋದರ ಕುಶಾಗ್ರಮತಿಯಾಗಲೂ ಅವರ ಎಂಟನೆಯ ವಯಸ್ಸೇ ಕಾರಣ. ಆಗ ಅವರಿಗೆ ಟೈಫೈಡ್ ಆಯಿತು-ಅದರಿಂದ ಪಾರಾದರು ದಾಮೋದರ; ಆದರೆ ಕಣ್ಣುಗಳನ್ನು ಕಳೆದುಕೊಂಡರು.

ಬಾಳು ಕುರುಡಾದರೂ ಬಾಲಕನ ಬಯಕೆ ಕುರುಡಾಗಲಿಲ್ಲ. ಬ್ರೇಲ್ ಲಿಪಿಯ ಮೂಲಕ ಓನಾಮವನ್ನಾರಂಭಿಸಿದ ದಾಮೋದರ ಪ್ರತಿಭಾವಂತ ವಿದ್ಯಾರ್ಥಿಯೆನಿಸಿಕೊಳ್ಳುತ್ತಲೇ ಬೆಳೆದ. ಸಂಗೀತದಲ್ಲೂ ಒಲವಿತ್ತು. ತಬಲಾದಲ್ಲಿ ಆಸಕ್ತಿ. ಮೆಟ್ರಿಕ್ಯುಲೇಶನ್ನಿನ ನಂತರ ತಬಲಾವಾದನದಲ್ಲಿ ಹೆಚ್ಚಿನ ಸಾಧನೆಗೈಯಲೆಂದು ಮುಂಬೈಗೆ ಹೋದರು. ಅಮೀರ್ ಹುಸೇನಖಾನರಲ್ಲಿ ತಬಲಾ ಅಭ್ಯಾಸ. ಆದರೆ ಗುರು, "ಕೇವಲ ತಬಲಾ ಕಲಿಯುವುದು ಬೇಡ. ಜೊತೆಗೆ ಕಾಲೇಜು ಶಿಕ್ಷಣವನ್ನೂ ಪೂರೈಸು," ಎಂದರಂತೆ. ಮುಂಬೈ ವಿಶ್ವವಿದ್ಯಾಲಯದಿಂದ ಬಿ.ಎ., ಎಮ್.ಎ.ಗಳನ್ನೂ ಮುಗಿಸಿದ್ದಾಯಿತು. ಜೊತೆಗೆ ಮುಂಬೈ ಆಕಾಶವಾಣಿಯ ಕಾರ್ಯಕ್ರಮಗಳಲ್ಲಿ ದಾಮೋದರರ ತಬಲದ ತಕಧಿನ ನಾದವೂ ಕೇಳಿಬಂತು. ೧೯೬೦ರ ವರೆಗೂ ಆ ಕೇಂದ್ರದ ಕಲಾವಿದರಾಗಿ ಕೆಲಸ ಮಾಡಿದ ದಾಮೋದರ ತನ್ನ ಸೋದರ ಗೋಪಾಲ (ಅವರು ರಾಷ್ಟ್ರಮಟ್ಟದ ತಬಲಾವಾದನ ಪ್ರವೀಣ)ರೊಂದಿಗೆ ಕಾರ್ಯಕ್ರಮ ನೀಡಿದ್ದುಂಟು.

ದಾಮೋದರ ಎಂ.ಎ. ಮುಗಿಸಿದ ಮೇಲೆ 'ಮುಂದೇನು?' ಎಂಬ ಪ್ರಶ್ನೆ ಕಾಡಿತು. "ಲಾ ಏಕೆ ಮುಗಿಸಬಾರದು?" ಎಂದೊಬ್ಬ ಮಿತ್ರರು ಸಲಹೆ ನೀಡಿದರು. ಈಗ ಪ್ರಾರ್ಥನಾ [illegible]

ಮೆಂಟ್ ಲಾ ಕಾಲೇಜಿನಲ್ಲಿಯೇ ಕಾನೂನು ಪದವಿ ಸಂಪಾದಿಸಿದ್ದಾಯಿತು. ಮತ್ತೆ 'ಮುಂದೇನು?'

ಅವರ ಆ ಪ್ರಶ್ನೆ ಮತ್ತೆ ಏಳದಂತೆಯೇ ಮಾಡಿದುದಲ್ಲದೆ ತಮ್ಮ ಬಾಳಿನಪುಟಗಳಲ್ಲಿ ಹೊಸ ಅಧ್ಯಾಯವನ್ನೇ ಬರೆದರು: ಅದು ಇತರರಿಗೂ ಮಾರ್ಗದರ್ಶಿಯಾಗುವಂತೆ ಮಾಡಿದರು. ಭಾರತದ ಆಗಿನ ಪ್ರಧಾನಿ ಪಂ. ನೆಹರೂ ೧೯೬೨ರಲ್ಲಿ ಮುಂಬೈಗೆ ಬಂದಾಗ ಅವರನ್ನು ದಾಮೋದರ ಭೇಟಿಮಾಡಿದರು. ಭೇಟಿಯಾಯಿತು. ಅಷ್ಟೆ. ಅವರೆ ತಮ್ಮ ಬಗ್ಗೆ ಏನನ್ನೂ ಹೇಳಿಕೊಳ್ಳಲಿಲ್ಲ. ಯಾವ ಸಹಾಯವನ್ನೂ ನೆಹರೂರಿಂದ ಅಪೇಕ್ಷಿಸಲಿಲ್ಲ. ಅಂಥನಾದರೂ ಪ್ರತಿಭಾಸಂಪನ್ನರಾದ ದಾಮೋದರರ ಬಗ್ಗೆ ನೆಹರೂ ಇತರರಿಂದ ಮಾಹಿತಿ ಸಂಗ್ರಹಿಸಿದರು. "ಮುಂಬರುವ ದಿನಗಳಲ್ಲಿ ಈತ ದೇಶದ ರತ್ನಪ್ರಾಯ ವ್ಯಕ್ತಿಯಾಗಬಲ್ಲ" ಎಂದರು ನೆಹರೂ. ಅಲ್ಲದೆ ದಾಮೋದರರ ಉನ್ನತ ವ್ಯಾಸಂಗಕ್ಕೆ ಎಲ್ಲ ಅನುಕೂಲಗಳ ಜತೆಗೆ ಐದು ಸಾವಿರ ರೂಪಾಯಿಗಳ ನೆರವನ್ನೂ ನೀಡಿದರು. ಪಂಡಿತಜಿಯ ಆಶ್ರಯ-ಆಶೀರ್ವಾದಗಳಿಂದಾಗಿ ದಾಮೋದರ ಅದೇ ವರ್ಷ ಲಂಡನ್ನಿಗೆ ಹೋದರು.

"ಆ ಮಹಾಪುರುಷ ನನ್ನ ಬಾಳದೋಣಿಗೆ ಹುಟ್ಟು ಹಾಕಿ ಒಂದು ದಡ ತಲಪುವಂತೆ ಮಾಡಿದರು. ಅವರೊಂದಿಗೆ ನಾನು ಭೇಟಿಯಾಗಿರದಿದ್ದರೆ ಇಂದು ನಾಶವಾದ ಗಿಡದ ತೊಪ್ಪಲಾಗಿರುತ್ತಿದ್ದೆನೋ," ಎನ್ನುತ್ತಾರೆ ವಾಡೇಗಾಂವಕರ.

ಲಂಡನ್ನಿನ ಯುನಿವರ್ಸಿಟಿ ಲಾ ಕಾಲೇಜಿನಿಂದ ಪ್ರಥಮ ದರ್ಜೆಯಲ್ಲಿ ಬಾರ್-ಎಟ್-ಲಾ ಪದವಿ ಗಳಿಸಿ ೧೯೬೭ರವರೆಗೆ ಯುರೋಪ್ ರಾಷ್ಟ್ರಗಳನ್ನು ಸಂದರ್ಶಿಸಿದರು. ಹಾಲೆಂಡಿನ 'ಆಕೆಡೆಮಿ ಆಫ್ ಇಂಟರ್‌ನ್ಯಾಶನಲ್ ಲಾ'ದಲ್ಲಿ ಸಂಶೋಧಕರಾಗಿ ಕೆಲಸ ಮಾಡಿ ಅನುಭವ ಪಡೆದರು. ಕಾನೂನು ವಿಷಯಗಳನ್ನು ಕುರಿತು ಉಪನ್ಯಾಸ ನೀಡಿದರಷ್ಟೇ ಅಲ್ಲ. ಭಾರತೀಯ ಸಂಗೀತ-ಕಲೆ ಹಾಗೂ ತುಲನಾವಾದದ ಬಗ್ಗೆಯೂ ಉಪನ್ಯಾಸ ನೀಡಿದರು. ತುಲಸಿ ಸೋಹಿರೋಬಾ ಕಾವ್ಯಕೃತಿ ನೀಡಿ ಯುರೋಪ್ಯರನ್ನು ಮಂತ್ರಮುಗ್ಧರನ್ನಾಗಿಸಿದರು.

ಹಾಲೆಂಡಿನಲ್ಲಿದ್ದಾಗ ಅವರಿಗೊಂದು ಆಘಾತ ಕಾದಿತ್ತು: ನೆಹರೂ ನಿಧನದ ವಾರ್ತೆ. ಅದ "ಇಂದು ನಾನು ನಿಜವಾಗಿ ಕುರುಡನಾದೆ" ಎಂದು ಗಳಗಳ ಅತ್ತುಬಿಟ್ಟರಂತೆ.

ಕಾನೂನು ವಿಷಯದಲ್ಲಿ ಅವಿರತವಾದ-ಆಳವಾದ ಅಧ್ಯಯನ ನಡೆಸಿ 'ಅಂತಾರಾಷ್ಟ್ರೀಯ ಬಾಹ್ಯಾಂತರಿಕ್ಷ ಕಾನೂನು' ಹಾಗೂ 'ಅಂತಾರಾಷ್ಟ್ರೀಯ ಧಾರ್ಮಿಕ ಶಾಸನ' ವಿಷಯಗಳಲ್ಲಿ ವಿಶೇಷ ಪಾಂಡಿತ್ಯ ಪಡೆದುಕೊಂಡು ೧೯೬೭ರಲ್ಲಿ ಭಾರತಕ್ಕೆ ಆಗಮಿಸಿದ ದಾಮೋದರ ದಿಲ್ಲಿಯಲ್ಲಿಳಿದ ಕೂಡಲೇ ನೇರವಾಗಿ ಶಾಂತಿವನದ ನೆಹರೂ ಸಮಾಧಿಗೆ ಹೋಗಿ ತಾಸು ಹೊತ್ತು ಕಂಬನಿಗರೆದುಬಿಟ್ಟರಂತೆ. ಸಮಾಧಿಯ ಮೇಲೆ ಕೈ ಆಡಿಸಿ ನೆಹರೂ ಸ್ಪರ್ಶವನ್ನು-ನೆಹರೂ ಸ್ಫೂರ್ತಿಯನ್ನು ಮತ್ತೆ ಅನುಭವಿಸಿದರಂತೆ.

ದಿಲ್ಲಿಯಲ್ಲೇ ೧೯೭೦ರವರೆಗೆ ಇದ್ದ ದಾಮೋದರ ಅಲ್ಲಿಯ ಖ್ಯಾತ ಕಾನೂನು ಪ್ರಕಟಣೆಗಳ ಸಂಸ್ಥೆಯೊಂದಕ್ಕೆ ಹತ್ತು ಸಂಶೋಧನಾ ಗ್ರಂಥಗಳನ್ನು ಬರೆದುಕೊಟ್ಟರು. 'ಲಾ ಆಫ್ ಔಟರ್ ಸ್ಪೇಸ್' ಎಂಬ ಗ್ರಂಥವಲ್ಲದೆ 'ಇಂಡಿಯನ್ ಜರ್ನಲ್ ಆಫ್ ಇಂಟರ್ ನ್ಯಾಶನಲ್ ಲಾ. ಇಂಡಿಯನ್ ಜರ್ನಲ್ ಆಫ್ ಲಾ ಇವೇ ಮುಂತಾದವುಗಳಲ್ಲಿನ ಲೇಖನಗಳು ಅವರನ್ನು ಕಾನೂನುತಜ್ಞರ ಸಾಲಿಗೆ ಸೇರಿಸಿದುವು. ನಂತರ ಅವರು ಮುಂಬೈಗೆ ಬಂದರು.

ದಾಮೋದರ ಸಂಚಾರಿ ಪ್ರೊಫೆಸರ್. ಪ್ರತಿ ತಿಂಗಳೂ ಬೇರೆ ಬೇರೆಯ ಕಾನೂನು ಕಾಲೇಜುಗಳಿಗೆ. ವಿಶ್ವವಿದ್ಯಾಲಯಗಳಿಗೆ ಉಪನ್ಯಾಸ ನೀಡಲು ಹೋಗುತ್ತಲೇ ಇರುತ್ತಾರೆ. ಅಂತೆಯೇ ಅನೇಕ ಕಾಲೇಜುಗಳು, ವಿಶ್ವವಿದ್ಯಾಲಯಗಳು ಅವರನ್ನು ವಿಶೇಷ ಉಪನ್ಯಾಸಕ್ಕೆ ಆಮಂತ್ರಿಸುತ್ತಿರುತ್ತವೆ.

ಅವರು ೧೯೭೩ರಲ್ಲಿ ಎರಡನೆಯ ಬಾರಿ ವಿದೇಶ ಯಾತ್ರೆ ಕೈಕೊಂಡು ಅಲ್ಲಿಯ ಅನೇಕ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಬರ್ಲಿನ್ ನಗರಕ್ಕೂ ಹೋಗಿದ್ದ ಅವರು ಆ ನಗರವನ್ನು ಸೀಳಿರುವ ಬೃಹತ್ ಅಡ್ಡಗೋಡೆಯನ್ನು ಸ್ಪರ್ಶಿಸಿ, "ಮಾನುಷತ್ವವನ್ನೇ ಇಬ್ಭಾಗಿಸಿದ ಮಹಾಗೋಡೆಯೇ, ನಿನಗೆ ಅನಂತ ಪ್ರಣಾಮಗಳು" ಎಂದುದನ್ನು ಬಹು ವ್ಯಂಗ್ಯವಾಗಿ ಅಂದರು.

ದಾಮೋದರರು ಚತುರ್ಭುಜರಾದದ್ದು ೧೯೭೩ರಲ್ಲಿ. "ಎಲ್ಲರೂ ಕೂಡಿ ಕುರುಡಿಯೊಬ್ಬಳನ್ನು ನನಗೆ

ನಾಯುವಾಗುತ್ತಲೇ ಎಂದುಕೊಂಡಿದ್ದೆ. ಆದರೆ ಹಾಗಾಗಲಿಲ್ಲ. ಬ್ರಹ್ಮಚಾರಿಯಾಗಿಯೇ ಉಳಿಯಬಯಸಿದ್ದ ಅವರನ್ನು ಅವರ ಹುಟ್ಟೂರು ನಾಗಪುರದ ಸುಸಂಸ್ಕೃತ ಕುಟುಂಬದ ಕನ್ಯೆ ಅನಿತಾ ತಾನಾಗಿಯೇ ಮುಂದೆ ಬಂದು ಮದುವೆಯಾಗುವ ಇಚ್ಛೆ ವ್ಯಕ್ತಪಡಿಸಿದಳಂತೆ. ಇಂದು ದಾಮೋದರರಿಗೆ ಅನಿತಾ ಅವರೇ ಕಣ್ಣು–ಕೈ ಎಲ್ಲಾ (ಜಿ.ಪಿ. ಪದವೀಧರೆ ಅನಿತಾ ಕೂಡ ಈ ಸಂದರ್ಶನದ ಅವಧಿಯಲ್ಲಿ ಹುಕ್ಕೇರಿಗೆ ಬಂದಿದ್ದರು.)

ಕಣ್ಣುಗಳ ಬೆಳಕು ಕುಂದಿದಾಗಿನಿಂದಲೂ ದಾಮೋದರ ಸಹಕಾರಿಗಳ ಸಹಾಯವನ್ನವಲಂಬಿಸಿದರು. ತಮಗಾಗಿ ಓದಿ ಹೇಳಿ, ಬರೆದು ಮಾಡಿದ ಸಹಕಾರಿಗಳು, ಮಿತ್ರರನ್ನು ಸದಾ ಕೃತಜ್ಞತೆಯಿಂದ ನೆನೆಯುತ್ತಾರೆ. ವಿಚಿತ್ರವೆಂದರೆ ದಾಮೋದರರಿಗಾಗಿ ಓದಿ ಹೇಳಿ, ಜತೆಗೆ ತಾವೂ ಅದೇ ಪರೀಕ್ಷೆಗೆ ಸಿದ್ಧಪಡಿಸಿಕೊಂಡವರು ಉತ್ತೀರ್ಣರಾಗದೆ ಹೋದದ್ದು. ಆದರೆ ದಾಮೋದರ ಮಾತ್ರ ಸದಾ ಸರ್ವ ಪ್ರಥಮ. ಈಗಲೂ ತಮ್ಮ ಸಂಶೋಧನಾ ಸಹಾಯಕರಾಗಿ ನಾಲ್ವರನ್ನಿಟ್ಟುಕೊಂಡಿದ್ದಾರೆ ದಾಮೋದರ.

ರಾಜ್ಯದ ಭೂನ್ಯಾಯ ಮಂಡಳಿಯತ್ತ ಮಾತು ತಿರುಗಿತು. ಆಗ ಅವರು ನಕ್ಕರು. "It is a silly thing. ನ್ಯಾಯದ ತಿಳುವಳಿಕೆ ಗೊತ್ತಿಲ್ಲದವರು ಅದೇನು ನ್ಯಾಯದಾನ ಮಾಡುತ್ತಾರೆ ಮಣ್ಣು? ಮೊದಲಿನಂತೆ ನ್ಯಾಯಾಲಯಗಳಿಗೇ ಈ ಕಾರ್ಯವನ್ನು ವಹಿಸುವುದು ಒಳ್ಳೆಯದು." ಎಂದರು ನಂತರ.

"ಹಾರ್ಮೋನಿಯಂ ವಾದನದಿಂದ ತುಂಬಾ ಸಮಾಧಾನ ಹೆಚ್ಚಿನ ತೃಪ್ತಿ ಸಿಗುತ್ತದೆ," ಎಂದ ಅವರು ತಮ್ಮ 'ಸೋಲೋ' ಕಾರ್ಯಕ್ರಮದಿಂದ ಹುಕ್ಕೇರಿಯ ಸಂಗೀತ ಪ್ರೇಮಿಗಳ ಮನಸೂರೆಗೊಳ್ಳುವಂತೆ ಮಾಡಿದರು.

ಮಹಾರಾಷ್ಟ್ರ–ಕರ್ನಾಟಕದ ಗಡಿ ಸಮಸ್ಯೆಯ ಬಗ್ಗೆ ಒಬ್ಬರು ಕೇಳಿದಾಗ, "ಬೆಳಗಾಂವಿ ಎಲ್ಲಿದ್ದರೇನು? ಭೌಗೋಲಿಕವಾಗಿ ಅದು ಭಾರತದ ನಕ್ಷೆಯಲ್ಲೇ ಇರುತ್ತದಲ್ಲವೆ? ಒಂದು ವೇಳೆ ಬೆಳಗಾಂವಿಯನ್ನು ಮಹಾರಾಷ್ಟ್ರಕ್ಕೆ ಕೊಟ್ಟರೆ ನಮ್ಮಲ್ಲಿಯ ಬಡತನ ಕಡಿಮೆಯಾಗುತ್ತದೆಯೆ? ಕರ್ನಾಟಕದಲ್ಲಿಯೇ ಇದ್ದರೆ ದೇಶದ ನಿರಕ್ಷರತೆ, ದಾರಿದ್ರ್ಯ ಕೊನೆಗೆ ತಪ್ಪುತ್ತದೆಯೆ? ರಾಜಕಾರಣಿಗಳ ಹೊಟ್ಟೆಕ್ಕೆ ಬಲಿಯಾಗಿ ನಾವು ಯಾಕೆ ಕಚ್ಚಾಡಬೇಕು?" ಎಂದು ಕೇಳಿದರು.

"ನಿಜವಾದ ರಾಷ್ಟ್ರೀಯ ಮನೋಭಾವವುಳ್ಳವರು ಇಂಥ ಕ್ಷುಲ್ಲಕ ಸಂಗತಿಗಳತ್ತ ಗಮನ ಕೊಡಲಾರರು. ಭಾಷಾವಾರು ಪ್ರಾಂತ ರಚನೆಯನ್ನು ಕೈ ಬಿಟ್ಟು ರಾಷ್ಟ್ರವನ್ನು ಐದು ಭಾಗಗಳಾಗಿ ವಿಂಗಡಿಸಿದರೆ ಚೆನ್ನಾಗಿರುತ್ತದೆ. ತನ್ಮೂಲಕ ನಮ್ಮಲ್ಲಿಯ ಸಂಕುಚಿತತೆ ಅಳಿದು ಹೋಗಿ ರಾಷ್ಟ್ರೀಯ ಭಾವನೆ ಬೆಳೆಯಲು ಅನುಕೂಲವಾಗುತ್ತದೆ," ಎಂದು ಸ್ಪಷ್ಟವಾಗಿ ಹೇಳಿದರು.

"ಅಂಧರಿಗಾಗಿ, ಅಂಗವಿಕಲರಿಗಾಗಿ 'ಅಯ್ಯೋ ಪಾಪ' ಎಂಬ ಮರುಕ ಬೇಡ. ಅವರು ಮುಂದೆ ಬರಲು ಅವಕಾಶ ಕೊಡಿ. ಪರಾವಲಂಬನವನ್ನು ಬಿಟ್ಟು ಅವರು ತಮ್ಮ ಕಾಲ ಮೇಲೆ ನಿಲ್ಲಲು ಬಿಡಿ." ಎಂಬುದು ದಾಮೋದರರ ಕಳಕಳಿಯ ನುಡಿ.

ಅವರ ಮಾತು ಕೇಳುತ್ತಿದ್ದಷ್ಟೂ ಕೇಳಬೇಕೆನ್ನುವ ಬಯಕೆ ಬೆಳೆಯುತ್ತಿತ್ತು. ●

ಅರೆತಲೆನೋವಿಗೂ ಲೈಂಗಿಕ ಹವ್ಯಾಸಕ್ಕೂ ಸಂಬಂಧವಿದೆಯೆ?

ಡಾ. ಜಾರ್ಜ್ ವಾಲ್‌ಸನ್ ಎಂಬ ವಿಜ್ಞಾನಿಗಳು ಹೌದೆಂದೇ ಉತ್ತರಿಸುತ್ತಾರೆ. ಕೆಲ ಪ್ರಸಂಗಗಳಲ್ಲಿ ಅರೆತಲೆಶೂಲೆ ಆಸ್ಪತ್ರೆಯಲ್ಲಿನ ಆರೈಕೆ ಅಗತ್ಯವಾಗುವಷ್ಟು ತೀವ್ರವಾಗಿರಬಹುದು. ಒಬ್ಬಾತ ಮದುವೆಯಾದ ಮೂರು ದಿನಗಳಲ್ಲಿ ಅರೆತಲೆಶೂಲೆಯ ಚಿಕಿತ್ಸೆಗಾಗಿ ವಾಲ್‌ಸನ್ನರ ಬಳಿ ಬಂದಾಗ ಅವರು "ಸಂಯಮ ಅಗತ್ಯವಪ್ಪಾ; ಅರೆತಲೆಶೂಲೆಗೆ ಅದೇ ಔಷಧ," ಎಂದು ಹೇಳಿದರಂತೆ!

ನಿಮಗೆ ನಿಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತೆಯೇ?



ಬಿಡಿಸಿದಷ್ಟೂ ಬಿಗಿಯಾಗುವ ಪ್ರಪಂಚ! ನಿಮ್ಮ ಮಗುವಿನ ಭವಿಷ್ಯ ನಿಮ್ಮ ಕೈಯಲ್ಲಿದೆ! ಆತನಿಗೆ ಯೋಗ್ಯವಾದ ಶಿಕ್ಷಣವನ್ನು ಕೊಡುವಲ್ಲಿ ನೀವು ಸತತ ಶ್ರಮವಹಿಸುವಿರಿ.

ಕೆನರಾ ಬ್ಯಾಂಕ್ ನಿಮ್ಮ ಶ್ರಮವನ್ನು ಸುಲಭಗೊಳಿಸುತ್ತದೆ. ಇಂದೇ—ನಿಮ್ಮ ಮಗುವಿನ್ನೂ ಚಿಕ್ಕವನಿರುವಾಗಲೇ, ಆತನ ಅವಶ್ಯಕತೆಗಳು ಕಡಿಮೆ ಇರುವಾಗಲೇ—ಉಳಿತಾಯ ಆರಂಭಿಸಿರಿ. ಆತ ಬೆಳೆಯುತ್ತಿದ್ದಂತೆಯೇ, ಆತನ ಅವಶ್ಯಕತೆಗಳು ಹೆಚ್ಚುತ್ತಿದಂತೆಯೇ ನಿಮ್ಮ ಉಳಿತಾಯವು ಬೆಳೆಯುತ್ತಿರುತ್ತದೆ. ಮುಂದಾಗಿಯೇ ಜವಾಬ್ದಾರಿಯನ್ನರಿತ ನಿಮ್ಮ ಶ್ರಮ ಸಾರ್ಥಕವೆನಿಸುತ್ತದೆ.

ಕೆನರಾ ಬ್ಯಾಂಕಿನಲ್ಲಿ ನಿಮ್ಮ ಅವಶ್ಯಕತೆಗಳಿಗನುಕೂಲವಾಗುವಂತೆ ರೂಪಿಸಿದ ವಿವಿಧ ಠೇವಣಿ ಯೋಜನೆಗಳಿವೆ—

ವಿದ್ಯಾನಿಧಿ ಠೇವಣಿ ಯೋಜನೆ—ನಿಮ್ಮ ಮಕ್ಕಳೊಂದಿಗೆ ಠೇವಣಿಯೂ ಬೆಳೆದು ಮಕ್ಕಳ ಶಿಕ್ಷಣದ ಉಸ್ತುವಾರಿ ವಹಿಸುತ್ತದೆ.

ನಿರಂತರ ಠೇವಣಿ ಯೋಜನೆ—ಪ್ರತಿ ತಿಂಗಳು ನಿಮ್ಮ ಸಣ್ಣ ಉಳಿತಾಯ ಏಳು ವರ್ಷಗಳಲ್ಲಿ ಬೆಳೆದು, ಮುಂದೆ ತಿಂಗಳು ತಿಂಗಳೂ ವರ್ಷಗಟ್ಟಲೆ ನಿಮಗೇ ಸೇರುತ್ತದೆ. ಅಸಲು ಭದ್ರವಾಗಿಯೂ ಉಳಿಯುತ್ತದೆ.

ನಮ್ಮ ಯಾವುದೇ ಶಾಖೆಗೆ ಇಂದೇ ಭೇಟಿ ಕೊಡಿರಿ. **ಕೆನರಾ ಬ್ಯಾಂಕ್** ನಿಮ್ಮ ಹೊಣೆಗಾರಿಕೆಯಲ್ಲಿ ತಾನೂ ಪಾಲುಗೊಳ್ಳುತ್ತದೆ.

ನಮ್ಮ ಇತರ ಠೇವಣಿ ಯೋಜನೆಗಳು — **ಕಾಮಧೇನು, ಸೇವಿಂಗ್ಸ್ ಬ್ಯಾಂಕ್, ರಿಕರಿಂಗ್ ಮತ್ತು ನಿರಖು ಠೇವಣಿ ಯೋಜನೆಗಳು**

ಕೆನರಾ ಬ್ಯಾಂಕ್

(ಒಂದು ರಾಷ್ಟ್ರೀಕೃತ ಬ್ಯಾಂಕ್)

ರಾಷ್ಟ್ರದಾದ್ಯಂತ 1,300 ಕ್ಕೂ ಹೆಚ್ಚು ಶಾಖೆಗಳು

ಬಯೋಫೀಡ್‌ಬ್ಯಾಕ್ ಎಂದರೇನು?

ನರಸಿಂಹಸ್ವಾಮಿ, ಕಳಸ

ಇಷ್ಟರಲ್ಲೇ 'ಬಯೋಫೀಡ್‌ಬ್ಯಾಕ್' ಎಂಬ ಹೊಸ ಬಗೆಯ ಚಿಕಿತ್ಸೆ ಆಧುನಿಕ ವೈದ್ಯಶಾಸ್ತ್ರದ ಕೊಡುಗೆಯಾಗಿ ಬರಲಿದೆ. ಗುಣವಾಗದ ಕಾಯಿಲೆಗಳು ಎಂದು ಈ ವರೆಗೆ ಪರಿಗಣಿಸಲಾದ ವ್ಯಾಧಿಗಳನ್ನು ಪರಿಹರಿಸುವ ಆಸೆಯನ್ನು ಅರಳಿಸಿದೆ ಈ ಚಿಕಿತ್ಸಾತಂತ್ರ.

ಬಯೋಫೀಡ್‌ಬ್ಯಾಕ್ ಚಿಕಿತ್ಸೆಯಲ್ಲಿ ಒಂದು ಸಾಧನವನ್ನು ಬಳಸಿ, ಮನುಷ್ಯನ ಅರಿವಿಗೆ ಬಾರದ, ಅಗೋಚರವಾದ ದೇಹದೊಳಗಿನ ಕಾರ್ಯವಿಧಾನಗಳನ್ನು ಮನುಷ್ಯನ ಅರಿವಿಗೆ ತರಲಾಗುತ್ತದೆ. ಈ ಕಾರ್ಯಕ್ಕೆ ಹೆಚ್ಚಾಗಿ ಇಲೆಕ್ಟ್ರಾನಿಕ್ ಸಾಧನವನ್ನೇ ಉಪಯೋಗಿಸುವುದು. ಬೆಳಕಿನ ಅಥವಾ ಧ್ವನಿ ತರಂಗಗಳ ಮೂಲಕ ಸಾಮಾನ್ಯವಾಗಿ ಅಗೋಚರವಾಗಿ, ಬಾಹ್ಯ ಪ್ರಜ್ಞೆಗೆ ಅರಿವಿಲ್ಲದೆ ನಡೆಯುವ ಕ್ರಿಯೆಗಳನ್ನು ಅರಿವಾಗುವ ರೀತಿಯಲ್ಲಿ ಮಾರ್ಪಡಿಸಿಕೊಂಡು ಕಳುಹಿಸಲಾಗುತ್ತದೆ. ಈ ರೀತಿಯ ಸಂಕೇತಗಳು ಅಂಗಗಳನ್ನು ಸರಿಯಾಗಿ ಪ್ರವರ್ತಿಸಲು ಪ್ರಚೋದಿಸುತ್ತವೆ. ತಾಳ ತಪ್ಪಿದ ಅಂಗಾಂಗಗಳನ್ನು ಔಷಧಿಯಿಲ್ಲದೆ ಗುಣಪಡಿಸಲಾಗುವ ಈ ವಿನೂತನ ತಂತ್ರಕ್ಕೆ 'ಬಯೋಫೀಡ್ ಬ್ಯಾಕ್' ಎನ್ನುತ್ತಾರೆ. ಇಲ್ಲಿ ಚಿಕಿತ್ಸೆ ಪಡೆಯುವ ವ್ಯಕ್ತಿಯೇ ತನ್ನ ಲೋಪದೋಷಗಳನ್ನು ತಿದ್ದಿಕೊಳ್ಳುತ್ತಾನೆ. ಅಂದರೆ ತಪ್ಪಾಗಿ ಅಥವಾ ಅತಿರೇಕವಾಗಿ ವರ್ತಿಸುವ ಶರೀರದ ವಿವಿಧ ಭಾಗಗಳು ತಮ್ಮನ್ನು ತಾವೇ ರಿಪೇರಿ ಮಾಡಿಕೊಳ್ಳಲು ಇದು ಸಾಧ್ಯ. ಉದಾಹರಣೆಗೆ ಎಡೆ ಬಿಡದೆ ಕೆಲವು ಬಾರಿ ಕಾಡುವ ಅರೆತಲೆ ನೋವನ್ನೇ ತೆಗೆದುಕೊಳ್ಳಿ. ಹಣೆಯ ಮೇಲಿನ ಮಾಂಸ ತತ್ಸಂಬಂಧಿತ ಮಾಂಸಖಂಡಗಳು ಸಂಕುಚಿತಗೊಂಡು ಬಿಗಿಯಾಗಿ ಆ ಪ್ರದೇಶದಲ್ಲಿ ಒತ್ತಡ ಹೆಚ್ಚುವುದರಿಂದ ಈ ಬಗೆಯ ತಲೆನೋವು ಬರುತ್ತದೆ. ಆಗ ಇಲೆಕ್ಟ್ರೋಮಯೋಗ್ರಾಫಿಕ್ ಫೀಡ್‌ಬ್ಯಾಕ್ ಎಂಬ ಸಾಧನವನ್ನು ಬಳಸಲಾಗುತ್ತದೆ. ಇದರ ಸೂಕ್ಷ್ಮ ಗ್ರಾಹಿಗಳು ಹಣೆಯ ಮಾಂಸಖಂಡಗಳು ಉದ್ರಿಕ್ತಗೊಳ್ಳುವಾಗ ಉತ್ಪತ್ತಿಯಾಗುವ ವಿದ್ಯುತ್ ಅಲೆಗಳ ಏರುಪೇರನ್ನು ಹಿಡಿಯುವು. ಕ್ರಮವಾಗಿ ಪರಿವರ್ತಿಸುವ ಯಂತ್ರಕ್ಕೆ ಹಾಯಿಸುತ್ತವೆ. ಆಗ ಉದ್ರಿಕ್ತಗೊಂಡ ಮಾಂಸಖಂಡಗಳು ಧ್ವನಿಯ ಸಂಕೇತಗಳನ್ನು ಕೊಡುತ್ತವೆ. ಆ ವ್ಯಕ್ತಿ ವಿಶ್ರಾಂತಿಗೊಳಗಾದೊಡನೆ ಮಾಂಸಖಂಡಗಳು ಸಹಜ ಸ್ಥಿತಿಗೆ ಮರಳುತ್ತವೆ. ಮಾಂಸಖಂಡಗಳು ಒಗ್ಗಿದಾಗ ಧ್ವನಿ ಕುಗ್ಗುತ್ತದೆ. ಇದರಿಂದಾಗಿ ಆ ವ್ಯಕ್ತಿ ವಿಶ್ರಮಿಸುತ್ತಿದ್ದಾನೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಬಹುದು. ಅಲ್ಲದೆ ಆ ವ್ಯಕ್ತಿ ವಾಂಛಿತವಾದ ರೀತಿಯಲ್ಲಿ ಪ್ರವರ್ತಿ

ಸುತ್ತಿದ್ದಾನೋ ಅಲ್ಲವೋ ಎನ್ನುವುದನ್ನು ತಿಳಿಯಲೂ ನೆರವು ನೀಡುತ್ತದೆ. ಈ ಹಿಂದೆ ಪ್ರಚಲಿತವಾಗಿದ್ದ ವಿರಾಮ ಚಿಕಿತ್ಸೆಗಳಲ್ಲಿ ಈ ಬಗೆಯ ಮಾರ್ಗದರ್ಶನವಿಲ್ಲದಿದ್ದದ್ದೇ ಅವುಗಳು ವಿಫಲವಾಗಲು ಕಾರಣವಾಯಿತು. ಈ ರೀತಿಯ ಪೂರ್ವ ನಿದೇಶನ ಚಿಕಿತ್ಸೆಯ ಯಶಸ್ಸನ್ನು ಖಚಿತಪಡಿಸುತ್ತವೆ.

ಮಾಂಸಖಂಡಗಳ ಒತ್ತಡದ ಫೀಡ್‌ಬ್ಯಾಕ್, ದೇಹದ ಉಷ್ಣಾಂಶದ ಫೀಡ್‌ಬ್ಯಾಕ್, ಉಸಿರಾಟದ ವೇಗ ಹಾಗೂ ತಾಳಗತಿಯ ಫೀಡ್‌ಬ್ಯಾಕ್ ನಾಡಿಯ ಫೀಡ್‌ಬ್ಯಾಕ್, ಇತ್ಯಾದಿಯಾಗಿ ಬಯೋಫೀಡ್‌ಬ್ಯಾಕ್ ಚಿಕಿತ್ಸೆಯಲ್ಲಿ ಹಲವಾರು ವಿಧಾನಗಳಿವೆ. ಈಗಾಗಲೇ ಔಷಧಿಗಳಿಗೆ ಬಗ್ಗದ, ಹಲವಾರು ದೀರ್ಘಕಾಲಿಕ ಕಾಯಿಲೆಗಳಲ್ಲಿ ಈ ಚಿಕಿತ್ಸೆ ಉಪಯುಕ್ತವೆನ್ನಿಸಿದೆ. ಅವುಗಳಲ್ಲಿ ಅರೆತಲೆಶೂಲೆ, ರಕ್ತದ ಏರೊತ್ತಡ, ನಿದ್ರಾಹೀನತೆ, ಅಸ್ತಮಾ, ಜಠರ ಹಾಗೂ ಕರುಳಿನ ಹುಣ್ಣು ಮುಖ್ಯವಾದವು. ಬಯೋಫೀಡ್‌ಬ್ಯಾಕ್ ವಿಧಾನದಿಂದ ಹಲವಾರು ಕಾಯಿಲೆಗಳನ್ನು ಗುಣಪಡಿಸಬಹುದು. ಕೆಲವೊಮ್ಮೆ ರೋಗಿಗಳು ತಮ್ಮ ಕಾಯಿಲೆಗೂ ರೋಗಲಕ್ಷಣಗಳಿಗೂ ಸಂಬಂಧವಿಲ್ಲದ ಶಂಕೆಯಲ್ಲಿ ತೊಡಗುವುದೂ ಅಪರೂಪವೇನಲ್ಲ. ಈ ಸಂದರ್ಭದಲ್ಲಿ ರೋಗವನ್ನು ಅಥವಾ ಕಾಯಿಲೆಯನ್ನು ನಿಖರವಾಗಿ ಪತ್ತೆಹಚ್ಚಲು ಇದು ಸಹಾಯ ಮಾಡುತ್ತದೆ. ಮಾಂಸಖಂಡಗಳು ಅಥವಾ ಇತರ ಅಂಗಾಂಗಗಳ ತಪ್ಪಾದ ಕಾರ್ಯವಿಧಾನವೇ ಹಲವಾರು ಕಾಯಿಲೆಗಳಿಗೆ ಕಾರಣ. ರೋಗದ ಬಾಹ್ಯ ಲಕ್ಷಣಗಳಿಗೆ ನೀಡುವ ಔಷಧಗಳಿಂದ ಉಂಟಾಗುವ ಉಪಶಮನ ತಾತ್ಕಾಲಿಕ. ನಿರಂತರವಾಗಿ ಔಷಧಗಳನ್ನು ಸೇವಿಸಿದರೆ ಕೆಡುಕಾದ ಉಪಪರಿಣಾಮಗಳಾಗುವುದೂ ಉಂಟು. ಉದಾಹರಣೆಗೆ ಮೈಗ್ರೇನ್ ಸಂಬಂಧಿತ ತಲೆನೋವಿಗೆ ಬಳಸುವ ಆಸ್ಪಿರಿನ್. ಇದು ಹೊಟ್ಟೆಯ ವ್ರಣವನ್ನು ಕೆರಳಿಸಬಲ್ಲದು. ಬದಲು ಈ ಬಗೆಯ ಕಾಯಿಲೆಗಳಲ್ಲಿ ಸಂಬಂಧಿತ ಮಾಂಸಖಂಡಗಳ ಕಾರ್ಯ ವೈಖರಿಯನ್ನೇ ತಿದ್ದುವುದರ ಮೂಲಕ ಕಾಯಿಲೆಯ ಮೂಲಕ್ಕೇ ಚಿಕಿತ್ಸೆ ನೀಡಿದಂತಾಗುತ್ತದೆ. ಜೊತೆಗೆ ಇದು ನಿರಪಾಯಕರವೂ ಹೌದು.

ಅಸ್ತಮಕ್ಕೆ ಅಲೋಪಥಿ ಔಷಧಗಳು ಉಪಶಮನಕಾರಿಯೇ ಹೊರತು ಅವರಿಂದ ಪೂರ್ಣವಾಗಿ ಗುಣವಾಗದು. ಅಂದರೆ ಅಸ್ತಮ ಉಲ್ಬಣಿಸಿದಾಗ ತಲೆದೋರುವ ಉಸಿರಾಟದ ಸಮಸ್ಯೆ ಹಾಗೂ ನಂತರದ ಪರಿಣಾಮಗಳನ್ನು ಉಪಶಮನಗೊಳಿಸಲು ಸಾಧ್ಯವಾಗಿದೆಯೇ ಹೊರತು ಅಸ್ತಮಾವನ್ನು ಸಂಪೂರ್ಣವಾಗಿ ಗುಣಪಡಿಸಲು ಯಾವ ಔಷಧಗಳೂ ಇಲ್ಲಿಯವರೆಗೆ ಶಕ್ತವಾಗಿಲ್ಲ. ಅಸ್ತಮ ಅಲರ್ಜಿಯಿಂದ ಬರಬಹುದು. ಅಥವಾ ಅದರ ಮೂಲ ಮಾನಸಿಕವಾಗಿರಲೂ ಬಹುದು. ಇದೂ ಅಲ್ಲದೆ ವಂಶಪಾರಂಪರಿಕವಾಗಿ ಅದು ಬರುವ ಸಂಭವವೂ ಇಲ್ಲದಿಲ್ಲ. ಮಾನಸಿಕ ತೊಂದರೆಗಳಿಂದ ಅಸ್ತಮ ತಲೆದೋರಿದಾಗ ಶ್ವಾಸನಾಳಗಳು ಸಂಕುಚಿತಗೊಳ್ಳುತ್ತವೆ. ಆಗ ಶ್ವಾಸನಾಳಗಳಿಗೆ ಸಂಬಂಧಿಸಿದ ಮಾಂಸಖಂಡಗಳೂ ಸಂಕುಚಿತಗೊಳ್ಳುತ್ತವೆ. ಇದನ್ನು ಈ ಮೊದಲು ಹೇಳಿದ ಇಲೆಕ್ಟ್ರೋಮಯೋಗ್ರಾಫಿಕ್ ಯಂತ್ರ




"ಏನ್ರಿ ಅದು? ಗೊಣಗುಟ್ಟುತ್ತಿದ್ದೀರಾ? ಅರ್ಧಗಂಟೆಯಿಂದ ಹೇಳ್ತಾನೇ ಇದ್ದೀನಿ. ಇನ್ನು ೫ ನಿಮಿಷದಲ್ಲಿ ತಿಂಡಿ ಆಗುತ್ತೇಂತ...!"

ವನ್ನು ಉಪಯೋಗಿಸಿ ನೋಡಲಾಯಿತು. ಉಚ್ಛ್ವಾಸದಿಂದ ಬಳಲುವ ೩೩ ಮಕ್ಕಳ ಮೇಲೆ ಈ ಯಂತ್ರವನ್ನು ಉಪಯೋಗಿಸಿದಾಗ ಭರವಸೆ ಮೂಡಿಸುವ ಫಲಿತಾಂಶ ಕಂಡು ಬಂದಿತು.

ಕೆಲವಾರು ಹಳೆಯ ರೋಗಗಳ ಚಿಕಿತ್ಸೆಯಲ್ಲೂ ಈ ತಂತ್ರ ಉಪಯುಕ್ತವೆನ್ನಿಸಿದೆ. ಹೆಂಗಸರ ಮುಟ್ಟಿನ ತೊಂದರೆಗಳನ್ನು ಪರಿಹರಿಸುವಲ್ಲಿ ಇದರ ಉಪಯುಕ್ತತೆಯನ್ನು ೧೯೭೩ರಷ್ಟು ಹಿಂದೆಯೇ ಅರ್ನೆಕ್ ಮತ್ತು ಕಿಪರ್ ಎಂಬ ತಜ್ಞರು ತೋರಿಸಿದ್ದಾರೆ. ಇದರ ಜೊತೆಗೆ ಸ್ನಾಯುತಂತುಗಳಿಗೆ ಸಂಬಂಧಿಸಿದ ಕಾಯಿಲೆಗಳು ಗುಣವಾಗುವುದಕ್ಕೂ ಮನೋರೋಗಿಗಳ ಚಿಕಿ–ತ್ಸೆಗೂ ಬಯೋಫೀಡ್‌ಬ್ಯಾಕ್ ಉಪಯುಕ್ತವೆನ್ನಿಸಿದೆ. ಒಟ್ಟಿನಲ್ಲಿ ಇದು ನರರೋಗ ಚಿಕಿತ್ಸೆಗಳಲ್ಲಿ ಅನತಿಕಾಲದಲ್ಲಿ ತನ್ನದೇ ಆದ ವೈಶಿಷ್ಟ್ಯಪೂರ್ಣ ಸ್ಥಾನಪಡೆಯಲಿದೆ. ನಾವು ರೇಡಿಯೋದಿಂದ ಟಿ.ವಿ.ಗೆ. ಹಾರುತ್ತಿದ್ದಂತೆ ಹೆಚ್ಚು ಹಲವು ಪಟ್ಟು ಹೆಚ್ಚಿದಂತೆ ತಾಂತ್ರಿಕ ಕ್ಲಿಷ್ಟತೆ, ಪರಿಪೂರ್ಣತೆ ಹೆಚ್ಚಿದಷ್ಟೂ ಚಿಕಿತ್ಸೆ ದುಬಾರಿ ಎನ್ನಿಸುವುದು ಸಹಜ. ಅಲ್ಲದೆ ಕೃತಕ ಮೂತ್ರಪಿಂಡಗಳ ಸೌಲಭ್ಯವಾಗಲಿ ತೆರೆದ ಹೃದಯದ ಶಸ್ತ್ರಚಿಕಿತ್ಸೆಯಾಗಲಿ ಅಥವಾ ಇ. ಸಿ. ಜಿ. ಯಂತಹ ಯಂತ್ರಗಳ ಸೌಲಭ್ಯವಾಗಲಿ ಸಾಮಾನ್ಯರಿಗೆ ಎಟುಕುವುದು ಕಷ್ಟ. ಇದೀಗ ಭರವಸೆಯ ದೀಪ ಹಚ್ಚಿರುವ ಬಯೋಫೀಡ್‌ಬ್ಯಾಕ್ ಚಿಕಿತ್ಸೆ ಇದಕ್ಕೊಂದು ಅಪವಾದವಾಗಬೇಕು. ಈ ಚಿಕಿತ್ಸೆ ಶ್ರೀಮಂತರಿಗಷ್ಟೆ ಎಟುಕುವಂಥಾದ್ದಾದರೆ ಈ ವೈದ್ಯಕೀಯ ಸಾಧನೆ ಅಪೂರ್ಣವೆಂದೇ ಹೇಳಬೇಕಾಗುತ್ತದೆ. ಬಯೋಫೀಡ್‌ಬ್ಯಾಕ್ ಸಂಶೋಧನೆಯಲ್ಲಿ ನಿರತರಾದ ವಿಜ್ಞಾನಿಗಳು ತಾಂತ್ರಿಕ ಪರಿಪೂರ್ಣತೆಯತ್ತ ಗಮನ ಹರಿಸುವುದರ ಜೊತೆಗೆ ಅದರ ನಿರ್ವಹಣಾ ವೆಚ್ಚವನ್ನು ತಗ್ಗಿಸುವ ಬಗೆಗೂ ಯೋಚಿಸಿದರೆ ಇದು ಅಸಂಭವವೇನಲ್ಲ. ●

"ಹಾಸಿಗೆ ಇದ್ದಷ್ಟು ಕಾಲು ಚಾಚು" ಎಂಬುದು ಸಾಧಾರಣವಾಗಿ ಎಲ್ಲಲೂ ಕೇಳಿರಬಹುದಾದ ನಾಣ್ನುಡಿ. ಬಹುಶಃ ದುಂದುಗಾರರಿಗೆ ಮಿತವ್ಯಯ ಬೋಧಿಸಲು ಇದನ್ನು ಬಳಸಿರಬೇಕು. ತಮ್ಮ ಆದಾಯವನ್ನು ಮೀರಿ ಖರ್ಚು ಮಾಡುವವರಿಗೆ ಸಾಮರ್ಥ್ಯಕ್ಕೆ ಮೀರಿದ್ದು ಎಂದು ಕಾಣುವುದನ್ನು ಬಯಸದವರಿಗೆ ವಿವೇಕ ಹೇಳಲು ಇದೊಂದು ಗಾದೆ. ನಿಧಾನವಾಗಿ ಯೋಚಿಸಿದರೆ ಇದು ಎಲ್ಲ ಸಂದರ್ಭಗಳಲ್ಲಿಯೂ ಅನ್ವಯವಾಗುವುದಲ್ಲವೋ ಏನೋ ಅನಿಸುತ್ತೆ. ಹಾಸಿಗೆ ಇದ್ದಷ್ಟೇ ಕಾಲು ಚಾಚಿ ಮಲಗಬೇಕೆಂದರೆ, ಕಾಲು ಮುದುಡಿಕೊಳ್ಳಲೇಬೇಕಲ್ಲ? ಆಗ ಮಂಡಿ ನೋಯುವುದಿಲ್ಲವೆ? ಇದನ್ನು ತಪ್ಪಿಸಬೇಕೆಂದರೆ ನಾವೇ ಚಾಚಿದರೆ ಕಾಲು ನೆಲಕ್ಕೇ ಸೋಕುತ್ತೆ. ಆಗ ಥಂಡಿ ಆಗುತ್ತೆ. ಥಂಡಿಯೂ ಆಗದೆ, ಮಂಡಿಯೂ ನೋಯಬಾರದೆಂದರೆ ಏನು ಮಾಡಬೇಕು? ಹಾಸಿಗೆಯನ್ನೇ ಉದ್ದ ಮಾಡಿಕೊಳ್ಳಬೇಕು. ಎಂದರೆ ಇದ್ದಷ್ಟೆ ಸಾಕು, ಇದರಲ್ಲಿಯೇ ತೃಪ್ತರಾಗೋಣ, ಹೇಗೋ ಹೊಂದಿಸಿಕೊಂಡು ಹೋಗೋಣ ಎನ್ನುವ ಆಲಸೀ ವೇದಾಂತಕಿಂತ ಬೇಕಾದ್ದನ್ನು ಪಡೆಯೋಣ; ಅದಕ್ಕಾಗಿ ನ್ಯಾಯವಾದ ರೀತಿಯಲ್ಲಿ ಶ್ರಮಪಡೋಣವೆಂಬ ಮನೋಭಾವ ಬೆಳೆಸಿಕೊಳ್ಳಬೇಕು. ಇದು ಜೀವನಕ್ಕೆ ಹೊಸ ಗುರಿ, ಆ ಗುರಿಮುಟ್ಟುವ ಹೊಸ ದಾರಿಯನ್ನು ತೋರಿಸುತ್ತದೆ. ನಮ್ಮ ಸಾಮರ್ಥ್ಯ, ಸಮಯಗಳನ್ನು ಸಂಪೂರ್ಣವಾಗಿ ಸದುಪಯೋಗ ಮಾಡಿಕೊಳ್ಳುವ ಅವಕಾಶ ಒದಗಿಸುತ್ತಿದೆ. ಈ ಹೊಸಜೀವನ ದೃಷ್ಟಿಕೋನದಿಂದ ಅಭಾವವೈರಾಗ್ಯದ ಬದಲಾಗಿ ಹೊಸಹುರುಪು, ಹುಮ್ಮಸ್ಸು ಹುಟ್ಟುತ್ತದೆ ಇದರಿಂದ ಕಾಲಿಗೆ ಬೇಕಾದಷ್ಟು ಉದ್ದದ ಹಾಸಿಗೆಯ ಮೇಲೆ ಆರಾಮಾಗಿ, ಹಾಯಾಗಿ ಮಲಗಿದ ಮಾನಸಿಕ ತೃಪ್ತಿಯೂ ಸಿಗುತ್ತೆ; ಅಲ್ಲವೇ? —ಬಿ. ಜಿ. ಕುಸುಮಾ



ಕರ್ನಾಟಕ
ರಾಜ್ಯ ಲಾಟರಿ
ಬಂಪರ್
ಬಹುಮಾನ
ರೂ. 20 ಲಕ್ಷಗಳು
ಹೊಸ ವರ್ಷದ
ಬಂಪರ್
ಡ್ರಾ
10-1-82
5 ಮೊದಲನೆಯ ಬಹುಮಾನಗಳು
ರೂ.1,00,000
ರೂ. 38,90,000 ಮೊತ್ತದ
1,96,471 ಸಾಗದು ಬಹುಮಾನಗಳು
ಪ್ರತಿ ಟಿಕೆಟ್ಟಿಗೆ ರೂ. 3
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿ.

KSL—212-KA

ಫೈಟರ್ ವಿಮಾನ ಕದಿಯಲು ನಡೆದ ಒಂದು ಫಿತೂರಿ

ಈಗ ಬಳಕೆಯಲ್ಲಿರುವ ಯುದ್ಧ ವಿಮಾನಗಳಲ್ಲಿ ಫ್ರೆಂಚ್ ನಿರ್ಮಿತ 'ಮಿರಾಜ್–೩' ಬಹುಶಕ್ತಿಶಾಲಿಯಾದುದು. ತಮ್ಮ 'ಮಿಗ್' ಯುದ್ಧ ವಿಮಾನಗಳೊಂದಿಗೆ ತುಲನಾತ್ಮಕ ಪರೀಕ್ಷೆ ನಡೆಸಲು ರಶಿಯನ್ ಸರಕಾರಕ್ಕೆ ಒಂದು 'ಮಿರಾಜ್–೩' ಬೇಕಾಗಿತ್ತು. ಅದನ್ನು ಪಡೆಯಲು ರಶಿಯನ್ನರು ನಡೆಸಿದ ಯತ್ನವೊಂದು ವಿಫಲವಾದುದರ ವಿವರ ಇಲ್ಲಿದೆ.

ಬೈರೂತ್ ನಗರದ ತನ್ನ ಭವ್ಯ ಫ್ಲ್ಯಾಟಿನಲ್ಲಿ ಕುಳಿತಿದ್ದ ಹಸನ್ ಬದಾವಿ ಆಗಂತುಕನನ್ನು ಕುರಿತು, "ಅಪಾರ ಹಣ ಸಂಪಾದಿಸಲು ನಿಮಗೆ ಅಪೇಕ್ಷೆ ಇದೆಯೆ?" ನೇರವಾಗಿ ಎಂದು ಪ್ರಶ್ನಿಸಿದ.

ಇದಕ್ಕೆ ಪ್ರತಿಯಾಗಿ ಲೆಬನಾನಿನ ಫೈಟರ್ ವೈಮಾನಿಕ–ಕಪ್ಪುಮೈಬಣ್ಣದ ಸುಂದರ ಯುವಕ–



ಲೆಫ್ಟಿನೆಂಟ್ ಮೊಹ್ಮದ್ ಮತ್ತಾರ್ "ಯಾರಿಗೆ, ಹಣ ಸಂಪಾದಿಸಲು ಅಪೇಕ್ಷೆ ಇರುವುದಿಲ್ಲ? ಆದರೆ ಹೇಗೆ ಎಂಬುದೇ ಸಮಸ್ಯೆ," ಎಂದ.

ಆಕರ್ಷಕ ವ್ಯಕ್ತಿತ್ವದ ಬದಾವಿ ಒಂದು ಕಾಲದಲ್ಲಿ ಲೆಬನಾನಿನ ವೈಮಾನಿಕ ಪಡೆಯಲ್ಲಿ ಮತ್ತಾರನಿಗೆ ಶಿಕ್ಷಕನಾಗಿದ್ದವನು. ಕಳ್ಳಸಾಗಾಟದಂತಹ ದುರ್ವ್ಯವಹಾರಗಳಿಂದ ಸಾಕಷ್ಟು ಶ್ರೀಮಂತನೂ ಆಗಿದ್ದ. ಹಾಗೆ ನೋಡಿದರೆ ಆತ ಹೆಸರಿಗೆ ಮಾತ್ರ ಮಧ್ಯಪ್ರಾಚ್ಯದ ವೈಮಾನಿಕ ಸಾರಿಗೆಯಲ್ಲಿ ಪೈಲಟ್. ತೋರಿಕೆಗಾಗಿ ಆತ ಮಾಡುತ್ತಿದ್ದ ಕೆಲಸವೇ ಬೇರೆ; ನಿಜಜೀವನದಲ್ಲಿ ಎಸಗುತ್ತಿದ್ದ ಕಾರ್ಯಗಳೇ ಬೇರೆ. ನೀಲವರ್ಣದ ಭೂಮಧ್ಯ ಸಮುದ್ರಕ್ಕೆದುರಾಗಿ ಅವನಿಗೆ ತನ್ನದೇ ಆದ ಭವ್ಯ ಫ್ಲ್ಯಾಟ್ ಇತ್ತು. ಒಮ್ಮೆ ವಿಮಾನವನ್ನು ನಡೆಸಿ ಹಿಂದಿರುಗಿದನೆಂದರೆ

ಮೂಲ : ಜೀನ್ ಬ್ಯಾರನ್

ಕನ್ನಡಕ್ಕೆ: 'ನಾಚಾರ್'

ಬರುವಾಗ ತನ್ನೊಂದಿಗೆ ಸಾಕಷ್ಟು ಹಣವನ್ನು ತರುತ್ತಿದ್ದ.

ಬದಾವಿ ಮುಂದುವರಿಸಿದ, "ನೀನು ಸರಬರಾಜು ಮಾಡಬಹುದಾದ ಒಂದು 'ವಸ್ತು'ವನ್ನು ಕೊಳ್ಳುವಂತಹ ಸ್ನೇಹಿತರು ನನಗಿದ್ದಾರೆ. ಅವರು ಅದಕ್ಕಾಗಿ ನಿನಗೆ ಸುಮಾರು ಎರಡೂ ಕಾಲು ಕೋಟಿ ರೂಪಾಯಿಗಳನ್ನು ಕೊಡುತ್ತಾರೆ."

ಹೀಗೆ ಪ್ರಾರಂಭವಾಯಿತು, ೧೯೬೯ರ ಆಗಸ್ಟ್ ತಿಂಗಳ ಕೊನೆಯ ಭಾಗದ ಒಂದು ರಾತ್ರಿ. ಪ್ರಪಂಚದ ಅತ್ಯಂತ ಶಕ್ತಿಶಾಲಿಯಾದ ಯುದ್ಧ ವಿಮಾನ ಫ್ರೆಂಚ್ ನಿರ್ಮಿತ 'ಮಿರಾಜ್-೩'ನ್ನು ಪಡೆಯುವ ರಶಿಯದ ದೊಡ್ಡ ಛಿತೂರಿ. ಈ ಛಿತೂರಿ ಹೊರಬಿದ್ದಾಗ ಅದನ್ನು ಅಲ್ಲಗಳೆಯಲು ರಶಿಯ ಎಷ್ಟೋ ಪ್ರಚಾರ ನಡೆಸಿದರೂ ಮಧ್ಯಪ್ರಾಚ್ಯದ ವ್ಯವಹಾರವನ್ನು ಗಮನಿಸುತ್ತಿದ್ದ ತಜ್ಞರು ನಡೆದುದನ್ನೆಲ್ಲ ಸರಿಯಾಗಿ ಹೊಂದಿಸಿ ಸತ್ಯ ಸಂಗತಿಗಳನ್ನು ವಿವರವಾಗಿ ಹೊರಜಗತ್ತಿಗೆ ಪ್ರಕಟಪಡಿಸಿದರು.

ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಬೆಲ್ಜಿಯಮ್, ಫ್ರಾನ್ಸ್, ಬ್ರೆಜಿಲ್, ಸ್ವಿಟ್ಸರ್‌ಲೆಂಡ್, ಸ್ಪೇನ್, ಲೆಬನಾನ್ ಮತ್ತು ಇಸ್ರೇಲುಗಳೂ ಸೇರಿದಂತೆ ಪ್ರಪಂಚದ ಅನೇಕ ರಾಷ್ಟ್ರಗಳು ಮಿರಾಜ್ ಯುದ್ಧ ವಿಮಾನಗಳನ್ನು ಬಳಸುತ್ತಿವೆ. ಸುಮಾರು ಇನ್ನೂರೈವತ್ತು ಮಿರಾಜ್‌ಗಳು ಪಶ್ಚಿಮ ಯುರೋಪಿನ ಆಕಾಶವನ್ನು ಕಾಯುತ್ತಿವೆ. ಅರಬ್-ಇಸ್ರೇಲಗಳ ನಡುವೆ ನಡೆದ ವೈಮಾನಿಕ ಕಾಳಗದಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳೊಂದಿಗೆ ಸಜ್ಜುಗೊಂಡ ಮಿರಾಜ್ ವಿಮಾನಗಳು ರಶಿಯದ ಮಿಗ್ ವಿಮಾನಗಳಿಗೆ ಸರಿಸಾಟಿಯಾಗಿದ್ದುದಲ್ಲದೆ ಹಲವಾರು ಅಂಶಗಳಲ್ಲಿ ಅವು ಮಿಗ್ ವಿಮಾನಗಳಿಗಿಂತಲೂ ಸಮರ್ಥವೆಂದು ತೋರಿಸಿಕೊಟ್ಟವು.

ಮಿರಾಜ್‌ಗಳ ವಿರುದ್ಧ ಹೋರಾಟವನ್ನು ಕೆಲವು ವಿಶಿಷ್ಟ ಪರಿಸ್ಥಿತಿಗಳಲ್ಲಿ ಅಭ್ಯಸಿಸಲು ರಶಿಯಕ್ಕೆ ಇಂತಹ ಒಂದು ವಿಮಾನ ಬೇಕಾಗಿತ್ತು. ಅದನ್ನು ಕಳ್ಳತನದಿಂದಲಾದರೂ ಪಡೆಯಲು ತನ್ನ ಗೂಢಚರ್ಯ ವ್ಯವಸ್ಥೆಯ ಮೂಲಕ ಅಧ್ಯಯನ ನಡೆಸಿದ ರಶಿಯ ಲೆಬನಾನಿನಂತಹ ಪುಟ್ಟ ರಾಷ್ಟ್ರದಲ್ಲಿ ಈ ಅದಕ್ಕಾಗಿ ಕಳ್ಳತನ ಸಾಧ್ಯವೆಂದು ತೀರ್ಮಾನಿಸಿ ತನ್ನ ಜಾಲವನ್ನು ಬೀಸಿತು. ತನ್ನ ಈ ಜಾಲವನ್ನು ಬೇಧಿಸುವ ಶಕ್ತಿ ಲೆಬನಾನಿಗಿಲ್ಲವೆಂಬ ಆತ್ಮ ವಿಶ್ವಾಸವೂ ಅದಕ್ಕಿತ್ತು.

ತಮ್ಮ ಮೊದಲ ಮಾತುಕತೆಯ ಎರಡು ದಿನಗಳ ನಂತರ ಬದಾವಿ ಮತ್ತಾರನಿಗೆ ಟೆಲಿಫೋನ್ ಮಾಡಿ, "ನನ್ನ ಸ್ನೇಹಿತರ ಒತ್ತಾಯ ತೀವ್ರವಾಗಿದೆ. ನೀನೇನು ನಿರ್ಧಾರ ಮಾಡಿದೆ?" ಎಂದು ಕೇಳಿದ.

"ನಿನ್ನ ಎಲ್ಲಾ ಶರತ್ತುಗಳನ್ನು ಒಪ್ಪಿದ್ದೇನೆ," ಎಂದು ಮತ್ತಾರ್ ಉತ್ತರಿಸಿದ.

ನಂತರದ ಎರಡನೆಯ ರಾತ್ರಿ ಬದಾವಿ ಮತ್ತಾರನನ್ನು ವ್ಲಾಡಿಮಿರ್ ವ್ಯಾಸಿಲೀವ್‌ನಿಗೆ ಪರಿಚಯ ಮಾಡಿಕೊಟ್ಟ. ನರಿಯಂತಹ ವ್ಯಾಸಿಲೀವ್ ಆಗ ಬೈರೂತಿನ ಸೋವಿಯತ್ ರಾಯಭಾರ ಕಛೇರಿಯಲ್ಲಿ ವಾಣಿಜ್ಯ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ.

"ನಮ್ಮ ಯೋಜನೆ ಬಹು ಸರಳ. ನೀನು ಮಾಮೂಲಿ ಹಾರಾಟಕ್ಕೆಂಬಂತೆ ಮಿರಾಜನ್ನು ಹಾರಿಸು. ವಿಶಾಲವಾದ ಭೂಮಧ್ಯ ಸಮುದ್ರದ ಮೇಲೆ ಹಾರುತ್ತಿರುವಾಗ ತಾಂತ್ರಿಕ ತೊಂದರೆಯನ್ನು ನಿನ್ನ ರೇಡಿಯೋ ಮೂಲಕ ವರದಿಮಾಡು. ಮರುನಿಮಿಷ 'ಮೇಡೇ' (ಅಂತಾರಾಷ್ಟ್ರೀಯ ವಿಮಾನಗಳ ಸಂಕಟ ಸಮಯದ ಸಂಕೇತ) ಕರೆ ನೀಡು. ತತ್‌ಕ್ಷಣವೇ ನಿನ್ನ ವಿಮಾನವನ್ನು ರಾಡಾರ್ ಕ್ಷೇತ್ರಕ್ಕಿಂತ ಕೆಳಗೆ ಕೊಂಡು ಹೋಗಿ, ನಿನ್ನ ಮಾರ್ಗವನ್ನು ಬದಲಿಸಿ, ನಮ್ಮ ರಾಷ್ಟ್ರದ 'ಬಾಕು' ವಿಮಾನ ನಿಲ್ದಾಣದಲ್ಲಿ ಇಳಿಸು. ಆಗ ಎಲ್ಲರೂ ಮಿರಾಜ್ ವಿಮಾನ ಸಮುದ್ರಕ್ಕೆ ಬಿತ್ತು ಎಂದು ಸ್ವಾಭಾವಿಕವಾಗಿಯೇ ಭಾವಿಸುವರು." ಎಂದು ವ್ಯಾಸಿಲೀವ್ ನಿಧಾನವಾಗಿ ಹೇಳಿದ.

"ಸರಿ. ನನಗೆ ಕೊಡಬೇಕಾದ ಮುವತ್ತು ಲಕ್ಷ ಡಾಲರುಗಳನ್ನು ಹೇಗೆ ಕೊಡುತ್ತೀರಿ ಮತ್ತು ಯಾವಾಗ ಕೊಡುತ್ತೀರಿ?" ಮತ್ತಾರ್ ಪ್ರಶ್ನಿಸಿದ.

"ಮೂವತ್ತು ಲಕ್ಷ? ಆದರೆ ನಾವು ಕೊಡುತ್ತೇವೆಂದು ಹೇಳಿದ್ದು ಹತ್ತೇ ಲಕ್ಷವಲ್ಲ!" ವ್ಯಾಸಿಲೀವ್ ಸ್ವಲ್ಪ ಅಸಮಾಧಾನದಿಂದ ಕಿರುಚಿದ.

ಮತ್ತಾರನನ್ನು ಈ ವ್ಯವಹಾರಕ್ಕೆ ಆಕರ್ಷಿಸಲು ಬದಾವಿಯೇ ಮೊಬಲಗನ್ನು ಉತ್ಪ್ರೇಕ್ಷಿಸಿದ್ದ.

[illegible]

ದುಡಿಮೆಯೋ ಯಶಸ್ಸು !

ಬೆಂಗಳೂರು ನಗರದ ಪ್ರಮುಖ ಸ್ಥಳದಲ್ಲಿರುವ ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಪಾದರಕ್ಷೆಗಳ ಅಂಗಡಿಯಲ್ಲಿ ಕೆಲಸದಲ್ಲಿ ನಿರತರಾಗಿರುವ ಶ್ರೀ ಉಕ್ರಿ ಅವರನ್ನು ಕಾಣಬಹುದು. ಅವರು ಇಬ್ಬರು ಸಹಾಯಕರೊಡನೆ ತಮ್ಮ ಸುತ್ತ ಸಾಗುತ್ತಿರುವ ವಾಹನಗಳ ಗತಿಯಂತೆ ಅವಿಶ್ರಾಂತರಾಗಿ ಕಾರ್ಯಮಗ್ನರಾಗಿದ್ದಾರೆ.

ಎರಡು ವರ್ಷಗಳ ಹಿಂದೆ ಉಕ್ರಿ ಅವರಿಗೆ ಸಂಪಾದನೆಯ ಮಾರ್ಗವೇ ಗೊತ್ತಿರಲಿಲ್ಲ. ಅವರಿಗೆ ಚೆನ್ನಾಗಿ ಬರುತ್ತಿದ್ದ ಕೆಲಸವೆಂದರೆ ಪಾದರಕ್ಷೆಗಳನ್ನು ತಯಾರಿಸುವುದೊಂದೇ. ಆದರೆ ಅದರಿಂದ ಅವರಿಗೆ ಏನೂ ಉಪಯೋಗವಾಗಿರಲಿಲ್ಲ.

ಅನಂತರ ಎರಡು ಘಟನೆಗಳು ಜರುಗಿದವು. ಮೊದಲನೆಯದಾಗಿ, ಉಕ್ರಿ ಅವರು ಚರ್ಮ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಯ ಅಧಿಕಾರಿಯನ್ನು ಭೇಟಿಯಾದರು. ನಂತರ ಮೈಸೂರು ಬ್ಯಾಂಕಿನವರೊಂದಿಗೆ ಮಾತನಾಡಿದರು. ಇದು ಅವರ ಜೀವನದಲ್ಲಿ ಮಹತ್ವದ ಬದಲಾವಣೆ ತಂದಿತು.

ಶೆಡ್ ಹಾಕಿಕೊಳ್ಳಲು ಮತ್ತು ಅಗತ್ಯವಾದ ಸಲಕರಣೆಗಳನ್ನು ಖರೀದಿಸಲು ಮೈಸೂರು ಬ್ಯಾಂಕು ಸುಲಭ ಬಡ್ಡಿ ದರ ಯೋಜನೆ (ಡಿ.ಐ.ಆರ್)ಯ ರೀತ್ಯಾ ಸಾಲಿಯಾನ ಶೇ 4 ರ ಬಡ್ಡಿಯಂತೆ ಸಾಲ ಒದಗಿಸಿತು.

ಇಂದು ಅವರು ದಿನಕ್ಕೆ ಹತ್ತು ಗಂಟೆಗೂ ಮೀರಿ ದುಡಿಯುತ್ತಿರುವ ಯಶಸ್ವೀ ಕೆಲಸಗಾರ.

ತಾವು ಗಳಿಸುತ್ತಿರುವ ಒಳ್ಳೆಯ ಲಾಭದಿಂದ, ದುಡಿಯುವ ಪ್ರತಿಯೊಬ್ಬ ವ್ಯಕ್ತಿಯ ಹಕ್ಕಿನಂತೆ, ಅವರು ತಮ್ಮ ಸಂಸಾರದೊಂದಿಗೆ ಉತ್ತಮ ಸ್ಥಿತಿಯಲ್ಲಿ ಬಾಳುತ್ತಿದ್ದಾರೆ. ಅವರು ಏನು ಹೇಳುತ್ತಾರೆಂಬುದನ್ನು ಕೇಳೋಣ—

ಮೈಸೂರು ಬ್ಯಾಂಕ್

ಪ್ರಧಾನ ಕಛೇರಿ :
ಬೆಂಗಳೂರು-560 009.
ಮ್ಯಾನೇಜಿಂಗ್ ಡೈರೆಕ್ಟರ್
ಎಂ. ಬಿ. ದೇಶಮುಖ್



ಲನ್ನು ಮುಚ್ಚಲು ಯತ್ನಿಸಿದ. ಅಷ್ಟರಲ್ಲಿ ಲೆಬನಾನಿ ಸೈನಿಕನೊಬ್ಬ ಕಾಲನ್ನು ಒಳಗಿರಿಸಿದ್ದ. ಬಾಗಿಲನ್ನು ಒತ್ತಿ ಹಿಡಿದ ವ್ಯಾಸಲೀವ್ ಡಂಬ್ ಬೆಲ್ ಒಂದರಿಂದ ಅವನ ಪಾದವನ್ನು ಜಜ್ಜತೊಡಗಿದ್ದ.

ಕೋಪ ಮತ್ತು ಭಯಗಳಿಂದ ನಡುಗುತ್ತಿದ್ದ ಕೋಮಿಯಾಕೋವ್ ನೋಡುತ್ತಿದ್ದಂತೆಯೇ ಸತ್ತಾರ್ ರಭಸದಿಂದ ಬಾಗಿಲ ಕಡೆಗೆ ನುಗ್ಗಿ ವ್ಯಾಸಲೀವ್‌ನ ಮೇಲೆಯೇ ಆಕ್ರಮಣಮಾಡಿದ. ಅಷ್ಟರಲ್ಲಿ ಒಂದು ಡಜನ್ ಭದ್ರತಾ ಪಡೆಯ ಅಧಿಕಾರಿಗಳು ಬಿರುಗಾಳಿಯಂತೆ ಫ್ಲ್ಯಾಟಿನೊಳಗೆ ನುಗ್ಗಿ ಬಂದರು. ಹತಾಶನಾದ ಕೊಮಿಯೋಕೋವ್ ತನ್ನ ಪೋಲೀಸ್ ರಿವಾಲ್ವರನ್ನು ತೆಗೆದು ಗುಂಡಿನ ಮಳೆಗರೆಯತೊಡಗಿದ. ಅವನು ಹಾರಿಸಿದ ಮೊದಲ ಮೂರು ಗುಂಡುಗಳು ಲೆಬನಾನಿ ಕ್ಯಾಪ್ಟನ್ನನೊಬ್ಬನ ಹೊಟ್ಟೆ ಮತ್ತು ಕಾಲುಗಳನ್ನು ತರಚಿದ್ದುವು. ಈ ವೇಳೆಗೆ ಎದ್ದು ನಿಂತಿದ್ದ ವ್ಯಾಸಿಲೀವ್ ಲೆಬನಾನಿ ಸಾರ್ಜೆಂಟನೊಬ್ಬನ ಎದೆಗೆ ಗುಂಡು ಹಾರಿಸಿದ.

ಲೆಬನಾನಿ ಸೈನಿಕರು ಮಿಂಚಿನಂತೆ ಎರಗಿದರು. ಒಂದೇ ಒಂದು ಗುಂಡು ವ್ಯಾಸಿಲೀವನನ್ನು ತೆಪ್ಪಗಿರಿಸಿತು. ಈಗಾಗಲೇ ನಾಲ್ಕು ಗುಂಡುಗಳ ಪೆಟ್ಟು ತಿಂದಿದ್ದ ಕೊಮಿಯಾಕೋವ್ ತನ್ನ ರಿವಾಲ್ವರನ್ನು ಪುನಃ ಪುನಃ ತುಂಬಿ ಹಾರಿಸುತ್ತಲೇ ಇದ್ದ. ಐದನೆಯ ಗುಂಡು ಅವನ ತೋಳನ್ನು ತೀವ್ರವಾಗಿ ಗಾಯಗೊಳಿಸಿತು. ರಕ್ತಸ್ರಾವದಿಂದ ತೀವ್ರ ಸುಸ್ತಾದ ಅವನು ಮರಣವನ್ನೇ ಸ್ವಾಗತಿಸುತ್ತಿದ್ದ. ಮತ್ತಾರ್ ಮೊದಲಿನಿಂದಲೂ ಲೆಬನಾನಿ ಏಜೆಂಟ ಆಗಿಯೇ ಕೆಲಸಮಾಡುತ್ತಿದ್ದನೆಂಬುದು ಈಗ ಅವನಿಗೆ ಸ್ಪಷ್ಟವಾಗಿತ್ತು. ಈ ಪ್ರಕರಣ ಹೊರಬಂದರೆ ಸೋವಿಯೆತ್ ದೇಶದ ಗೌರವ ಮಣ್ಣುಪಾಲಾಗುವುದು. ತಾನು ಎಲ್ಲೆಡೆಗೂ ನಗೆಗೀಡಾಗುವೆನು. ಇದಕ್ಕಿಂತ ಮರಣವೇ ವಾಸಿ ಎಂದು ಆತ ತಕ್ಷಣವೇ ಮುದುರಿಯೇ ಜಿಗಿಯುತ್ತ ಕಿಟಕಿಯ ಕಡೆಗೆ ನುಗ್ಗಿದ. ಇದನ್ನೇ ನಿರೀಕ್ಷಿಸುತ್ತಿದ್ದ ಇಬ್ಬರು ಸೈನಿಕರು ಅವನನ್ನು ಹಿಡಿದುಕೊಂಡರು. ಉಳಿದ ಸೈನಿಕರು ಚೀಲವನ್ನೂ ಫ್ಲ್ಯಾಟ್ ಪ್ಲಾನನ್ನೂ ವಶಪಡಿಸಿಕೊಂಡರು.

ಐದು ತಾಸುಗಳ ನಂತರ ಬೆಳಗಿನ ಜಾವ ಒಂದು ಗಂಟೆಗೆ ಲೆಬನಾನಿನ ಸರಕಾರ ವಿಶೇಷ ವಾರ್ತಾ ಬುಲೆಟಿನ್ ಒಂದನ್ನು ಹೊರಡಿಸಿ ಕೊಮಿಯಾಕೋವ್, ವ್ಯಾಸಿಲೀವ್ ಮತ್ತು ಬದಾವಿಯ ಬಂಧನದ ಸುದ್ದಿಯನ್ನು ಪ್ರಕಟಿಸಿತು. ಎರಡನೆಯ ಪ್ರಕಟನೆಯಲ್ಲಿ ಈ ಪ್ರಕರಣದ ಪೂರ್ಣ ವಿವರ ಪ್ರಕಟಿಸಲ್ಪಟ್ಟಿತು.

ಬದಾವಿಯೊಡನೆ ತನ್ನ ಪ್ರಥಮ ಭೇಟಿಯ ನಂತರ ಮತ್ತಾರ್ ತನ್ನ ಕಮಾಂಡಿಂಗ್ ಆಫೀಸರನನ್ನು ಕಂಡು ವಿಷಯವನ್ನೆಲ್ಲ ವರದಿ ಮಾಡಿದ್ದ. ಇದನ್ನು ತಿಳಿದು ಆ ಕಮಾಂಡಿಂಗ್ ಆಫೀಸರ್ ಲೆಬನಾನಿನ ಗೂಢಚರ್ಯ ವಿಭಾಗವನ್ನು ಜಾಗೃತಗೊಳಿಸಿದ. ಗೂಢಚರ್ಯ ವಿಭಾಗದ ಆದೇಶದ ಮೇರೆಗೆ ಮತ್ತಾರ್ ಬದಾವಿಯ ಸೂಚನೆಯನ್ನು ಒಪ್ಪಿಕೊಂಡಿದ್ದ. ಗೂಢಚರ್ಯ ವಿಭಾಗವು ಮತ್ತಾರನನ್ನು ಸೂಕ್ಷ್ಮವಾದ ಟ್ರಾನ್ಸ್‌ಮೀಟರಿನಿಂದ ಸಜ್ಜುಗೊಳಿಸಿತ್ತು. ಮತ್ತಾರ್ ರಶಿಯನ್ನರೊಡನೆ ನಡೆಸಿದ ಸಂಭಾಷಣೆಗಳನ್ನು ಅದು ಟೇಪ್-ರಿಕಾರ್ಡರ್ ಒಂದಕ್ಕೆ ಪ್ರಸಾರಮಾಡುತ್ತಿತ್ತು. ಮತ್ತಾರನ ದೇಶಭಕ್ತಿ ಅವನು ತನ್ನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಸ್ಫೂರ್ತಿ ನೀಡಿತ್ತು.

ಇದಕ್ಕೆ ವಿರುದ್ಧವಾಗಿ ರಶಿಯನ್ ಗೂಢಚಾರರು ಅರಬರ ಗೂಢಚರ್ಯೆಯ ವಿಚಾರದಲ್ಲಿ ಹಾಕಿಕೊಂಡ ಲೆಕ್ಕಾಚಾರ ತಪ್ಪಾಗಿತ್ತು. ಪರಿಣಾಮವಾಗಿ ಅವರು ಒಂದರ ನಂತರ ಒಂದರಂತೆ ತಪ್ಪು ನಿರ್ಧಾರಗಳನ್ನು ಕೈಗೊಂಡರು. ಇಂತಹ ಅಪಾಯಕಾರಿ ಧೋರಣೆಗೆ ಮೂಲಾಧಾರವಾದ ಗೊತ್ತಿರದ ಮತ್ತಾರನನ್ನು ಆಯ್ಕೆಮಾಡಿದರು. ಸ್ಥಳೀಯ ಗೂಢಚರ್ಯ ಏಜೆಂಟರ ಬಗ್ಗೆ ಅವರಿಗೆ ತೀರಾ ಲಘುವಾದ ಕಲ್ಪನೆಯಿತ್ತು. ಅವರು ಗೂಢವಾದ ಚರ್ಯೆಯ ಮೊದಲ ಪಾಠವನ್ನೇ ಮರೆತು ಚರ್ಚೆಗಾಗಿ ತಮ್ಮ ಫ್ಲ್ಯಾಟಿಗೇ ಮತ್ತಾರನನ್ನು ಕರೆಸಿಕೊಂಡರು. ಮತ್ತಾರನಲ್ಲಿ ಅಡಗಿಸಿಟ್ಟ ಟ್ರಾನ್ಸ್‌ಮೀಟರನ್ನು ಸುಲಭವಾಗಿ ಪತ್ತೆ ಹಚ್ಚಬಹುದಾದ ಎಲೆಕ್ಟ್ರಾನಿಕ್ಸ್ ತಪಾಸಣೆಗೂ ಅವನನ್ನು ಒಳಪಡಿಸಲಿಲ್ಲ. ಇಷ್ಟೇ ಅಲ್ಲ, ರಶಿಯನ್ ಸರಕಾರದ ಬ್ಯಾಂಕಿನ ಅಧಿಕೃತ ಚೆಕ್ಕನ್ನು ಕೊಡುವಂತಹ ಮೂರ್ಖತನವನ್ನೂ ಅವರು ಪ್ರದರ್ಶಿಸಿದರು.

ಅಕ್ಟೋಬರ್ ಒಂಬತ್ತರ ವೇಳೆಗೆ ಸೋವಿಯೆತ್ ಸರಕಾರ ತನ್ನ ಬಗ್ಗೆ ತೀವ್ರ ಅನುಕಂಪವಿರುವವರನ್ನು ಎತ್ತಿ ಕಟ್ಟಿತು. ರಶಿಯನ್ ಗೂಢಚರ್ಯೆ ಸಂಸ್ಥೆಯ ಏಜೆಂಟರು ಲೆಬನಾನಿನಲ್ಲಿದ್ದ ಈಜಿಪ್ಟ್, ಸಿರಿಯಾ, ಇರಾಕ್ ರಾಯಭಾರಿಗಳನ್ನು ಪ್ರಚೋದಿಸಿ, "ಇದೊಂದು ಅಮೇರಿಕನ್ ಸಾಮ್ರಾಜ್ಯಶಾಹಿಯ ಚಿತಾವಣೆ—ಲೆಬನಾನ್ ಮತ್ತು ರಶಿಯಗಳ ಮೈತ್ರಿಯನ್ನು ಕಲುಷಿತಗೊಳಿಸುವ ಫಿತೂರಿ" ಎಂಬುದಾಗಿ ಹೇಳಿಸುವುದರಲ್ಲಿ ಯಶಸ್ವಿಯಾದರು.

ಬೆಳಿಗ್ಗೆ ೧೧ ಗಂಟೆಗೆ ಬೈರೂತಿನಲ್ಲಿದ್ದ ಸೋವಿಯೆತ್ ರಾಯಭಾರಿ ಆಗ ಲೆಬನಾನ್ ಅಧ್ಯಕ್ಷರಾಗಿದ್ದ ಚಾರ್ಲ್ಸ್ ಹೆಲೂ ಅವರನ್ನು ಭೇಟಿಯಾಗಿ ಸೆರೆಹಿಡಿಯಲ್ಪಟ್ಟ ಇಬ್ಬರು ರಶಿಯನ್ನರನ್ನು ಬಿಡುಗಡೆಗೊಳಿಸಬೇಕೆಂದೂ, ಅವರ ವಿರುದ್ಧ ಇರುವ ಆಪಾದನೆಗಳನ್ನೆಲ್ಲ ಕೈಬಿಡಬೇಕೆಂದೂ ಲೆಬನಾನ್ ಗೂಢಚರ್ಯೆ ಸಂಸ್ಥೆಯ ಉನ್ನತಾಧಿಕಾರಿಗಳನ್ನು ಅವರು ತೆಗೆದುಕೊಂಡ 'ತಪ್ಪು' ಕ್ರಮಗಳಿಗಾಗಿ ಶಿಕ್ಷಿಸಬೇಕೆಂದೂ, ಅಮೇರಿಕನ್ ಚಿತಾವಣೆಯಿಂದ ಉಂಟಾದ ತಪ್ಪು ಕಲ್ಪನೆ ಮತ್ತು ಜರುಗಿಸಿದ ತಪ್ಪು ಕ್ರಮಕ್ಕಾಗಿ ಸೋವಿಯೆತ್ ಸರಕಾರದಲ್ಲಿ ಅಧಿಕೃತ ಕ್ಷಮಾಪಣೆ ಯಾಚಿಸಬೇಕೆಂದೂ ಒತ್ತಾಯಪಡಿಸಿದ.

ಲೆಬನಾನ್ ಸರಕಾರವು ರಾಯಭಾರಿಯ ಈ ಎಲ್ಲಾ ಬೇಡಿಕೆಗಳನ್ನೂ ತಿರಸ್ಕರಿಸಿತು.

ಇಷ್ಟೆಲ್ಲಾ ಆದರೂ ರಶಿಯವು ಪ್ರಾರಂಭಿಸಿದ ಒತ್ತಡ ತಂತ್ರ ನಿಧಾನವಾಗಿಯಾದರೂ ತನ್ನ ಪ್ರಭಾವ ಬೀರತೊಡಗಿತು. ಈ ಪ್ರಕರಣ ಕುರಿತು ಸಿರಿಯಾದ ರೇಡಿಯೋ ಡಮಾಸ್ಕಸ್ "ಒಂದು ಚಿತಾವಣೆಯ ಜಾಲ" ಎಂದಿತು. "ಎಲ್ಲಾ ಚಿಹ್ನೆಗಳೂ ಒಂದು ವಿದೇಶೀ ಗೂಢಚರ್ಯೆ ಜಾಲದ ಕೈವಾಡವನ್ನು ಸಂಕೇತಿಸುತ್ತವೆ," ಎಂದು ಈಜಿಪ್ಟಿನ ಅರೆ ಸರಕಾರಿ ಒಡೆತನದ 'ಅಲ್ ಅಹರಾಂ' ಪತ್ರಿಕೆ ಬರೆಯಿತು. ಸಾರ್ವಜನಿಕ ಭಾವನೆಗಳ ಆಸ್ಫೋಟನೆಗಿಂತ ಮಿಗಿಲಾಗಿ ಸಿರಿಯಾ, ಈಜಿಪ್ಟ್‌ಗಳ ಅಧಿಕೃತ ಪ್ರತಿನಿಧಿಗಳು ಈ ಫಿತೂರಿಯನ್ನು ಮುಚ್ಚಿ ಹಾಕಲು ಶ್ರಮಿಸಿದರು.

ಅಕ್ಟೋಬರ್ ಎರಡರ ದಿನವಿಡೀ ಈ ರೀತಿಯ ಒತ್ತಡಗಳು ಸತತ ಪ್ರಭಾವ ಬೀರಿದವು. ಸದಾ ತನ್ನ ನೆರೆಯ ವಿಶಾಲ ಅರಬ್ ರಾಷ್ಟ್ರಗಳ ವಿಶ್ವಾಸವನ್ನು ಉಳಿಸಿಕೊಂಡು ಬರಬೇಕಾದ ಈ ಪುಟ್ಟ ರಾಷ್ಟ್ರ ಒತ್ತಡಕ್ಕೆ ತಲೆಬಾಗಲೇಬೇಕಾಯಿತು. ಮಿರಾಜ್ ಪ್ರಕರಣದ ವಿಷಯವಾಗಿ ಹೆಚ್ಚು ಚರ್ಚಿಸುವುದು ಉನ್ನತ ಮಟ್ಟದ ತನ್ನ ರಾಷ್ಟ್ರೀಯ ಹಿತಾಸಕ್ತಿಗೆ ಅತ್ಯಂತ ಅಪಾಯಕಾರಿಯಾದುದು ಎಂದು ಲೆಬನಾನ್ ಈ ಪ್ರಕರಣದ ಮೇಲೆ ತೆರೆ ಎಳೆಯಿತು.

ಎರಡು ದಿನಗಳ ನಂತರ ರಶಿಯ ಏರೋಫ್ಲೋಟ್ ವಿಮಾನವೊಂದು ಬೈರೂತಿನಲ್ಲಿ ಬಂದಿಳಿದು. ಸಾಧ್ಯವಾದಷ್ಟು ರಹಸ್ಯವಾಗಿ ವ್ಯಾಸಿಲೀವ್ ಮತ್ತು ಸ್ಟೆಚರ್ ಮೂಲಕ ಕರೆತರಲ್ಪಟ್ಟ ಕೊಮಿಯಾಕೋವರನ್ನು ಮಾಸ್ಕೋಗೆ ಸಾಗಿಸಿತು.

ರಶಿಯದ ವಿಫಲ ಫಿತೂರಿಯ ಈ ಕಥೆ ಮಿಂಚಿನಂತೆ ಪ್ರಪಂಚದ ಗಮನ ಸೆಳೆದು ಅಷ್ಟೇ ಬೇಗ ಮರೆಯಾಯಿತು. ರಶಿಯದ ಗೂಢಚರ್ಯೆಯ ಸಂಸ್ಥೆ ಈ ಪ್ರಕರಣದಲ್ಲಿ ಮತ್ತೆ ಪ್ರವೇಶಿಸಲಿಲ್ಲ. ಲೆಫ್ಟಿನೆಂಟ್ ಮತ್ತಾರ್ ತನ್ನ ಸಹೋದ್ಯೋಗಿಗಳಲ್ಲೆಲ್ಲ 'ಹೀರೋ' ಆದ. ಆದರೆ ಅವನು ತನ್ನೊಡನೆ ಒಂದು ಯೋಚನೆ ಇಟ್ಟುಕೊಂಡಿರಲೇಬೇಕು: "ಕೆಲಸದಲ್ಲಿ ಮೋಸಮಾಡಿದರೆ, ನಿನ್ನನ್ನು ನಾವು ನೋಡಿಕೊಳ್ಳುತ್ತೇವೆ," ಎಂಬ ಕೊಮಿಯಾಕೋವನ ಆ ಮಾತು.

ಪುಣ್ಯಬಲದಿಂದ ಸುಂದರಿಯಾದ ಹೆಂಡತಿ ದೊರೆಯುತ್ತಾಳೆ.
ಸುಂದರಿಯಿಂದ ಸುಪುತ್ರರು ಜನಿಸುತ್ತಾರೆ.
ಸುಪುತ್ರರಿಂದ ದಿನದಿನವೂ ಯಶಸ್ಸು ಉದಯಿಸುತ್ತದೆ,
ಹಾಗೂ ಯಶಸ್ಸಿನಿಂದ ಈ ಜಗತ್ತು ಸ್ವರ್ಗತುಲ್ಯವಾಗುತ್ತದೆ.

—'ಭಾಮಿನಿ ವಿಲಾಸ'ದಿಂದ





ಹಲ್ಲು ಮತ್ತು ಒಸಡುಗಳ ಆರೋಗ್ಯಕ್ಕೆ ಆಧಾರ ? 'ಲವಂಗದ ಎಣ್ಣೆ' — ವಿಶ್ವಸನೀಯ, ಉತ್ತಮ ಉಪಚಾರ!

ಇದಿಗೋ, ಚಿರಕಾಲದಿಂದ ಬಳಕೆಯಲ್ಲಿರುವ ಲವಂಗದ ಎಣ್ಣೆಯುಳ್ಳ

ಹೊಸ

ಪ್ರಾಮಿಸ್ ಟೂಥ್ ಪೌಡರ್



ಲವಂಗದ ಎಣ್ಣೆಯುಳ್ಳ ಪ್ರಾಮಿಸ್ ಟೂಥ್ ಪೌಡರಿನಿಂದ ನಿಮಗಾಗುವ ಲಾಭಗಳು :

- ನಿಮ್ಮ ಬಾಯಿಯಿಂದ ದಂತಕ್ಷಯಕಾರೀ ಕೀಟಾಣುಗಳ ಮತ್ತು ದುರ್ವಾಸನೆಯ ನಿವಾರಣೆ.
- ನಿರ್ಮಲ, ಆಹ್ಲಾದಕರ ಶ್ವಾಸ.
- ನಿಮ್ಮ ಒಸಡುಗಳಿಗೆ ಆರೋಗ್ಯದಾಯಕ ಮಾಲಿಶ್.
- ನಿಮ್ಮ ಹಲ್ಲುಗಳಲ್ಲಿ ಬಿಳುಪಿನ ಹೊಳಪು.
- ಪೆಪ್ಪರ್‌ಮಿಂಟ್ ಮತ್ತು ಲವಂಗದೆಣ್ಣೆಯ ಅಪೂರ್ವ ಸ್ವಾದ.

ಬಲ್ಸಾರಾ

ನವೀನ-ಅನನ್ಯ, ಲವಂಗದ ಎಣ್ಣೆಯುಳ್ಳ ಪ್ರಾಮಿಸ್ ಟೂಥ್ ಪೌಡರ್

CHAITRA-BLS-436 R KAN

-೩೬-

ಯಾವುದೊಂದು ಪದಾರ್ಥದ ನಾಲ್ಕರಲ್ಲಿ ಒಂದು ಭಾಗವನ್ನು ಕನ್ನಡದಲ್ಲಿ **ಕಾಲು** ಎನ್ನುತ್ತೇವೆ. ದಕ್ಷಿಣದ ದ್ರಾವಿಡ ಭಾಷೆಗಳಲ್ಲೆಲ್ಲ ನಾಲ್ಕರ ಅಂಶಕ್ಕೆ ಇದೇ ಶಬ್ದ ಇದೆ. ಈ ಪದ ಹೇಗೆ ಬಂತು? ಮೂಲತಃ **ಕಾಲು** ಎಂದರೆ ಮನುಷ್ಯ ಮತ್ತು ಪ್ರಾಣಿಗಳು ನಡೆಯುವುದಕ್ಕೆ ಉಪಯೋಗಿಸುವ ಅವಯವ. ಸ್ವಾರಸ್ಯವೆಂದರೆ ಮನುಷ್ಯ ನಡೆಯುವ **ಎರಡು ಕಾಲುಗಳಲ್ಲಿ** ಒಂದನ್ನು **ಅರ್ಧ** ಎಂಬರ್ಥದಲ್ಲಿ ಬಳಸದೆ **ನಾಲ್ಕು ಕಾಲಿನ ಪ್ರಾಣಿಗಳ** ಒಂದು **ಕಾಲನ್ನು ಕಾಲಂಶಕ್ಕೆ** ಬಳಸಿದ್ದು.

ಸಂಸ್ಕೃತ ಮತ್ತು ಇತರ ಭಾರತೀಯಾರ್ಯ ಭಾಷೆಗಳಲ್ಲಿಯೂ ಇದರಂತೆ **ಪಾದ** ಎಂಬುದು **ಕಾಲಂಶ** ಎಂಬರ್ಥದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿ ಬಂದಿದೆ. ಇದರದೇ ತದ್ಭವಗಳಾದ **ಪಾಯ್**, **ಪಾವ್** ಮೊದಲಾದವುಗಳಿಗೆ ನಮ್ಮ **ಕಾಲು** ಎಂಬ ಪದಕ್ಕಿಂತಲೂ ಅನೇಕ ಮುಖ ಅರ್ಥಗಳು ರೂಪುಗೊಂಡಿವೆ. **ಪಾವುಸೇರು, ಪಾವು** ಆಣೆ, **ಪಾವಲಿ** ಇತ್ಯಾದಿ. **ಪೈಸಾ** ಕೂಡ ಬಹುಶಃ **ಪಾಯ್ ಹಿಸ್ಸಾ** (ಒಂದಾಣೆಯ ನಾಲ್ಕನೇ ಅಂಶ)ದ ಸಂಕ್ಷಿಪ್ತ ರೂಪವಾಗಿರಬೇಕು. ರೂಪಾಯಿಯ ಕಾಲಂಶ **ಪಾವಲಿ.** ಸತ್ಯನಾರಾಯಣನ ಪ್ರಸಾದಲ್ಲಿ ರವಾ, ಹಾಲು ಮುಂತಾದವುಗಳು **ಐದೈದು ಪಾವು** ಬೆರೆತಿರುವುದರಿಂದ ಅದು **ಸಪಾದ ಭಕ್ಷ್ಯ** (ಒಂದೂಕಾಲು = ಸಪಾದ)ವಾಯಿತು.

ಹೀಗೆ **ಪ್ರಾಣಿಯ** ಒಂದು **ಕಾಲು** ತನ್ನ ಪಾದವನ್ನು ಭಾರತೀಯಾರ್ಯ ಮತ್ತು ದ್ರಾವಿಡ ಎರಡೂ ಭಾಷಾವರ್ಗಗಳಲ್ಲಿ ಬಳಸಿಕೊಂಡಿದ್ದರೂ **ಪಾದ** ಎಂಬುದನ್ನು **ಕಾಲಂಶ** ಎಂಬರ್ಥದಲ್ಲಿ ಬಳಸುವುದು ದ್ರಾವಿಡದ **ಕಾಲಿನ** ಪ್ರಭಾವದಿಂದ ಎಂಬ ಸಂಶಯ ಬರುತ್ತದೆ. ಏಕೆಂದರೆ, ಯೌರೋಪ್ಯಾರ್ಯ ಭಾಷೆಗಳಲ್ಲಿ **ಪಾದಕ್ಕೆ** ಸಮಾನವಾದ **ಫುಟ್** (ಇಂಗ್ಲೀಷ್), **ಪೆದ** (ಲಿಥುವೇನಿಯನ್), **ಪೇಸ್, ಪೇದೆಮ್** (ಲ್ಯಾಟಿನ್), **ಪೋವ್ಸ್, ಪೋದೋಸ್** (ಗ್ರೀಕ್) ಇತ್ಯಾದಿ ಶಬ್ದಗಳು ಇದ್ದರೂ ಅವುಗಳನ್ನು **ನಾಲ್ಕರಲ್ಲಿ ಒಂದಂಶ** ಎಂಬರ್ಥಕ್ಕೆ ಎಳೆದದ್ದು ಕಾಣುವುದಿಲ್ಲ. ಪರ್ಶಿಯನ್ ಭಾಷೆಯಲ್ಲಿ ಕೂಡ ಪಾದ ಎಂಬುದಕ್ಕೆ ಜ್ಞಾತಿಯಾಗಿ ಪಾಯ್ ಪದ ಇದ್ದರೂ ಅದನ್ನು **ಕಾಲಂಶ** ಎಂಬರ್ಥದಲ್ಲಿ ಬಳಸಿದಂತೆ ಉರ್ದುಕೋಶಗಳಲ್ಲಿ ಕಾಣಿಸುವುದಿಲ್ಲ. ಯುರೋಪಿಯನ್ ಭಾಷೆಗಳಲ್ಲಿ **ಕಾಲಂಶ** ಎಂಬರ್ಥಕ್ಕೆ ಬಳಸುವ **ಕ್ವಾರ್ಟರ್** ಇತ್ಯಾದಿ ಪದಗಳು **ನಾಲ್ಕು** ಎಂಬರ್ಥದ ಲ್ಯಾಟಿನ್ Quattuor (ಸಂಸ್ಕೃತ ಚತ್ವಾರ್) ಪದದಿಂದ ಉದ್ಭವಿಸಿದವುಗಳೇ ಹೊರತು **ಪಶುಗಳ ಕಾಲಿನಿಂದಲ್ಲ.** ಸಂಸ್ಕೃತದಲ್ಲಿ ಕೂಡ **ಪಾದ** ಎಂಬ ಪದ **ಕಾಲಂಶ** ಎಂಬ ಅರ್ಥದಲ್ಲಿ ಬ್ರಾಹ್ಮಣಗಳ ಕಾಲದಿಂದಾರಂಭಿಸಿ ತಾನೆ (ಉದಾ:ಶತಪಥ ಬ್ರಾಹ್ಮಣ) ಪ್ರಯೋಗವಾದಂತೆ ಮೋಲಿಯರ್ ವಿಲಿಯಮ್ಸ್ ಕೋಶದಿಂದ ಗೊತ್ತಾಗುತ್ತದೆ– ಅಂದರೆ ಋಗ್ವೇದದಷ್ಟು ಪ್ರಾಚೀನವಲ್ಲ ಇದು.

ಕಾಲನ್ನು ಸ್ವಲ್ಪ ಉದ್ದ ಚಾಚಿದರೆ, ಪದ್ಯದ ಒಂದು ಸಾಲನ್ನು ಸಂಸ್ಕೃತದಲ್ಲಿ **ಪಾದ** ಎಂದು ಕರೆಯುವುದು ಕಾಣುತ್ತದೆ. ಪದ್ಯವನ್ನು **ನಾಲ್ಕು** ಸಾಲುಗಳಿಗಾಗಿ ವಿಂಗಡಿಸುವುದರಿಂದ **ಒಂದು ಸಾಲಿಗೆ ಪಾದ** ಎಂದು ಕರೆಯುವುದು ಸಹಜ. ಮೂರು ಸಾಲಿನ ವೇದದ ಋಕ್ಕು **ತ್ರಿಪದಾ** ಗಾಯತ್ರಿ ಎನ್ನಿಸುತ್ತದೆ. ನಮ್ಮ **ತ್ರಿಪದಿಯು** ಹಾಗೆ. ಇದಕ್ಕೆ ಪ್ರತಿಯಾಗಿ **ಚೌಪದಿ, ಷಟ್ಪದಿಗಳೂ** ಇವೆ. ಪದ್ಯದ ಒಂದು ಸಾಲನ್ನು **ಪಾದ** ಎಂದು ಕರೆಯುವುದೂ ಬೃಹದಾರಣ್ಯಕ ಉಪನಿಷತ್ತು, ಶ್ರೌತ ಸೂತ್ರಗಳಷ್ಟು **ಹಿಂದೆಯೇ** ಕಾಣಿಸುತ್ತದೆ. ಆದರೆ ಇದೂ ದ್ರಾವಿಡ **ಕಾಲಿನ** ಪ್ರಭಾವವೇ ಎಂಬುದು ಸಂದಿಗ್ಧ. ಯೌರೋಪ್ಯಾರ್ಯ ಭಾಷೆಗಳಲ್ಲಿ ಕೂಡ (ಉದಾ:– ಇಂಗ್ಲೀಷಿನಲ್ಲಿ) **foot** ಎಂಬುದು **ಪದ್ಯದ ಸಾಲು** ಎಂಬರ್ಥದಲ್ಲಿ ಅಲ್ಲದಿದ್ದರೂ ಒಂದು **ಗಣ** ಎಂಬರ್ಥದಲ್ಲಿ ಬಳಕೆಯಲ್ಲಿದೆ. ಇಲ್ಲಿ foot ಎಂಬುದು ಪದ್ಯದ ನಡೆಯಲ್ಲಿನ ಒಂದು **ಹೆಜ್ಜೆ** ಯೆಂಬರ್ಥದಲ್ಲಿರುವುದರಿಂದ ಅದೇ ರೀತಿ ನಮ್ಮ ಪದ್ಯದ **ಪಾದವೂ** ಶ್ಲೋಕದ ಒಂದು **ಹೆಜ್ಜೆ** ಎಂದು ಕರೆಸಿಕೊಂಡಿರಬಹುದು.

— ಪಾವೆಂ

ಅಮೇರಿಕನ್ ಕಥೆ

ಜರ್ಮನ್ ವಿದ್ಯಾರ್ಥಿಯ ಸಾಹಸ



ಮೂಲ:
ವಾಶಿಂಗ್ಟನ್ ಐರ್ವಿಂಗ್

ಅನುವಾದ:
ವಿ. ಎನ್. ವೆಂಕಟಲಕ್ಷ್ಮಿ

ಫ್ರಾನ್ಸಿನ ಮಹಾಕ್ರಾಂತಿಯ ಭೀಷಣಕಾಲ. ಅದೊಂದು ಬಿರುಗಾಳಿಯ ರಾತ್ರಿ. ಪ್ಯಾರಿಸ್ಸಿನ ಹಳೆಯ ಭಾಗದಲ್ಲಿ, ಬಹಳ ತಡವಾಗಿ ಒಬ್ಬ ಜರ್ಮನ್ ಯುವಕ ತನ್ನ ವಸತಿಗೆ ಹಿಂತಿರುಗುತ್ತಿದ್ದ. ಮಿಂಚು ಫಳೀರನೆ ಚಮಕಿತು. ಮೇಲೆ ನಭೋಮಂಡಲ ಗುಡುಗುತ್ತಿತ್ತು. ಅಂದ ಹಾಗೆ ಆ ಯುವಕನ ಬಗೆಗೆ ಏನನ್ನೂ ಹೇಳಲೇ ಇಲ್ಲವಲ್ಲ; ಕಥೆಗೆ ಮೊದಲು ನಾನು ಆ ಯುವಕನ ಬಗ್ಗೆ ಸ್ವಲ್ಪ ಹೇಳಬೇಕು. ಇಲ್ಲದಿದ್ದರೆ ಕಥೆ ಪೂರ್ತಿಯಾಗುವುದೇ ಇಲ್ಲ.

ಆತನ ಹೆಸರು ಗಾಟ್‌ಫ್ರಾಯಿಡ್ ವೂಲ್ಫ್‌ಗಾಂಗ್. ಒಳ್ಳೆಯ ಕುಟುಂಬದಿಂದ ಬಂದ ಯುವಕ. ಎಲ್ಲಾ ಜರ್ಮನ್ ವಿದ್ಯಾರ್ಥಿಗಳಂತೆ ಒಣ ದಾರ್ಶನಿಕತೆಯ ಬಿಂಬ. ಅವನ ಸಿನಿಕ ಪ್ರವೃತ್ತಿ ವಾಸ್ತವತೆಗೆ ದೂರವಾದ ಹಲವು ಹತ್ತು ತತ್ವಗಳನ್ನು ರೂಪಿಸುತ್ತಿತ್ತು. ಅವನ ಏಕಾಂತ ಜೀವನ, ವ್ಯಕ್ತಿ ವೈಶಿಷ್ಟ್ಯದಿಂದ ಪರಿಷ್ಕರಿಸಲ್ಪಟ್ಟ ಶಿಕ್ಷಣ, ಅವನ ಮನಸ್ಸು ಹಾಗೂ ದೇಹಗಳ ಮೇಲೆ ಬಹಳೇ ಪರಿಣಾಮ ಬೀರಿದ್ದವೆನ್ನುವುದು ಸ್ಪಷ್ಟವಾಗಿಯೇ ಇತ್ತು. ಹೀಗಾಗಿ ಆತನ ಆರೋಗ್ಯ ಕೆಟ್ಟಿತು. ತನ್ನ ವಿಲಕ್ಷಣವಾದ ತತ್ವಗಳಲ್ಲಿ ತನ್ನನ್ನು ತಾನೇ ತೊಡಗಿಸಿಕೊಳ್ಳುತ್ತಿದ್ದ ಕಾರಣದಿಂದಲೋ ಏನೋ ತನ್ನ ಮೇಲೆ ಯಾವುದೋ ದುಷ್ಟ ಶಕ್ತಿಯ ಪ್ರಭಾವವಿದೆ, ಅದು ತನ್ನ ವಿನಾಶವನ್ನೇ ಬಯಸುತ್ತದೆ ಎಂದಾತ ಎಣಿಸಿದ. ಈ ಯೋಚನೆಯಿಂದ ಎದೆಗುಂದಿದ. ವಿಲಕ್ಷಣ ಭೀತಿಯೊಂದು ಅವನ ಬೆನ್ನುಹತ್ತಿರುವುದನ್ನು ಅವನ ಸ್ನೇಹಿತರು ಅರಿತರು. ಅವರ ಒತ್ತಾಯದ ಮೇರೆಗೆ, ಅವನು ತನ್ನ ಶಿಕ್ಷಣ ಪೂರೈಸಲು ಬೆಡಗಿನ ಪ್ಯಾರಿಸ್ಸಿಗೆ ಕಳುಹಿಸಲ್ಪಟ್ಟ.

ವೂಲ್ಫ್‌ಗಾಂಗ್ ಪ್ಯಾರಿಸ್ಸಿಗೆ ಬಂದಿಳಿದದ್ದು ಕ್ರಾಂತಿಯ ಉಗಮದಲ್ಲಿಯೇ. ಅಲ್ಲಿಯ ಬಿಸಿ ವಾತಾವರಣ ಅವನ ಕುತೂಹಲ ಪ್ರವೃತ್ತಿಯನ್ನು ಒಮ್ಮೆಲೇ ಸೆಳೆಯಿತು. ಅವನು ಅಂದಿನ ರಾಜನೀತಿ ಹಾಗೂ ತತ್ತ್ವಜ್ಞಾನದ ಸಿದ್ಧಾಂತಗಳನ್ನೆಲ್ಲ ಅರಗಿಸಿಕೊಂಡ. ಆದರೆ ಕ್ರಾಂತಿಯನ್ನು ಹಿಂಬಾಲಿಸಿದ. ಭೀಕರ ರಕ್ತಪಾತದ ದೃಶ್ಯಗಳನ್ನು ನೋಡಿ ಅವನ ಸಂವೇದನಾಶೀಲ ಮನಸ್ಸಿಗೆ ಬರೆಯಿಟ್ಟಂತಾಯಿತು. ಅವನು ಜಗತ್ತಿನ, ಸಮಾಜದ ಸಂಪರ್ಕಕ್ಕೇ ಹೇಸಿದ. ಎಂದಿಗಿಂತಲೂ ಹೆಚ್ಚಾಗಿ ಏಕಾಂತಜೀವನ ಬಯಸಿದ. ವಿದ್ಯಾರ್ಥಿಗಳಿಗಾಗಿಯೇ ಇದ್ದ 'ಪೇಸ್‌ಲ್ಯಾಟಿನ್ನಿ'ನ ಕೋಣೆಯೊಂದರಲ್ಲಿ ಅವನು ಹೆಚ್ಚು ಕಡಿಮೆ ತನ್ನನ್ನು ತಾನೇ ಕೂಡಿಟ್ಟುಕೊಂಡು ಬಿಟ್ಟ. ಕಾಲನಿಂದ ಅಟ್ಟಲ್ಪಟ್ಟ ಹಳೆಯ ಲೇಖಕರ ಆವಾಸಸ್ಥಾನದಂತಿದ್ದ ಗ್ರಂಥಾಲಯಗಳಲ್ಲಿ ಹಳೆಯ, ಧೂಳು ತುಂಬಿದ ಸಾಹಿತ್ಯವನ್ನು ಅರಗಿಸಿಕೊಳ್ಳುತ್ತಾ, ಗಂಟೆಗಟ್ಟಲೆ ಕಳೆಯುತ್ತಿದ್ದ ಅವನು ಒಂದು ರೀತಿಯಲ್ಲಿ ಕೊಳೆತ ಸಾಹಿತ್ಯದ ಭಕ್ಷಣೆಮಾಡುವ ಭೂತವೇ ಆದ.

ವೂಲ್ಫ್‌ಗಾಂಗ್ ಖಿನ್ನ ಪ್ರವೃತ್ತಿಯ ಜೀವಿಯಾಗಿದ್ದರೂ ತನ್ನ ಕಲ್ಪನಾವಿಲಾಸದಲ್ಲಿದ್ದಾಗ ಬಹಳ ಉತ್ಸುಕನಾಗಿರುತ್ತಿದ್ದ. ಹೊರ ಪ್ರಪಂಚದಲ್ಲಿ ಮುನ್ನಡೆಯಲು ಅವನಿಗೆ ಬಹಳೇ ಸಂಕೋಚವಾಗುತ್ತಿತ್ತು. ಒಂದು ರೀತಿಯಲ್ಲಿ ಅವನು ಸ್ತ್ರೀ ಸೌಂದರ್ಯದ ವಿಚಿತ್ರ ಆರಾಧಕನೆಂದೇ ಹೇಳಬೇಕು. ತನ್ನ ಏಕಾಂತವಾಸದಲ್ಲಿ ಅತಿ ತಾನು ನೋಡಿದ ಆಕೃತಿಗಳೊಡನೆ, ಸುಂದರ ಮುಖಗಳೊಡನೆ ಪದೇ ಪದೇ ಮನೋಭೂಮಿಕೆಯಲ್ಲಿ ವಿಹರಿಸುತ್ತಿದ್ದ. ಅವನ ರಸಿಕ ಚಿತ್ತ ನೈಜ ಸೌಂದರ್ಯವನ್ನು ಮೀರಿದ ಸುಂದರ ಬಿಂಬಗಳನ್ನು ಅಲಂಕರಿಸುತ್ತಿತ್ತು.

ಅವನ ಮನಸ್ಸು ಈ ರೀತಿ ಭಾವಾವೇಶದಿಂದ ಹುಚ್ಚೆದ್ದ ಸ್ಥಿತಿಯಲ್ಲಿದ್ದಾಗ ಒಂದು ಕನಸು ಅವನ ಮೇಲೆ ಅಸಾಧಾರಣ ಪರಿಣಾಮ ಬೀರಿತು. ಅದೊಂದು ಅನುಪಮ ಸುಂದರಿಯ ಮುಖ. ಅವರ ಮುಖ ಮುದ್ರೆ ಎಷ್ಟೊಂದು ಆಕರ್ಷಕವಾಗಿತ್ತೆಂದರೆ ಅದು ಅವನ ಸ್ವಪ್ನದಲ್ಲಿ ಪದೇ ಪದೇ ಕಾಣಿಸಿಕೊಂಡಿತು. ಅದು ಹಗಲಿನಲ್ಲಿ ಅವನ ಯೋಚನೆಗಳನ್ನು ಬೇಟೆಯಾಡಿತು, ಇರುಳಿನಲ್ಲಿ ನಿದ್ರೆಯನ್ನು ಕಸಿಯಿತು, ಒಟ್ಟಿನಲ್ಲಿ ಆ ಕನಸಿನಿಂದ ಅವನು ಹುಚ್ಚನಂತೆಯೇ ಆದ. ಇದು ಬಹಳ ಕಾಲದವರೆಗೂ ಸಾಗಿತು.

ಹೀಗಿತ್ತು ಗಾಟ್‌ಫ್ರಾಯಿಡ್ ವೂಲ್ಫ್‌ಗಾಂಗನ ಸ್ಥಿತಿ ನಾನು ಮೊದಲು ಹೇಳಿದ ಸಮಯದಲ್ಲಿ. ಅವನು ಆ ಬಿರುಗಾಳಿಯ ರಾತ್ರಿಯಲ್ಲಿ ತಡವಾಗಿ ಹಳೆಯ ಮಂಕು ಕವಿದ ಬೀದಿಗಳ ಮೂಲಕ

ಮನೆಗೆ ವಾಪಸ್ಸಾಗುತ್ತಿದ್ದ. ಕ್ರಾಂತಿ ವಿರೋಧಿಗಳನ್ನು ಸಾರ್ವಜನಿಕವಾಗಿ ವಧಿಸುತ್ತಿದ್ದ ಸ್ಥಾನದ ಬಳಿ ಅವನು ಬಂದಾಗ ಆಕಾಶದಲ್ಲಿ ಥಳ್ಳನೆ ಮಿಂಚೊಂದು ಮಿಂಚಿ ಹಳೆಯ ಹೋಟೆಲಿನ ಮೇಲೆ ನರ್ತಿಸಿತು. ಅದರ ಪ್ರಖರ ಪ್ರಕಾಶ ಮಸುಕಿನ ಬಯಲಿನ ರಹಸ್ಯವನ್ನು ಒಮ್ಮೆಲೇ ಹೊರಗೆಳೆಯಿತು. ವೂಲ್ಫ್‌ಗಾಂಗ್ ಚೌಕವನ್ನು ದಾಟುತ್ತಿ-ದ್ದಂತೆಯೆ ಭೀತಿಯಿಂದ ಹಿಂದಕ್ಕೆ ಸರಿದ. ಅವನು ಘಾಸಿ ಯಂತ್ರದ ಸಮೀಪಕ್ಕೇ ಬಂದಿದ್ದ. ಎಂತಹ ಗಳಿಗೆಯದು! ವೀರರ, ಸದ್ಗೃಹಸ್ಥರ ರಕ್ತದಿಂದ ತೊಯ್ದ ಆ ಭಯಂಕರ ಯಂತ್ರ ಸಿದ್ಧವಾಗಿಯೇ ಇತ್ತು. ಅದೇ ದಿನ ಅದು ಬಹಳಷ್ಟು ಕುತ್ತಿಗೆಗಳ ರುಚಿ ನೋಡಿತ್ತು. ಶಾಂತವಾದ, ನಿದ್ರಿಸುತ್ತಿರುವ ಆ ನಗರದಲ್ಲಿ ಹೊಸ ಬಲಿಗಾಗಿ ಕಾಯುತ್ತಾ ನಿಂತಿತ್ತು.

ವೂಲ್ಫ್‌ಗಾಂಗನ ಹೃದಯ ಧಸಕ್ಕೆಂದಿತು. ಅವನು ಆ ಯಂತ್ರವನ್ನು ಹಾಗೆಯೇ ಬಳಸಿಕೊಂಡು ಸಾಗುತ್ತಿರುವಾಗ ಮಂಚಿಕೆಯ ಮೆಟ್ಟಲುಗಳ ಮೇಲೆ ಛಾಯಾಕೃತಿಯೊಂದು ಕಾಣಿಸಿತು. ಮಿಂಚುಗಳು ಬಳ್ಳಿಬಳ್ಳಿಗಳಾಗಿ ಮಿಂಚಿ ಅದನ್ನು ಮತ್ತೂ ಸ್ಪಷ್ಟವಾಗಿ ತೋರಿಸಿದವು. ಅದೊಂದು ಕಪ್ಪನೆಯ ವಸ್ತ್ರಧರಿಸಿದ ಹೆಣ್ಣಿನಾಕೃತಿ. ಆಕೆ ಮಂಚಿಕೆಯ ಕೆಳ ಮೆಟ್ಟಲಿನ ಮೇಲೆ ಮುಂದಕ್ಕೆ ಬಾಗಿಕೊಂಡು ಕುಳಿತಿದ್ದಳು. ಮುಖ ಮಡಿಲಲ್ಲಿ ಹುದುಗಿತ್ತು. ಆಕೆಯ ಉಂಗುರು ಕೂದಲುಗಳು ನೆಲಕ್ಕೆ ಜೋತು ಬಿದ್ದು ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲಿ ತೋಯುತ್ತಿದ್ದವು. ಅವನು ಒಂದು ಕ್ಷಣ ಅಲ್ಲೇ ನಿಂತ. ಸ್ಮಾರಕದಲ್ಲಿ ಏನೋ ಒಂದು ವಿಧವಾದ ಭೀತಿಯೂ ಅಡಗಿತ್ತು. ಆಕೆ ಸಾಮಾನ್ಯಳಂತೆ ತೋರುತ್ತಿರಲಿಲ್ಲ. ಕ್ರಾಂತಿಯ ಉಸುರುಗಟ್ಟಿಸುವ ವಾತಾವರಣದಿಂದ, ಅದರ ಗರ್ಭದಲ್ಲಿಯ ಬಿಸಿಯಿಂದ ಅನೇಕ ಶ್ರೀಮಂತ ಜೀವಗಳು ಅನಾಥವಾಗಿ ಅಲೆಯುತ್ತಿರುವುದನ್ನು ಅವನು ನೋಡಿದ. ಬಹುಶಃ ಇದೂ ಒಂದು ಅಂತಹ ಜೀವಿಯೆ ಆಗಿರಬೇಕು; ತನಗೆ ಹೃದ್ಯವಾದದ್ದನ್ನೆಲ್ಲಾ ಈ ಯಂತ್ರ ಕ್ರೌರ್ಯದಿಂದ ಕೊಚ್ಚಿ ಹಾಕಿದ ಮೇಲೆ ಆಕೆ ಇಲ್ಲಿ ದುಃಖಿಸುತ್ತ ಕುಳಿತಿರಬೇಕು ಎಂದುಕೊಂಡ.

ಅವಳನ್ನು ಸಮೀಪಿಸಿ ಆತ ಕರುಣೆಯಿಂದ ಮೃದುವಾಗಿ ಕರೆದ. ಆಕೆ ತಲೆಯೆತ್ತಿದಳು. ಅವನನ್ನೇ ಶೀತಲ ಕ್ರೌರ್ಯದಿಂದ ದಿಟ್ಟಿಸಿದಳು. ಮಿಂಚಿನ ತೂಗು ಬೆಳಕಿನಲ್ಲಿ ನೋಡಿದ, ಹೌದು, ಅದೇ ಮುಖ. ಅದರಲ್ಲಿ ಸಂಶಯವೇ ಇಲ್ಲ. ಅವನನ್ನು ಕನಸಿನಲ್ಲಿ ಕಾಡುವ ಮುಖ! ಆದರೆ ಅದು ಪೇಲವವಾಗಿತ್ತು. ದುಗುಡ ಅಲ್ಲಿ ಹೆಪ್ಪುಗಟ್ಟಿದಂತಿತ್ತು. ಆದರೂ ಅದು ಹುಚ್ಚು ಹಿಡಿಸುವಷ್ಟು ಮೋಹಕವಾಗಿತ್ತು.

ಮನೋತುಮುಲದಿಂದ ನಡುಗಿದ ವೂಲ್ಫ್-ಗಾಂಗ್ ಮತ್ತೆ ಆಕೆಯನ್ನು ಮಾತನಾಡಿಸಲೆತ್ನಿಸಿದ. ಅಂಥ ಕರಾಳರಾತ್ರಿಯಲ್ಲಿ ಹಾಗೆ ಒಬ್ಬರೇ ಇರುವುದು ಸರಿಯಲ್ಲವೆಂದೂ ಬೇಕಾದರೆ ತಾನೂ ಆಕೆಯನ್ನು ಅವಳ ಸ್ನೇಹಿತರಲ್ಲಿಗೆ ತಲುಪಿಸುವುದಾಗಿಯೂ ಆತ ಹೇಳಿದಾಗ ಅವಳು ಆ ಯಂತ್ರದ ಕಡೆ ಬೊಟ್ಟು ಮಾಡಿ, "ಈ ಭೂಮಿಯಲ್ಲಿ ನನಗಾವ ಗೆಳೆಯರೂ ಇಲ್ಲ," ಎಂದಳು.

"ಆದರೆ ನಿನಗೊಂದು ಮನೆ ಎಂಬುದು ಇರಲೇಬೇಕಲ್ಲ?" ಅವನು ಕೇಳಿದ.

"ಇದೆಯೇನೋ ಮಸಣದಲ್ಲಿ," ಆಕೆ ಹೇಳಿದಳು.

ಆ ಮಾತುಗಳಿಂದ ವೂಲ್ಫ್‌ಗಾಂಗನ ಹೃದಯ ಕರಗಿತು.

"ನೀನು ತಪ್ಪುತಿಳಿಯುವುದಿಲ್ಲವಾದರೆ ನನ್ನ ವಸತಿಗೆ ಬಾ ಎಂದು ಆಹ್ವಾನಿಸುತ್ತೇನೆ. ಪ್ಯಾರಿಸ್ಸಿನಲ್ಲಿ ನನಗಾರೂ ಸ್ನೇಹಿತರಿಲ್ಲ. ನಾನೊಬ್ಬ ವಿದೇಶೀಯನೇ ಆದರೂ ಇಂಥ ಅಪರಾತ್ರಿಯಲ್ಲಿ ನನ್ನಿಂದ ನಿನಗೆ ಏನಾದರೂ ಒಳ್ಳೆಯದಾಗಬಹುದೆಂದು ನನಗೆ ಅನ್ನಿಸುತ್ತದೆ."

ಇನಿದನಿಯ ಆ ಯುವಕನ ಪ್ರಾಮಾಣಿಕ ಬಿನ್ನಹ ತನ್ನ ಪರಿಣಾಮ ಬೀರಿತು. ಆ ಅಪರಿಚಿತೆ ಅವನ ಮಾತುಗಳಲ್ಲಿ ವಿಶ್ವಾಸವಿಟ್ಟಳು.

ಅವಳ ಅಸ್ಥಿರವಾದ ಹೆಜ್ಜೆಗಳನ್ನು ಆಕೆ ಅನುಸರಿಸಿದಳು. ಬಿರುಗಾಳಿಯ ರಭಸ ಕಡಿಮೆಯಾಗಿತ್ತು. ಗುಡುಗು ದೂರದಲ್ಲೆಲ್ಲೋ ಮೊಳಗುತ್ತಿತ್ತು. ಪ್ಯಾರಿಸ್ ನಗರ ನಿಶ್ಶಬ್ದವಾಗಿತ್ತು. ನಾಳಿನ ಸ್ಫೋಟಕ್ಕಾಗಿ ಹೊಸ ಶಕ್ತಿಯನ್ನು ಸಂಚಯಿಸಲೋ ಎಂಬಂತೆ ಮನುಷ್ಯನ ಭಾವಾವೇಶದ

ಘುಗಿಲೂ ಒಂದು ಕ್ಷಣ ನಿದ್ರಿಸಿತು. ಅವರು ವಸತಿಯನ್ನು ತಲುಪಿದಾಗ ವೂಲ್ಫ್‌ಗಾಂಗನೊಂದಿಗೆ ಒಂದು ಹೆಣ್ಣೂ ಇರುವುದನ್ನು ನೋಡಿ ವೃದ್ಧ ಸ್ವಾಗತಗಾರ್ತಿ ಆಶ್ಚರ್ಯದಿಂದ ಹುಬ್ಬೇರಿಸಿದಳು.

ಮೊಟ್ಟಮೊದಲ ಬಾರಿ ಅವನು ತನ್ನ ಕೊಠಡಿಯ ಅವ್ಯವಸ್ಥೆಗಾಗಿ ನಾಚಿದ. ಒಂದೇ ವಿಭಾಗ ಅವರಲ್ಲಿ ಇದ್ದುದು. ಹಿಂದೆ ಅದು ಲಕ್ಸೆಂಬರ್ಗಿನ ಹೋಟೆಲ್ಲಾದ್ದರಿಂದ ಅದ್ಭುತ ಪೀಠೋಪಕರಣ ವ್ಯವಸ್ಥೆಯುಳ್ಳದ್ದಾಗಿತ್ತು. ಕೆಲಸಕ್ಕೆ ಬಾರದ ಕಾಗದ ಪುಸ್ತಕಗಳ ರಾಶಿ, ಇನ್ನೂ ಏನೇನೋ ವಿದ್ಯಾರ್ಥಿಯೊಬ್ಬನ ಮಾಮೂಲಿ ಸಾಮಾನುಗಳು ಅಪರ ಪೊಟ್ಟೆಯಲ್ಲಿ ಬಿರಿಯುತ್ತಿದ್ದವು. ತುಸು ಒಳಗಡೆ ಒಂದು ಪಕ್ಕದಲ್ಲಿ ಅವನ ಹಾಸಿಗೆ ಇತ್ತು.

ದೀಪಗಳು ಬಂದಾಗ ಆ ವಿಲಕ್ಷಣ ಯುವಕ ಮತ್ತೊಮ್ಮೆ ಆಕೆಯ ಸೌಂದರ್ಯವನ್ನು ಸವಿಯುವ ಅವಕಾಶ ಪಡೆದ. ಅವಳ ಸೌಂದರ್ಯದಿಂದ ಮತ್ತೇರಿದಂತವನಾದ. ಅವಳ ಮುಖ ಬಾಡಿತ್ತು. ಆದರೆ ಕಣ್ಣು ಕುಕ್ಕುವಷ್ಟು ಚೆಲುವಾಗಿತ್ತು. ಅದಕ್ಕೆ ಹಿನ್ನೆಲೆಯಾಗಿ ಅವಳ ಸುಂದರ ಉಂಗುರು ಕೂದಲುಗಳು ಬೊಂತೆ ಬೊಂತೆಯಾಗಿ ಇಳಿಬಿದ್ದಿದ್ದವು. ದೊಡ್ಡದಾದ ಹೊಳಪುಗಣ್ಣುಗಳಲ್ಲಿ ಕಾರುಣ್ಯದ ಇಣುಕುನೋಟವಿದ್ದು ಅವು ವಿಲಕ್ಷಣ ಭಾವನೆಯನ್ನು ಬಿಂಬಿಸುತ್ತಾ ಅದ್ವಿತಿಯವಾಗಿದ್ದವು. ತೆಳುವಾದ ಕರಿ ಉಡುಪನ್ನು ಧರಿಸಿದ್ದರಿಂದ ಅವಳ ಆಕೃತಿ ಕಡೆದ ಶಿಲ್ಪದಂತೆ ಪ್ರಮಾಣಬದ್ಧವಾಗಿತ್ತು. ಅತಿ ಸರಳವಾಗಿ ಅಲಂಕರಿಸಿಕೊಂಡಿದ್ದರೂ ದೇಹ ಚೆಲುವಾಗಿ ತೋರುತ್ತಿತ್ತು. ಕುತ್ತಿಗೆಯ ಸುತ್ತ ವಜ್ರಗಳನ್ನು ಜಿಗಿದಿದ್ದ ಅಗಲವಾದ ಕಪ್ಪುಪಟ್ಟಿಯನ್ನು ಬಿಟ್ಟರೆ ಅವಳು ಬೇರಾವುದೇ ಆಭರಣವನ್ನು ಧರಿಸಿರಲಿಲ್ಲ.

ಈ ಅನನುಭವಿ ವಿದ್ಯಾರ್ಥಿ ಅರಸಿ ಬಂದ ಮಾಣಿಕ್ಯವನ್ನು ಹೇಗೆ ರಕ್ಷಿಸುವುದೆಂದು ತಳಮಳಿಸಿದ. ತನ್ನ ಕೋಣೆಯನ್ನು ಅವಳಿಗೆ ಬಿಟ್ಟು ತಾನು ಬೇರೆಲ್ಲಿಯಾದರೂ ಆಶ್ರಯ ಪಡೆಯಲೆ? ಎಂದು ಯೋಚಿಸಿದ. ಛೇ! ಆ ಮಂದಹಾಸದಿಂದ ದೂರವಿರುವುದೇ? ಊಹುಂ, ಆ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಅಂದುಕೊಂಡ. ಇತ್ತ ಅವಳೂ ವಿಲಕ್ಷಣವಾಗಿ ಚಡಪಡಿಸುತ್ತಿದ್ದಳು. ಅವನ ಹಿತವಾದ ಕಾಳಜಿ ಮೊದಲು ಅವಳ ವಿಶ್ವಾಸವನ್ನು ಗೆದ್ದಿತ್ತು; ಮೆಲ್ಲಗೆ ಅವಳ ಹೃದಯವನ್ನೂ ಗೆದ್ದಿತು. ಅವಳು ಘಾತಿಯಂತ್ರದ ಸುದ್ದಿಯನ್ನೇ ಎತ್ತಲಿಲ್ಲ. ಮುದುಡಿ ಮಲಗಿದ್ದ ಮೊಗ್ಗು ಇಬ್ಬನಿಯ ಸ್ಪರ್ಶದಿಂದ ತಣ್ಣನೆ ಗಾಳಿಯ ಹಿತವಾದ ಜೋಗುಳದಿಂದ ತುಸು ತುಸುವೇ ಅರಳುವಂತೆ ಅವಳ ಮುಖ ಅರಳುತ್ತಿತ್ತು. ಮೊದಲಿನ ದುಃಖ ಓಡಿಹೋಗಿತ್ತು.

ಆ ಸಮ್ಮೋಹಕ ಗಳಿಗೆಯಲ್ಲಿ ಅವನು ಮೆಲ್ಲನೆ ತನ್ನ ಅಳಲನ್ನು ತೋಡಿಕೊಂಡ. ಆ ನಿಗೂಢ ಕನಸನ್ನೂ ಅವಳಿಗೆ ಹೇಳಿ ತನ್ನ ಅನುಮತಿಯಿಲ್ಲದೇ ಅವಳು ತನ್ನ ಹೃದಯ ಹೊಕ್ಕಿದ್ದನ್ನು ಕುರಿತು ಉದ್ಗರಿಸಿದಾಗ ಅವಳೂ ಆಶ್ಚರ್ಯಪಟ್ಟಳು. ಅವನ ಬಗ್ಗೆ ತನ್ನಲ್ಲೂ ಅದೇ ಭಾವವಿರುವುದಾಗಿ ಲಜ್ಜೆಯಿಂದ ಹೇಳಿದಳು. ಭಾವನೆಗಳ ಕಲಾತ್ಮಕ ವಿಸ್ತಾರವನ್ನು ಧಾರಾಳವಾಗಿ ಸೃಜಿಸುವ ಅನುಭವಿಸುವ ಉತ್ಸುಕ ಜೀವಿಗಳೆರಡು ದೈವಸಂಕಲ್ಪದಿಂದ ಹತ್ತಿರಕ್ಕೆ ಬಂದಿದ್ದವು.

ಅದು ಗೊಡ್ಡು ಪುರಾಣಗಳ ಕಾಲವಲ್ಲ. ಮೂಢನಂಬಿಕೆಯ ಸುರಮ್ಯ ವ್ಯಾಖ್ಯಾನಗಳನ್ನೆಲ್ಲ

ಮುಲಾಜಿಲ್ಲದೆ ಬದಿಗಿರಿಸಿ ವಿವೇಕದ ಒರೆಗಲ್ಲಿಗೆ ಹಚ್ಚಿದ ವಿಷಯಗಳನ್ನು ಸ್ವೀಕರಿಸುತ್ತಿದ್ದ ವೈಚಾರಿಕ ಕ್ರಾಂತಿಯ ಕಾಲ. ಮದುವೆಯ ವಿಧಿಯನ್ನೂ ವ್ಯವಸ್ಥೆಯನ್ನೂ ಸ್ವತಂತ್ರ ಮನಸ್ಸಿಗೆ ಅನಗತ್ಯವಾದ ಕಟ್ಟೆಂದು ತಿಳಿಯುತ್ತಿದ್ದ ದಿನಗಳವು. ವೂಲ್ಫ್‌ಗಾಂಗನೂ ಅದೇ ಮರ್ಜಿಯವನಲ್ಲವೆ?

"ನಾವೇಕೆ ಬೇರೆಯಾಗಬೇಕು? ನಮ್ಮ ಹೃದಯಗಳು ಬೆಸೆದಿವೆ. ಹೃನ್ಮನಗಳಿಂದ ಬದುಕನ್ನು ಒಟ್ಟಿಗೆ ಸ್ವಾಗತಿಸಲು ನಾವು ಪರಸ್ಪರ ಸಮ್ಮತಿಸಿದ್ದೇವೆ. ಇದಕ್ಕೆ ಅರ್ಥವಿಲ್ಲದ ಕಂದಾಚಾರಗಳ ಅನುಮತಿ ಬೇಕೇನು?" ಬಂಡೇಳುವ ಧ್ವನಿಯಲ್ಲಿ ಅವನು ಕೇಳಿದ. ಅದೇ ಭಾವನೆಯ ಬೆಳಕನ್ನು ತನ್ನ ಹೊಳಪುಗಣ್ಣುಗಳಲ್ಲಿ ತುಳುಕಿಸುತ್ತಾ ಅವಳು ಅವನು ಹೇಳಿದ್ದನ್ನು ಸುಮ್ಮನೆ ಆಲಿಸಿದಳು.

"ನಿನಗೆ ಮನೆಯೂ ಇಲ್ಲ; ಕುಟುಂಬವೂ ಇಲ್ಲ. ಅವೆಲ್ಲವನ್ನೂ ನಾನು ತುಂಬಿಕೊಡಲೆತ್ನಿಸಲೇ? ನಾವು ಒಬ್ಬರಿಗೊಬ್ಬರು ಸರ್ವಸ್ವವಾಗೋಣ. ಸಂಪ್ರದಾಯ ಅವಶ್ಯವಿದ್ದೆಯಾದರೆ ಇಗೋ–ಇಲ್ಲಿ ನನ್ನ ಕೈ–ನಾನು ಎಂದೆಂದಿಗೂ ನಿನ್ನವನಾಗಿರುತ್ತೇನೆಂದು ವಚನ ನೀಡುತ್ತೇನೆ," ಅವನು ಮುಂದುವರಿದ.

"ಎಂದೆಂದಿಗೂ?" ಅಪರಿಚಿತೆ ಗಂಭೀರವಾಗಿ ಕೇಳಿದಳು.

"ಎಂದೆಂದಿಗೂ!" ದೃಢವಾಗಿ ಪುನರುಚ್ಚರಿಸಿದ ವೂಲ್ಫ್‌ಗಾಂಗ್

ಚಾಚಿದ ಅವನ ಕೈಯೊಳಗೆ ಅವಳ ಕೈ ಸೇರಿಕೊಂಡಿತು. ಅಲ್ಲಿಗೆ ಭರವಸೆ, ನಂಬಿಕೆ, ವಿಶ್ವಾಸ ಎಲ್ಲವೂ ಅವರ ಸಂಗಮವನ್ನು ಸಮ್ಮತಿಸಿದವು.

ಮಾರನೆಯ ಬೆಳಿಗ್ಗೆ ವಿದ್ಯಾರ್ಥಿ ತನ್ನ ವಧುವನ್ನು ನಿದ್ರಿಸಲು ಬಿಟ್ಟು ಮುಂಜಾನೆಯೇ ಎದ್ದು ತನ್ನ ಬದಲಾದ ಪರಿಸ್ಥಿತಿಗಾಗಿ ತುಸು ವಿಶಾಲವಾಗಿರುವ ಕೋಣೆಯನ್ನು ಹುಡುಕಲು ಹೋದ. ಅವನು ಹಿಂತಿರುಗಿದಾಗ ತುಸು ಪಕ್ಕಕ್ಕೆ ವಾಲಿ ತಲೆಯ ಮೇಲೆ ತೋಳನ್ನಿಟ್ಟುಕೊಂಡು ಅವಳು ಮಲಗಿರುವುದನ್ನು ಕಂಡ. ಎಬ್ಬಿಸಲು ಕೂಗಿದ. ಅವಳು ಉತ್ತರಿಸಲಿಲ್ಲ. ಆ ತೊಡಕಾದ ಭಂಗಿಯಿಂದ ಅವಳನ್ನು ಎಚ್ಚರಿಸಲು ಆ ಕೈಯನ್ನು ತೆಗೆದಾಗ ಅದು ತಣ್ಣಗಿತ್ತು– ನಾಡಿಯ ಬಡಿತವೇ ಇರಲಿಲ್ಲ. ನಿಸ್ತೇಜವಾದ ಆ ಮುಖದಲ್ಲಿ ಪ್ರೇತದ ಕಳೆಯಿತ್ತು. ಅವಳು ಹೆಣವಾಗಿದ್ದಳು.

ವೂಲ್ಫ್‌ಗಾಂಗ್ ದಿಕ್ಕೆಟ್ಟು ಮನೆಯೇ ನಡಗುವಂತೆ ಭಯಂಕರವಾಗಿ ಚೀತ್ಕರಿಸಿದ. ತಳಮಳ, ಗೊಂದಲಗಳ ದೃಶ್ಯ ಹಿಂಬಾಲಿಸಿತು. ಪೋಲೀಸರಿಗೆ ಕರೆ ಹೋಯಿತು. ಪೋಲೀಸ್ ಅಧಿಕಾರಿ ರೂಮನ್ನು ಪ್ರವೇಶಿಸಿ ಹೆಣವನ್ನು ನೋಡುತ್ತಲೇ ಹಿಂದಕ್ಕೆ ಮೆಟ್ಟಿಬಿದ್ದ.

"ಓ ದೇವರೆ! ಈ ಹೆಂಗಸು ಇಲ್ಲಿಗೆ ಹೇಗೆ ಬಂದಳು?" ಎಂದು ಅವನು ಕಿರುಚಿದ.

"ನಿ ಮ ಗೇ ನಾ ದ ರೂ ಆಕೆಯ ಬಗ್ಗೆ ಗೊತ್ತೇನು?" ದಿಗ್ಭ್ರಾಂತನಾದ ವೂಲ್ಫ್‌ಗಾಂಗ್ ಕಾತರದಿಂದ ಕೇಳಿದ.

"ಅವಳು... ಅವಳು... ನಿನ್ನೆ ಗಲ್ಲಿಗೇರಿಸಲ್ಪಟ್ಟಿದ್ದಳು." ಅವನು ಮುಂದೆ ನುಗ್ಗಿ ಹೆಣದ ಕತ್ತಿನಲ್ಲಿದ್ದ ಕಪ್ಪು ಪಟ್ಟಿಯನ್ನು ಕಿತ್ತೆಸೆದ. ರುಂಡ ಮುಂಡದಿಂದ ಬೇರೆಯಾಗಿ ನೆಲಕ್ಕುರುಳಿತು.

ಉನ್ಮಾದದಿಂದ ಉತ್ಕಂಠಿತನಾಗಿ ಎದೆ ಬಿರಿಯುವಂತೆ ಬೊಬ್ಬಿಟ್ಟ ಆ ವಿದ್ಯಾರ್ಥಿ, "ಭೂತ! ಭೂತ. ನನ್ನನ್ನು ಹಿಡಿದು ಬಿಟ್ಟಿದೆ! ನಾನು ಕಳೆದುಹೋದೆ. ಅಯ್ಯೋ ಕಳೆದುಹೋದೆ ನಾನೂ..."

ಅವನನ್ನು ಸಾಂತ್ವನಗೊಳಿಸಲು ಯತ್ನಿಸಿದರು ಅವರು. ಆದರೆ ಯಾವುದೋ ದುಷ್ಟ ಶಕ್ತಿ ಸತ್ತ ಶರೀರವನ್ನು ಪುನಃ ಪ್ರವೇಶಿಸಿ ಅವನನ್ನು ಬಲಿತೆಗೆದುಕೊಳ್ಳಲಿಕ್ಕಾಗಿಯೇ ಬಂದಿತೆಂಬ ಆ ನಂಬಿಕೆ ಅವನಲ್ಲಿ ಬೇರೂರಿಬಿಟ್ಟಿತ್ತು. ಅವನು ಈ ಭ್ರಾಂತಿಯಿಂದ ನರಳುತ್ತಾ ಹುಚ್ಚನಾದ ಮತ್ತು ಒಂದು ದಿನ ಹುಚ್ಚಾಸ್ಪತ್ರೆಯಲ್ಲಿ ತೀರಿಕೊಂಡ."

ಇಲ್ಲಿಗೆ ಆ ವೃದ್ಧ ಮನುಷ್ಯ ತನ್ನ ಕಥೆಯನ್ನು ನಿಲ್ಲಿಸಿದ.

"ಇದು ಕತೆಯೋ ಅಥವಾ ನಿಜಕ್ಕೂ ನಡೆದದ್ದೋ?" ಆಲಿಸುತ್ತಿದ್ದವ ಕುತೂಹಲದಿಂದ ಪ್ರಶ್ನಿಸಿದ. "ಓಹೋ ಅದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ ಆ ವಿದ್ಯಾರ್ಥಿಯೇ ನನಗೆ ಇದನ್ನೆಲ್ಲಾ ಹೇಳಿದ್ದ. ಮತ್ತೆ ಅವ ನನಗೆ ಎಲ್ಲಿ ಸಿಕ್ಕನೆನ್ನುತ್ತೀಯೆ? ಪ್ಯಾರಿಸ್ಸಿನ ಹುಚ್ಚಾಸ್ಪತ್ರೆಯಲ್ಲಿ." ●

ಮೈಸೂರಿನಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿರುವ ಬನುಮಯ್ಯ ಕಾಲೇಜಿನಲ್ಲಿ ನಾನು ಬಿ. ಕಾಂ. ಮೂರನೆಯ ಭಾಗ ಓದುತ್ತಿದ್ದೆ. ನನ್ನ ತಾತ ಕಳಿಸುತ್ತಿದ್ದ ಹಣದಿಂದ ಮೈಸೂರಿನಲ್ಲಿ ಓದಲು ಸಾಧ್ಯವಾಗುತ್ತಿರಲಿಲ್ಲವಾದ್ದರಿಂದ ನಾನು ಯುನಿವರ್ಸಿಟಿಯ ತೋಟಗಾರಿಕೆ ವಿಭಾಗದಲ್ಲಿ ಕೆಲಸ ಮಾಡಿ ತಿಂಗಳಿಗೆ ಐವತ್ತು ರೂಪಾಯಿಗಳನ್ನು ಸಂಪಾದಿಸುತ್ತಿದ್ದೆ. ನನ್ನ ಗೆಳೆಯನೊಬ್ಬ ತನ್ನ ರೂಮಿನಲ್ಲಿ ಇರಲು ಜಾಗ ಕೊಟ್ಟಿದ್ದ.

ಕಾಲೇಜಿನ ದಿನಗಳು ಮುಗಿದು ಪರೀಕ್ಷೆಗೆ ಹಣ ಕಟ್ಟುವ ದಿನ ಹತ್ತಿರ ಬಂತು. ಆಗ ನನಗೆ ಎಂದಿನಂತೆ ಹಣದ ತೊಂದರೆ. ಎಲ್ಲರನ್ನೂ ಕೇಳಿದ್ದಾಯಿತು. ಆದರೆ ದಿನ ಹತ್ತಿರ ಬರುತ್ತಿದ್ದರೂ ಯಾರೂ ಹಣ ಕೊಡಲಿಲ್ಲ. ನಮ್ಮ ತಾತ ಕಾಶಿಗೆ ಹೋಗಿ ಬರುವುದರೊಳಗೆ ಸಮಯ ಮೀರುತ್ತಿತ್ತು. ಆದ್ದರಿಂದ ದಿನವೂ ನಾನು ಕಾಲೇಜಿನ ಆಫೀಸಿಗೆ ಹೋಗಿ, "ಫಾರ್ಮು ಸ್ವೀಕರಿಸುವ ಕೊನೆಯ ದಿನವನ್ನು ಮುಂದೂಡಿದ್ದಾರೆಯೆ?" ಎಂದು ಕೇಳುತ್ತಿದ್ದೆ. ಫೀ ಕಟ್ಟಲು ಕೊನೆಯ ದಿನಾಂಕ ಮುಗಿಯಿತು. ನಾನು ಸೋತು ಊರಿಗೆ ಹಿಂದಿರುಗುವ ಯೋಚನೆಯಲ್ಲಿದ್ದಾಗ ಆಕಸ್ಮಾತ್ತಾಗಿ ಒಂದು ದಿನ ಕಾಲೇಜಿನ ನೋಟೀಸ್ ಬೋರ್ಡಿನ ಮೇಲೆ ಪರೀಕ್ಷೆಗೆ ಹಣ ಕಟ್ಟಿದವರ ಹೆಸರುಗಳನ್ನು ಹಾಕಿದ್ದರು, ನಾನು ಕಣ್ಣರಳಿಸಿ ನೋಡಿದೆ. ಎರಡು ಮೂರು ಬಾರಿ ನೋಡಿದೆ. ನನ್ನ ಹೆಸರು ಅಲ್ಲೆಲ್ಲೂ ಕಾಣಲಿಲ್ಲ. ಆಶ್ಚರ್ಯದಿಂದ ಆಫೀಸಿನಲ್ಲಿ ವಿಚಾರಿಸಿದೆ, ಬಹಳ ಬಿಸಿಯಲ್ಲಿದ್ದ ಕ್ಯಾಶಿಯರ್, "ನಿನ್ನ ಫೀಸ್ ನೀನೇ ಕಟ್ಟಿರಬೇಕು, ಇನ್ನಾರು ಕಟ್ಟುತ್ತಾರೆ?" ಎಂದರು. ಆದರೆ ಸಾಯಂಕಾಲ ಅವರನ್ನು ಮೃದುವಾಗಿ ಕೇಳಿದಾಗ, "ಅದನ್ನು ಹೇಳಬೇಕಾದರೆ ನೀನು ಓದು ಮುಗಿಸಿದರೆ ಮಾತ್ರ," ಎಂದರು.

ಬಿ. ಕಾಂ. ಪಾಸಾಯಿತು. ಆದರೆ ಫಲಿತಾಂಶ ಪ್ರಕಟವಾಗುವ ಮುನ್ನವೇ ನಾನು ತಂದೆ-ತಾಯಿಗಳೊಂದಿಗೆ ಬೆಂಗಳೂರು ಸೇರಿದ್ದೆ. ಅದೃಷ್ಟವಶಾತ್ ಕೆಲಸ ಸಿಕ್ಕಿತು. ಕೆಲಸ ಇನ್ನೂ ತಾತ್ಕಾಲಿಕವಾಗಿದ್ದರಿಂದ ರಜೆ ಸಿಕ್ಕಲಿಲ್ಲ. ಕಾಯಂ ಆದ ತಕ್ಷಣ ಮೂರು ದಿನ ರಜೆ ಹಾಕಿ, ನನಗೆ ಫೀ ಕಟ್ಟಿ ಸಹಾಯ ಮಾಡಿದವರ ಪತ್ತೆ ಹಚ್ಚಿ ನಮಸ್ಕರಿಸಲು ಬಸ್ಸು ಹತ್ತಿದೆ.

ಮೈಸೂರಿನಲ್ಲಿ ಸ್ಟಾಪಿನಿಂದ ನೆಗೆದು ಸೀದಾ ಕಾಲೇಜಿನ ಒಳಹೊಕ್ಕು ಮೆಟ್ಟಿಲನ್ನು ಒಂದೊಂದಾಗಿ ತುಳಿಯುತ್ತಾ, ನನ್ನ ಕಾಲೇಜಿನ ಕಹಿ-ಸಿಹಿ ನೆನಪುಗಳನ್ನು ಸವಿಯುತ್ತಾ ಕೈಲಿ ಸಿಹಿ ತಿಂಡಿ ಪೊಟ್ಟಣವನ್ನು ಹಿಡಿದುಕೊಂಡು ನನಗೆ ಸಹಾಯ ಮಾಡಿದವರ ಪಾದಕ್ಕೆ ಎರಗಬೇಕೆಂದು ಆಫೀಸಿಗೆ ನುಗ್ಗಿದೆ.

ನನ್ನನ್ನು ಕಂಡ ಕಾಲೇಜಿನ ಕ್ಯಾಶಿಯರರಿಗೆ ಬಹಳ ಆನಂದವಾಯಿತು. ಅವರು ನನಗೆ ಕಾಫಿ ತರಿಸಿ ಕುಡಿಸಿದರು. ಮರುಕ್ಷಣವೇ ನಾನು, "ಸಾರ್ ಅವತ್ತು ನನ್ನ ಫೀಸ್ ಕಟ್ಟಿದವರು ಯಾರು? ಎಲ್ಲಿದ್ದಾರೆ?" ಎಂದೆ. ಕೂಡಲೇ ಅವರು ಹೇಳಿದ ಹೆಸರು ಕೇಳಿ ನನಗೆ ಆಶ್ಚರ್ಯ ಹಾಗೂ ಆನಂದ ಒಟ್ಟಿಗೇ ಆದವು. ನನ್ನ ಫೀಸ್ ಕಟ್ಟಿದ ವ್ಯಕ್ತಿ ನನ್ನ ಕಾಲೇಜಿನಲ್ಲೇ ಅಟೆಂ-

ಡರ್ ಆಗಿ ಕೆಲಸ ಮಾಡುತ್ತಿದ್ದ, ನೌಕರಿಯಿನ್ನೂ ತಾತ್ಕಾಲಿಕವಾಗಿಯೆ ಇದ್ದ 'ಹನಮು' ನಾನು ದಿನವೂ ಕೊನೆ ದಿನಾಂಕದ ಬಗ್ಗೆ ಕೇಳುತ್ತಿದ್ದುದನ್ನು ಗಮನಿಸುತ್ತಿದ್ದ. ಆತ ಆ ತಿಂಗಳ ಸಂಬಳವನ್ನು ಅಡ್ವಾನ್ಸ್ ತೆಗೆದುಕೊಂಡು ನನ್ನ ಫೀಸ್ ಕಟ್ಟಿ ಯಾರಿಗೂ ಹೇಳಬಾರದೆಂದು ಕ್ಯಾಶಿಯರರಿಂದ ಮಾತು ತೆಗೆದುಕೊಂಡಿದ್ದನಂತೆ. ನಾನು,"ಆತನೆಲ್ಲಿ?"ಎಂದು ಕೇಳಿದಾಗ ಸಿಕ್ಕ ಉತ್ತರ ನನಗೆಬಹಳ ದುಃಖ ತಂದಿತು. ಅವನು ಎರಡು ತಿಂಗಳ ಹಿಂದೆಯೇ ಕೆಲಸ ಬಿಟ್ಟು ತನ್ನ ಹಳ್ಳಿ ಸೇರಿದ್ದ. ಅವನು ಯಾವ ಊರಿನವನು ಎಂದಾಗ ಬನ್ನೂರು ತಾಲೂಕನವನು ಎಂದಷ್ಟೇ ಉತ್ತರ ಸಿಕ್ಕಿತೇ ವಿನಾ ನಿರ್ದಿಷ್ಟವಾದ ವಿಳಾಸ ದೊರೆಯಲಿಲ್ಲ.

ನನಗೆ ಹನಮು ಸಿಕ್ಕುತ್ತಾನೋ ಇಲ್ಲವೋ ಎನ್ನುವುದನ್ನು ಅರಿಯೆ. ಆದರೆ ಅತ ಕಲಿಸಿದ, "ಸಣ್ಣ ಕೆಲಸದಲ್ಲಿದ್ದರೂ ದೊಡ್ಡ ಮಾರ್ಗದಲ್ಲಿ ನಡೆಯಬಹುದು." ಎಂಬ ಪಾಠವನ್ನು ಮಾತ್ರ ಮರೆಯುವದಿಲ್ಲ.

—ಹೆಚ್. ಕೆ. ರಮೇಶ್

ಸುಮಾರು ಆರೇಳು ವರ್ಷಗಳ ಹಿಂದೆ ನಡೆದ ಘಟನೆ. ಅಗ ನಾನು ಜೀವವಿಮಾ ಏಜೆಂಟನಾಗಿದ್ದೆ. ನನ್ನ ಪಾಲಿಸಿದಾರರೊಬ್ಬರು ಅಕಾಲ ಮೃತ್ಯುವಿಗೀಡಾಗಿದ್ದರು. ಅವರ ವಿಧವೆಯ ಮೂಲಕ ಲೈಫ್ ಇನ್ಶೂರೆನ್ಸ್ ಪಾಲಿಸಿಯ ಕ್ಲೇಮ್ ಹಣ ಸಂದಾಯ ಮಾಡಲು ಅರ್ಜಿಯನ್ನು ಸಲ್ಲಿಸಲಾಗಿತ್ತು.

ಈ ಸಂದರ್ಭದಲ್ಲಿ ನನಗೊಂದು ಕೌಟುಂಬಿಕ ಸಮಸ್ಯೆಯು ಎದುರಾಯಿತು. ಇದರಿಂದಾಗಿ ಎಲ್ಐಸಿ ಸಲ್ಲಿಸಬೇಕಾಗಿದ್ದ ದಾಖಲೆ ಪತ್ರಗಳನ್ನು ಕಳುಹಿಸಲು ತಡವಾಯಿತು. ಪರಿಣಾಮವಾಗಿ ಮೃತಪಟ್ಟ ಪಾಲಿಸಿದಾರರ ವಿಧವೆಗೆ ಇನ್ಶೂರೆನ್ಸ್ ಹಣ ಬರಲಿಲ್ಲ.

ಮೇಲಿನ ವಿಷಯ ತಿಳಿದ ರಾಮಣ್ಣನೆಂಬ ಇನ್ನೊಬ್ಬ ಪಾಲಿಸಿದಾರರು ನನ್ನ ಮನೆಗೆ ಬಂದರು. "ಚಾರ್ಲಿ ಸೋಜರ್ ಹೆಂಡ್ತಿಗೆ ಇನ್ಶೂರೆನ್ಸಿನ ಹಣ ಇನ್ನೂ ಸಿಕ್ಕಿಲ್ಲವಂತೆ; ಇನ್ನು ನಮ್ಮ ಹಣಕ್ಕೂ ಇದೇ ಅವಸ್ಥೆಯಾದೀತೇ? ಇನ್ಶೂರೆನ್ಸ್ ಕಂಪೆನಿಯನ್ನು ಹೇಗೆ ನಂಬುವುದು?" ಎಂದು ಸಂಶಯದಿಂದ ಕೇಳಿದರು.

ನಾನು ಅವರನ್ನು ಕೂರಿಸಿ, ನನ್ನ ಹೆಂಡ್ತಿಯನ್ನು ಕರೆದು ಅವರಿಗೆ ಒಂದು ಕಪ್ ಚಹಾ ಕೊಡಿಸಿದೆ. ನಂತರ ಇನ್ಶೂರೆನ್ಸ್ ಕ್ಲೇಮ್ ಬಗ್ಗೆ ಸರಿಯಾಗಿ ವಿವರಿಸಿ ಅವರನ್ನು ಸಮಾಧಾನಪಡಿಸಿ ಮನೆಗೆ ಕಳುಹಿಸಿದೆ.

ನಾಲ್ಕೈದು ದಿವಸ ಕಳೆದಿರಬಹುದು. ರಾಮಣ್ಣ ರಸ್ತೆ ಅಪಘಾತದಲ್ಲಿ ತೀರಿಹೋದರು. ನನಗೆ ದಿಗ್ಭ್ರಮೆಯಾಯಿತು.

ಯಾರು ಇನ್ಶೂರೆನ್ಸ್ ಕ್ಲೇಮ್ ಹಣದ ಪಾವತಿಯ ಬಗ್ಗೆ ಸಂಶಯಗೊಂಡು, ಅದು ಪಾವತಿಯಾಗುವುದನ್ನು ಕಣ್ಣಾರೆ ಕಂಡು, ತನ್ನ ಇನ್ಶೂರೆನ್ಸ್ ಹಣದ ಬಗ್ಗೆ ನಿಶ್ಚಿಂತರಾಗಿ ಇರಬಯಸಿದ್ದರೋ ಅವರೇ ಈ ಲೋಕದಿಂದ ಕಣ್ಮರೆಯಾದರು.

ನನ್ನ ಕ್ರಿಯಾಶಕ್ತಿಗೆ ಮೇಲಿನ ಘಟನೆ ಚಾಲನೆ ನೀಡಿತು. ತಡಮಾಡದೆ ನಾನು ಎಲ್ಐಸಿಗೆ ಅವಶ್ಯ ದಾಖಲೆಪತ್ರಗಳನ್ನು ಒದಗಿಸಿ ಎರಡೂ ಕ್ಲೇಮ್ ಚೆಕ್ಕುಗಳು ಮೃತಪಟ್ಟವರಿಬ್ಬರ ವಾರಸುದಾರರಿಗೆ ಸಿಗುವಂತೆ ಏರ್ಪಾಟು ಮಾಡಿದೆ.

—ಗೋಪಾಲಕೃಷ್ಣ ಭಂಡಾರಿ

ಪುಣೆ

ಕೆ. ಚಂದ್ರಮೌಳಿ

ಗ್ರೀಕ್ ತತ್ವಜ್ಞ ಪ್ಲೇಟೋವಿನ ಅಕಾಡೆಮಿಯ ಹೆಬ್ಬಾಗಿಲಿನ ಮೇಲೆ 'ನಿನ್ನನ್ನು ತಿಳಿದುಕೋ' ಅನ್ನುವ ಮಾತುಗಳು ದಪ್ಪಕ್ಷರಗಳಲ್ಲಿ ಇದ್ದುವಂತೆ. ಪುಣೆಯ ಹೆಬ್ಬಾಗಿಲಿನಲ್ಲಿ ಎಂದಾದರೂ ಯಾರಾದರೂ, ಏನಾದರೂ ಬರೆಸಿದರೆ ಆ ಪದಗಳು 'ನಮಗೆಲ್ಲಾ ತಿಳಿದಿದೆ' ಎಂದೇ ಆಗಿರುವುದರಲ್ಲಿ ಸಂದೇಹವೇ ಇಲ್ಲ. ಇಲ್ಲಿಯ ಪ್ರತಿಯೊಬ್ಬರಿಗೂ ತಮ್ಮ ವಿಚಾರವೇ ಸರಿ, ತಮಗೆ ತಿಳಿದಿದ್ದೇ ಸರಿ. 'ಆ ಮಾತು ಟಿಳಕರು ಹೇಳಿರಬಹುದು; ಆದರೆ ನಾ ಹೇಳುವುದರಲ್ಲಿ ಏನೂ ತಪ್ಪಿಲ್ಲ. ನಂಗೆ ತಿಳಿದದ್ದು ನಾನು ಮಾಡ್ತೀನಿ. ಯಾರನ್ನೇನು ಕೇಳುವುದು ?' ಅನ್ನುವ ಗುಣ ಇಲ್ಲಿಯ ಜನರಲ್ಲಿ ತುಂಬಿದೆ. ಈ ಗುಣವನ್ನು ಉದ್ಧಟತನವೆನ್ನಿ, ಸ್ವಾಭಿಮಾನವೆನ್ನಿ, ಏನೇ ಅನ್ನಿ ಅಂತೂ ಅದು ಗಾಳಿಯಲ್ಲಿ ಮೆಣಸಿನ ಘಾಟಿಗಿಂತಲೂ ಜೋರಾಗಿ ತುಂಬಿದೆ. ಪುಣೆಯ ರಸ್ತೆಯಲ್ಲಿ ತಿರುಗಾಡುತ್ತಾ ಅಲ್ಲಿಯ ಗಾಳಿ ಸೇವನೆ ಮಾಡಿ ಎರಡು ಸೀನಿದರೆ ಸಾಕು, ನಮ್ಮೂರ ಕೋಲೇಬಸವನೂ ಕತ್ತು ಬಿಗಿಹಿಡಿದು 'ನಾನೇ ಸರಿ' ಎನ್ನುವುದನ್ನು ಕಲಿತುಬಿಡುತ್ತದೆ. ಪಾಂಡವರು ಅರಗಿನ ಮನೆಯಿಂದ ಪಾರಾಗಿ ಬಿಹಾರದ ಛೋಟಾ ನಾಗಪುರದ ನೆಲದಲ್ಲಿ ತಿರುಗಾಡುತ್ತಾ ಇದ್ದಾಗ ಕುಂತಿಗೆ ಮನೋವಿಕಾರವಾಯಿತಂತೆ. 'ಓಹೋ ಇಲ್ಲಿಯ ನೆಲದ ಗುಣವೇ ಚಿತ್ತ ವಿಕಾರ, ಕಾಮ ಪ್ರೇರಕ', ಎಂದು ಪಾಂಡವರನ್ನು ಹೊರಡಿಸಿಕೊಂಡು ಆ ಜಾಗ ಬಿಟ್ಟಳಂತೆ. ಅಂದಿನಿಂದ ಆ ಜಾಗವನ್ನು 'ಪಾಂಡವ ತ್ಯಜ್ಯ ಭೂಮಿ' ಎಂದೇ ಕರೆಯುತ್ತಾರೆ. ಇದೇ ರೀತಿ ಪುಣೆಯ ನೆಲದ ಗುಣ ಉದ್ಧಟತನ, ಸ್ವಾಭಿಮಾನವನ್ನು ಕೆರಳಿಸುತ್ತದೆ.

ಪುಣೆಯ ಹೆಬ್ಬಾಗಿಲಿನಿಂದ ಒಳಗೆ ಹೋದೊಡನೆ ನೋಡುವುದು ಸೈಕಲ್ಲುಗಳು. ಪುಣೆ ಸೈಕಲ್‌ಗಳ ಊರು. ಎಲ್ಲೆಲ್ಲಿ ನೋಡಿದರೂ ಸೈಕಲ್ಲುಗಳೇ. ಕೆಂಪಿಲಿ, ಕಪ್ಪಿಲಿ, ದೊಡ್ಡಿಲಿ, ಚಿಕ್ಕಿಲಿ,



[ಲೇಖಕರ ಮುಂಬರಲಿರುವ 'ಒಂಟಿ ಪ್ರಯಾಣಿಕನ ನೂರೆಂಟು ಕಥೆಗಳು' ಎಂಬ ಪ್ರವಾಸ ಕಥನದಿಂದ]

ಅಪ್ಪಲಿ, ಅಮ್ಮಲಿ ... ಅನ್ನುವ ಹಾಗೆ ಪುಣೆಯ ರಸ್ತೆಯಲ್ಲಿ ಐದು ನಿಮಿಷ ನಿಂತರೆ ಸಾಕು ಚಡ್ಡಿ, ಪೈಜಾಮಾ, ಪ್ಯಾಂಟು, ಪಂಚೆ, ಸೀರೆ, ಲಂಗ, ಪುಟ್ಟಮರಿ, ದೊಡ್ಡ ಮಗ, ದಪ್ಪ ಮುದುಕ, ಸಣ್ಣ ಯುವಕ... ಎಲ್ಲವೂ, ಎಲ್ಲರೂ ಸೈಕಲ್‌ಗಳ ಮೇಲೇ ಓಡಾಡುತ್ತಾ ಇರೋದನ್ನು ನೋಡಬಹುದು: ಪುಣೆಯಲ್ಲಿನ ಗಾಳಿ ಘಾಟಾಗಿದ್ದರೂ, ನಮ್ಮಣ್ಣನ ಪರಮ ಸ್ನೇಹಿತರಿಗಾಗಿ ಒಬ್ಬ ಅಣ್ಣನಿಗಾಗಿ ಅಲ್ಲಿ ಹೋಗಿರುತ್ತಿದ್ದೆ. ಆದ್ದರಿಂದ ಊರಿಂದ ಕಾಶಿಗೆ ಹೋಗುತ್ತಾ ಬರುತ್ತಾ ಪುಣೆಯಲ್ಲಿ ಅರ್ಧ ದಿನ, ಒಂದು ದಿನ ನಿಲ್ಲದೆ ಮುಂದಕ್ಕೆ ಹೋಗ್ತಾನೇ ಇರಲಿಲ್ಲ. ಆ ಅರ್ಧದಿನದಲ್ಲಿ ಒಂದು ಹೋಟೆಲೂಟ, ಒಂದು ಸಿನೆಮಾ, ಊರ ಪೇಟೆಯ ಒಂದು ಸುತ್ತು ಎಲ್ಲಾ ಆಗಿಹೋಗುತ್ತಿತ್ತು. ಹೀಗಾಗಿ ಪುಣೆ ಗೊತ್ತಿಲ್ಲಾಂತನೂ ಇಲ್ಲ, ಚೆನ್ನಾಗಿ ಗೊತ್ತಿದೇಂತನೂ ಇಲ್ಲ. ಮನೆ ಮನೆ ಸುತ್ತುವ ಅಂಚೆ ಪೇದೆಗೆ ಮನೆಯವರ ಮುಖ ಪರಿಚಯ ಆಗಿರುವ ಹಾಗೆ ನನಗೂ ಪುಣೆಯ, ಅಲ್ಲಿಯ ಜನರ ಪರಿಚಯ ಆಗಿದೆ.

ಪುಣೆಯ ಇನ್ನೊಂದು ವಿಶೇಷ ಅಂದರೆ ಅಲ್ಲಿಯ ಹೆಂಗಸರು. ಮಧ್ಯಮ ತರಗತಿಯಿಂದ ಮೇಲ್ಪಟ್ಟ ಪ್ರತಿ ಹೆಣ್ಣಿಗೂ ಎರಡು ಜಡೆ. ಆಕೆ ಎಂಟರ ತುಂಟಿಯೇ ಇರಲಿ, ಹದಿನೆಂಟರ ಬಂಟಿಯೇ ಇರಲಿ, ಮೂವತ್ತೆಂಟರ ಡೊಣಪಿಯೇ ಆಗರಲಿ, ನಲ್ವತ್ತೆಂಟರ ಜಗಳಗಂಟಿಯೇ ಆಗರಲಿ... ಅವಳಿಗೆ ಎರಡು ಜಡೆ ಬೇಕೇ ಬೇಕು. ಬೆಕ್ಕಿನ ಕಣ್ಣುಗಳು, ಎರಡು ಜಡೆ-ಹಾಕಿದ ಹೆಣ್ಣನ್ನು ಎಲ್ಲಿ ನೋಡಿದರೂ ಅವಳು ಪುಣೆ ಯುವತಿಯೆಂದು ನಿರ್ವಿವಾದವಾಗಿ ಗುರುತಿಸಬಹುದು. ಪುಣೆಯ ಹೆಂಗಸರು ಅಂದಾಗ ನನ್ನ ಮನಸ್ಸಿನಲ್ಲಿ ಮೂಡಿ ಬರುವ ಚಿತ್ರವೊಂದೇ ಒಂದು: ರೈಲು ಡಬ್ಬಿ, ತುಂಬಿದೆ, ಕೂರಲೂ ಜಾಗವಿಲ್ಲ. ಆಗ ಕಿಟಕಿಯಿಂದ ತೂರಿಬಂದ ಮಹಿಳೆ—ಎರಡು ಜಡೆಯವಳು ಎಂದು ಹೇಳಲೇ ಬೇಕಾಗಿಲ್ಲ—ಕಿಟಕಿಯ ಅಂಚಿನ ಮೇಲೆ ಕೂತಿರುವುದು, ಇಡೀ ಕಿಟಕಿ ಒಂದಿಂಚು ಜಾಗವೂ ಇಲ್ಲದಂತೆ ಮುಚ್ಚಿರುವುದು!

ಪುಣೆಯ ಆತಿಥ್ಯ ಬಲು ಬಲು ವಿಚಿತ್ರ. ಪುಣೆಯ ಜನ ಪ್ಯಾರಿಸ್ಸಿನ ಜನಗಳಂತೆ ಅನ್ನಬಹುದು. ಪ್ಯಾರಿಸ್ಸಿನವ ತುಂಬಾ ನಿಕಟ ಸ್ನೇಹಿತರನ್ನೂ ಮನೆಯೊಳಗೆ ಕರೆಯುವುದಿಲ್ಲವಂತೆ, ಮನೆಯ ಮುಂದಿನ ಬಾಗಿಲಲ್ಲಿ ನಿಂತು ಗಂಟೆಗಟ್ಟಲೆ ಹರಟೆಹೊಡೆದರೂ ಒಳಗೆ ಬನ್ನಿ ಅನ್ನುವುದಿಲ್ಲವಂತೆ. ಬೆಂಗಳೂರಿನಲ್ಲಿ ಒನ್ ಬೈ ಟೂ ಕಾಫಿ ಬರೀ ಹೋಟಲಿನಲ್ಲಿ ಮಾತ್ರ. ಇದೇ ರೀತಿ ಪುಣೆಯ ಹೋಟಲಲ್ಲಿ ಸಿಂಗಲ್ ಚಾ—ಅಂದರೆ ಕಾಲುಲೋಟ—ಪ್ರಸಿದ್ಧಿ. ಆದರೆ ಅಷ್ಟೇ, ಅಲ್ಲಿಗೇ ಹೋಲಿಕೆ ಮುಕ್ತಾಯ. ಮನೆಯಲ್ಲಿ ಒಂದು ಲೋಟ ಕಾಫಿ, ಇಲ್ಲವೇ ಚಹ, ಇಲ್ಲವೇ ಹಾರ್ಲಿಕ್ಸ್, ಇಲ್ಲವೇ ಪಾನಕ, ಏನೂ ಬೇಡದಿದ್ದರೆ ಮಜ್ಜಿಗೆ ಅಂತ ಬಲವಂತ ಮಾಡಿ ಆತಿಥ್ಯ ಮಾಡುತ್ತಿದ್ದ ನಮಗೆ, ನಮ್ಮಂತಹ ಕರ್ನಾಟಕ ಮಂದಿಗೆ ಪುಣೆಯ ಮನೆಗಳ ಆತಿಥ್ಯ ನೋಡಿ ದಂಗುಬಡಿಯುತ್ತದೆ. ಅವರು ಮನೆ ಒಳಗೆ ಬನ್ನಿ ಅನ್ನದಿದ್ದರೂ ನೀವೇ ಪುಣೆಯ ಸ್ನೇಹಿತನ ಮನೆಯೊಳಗೆ ನುಗ್ಗಿ ಒಳಗೆ ಕೂತೇ ಬಿಟ್ಟಿರಿ ಅಂದುಕೊಳ್ಳಿ. ಆಗೇನು? ಆಗೇನೂ ಇಲ್ಲ, ನೀವು ಯಾವಾಗ ಎದ್ದು ಹೋಗ್ತೀರಾ ಅಂತ ನಿಮ್ಮ ಅತಿಥಿ ಗಡಿಯಾರದ ಕಡೆಯೇ ನೋಡುತ್ತಿರುತ್ತಾನೆ. ಒಂದು ಪಕ್ಷ ಮನೆಯಾಕೆ ಬಂದು ನಮಸ್ಕಾರ ಮಾಡಿದರೆ, ಅದೇ ದೊಡ್ಡ ಆತಿಥ್ಯ, ನಮಸ್ಕಾರ ಖರ್ಚು ಮಾಡುವುದೇ ಬಹಳ ಧಾರಾಳತನವಂತೆ. ನಿಮ್ಮ ಮೊಂಡುತನದಿಂದ ನೀವು ನಾಲ್ಕಾರು ಬಾರಿ ಹೀಗೆ ಅವರ ಮನೆಗೆ ಹೋದರೆ, ಒಂದು ಸಲವಾದರೂ ನಿಮಗೆ ಚಾ ಕೊಡುವ ಯೋಚನೆ ಬಂದೀತು. ಮನೆಯಾಕೆ ಒಂದು ಸಲ ಕೇಳಿತೋ ಇಲ್ಲವೋ ಅನ್ನುವ ಹಾಗೆ ಚಾ ಮಾಡಲಾ ಎಂದು ಪ್ರಶ್ನೆ ತೇಲಿಬಿಟ್ಟು ಎಲ್ಲೋ ನುಸುಳಿ ಹೋಗಿಬಿಡುತ್ತಾಳೆ. ನಾಲ್ಕಾರು ಸ್ನೇಹಿತರೇನಾದರೂ ಸೇರಿ ಚಾ ಮಾಡಲೇ ಬೇಕಾದ ವಿಪರೀತಕ್ಕಿಟ್ಟುಕೊಂಡಾಗ, ಮನೆಯಾಕೆ ನೀವು ಚಾ ಕುಡಿತೀರಾ, ನೀವು ಕುಡಿತೀರಾ ಎಂದು ಪ್ರತಿಯೊಬ್ಬರನ್ನೂ ಕೇಳುತ್ತಾಳೆ. ಸಭ್ಯತೆಯ ಸೋಗಿನಿಂದ ಚಾ ಬೇಡ ಅಂದ ಕೆಲವರು. ಅರ್ಥಕಷ್ಟ ಅಂತ ಇನ್ನೊಂದಿಬ್ಬರು. ನಾನಾ

ಈಗ ತಾನೇ ಕುಡಿದೆ ಅಂತ ಮನೆಯಾತ ಉತ್ತರ ಕೊಟ್ಟಿದ್ದನ್ನು ಕೇಳಿ, ಮನೆಯಾಕೆ ಲೆಕ್ಕ ಮಾಡಿ ಒಂದೇ ಕಪ್ಪು ಚಾ ತರುತ್ತಾಳೆ. ಪುಣೆಯ ಜನರ ಈ ಅತೀವ ಆತಿಥ್ಯದ ಸೊಬಗನ್ನು ಕಂಡವರು, ಅನುಭವಿಸಿದವರು, ವಿವರಿಸಿದವರು ಒಂದು ದಿನದ ವಾಸಿಯಾದ ನಾನೊಬ್ಬನೇ ಅಲ್ಲ, ಪುಣೆಯಲ್ಲಿ ಒಂದೆರಡು ದಶಕ ಕಳೆದ ನಮ್ಮಣ್ಣನ ಸ್ನೇಹಿತರು. ಸರಿ, 'ನೀನೊಬ್ಬ! ನನಗೆ ಚಾ ಬೇಡ ಅಂತ ಹೇಳಿದರೆ ಅದು ಅವರ ಸಭ್ಯತೆಯಲ್ಲ, ಅದು ನಾಜೂಕಿನ ಲೆಕ್ಕಾಚಾರ, ವ್ಯವಹಾರ ಅಷ್ಟೆ. ಇವತ್ತು ಒಂದು ಪಕ್ಷ ಇವರ ಮನೇಲಿ ಚಾ ಕುಡಿದರೆ ಇನ್ನೊಂದು ದಿನ ಅವರಿಗೆ ನಮ್ಮನೇಲೂ ಚಾ ಕೊಡ್ಲೇಬೇಕು. 'ಅದ್ಯಾಕೆ ಖರ್ಚು ಅನ್ನೋ ಲೆಕ್ಕಾಚಾರ.' ಅಂತ ನನ್ನ ಅಭಿಪ್ರಾಯವನ್ನ ಸರಿಪಡಿಸಿದವರು ಪುಣೆಯ ಇನ್ನೊಬ್ಬ ಸ್ನೇಹಿತರು. ನೀವು ಹೊಸ ಸ್ನೇಹಿತರಾಗಿದ್ದರೆ ಒಂದು ಲೋಟ ಸಾದಾ ನಲ್ಲಿಯ ತಿಳಿ ತಿಳಿನೀರು, ತುಂಬ ಪರಿಚಿತರಾದರೆ, ಹಳಬರಾದರೆ ನಿಮಗೆ ರಿಫ್ರಿಜರೇಟರಿನ ತಣ್ಣೀರು–ಸುಮ್ಮನೆ ಎಲ್ಲರಿಗೂ ಖರ್ಚಿನ ತಣ್ಣೀರೇ! ಯಾವುದೋ ವಿಶೇಷ ಸಮಾರಂಭದಲ್ಲಿ ಪುಣೆಯ ಮನೆಯಲ್ಲಿ ಗೋಲಿಯ ಗಾತ್ರದ (ಡಾಮಾ ಗೋಲಿಯ ಅಲ್ಲ, ಸಾದಾ ಗೋಲಿ) ಉಂಡೆ ನೋಡಿ ಇದೇನೆಂದು ಆಶ್ಚರ್ಯಪಡುತ್ತಿದ್ದೆ. ನನ್ನ ಮನಸ್ಸಿನ ಯೋಚನೆ ತಿಳಿದೋ ಏನೋ ಮನೆಯೊಡತಿ ವಿವರಣೆ ಕೊಟ್ಟರು, 'ಇದು ರವೆ ಉಂಡಿ, ತಿನ್ನಿ. ದೊಡ್ಡ ಉಂಡಿ ಮಾಡಿದರೆ ಎಲ್ಲಾ ಅರ್ಧ ತಿಂದು ಅರ್ಧಹಾಗೇ ತಟ್ಟೇಲಿ ಬಿಟ್ಟು ಹೋಗಿ ಬಿಡ್ತಾರೆ. ಅದಕ್ಕೋಸ್ಕರ ಸ್ವಲ್ಪ ಸಣ್ಣದಾಗಿ ಮಾಡಿದೆ. ಅಂದರೆ ಆ ಉಂಡಿ ದೊಡ್ಡದಾಗೇ ಇದೆ, ಇನ್ನೂ ಸಣ್ಣದಾಗಬಹುದಿತ್ತೆಂದು ಸೂಕ್ಷ್ಮಾರ್ಥ. ಒಂದು ಸಲ ಊಟಕ್ಕೆ ಕುಳಿತಾಗ –ನನ್ನ ಅದೃಷ್ಟಕ್ಕೆ ಏನೇನೋ ಇಲ್ಲ– ತಟ್ಟೆ ತುದಿಗೆ ಎರಡು ಸಣ್ಣ ಚಮಚ, ಮೊಳಕೆ ಬಂದ ಬೇಳೆ, ಎರಡು ಚಮಚ ತರಕಾರಿ ಬಿತ್ತು, ಚಪಾತಿಯ ಅರ್ಧ ತುಂಡು ಬಿದ್ದಾಗ ನನಗೆ ಅರ್ಥವೇ ಆಗಲಿಲ್ಲ. ಎಲ್ಲರಂತೆ ಬಾಯಾಡಿಸಿದ ಮೇಲೆ ಮನೆಯೊಡತಿ 'ಅರ್ಧೀ, ಅರ್ಧೀ?' (ಅರ್ಧ



ಅರ್ಧ) ಎಂದು ಅರ್ಧಾರ್ಧ ಚಪಾತಿ ಮುಂದೆ ಹಿಡಿದಾಗ ಪುಣೆಯ ಛಿನ್ ಬೈ ಟೂದ ವಿಶೇಷತೆ ಅರ್ಥವಾಯಿತು. ಊಟ ಮುಗಿಸಿ ಹೊಟ್ಟೆ ನೀವಿಕೊಳ್ಳುತ್ತಿದ್ದಾಗ ಒಂದು ಕುಂಕುಮ ಡಬ್ಬಿಯ ಗಾತ್ರದ ಪುಟ್ಟ ಡಬ್ಬಿಯಲ್ಲಿ ಏನೋ ಪುಡಿ, ಅವರ ಪಕ್ಕದಲ್ಲಿ ಕಿವಿ ಕೊಳೆ ತೆಗೆಯುವ ಗುಗ್ಗೆ ಕಡ್ಡಿಯನ್ನೂ ಎದುರಿಗೆ ಹಿಡಿದರು. ನನ್ನ ಕಿವಿಯ ಕೊಳೆ ಎಲ್ಲರ ಮುಂದೆ ನಾನೇಕೆ ತೆಗೆಯಲಿ ಎಂದು ಸುಮ್ಮನಿದ್ದಾಗ, 'ತಗೋಳ್ಳಿ ಸುಪಾರೀ ಅಡಿಕೆ ಪುಡಿ ಅಂದರು. ಎಲ್ಲರನ್ನೂ ನೋಡಿ, ಗುಗ್ಗೆಕಡ್ಡಿಯಂತ ಆ ಚಮಚದಲ್ಲಿ ಅರ್ಧ ಚಮಚ ಅಡಿಕೆ ಪುಡಿ ಬಾಯಿಗೆಸೆದುಕೊಂಡು ಅಂದು ಬಿರಿಯುಂಡಿದ್ದ ಪಕ್ವಾನ್ನವನ್ನು ಜೀರ್ಣಿಸಿಕೊಂಡೆ.

ಪುಣೆಯವರ ಸಂಶಯ ಪ್ರವೃತ್ತಿ ಮದ್ರಾಸು ಕಡೆಯ ತಮಿಳರ ಸಂಶಯ ಪ್ರವೃತ್ತಿಯನ್ನೂ ಮೀರಿಸುತ್ತದೆ ಅನ್ನಬಹುದು. ಪುಣೆಯವರೇ ಆದ, ಮರಾಠಿಯ ಪ್ರಸಿದ್ಧ ಲೇಖಕ ಪು. ಲ. ದೇಶಪಾಂಡೆಯವರೇ ವಿವರಿಸಿರುವಂತೆ ಪುಣೆಯ ಮಂದಿಯ ಸಂಶಯ ಪ್ರವೃತ್ತಿ ಅರ್ಥಮಾಡಿಕೊಳ್ಳಬೇಕಾದರೆ ಒಂದು ಬುಟ್ಟಿಯ ತುಂಬ ಬಿಳಿ ಬೆಕ್ಕಿನ ಮರಿಗಳನ್ನು ತುಂಬಿಟ್ಟು.

ಅವರ ಮೇಲೆ ಇನ್ನೊಂದು ಬುಟ್ಟಿ ಮುಚ್ಚಿಡಬೇಕು. ಸ್ವಲ್ಪ ಹೊತ್ತಿನ ನಂತರ ಇದ್ದಕ್ಕಿದ್ದ ಹಾಗೇ ಮೇಲಿನ ಬುಟ್ಟಿಯನ್ನು ತೆಗೆದುಬಿಟ್ಟಾಗ ಚಿಕ್ಕನ ಮರಿಗಳ ನೂರು ಕಣ್ಣುಗಳು ಏಕಾಏಕಿಯೆಂದು ನೂರು ಕಡೆ ನೋಡುವ ದೃಶ್ಯದಲ್ಲಿ ಅಡಗಿರುವ ಅನುಮಾನ, ಹೆದರಿಕೆಯ ಭಾವಗಳೇನಿವೆಯೋ ಅವೆಲ್ಲಾ ಪುಣೆಯವರಿಗೆ ಹುಟ್ಟು ಸ್ವಭಾವಗಳು. ಇವರ ಅನುಮಾನ ಸ್ವಭಾವಕ್ಕೆ ಇನ್ನೊಂದು ಕಥೆಯೂ ಇದೆ. ಒಮ್ಮೆ ಪುಣೆಯ ಡೆಕ್ಕನ್ ಜಿಮಖಾನದ ಬಸ್ ನಿಲ್ದಾಣದಲ್ಲಿ ಒಬ್ಬರು ಮುದುಕರು ಬಸ್ಸಿಗಾಗಿ ಕಾಯುತ್ತಿದ್ದರಂತೆ. ಯಾವನೋ ಯುವಕ ಅವರ ಹತ್ತಿರ ಬಂದು ಗಂಟೆ ಎಷ್ಟಾಯಿತೆಂದು ಕೇಳಿದಾಗ, ಅವರು ಬಹಳ ತಾತ್ಸಾರದಿಂದ 'ಕಾಲಾಯಿತು' ಎಂದು ಗುಡುಗಿ ಮುಖ ತಿರುಗಿಸಿದರಂತೆ. ಅವರ ಹಿಂದೆಯೇ ನಿಂತಿದ್ದ ಅವರ ಸ್ನೇಹಿತರು 'ಇದೇನು ನಿಮ್ಮ ವಿಚಿತ್ರ ಉತ್ತರ?' ಎಂದು ಕೇಳಿದಾಗ ಹೀಗೆಂದು ವಿವರಣೆ ಕೊಟ್ಟರಂತೆ. 'ನಾನು ಐದೂ ಕಾಲು ಅಂದಿದ್ದರೆ, ಅವನು ಧನ್ಯವಾದ ಅಂತಿದ್ದ. ಆ ಮೇಲೆ ಬಸ್ ಎಷ್ಟು ಹೊತ್ತಿಗೆ ಅಂತ ಕೇಳುತ್ತಿದ್ದ, ನಾನು ಐದೂವರೆ ಅಂದರೆ, ಧನ್ಯವಾದ ಅಂತಿದ್ದ. ಬಸ್ ಬಂದಾಗ ನನ್ನ ಜೊತೆಯೇ ಹತ್ತಿ ನನ್ನ ಪಕ್ಕ ಕೂರುತ್ತಿದ್ದ. ಎರಡು ನಿಮಿಷ ಬಿಟ್ಟು ನೀವೆಲ್ಲಿಗೆ ಅಂದಾಗ, ಗ್ಗುರುವಾರ ಪೇಟೆಗೆ ಅಂದಿದ್ದರೆ ಧನ್ಯವಾದ, ನಾನೂ ಅಲ್ಲಿಗೇ ಹೊರಟೆ ಅಂತಿದ್ದ. ಅಲ್ಲಿ ಎಲ್ಲಿದ್ದೀರಾ ಅಂದಾಗ, ನನ್ನ ವಿಳಾಸ ಹೇಳಿದರೆ ಧನ್ಯವಾದ ಅಂತಿದ್ದ. ಒಂದು ದಿನ ಮನೆ ಹುಡುಕಿಕೊಂಡು ಬಂದು ನಿಮ್ಮ ಮನೆಗೆ ಬಂದೆ ಅಂದಾಗ, ಚಾ ಕೊಡಬೇಕೋ ಅಂದರೆ ಧನ್ಯವಾದ ಅಂತಿದ್ದ. ನನ್ನ ಮಗಳು ಚಾ ಕೊಟ್ಟರೆ ಧನ್ಯವಾದ ಅಂತೆಂದು ಅವಳನ್ನೆ ದೃಷ್ಟಿಸಿ ನೋಡುತ್ತಿದ್ದ. ಆ ಮೇಲೆ ನನ್ನ ಮಗಳನ್ನು ಮದುವೆ ಆಗ್ತೀನಿ ಅಂತ ಅವನಂದಿದ್ದರೆ... ಏನು ಗತಿ?' ಅಂದರಂತೆ ಮುದುಕರು. 'ಅಂದರೇನು ಬಂತು, ಆಯ್ತು ಮದುವೆ ಆಗು, ಬಹಳ ಧನ್ಯವಾದ ಅಂತ ನೀವು ಹೇಳಬಹುದಿತ್ತು,' ಎಂದು ಸ್ನೇಹಿತರು. ನಕ್ಕಾಗ ಮುದುಕರು ಸಿಟ್ಟು ಮಾಡಿಕೊಂಡು, 'ನೀನೊಬ್ಬ ಮೂರ್ಖ. ನಾನೂ ಮೂರ್ಖ ಅಂದುಕೊಂಡಿಯೇನು? ಕೈಗಡಿಯಾರ ಕಟ್ಟಲೂ ದುಡ್ಡಿಲ್ಲದ ಬಿಕನಾಸಿಯನ್ನು ನನ್ನ ಅಳಿಯನಾಗಲು ಒಪ್ಪಿಕೊಂಡು ಬಿಡ್ತಿದ್ದೆ ಅಂದುಕೊಂಡಿಯೇನು?' ಎಂದು ಕೂಗಿದರಂತೆ. ಹೀಗೆ ಹೊಸಬರು ಯಾರು ಮನೆಯೊಳಗೆ ಮನದೊಳಗೆ ಬಂದು ಏನು ಮಾಡಿಬಿಡುತ್ತಾರೋ ಎಂದು ಪುಣೆಯವರಿಗೆ ಸದಾ ಸಂಶಯ, ಸದಾ ಹೆದರಿಕೆ.



ಮೊದಲ ಸಲ ಸ್ನೇಹಿತರೊಬ್ಬರ ಮನೆ ಹುಡುಕಿಕೊಂಡು ಹೋಗಿದ್ದೆವು. ಅಲ್ಲಲ್ಲಿ ಒಂದಿಬ್ಬರನ್ನು ವಿಚಾರಿಸಿದರೆ ರಸ್ತೆಯ ಗುರುತೂ ಹೇಳಲು ತಯಾರಿರಲಿಲ್ಲ. ಸ್ನೇಹಿತರಿದ್ದ ರಸ್ತೆಗೆ ಬಂದ ಮೇಲೂ ಯಾರೂ ಅವರ ಮನೆಯ ಗುರುತು ಹೇಳಲಿಲ್ಲ. ಕೊನೆಗೆ ನಮ್ಮ ಅದೃಷ್ಟಕ್ಕೆ ಮನೆ ಬಿಟ್ಟು ಹೊರಟಿದ್ದ ಸ್ನೇಹಿತ ಎದುರಿಗೇ ಸಿಕ್ಕಿದ್ದ, ಅವನ ಮನೆಗೆ ಹೋದೆವು. ಮೊದಲು ನೆರೆಮನೆಗೆ ಬಂದು ವಿಚಾರಿಸಿದ್ದರೂ ಆತ ಆ ಮನೆ ತನಗೆ ಗೊತ್ತಿಲ್ಲ ಅಂದಿದ್ದ. ಈ ವಿಚಾರ ಸ್ನೇಹಿತರಿಗೆ ಹೇಳಿದಾಗ ಅವರಿಗೂ ಆಶ್ಚರ್ಯವಾಗಲಿಲ್ಲ. 'ಹೌದ್ರೀ. ನೀವು ನನ್ನ ಸ್ನೇಹಿತರೆಂದು ಅವರಿಗೇನು ಗೊತ್ತು? ನೀವು ನನ್ನ ಮನೆ ಗೊತ್ತು

ಮಾಡಿಕೊಂಡು ನಾಳೆ ಕಳ್ಳತನ ಮಾಡಿದ್ರೆ? ಅಂತ ಅವರಿಗೆ ಹೆದರಿಕೆ' ಅಂದರು. ಅಯ್ಯೋ ದೇವ್ರೆ, ಇದೆಂಥಾ ಸಂಶಯ. ಎಂಥಾ ಮುನ್ನೆಚ್ಚರಿಕೇಂತ ಮೂಗಿನ ಮೇಲೆ ಬೆರಳಿಟ್ಟುಕೊಂಡೆ.

ಪುಣೆಯ ಇನ್ನೊಂದು ವಿಶೇಷ ಅಂದರೆ ಇಲ್ಲಿಯ ಜನರ ಲೆಕ್ಕಾಚಾರ. ಉದಾಹರಣೆಗೆ ಇಲ್ಲಿಯವರ ತರಕಾರಿ ವ್ಯಾಪಾರ ನೋಡಿ. ಸೇರು ಪಂಚೇರು ತೂಕದ ತರಕಾರಿಯ ಬೆಲೆಗಳಿಗೆ ಒಗ್ಗಿಹೋಗಿದ್ದ ನನಗೆ ಮೊದಲ ಸಲ, ಪುಣೆಯ ತರಕಾರಿಯ ಬೆಲೆ ಕೇಳಿ ದಂಗಾಗಿತ್ತು. ಬೆಂಡೆ ಕಾಯಿ ಬೆಲೆ ವಿಚಾರಿಸಿದರೆ ಹನ್ನೆರಡಾಣೆ ಅಂತ ಕೇಳಿ ನಮ್ಮೂರ ಸೇರಿಗೆ ಒಂದು ರೂಪಾಯಿಗಿಂತಲೂ ಬಹಳ ಅಗ್ಗ ಅಂತ ಆಶ್ಚರ್ಯಪಟ್ಟೆ. ಆ ಬೆಲೆ ಸೇರಿಗಲ್ಲ, ಪಾವುಸೇರಿಗೇಂತ ಆ ಮೇಲೆ ತಿಳಿಯಿತು. ಇಲ್ಲಿಯ ಬೆಲೆಗಳೇ ಅಷ್ಟು, ಶಂಬರ್‌ಗ್ರಾಂ (ನೂರು ಗ್ರಾಂ), ಹೆಚ್ಚೆಂದರೆ ಪಾವು ಕಿಲೋಗೇ ಎಲ್ಲರೂ ಬೆಲೆ ಹೇಳುವುದು, ಅದಕ್ಕಿಂತ ಹೆಚ್ಚು ಕೊಂಡರೆ ನೀವು ಯಾವುದೋ ಹೋಟೆಲ್ಲಿಗಾಗಿ ಕೊಳ್ಳುತ್ತಿದ್ದೀರಾ ಅಂದು ಕೋತಾರೆ. ಇದೇ ರೀತಿ ಬೇರೆ ಲೆಕ್ಕಾಚಾರಗಳನ್ನೂ ನೋಡಿರಿ. ನಮ್ಮ ಮನೆಗಳ ಮೂರು ಒಬ್ಬೆ ಉಪ್ಪಿಟ್ಟಿಗೆ ಬದಲಾಗಿ ಪುಣೆಯ ಮೂರು ಚಮಚ (ಪೋಹೆ) ಅವಲಕ್ಕಿ ಒಗ್ಗರಣೆ, ನಮ್ಮ ಚಕ್ಕುಲಿ ಕೋಡುಬಳೆಗಳ ಬದಲಾಗಿ ಇಲ್ಲಿಯ ಒಂದು ಹಿಡಿ ಶೇವ್ ಚೂಡಾ, ಸಂಕ್ರಾಂತಿಯಿಂದ ಶಿವರಾತ್ರಿಯ ವರೆಗೂ ನಡೆಯುವ ನಮ್ಮ ಎಳ್ಳು ಬೆಲ್ಲದ ಬದಲಾಗಿ ಇಲ್ಲಿ ಕೊಡುವ ಎರಡೇ ಎರಡು ಕುಸುರಿ ಕಾಳು (ಅದನ್ನೂ ತಿನ್ನುವ ಹಾಗಿಲ್ಲ, ಮತ್ತೆ ಅದನ್ನು ಕೊಟ್ಟವನಿಗೇ ವಾಪಸ್ಸು ಕೊಡಬೇಕು,) ನಮ್ಮ ಬರೀ ರೇಷ್ಮೆಯ ಸೀರೆಯ ಬದಲಾಗಿ ಇಲ್ಲಿ ಸರಳವಾದ ನೂಲಿನ ಸೀರೆ, ಚಿನ್ನದ ಸರದ ಬದಲಾಗಿ ಕರೀಮಣಿ ತುಂಬಿದ ದಾರದ ಸರ, ಮೂರು ದಿನದ ಮದುವೆಯ ಬದಲಾಗಿ ಮೂರು ಗಂಟೆಯ ಮದುವೆ, ಬಂದವರಿಗೆಲ್ಲ ಮದುವೆಯ ಭೂರೀ ಭೋಜನದ ಬದಲಾಗಿ ಇಲ್ಲಿ ಕೊಡುವ ಒಂದು ಚಾ, ಒಂದು ಪಾನ್, ಇದೆಲ್ಲಾ ನೋಡಿದ ಮೇಲೆ ಪುಣೆಯ ಲೆಕ್ಕಾಚಾರದ ಬಗ್ಗೆ ಆಡುವ ಮಾತು ಉತ್ಪ್ರೇಕ್ಷೆಯಲ್ಲ ಅನ್ನಿಸುತ್ತದೆ. ಹಬ್ಬ ಮಾಡಿದರೆ ನಮ್ಮ ಕಡೆ ನಾಲ್ಕಾರು ಹೆಂಗಸರನ್ನೂ ಕರೆದು ತೆಂಗಿನ ಕಾಯಿ. ಎಲೆ ಅಡಿಕೆ ಕೊಡುವುದು ವಾಡಿಕೆ. ಪುಣೆಯಲ್ಲಿ ಕಾಯಿ ಇಲ್ಲ, ಬರೀ ಎಲೆ ಅಡಿಕೆ; ಅದೂ ನಾಲ್ಕು ಜನ ಹೆಂಗಸರು ಒಟ್ಟಿಗೆ ಸೇರಿ 'ಸಹಕಾರೀ ಸಂಘ'ದ ತರಹ ಇನ್ನೂ ನಾಲ್ಕು ಜನಕ್ಕೆ ಒಟ್ಟಿಗೆ ಎಲೆ–ಅಡಿಕೆ ಕೊಡುತ್ತಾರೆ. ಯಾರ ಮನೆಯಲ್ಲಾದರೂ ಹೆಚ್ಚು ಹೊತ್ತಾಗ ಸಂಗೀತದ ರೆಕಾರ್ಡ್ ಹಾಕಿದರೆ ಎರಡಕ್ಕಿಂತ ಹೆಚ್ಚು ಹಾಡು ಕೇಳುವ ಹಾಗಿಲ್ಲ. ''ಎರಡು ರೆಕಾರ್ಡ್ ಕೊಂಡಿದ್ದೀನಿ. ಇನ್ನೂ ಬೇಕಾದರೆ ನಾನೇ ಹಾಡ್ತೀನಿ,' ಅಂತಾರೆ ಈ ಲೆಕ್ಕಗುಣಿಗಳು. ಅಡಿಗೆ ಮನೆಯಲ್ಲಿ ಒಲೆ ಹಚ್ಚಬೇಕಾದರೆ ಸೊಸೆ ಕಡ್ಡಿಪೆಟ್ಟಿಗೆ ಉಪಯೋಗಿಸಿದರೆ 'ಎಂಥಾ ದುಂದುಗಾರ್ತಿ ಸೊಸೆ ಮನೆ ತೊಳೆದುಹಾಕುವ ಸೊಸೆ ಸಿಕ್ಕಿಬಿಟ್ಟಳು' ಎಂದು ಪುಣೆಯ ಅತ್ತೆ ಗುಡುಗುತ್ತಾರಂತೆ. ಒಲೆ ಹಚ್ಚಿಸಲು ನಂದಾದೀಪದ ಬೆಳಕು ಉಪಯೋಗಿಸುವುದೇ ಜಾಣತನ ಎಂದು ಕೇಳಿದಾಗ ಇವರ ಲೆಕ್ಕಾಚಾರ, ಜಾಣತನ ಶಿಖರಪ್ರಾಯ ಮುಟ್ಟಿದೆ ಅನ್ನುವುದರಲ್ಲಿ ಅನುಮಾನವೇ ಇರಲಿಲ್ಲ.

ಪುಣೆಯ ಹೋಟೆಲುಗಳದ್ದೇ ಒಂದು ವಿಶೇಷತೆ. ಎಲ್ಲಿ ಹೋದರೂ ಸಿಂಗಲ್ ಚಾ ಹಾವಳಿ. ಆ ಚಹಾ ಸಹ ಗಂಟಲು ನೋವು ಬಂದರೆ ಉಪ್ಪು ಬಿಸಿನೀರಿನಲ್ಲಿ ಗಂಟಲು ತೊಳೆಯುವಂತೆ. ಗಾರ್ಗಲ್ ಮಾಡಲು ಚಾ ಕುಡಿಯುವುದು. ಇಂಥ ಚಾ ಅಂಗಡಿಗಳಿಗೆ ಬರುವ ಜನರೂ ಅಂಥವರೇ– ಅಲ್ಲಿರುವ ಪೇಪರ್ ಓದಲು ಬರುವವರೇ ಹೆಚ್ಚು. ಹೋಟೆಲ್ ಮಾಣಿ ಯಾರಿಗೂ ಬಿಲ್ ಕೊಡುವುದಿಲ್ಲ. ಗಿರಾಕಿ ಗಲ್ಲಾದ ಹತ್ತಿರ ನಿಂತಾಗ ಮಾಣಿ ದೂರದಿಂದಲೇ ಬಿಲ್ಲಿನ ವಿವರ ಕೂಗಿ ಕೊಳ್ಳುತ್ತಾನೆ. 'ದೋ ಕಪ್ ಚಾ, ಚಾರ್ ಬಸಿ ಟೂಟ್ಲೆ' (ಎರಡು ಕಪ್ ಚಹಾ, ನಾಲ್ಕು ತಟ್ಟೆ ಒಡೇತು), 'ಏಕ್ ಮಾಣುಸ್, ಕಾಯ್ ಪೀಯಾ ಕುಚ್ ನಾಯ್, ಏಕ್ ಗ್ಲಾಸ್ ಟೂಟ್ಲೆ, ಛೆ ಆಣಾ' (ಒಬ್ಬ ಮನುಷ್ಯ, ತಿಂದೂ ಕುಡಿದ್ದೂ ಏನೂ ಮಾಡಿಲ್ಲ, ಒಂದು ಗ್ಲಾಸ್ ಒಡೆದ, ಆರಾಣೆ...) ಇಂಥ ಒಂದು ಹೋಟಲಿಗೆ ಒಬ್ಬ ಯುವಕ ಓಡಿ ಬಂದು, 'ರೀ,



ಎರಡು ಚಪಾತೀ ಕಟ್ಟಿ ಕೊಡಿ' ಅಂದಾಗ ಗಲ್ಲದ ಮೇಲೆ ಕೂತಿದ್ದ ಮಾಲೀಕನಿಗೂ ಆಶ್ಚರ್ಯ. ತನ್ನ ಹೋಟೆಲ್‌ನ ಚಪಾತೀ ಕಟ್ಟಿಸಿಕೊಂಡು ಹೋಗುವಷ್ಟು ಚನ್ನಾಗಿದೆಯಲ್ಲಾಂತ. ತಕ್ಷಣವೇ ಆತನಿಗೆ ತನ್ನ ಅಡಿಗೆ ಭಟ್ಟನ ಮೇಲೆ ಸಿಟ್ಟು ಬಂದು ಬೈದನಂತೆ, 'ಏಯ್, ಒಳ್ಳೇ ಗೋಧಿ ಹಿಟ್ಟನ್ನೇ ಉಪಯೋಗಿಸಿಬಿಟ್ಟಿದ್ದಿಯಾ? ನಾನು ಹೇಳಿದ ಹಾಗೆ ಆ ಹಳೇ ಜೊಳ್ಳು ಸೇರಿಸಬೇಕಾಗಿತ್ತು' ಎಂದು ರೇಗಿದನಂತೆ. ಆಗ ಚಪಾತೀ ಕಟ್ಟಿಸಿಕೊಂಡು ಹೋಗಲು ಬಂದಿದ್ದ ಯುವಕ ಮೆಲ್ಲಗೆ ಸಮಾಧಾನ ಹೇಳಿದ– 'ರೀ ಭಟ್ಟರ ಮೇಲೆ ಸಿಟ್ಟಾಗಬೇಡಿ, ನನ್ನ ಸೈಕಲ್ ರಬ್ಬರ ಒಡೆದುಹೋಗಿದೆ. ಇಲ್ಲಿಯ ಚಪಾತಿ ಹಚ್ಚಿದರೆ ಇನ್ನೊಂದೆರಡು ದಿನ ನಡೆಸಬಹುದೂಂತ ತಗೊಂಡ ಹೋಗ್ತಿದ್ದೀನಿ.'

ಹೀಗೆ ಪುಣೆಯವರ ವಿಶೇಷತೆಗಳನ್ನು ಹೇಳುತ್ತಾ ಹೋದರೆ ಕೊನೆ ಮೊದಲೇ ಇಲ್ಲ. ಅವರ ಸಿಂಗಲ್ ಚಾ, ಡಬ್ಬಲ್ ಜಡೆ, ಟ್ರಿಬಲ್ ರೈಡ್ ಸೈಕಲ್, ತರಕಾರಿ ವ್ಯಾಪಾರ, ಲೆಕ್ಕಾಚಾರ ಅವಲಕ್ಕಿ ಒಗ್ಗರಣೆ, ಮಾತಿನಲ್ಲೇ ಹಾಕುವ ಮಣೆ, ಕುಸ್ತುರಿಕಾಳಿನ ಪ್ರೀತಿ, [illegible] ಭೀತಿ, ಈ ಎಲ್ಲಾ ವಿಶೇಷ ಗುಣಗಳನ್ನೂ ನೋಡಿ ಲೆಕ್ಕಾಚಾರ ಅನ್ನಿ, ಜಾಣತನ ಅನ್ನಿ, ಜುಗ್ಗತನ ಅನ್ನಿ, ಏನೇ ಅನ್ನಿ ಎಲ್ಲವೂ ಒಂದೇ. ಇದಾವುದೂ ಬೇಡ ಅಂದರೆ ಎಲ್ಲವನ್ನೂ ಸೇರಿಸಿ ಶಾಣ್ಯಾತನ ಅಥವಾ ಪುಣೇತನ ಅಂದರೂ ಸರಿ.

ಪುಣೆಯಿಂದ ಬೊಂಬಾಯಿಗೆ ಹಗಲು ರಾತ್ರಿ ರೈಲುಗಳು. ಯಾವುದರಲ್ಲಿ ಕೂತರೂ ನೂಕು ನುಗ್ಗಲು. ಶೇವ್ ಚೂಡಾ ಮಾರುವವರು, ಆಫೀಸ್ ಅಥವಾ ವ್ಯಾಪಾರಕ್ಕಾಗಿ ನಿತ್ಯ ಬೊಂಬಾಯಿಗೆ ಹೋಗಿ ಬರುವವರೇ ಜಾಸ್ತಿ. ಅವರಲ್ಲೂ 'ಡೆಕ್ಕನ್ ಕ್ವೀನ್' ರೈಲಿನಲ್ಲಿ ಹೋಗುವಾಗ ಬೊಂಬಾಯಿಗೆ ಹೋಗಿ ಬರುವ ಸೀಸನ್-ಟಿಕೆಟ್‌ಧಾರಿಗಳನ್ನು ನೋಡುವುದೇ ಒಂದು ವಿಚಿತ್ರ. ಎಲ್ಲರೂ ರೈಲು ಬರುವ ಸ್ವಲ್ಪ ಮುಂಚೆ ನೂಕು ನುಗ್ಗಲಿನಲ್ಲಿ ನಿಂತಿರುತ್ತಾರೆ. ರೈಲು ಬಂದಿದ್ದೇ ತಡ ಒಳನುಗ್ಗಿ, ಐದು ನಿಮಿಷದಲ್ಲಿ ತಾವು ಕೂತಿದ್ದಲ್ಲೇ ಜಾಗ ಸರಿಮಾಡಿಕೊಂಡು, ಗುಂಪುಗುಂಪಾಗಿ ಕೂತು ಇಸ್ಪೀಟು ಎಲೆ ತೆಗೆದು ಬಡಿಯುತ್ತಾ ಕೂತು ಬಿಡುತ್ತಾರೆ. ಆಮೇಲೆ ಮುಂದಿನ ನಾಲ್ಕೈದು ಗಂಟೆಯ ಬಗ್ಗೆ ಅವರಿಗೇನೂ ಪರಿವೆಯೇ ಇರುವುದಿಲ್ಲ. ಮಧ್ಯೆ ಮಧ್ಯೆ ಅಲ್ಲಲ್ಲಿ ಸಿಂಗಲ್ ಚಾ, ಶೇವ್ ಚೂಡಾ ತಿಂದರೆ ಆಯಿತು. ಒಂದೇ ರೆಕ್ಕೆಯ ಹಕ್ಕಿಗಳು ಜೊತೆಗೂಡಿ ಕುಣಿದಾವು ಅನ್ನುವಂತೆ, ಅದು ಹೇಗೆ ದಿನನಿತ್ಯ ಓಡಾಡುವ ಸೀಸನ್ ಟಿಕೆಟ್ ಧಾರಿಗಳೇ ಒಂದು ನಿಮಿಷದಲ್ಲಿ ಗುರುತು ಹಿಡಿದು ಒಟ್ಟಿಗೆ ಸೇರಿಕೊಂಡು ಕಣ್ಣು ಸಂಜ್ಞೆಯ ಮೇರೆಗೇ ಇಸ್ಪೀಟು ತೆಗೆಯುತ್ತಾರೋ ಆಶ್ಚರ್ಯ. ಇಂಥಾ ಒಂದು ರಾತ್ರಿಯ ಪ್ರಯಾಣದಲ್ಲಿ ಪುಣೆಯವನೊಬ್ಬ ಸಿಕ್ಕಿದ. ಗುರುತಾದ. ನನಗೆ ಮರಾಠಿ ಬರುವುದಿಲ್ಲವೆಂದು ಗೊತ್ತಿದ್ದರೂ ನನ್ನ ಜೊತೆಗೆ ಅದು ಏಕೆ ಮಾತಾಡಲು ಶುರುಮಾಡಿದನೋ ನನಗೆ ಇದುವರೆಗೂ ಅರ್ಥವಾಗೇ ಇಲ್ಲ. ತನ್ನ ಗೋಳು ಹೇಳಿಕೊಳ್ಳಲು ಶುರುಮಾಡಿದ. ಅವನು ಕಥೆಶುರುಮಾಡಿದ್ದು ಹೀಗೆ: 'ಇ...ಇವರೆಲ್ಲಾ...ನ.. ನಂಗೆ ಮೋಸ ಮಾಡ್ಬಿಟ್ಟರು...' ಇವನಿಗೆ ಉಗ್ಗು 'ಅಂತ ಗೊತ್ತಾಗಿ, ಪಾಪ; ಅಂದುಕೊಂಡು. [illegible]

‘ಏ…ಏನಿಲ್ಲ ತ…ತಮಿಳರು, ಪಂಜಾಬಿಗಳು… ಎಲ್ಲಾ ಸೇರಿ ನಾನು…ಮ… ಮರಾಠಿ ಅಂತ ಮೋಸ ಮಾಡ್ಬಿಟ್ಟರು…’ ಅಂದ. ಕೊನೆಗೆ ಗೊತ್ತಾಯ್ತು; ಆತನಿಗೆ ಆಕಾಶವಾಣಿಯಲ್ಲಿ ಸುದ್ದಿ ಸಮಾಚಾರ ಓದುವ ಕೆಲಸ ಸಿಕ್ಕಿರಲಿಲ್ಲಾಂತ. ಈ ಉಗ್ಗಲು ಮಹಾಶಯ ದುಃಖದಿಂದ ಅಳುತ್ತಿರುವಾಗ ಅವನಿಗೆ ನನ್ನ ವಿಶಾಲವಾದ ಹೆಗಲು ಕೊಟ್ಟಿದ್ದೆ. ಶೇವ್ ಚೂಡಾ ಪೊಟ್ಟಣ, ಚಾ ಕೊಡಿಸಿದೆ. ಓದಲು ಒಂದು ಪುಸ್ತಕ ಕೊಟ್ಟಿದ್ದೆ. ಬೆಳಿಗ್ಗೆ ಬೊಂಬಾಯಿನಲ್ಲಿ ಇಳಿಯುವಾಗ ಇತರ ಮರಾಠಿಗರೊಂದಿಗೆ ಮಾತಾಡುವ ಅವಸರದಲ್ಲಿ ನನಗೊಂದು ಥ್ಯಾಂಕ್ಸ್ ಸಹ ಹೇಳಲಿಲ್ಲ. ಕೊನೆಗೆ ಮೆತ್ತಗೆ ನನ್ನ ಪುಸ್ತಕವನ್ನು ಹಾರಿಸಿಯೇ ಬಿಟ್ಟ.

ಪ್ರಾಯಶಃ ಇದಕ್ಕೇ ಇರಬೇಕು, ದೊಡ್ಡವರು–ಅನುಭವಿಗಳು ಪುಣೆಯವರ ಬಗ್ಗೆ ಹೇಳಿರುವುದು: ‘ಎಚ್ಚರಿಕೆ, ಗ್ರೀಕರ ಉಡುಗೊರೆ ಮರಾಠರ ಅಪ್ಪುಗೆ ಎರಡನ್ನೂ ನಂಬಬೇಡಿ. ಎಚ್ಚರಿಕೆ,’ ಹಳೆಯ ಕಥೆಗಳು ನಿಮಗೆ ನೆನಪಿರಲೇ ಬೇಕಲ್ಲ– ಗ್ರೀಕರು ಟ್ರೋಜನ್‌ರಿಗೆ ಕುದುರೆಯನ್ನು ಉಡುಗೊರೆ ಕೊಟ್ಟದ್ದು, ಶಿವಾಜಿ ತನ್ನ ಜಹಗೀರಿಯಲ್ಲಿ ಬಂದಿಳಿದುಕೊಂಡಿದ್ದ ಷಯಿಸ್ತಾಖಾನ್‌ನನ್ನು ಕೊಲ್ಲಲು ಕಳ್ಳನಂತೆ ಮದುವೆ ಮೆರವಣಿಗೆಯಲ್ಲಿ ನುಸುಳಿ ಬಂದು ಖಾನನನ್ನು ಅಪ್ಪಿ ಕೊಂದಿದ್ದು. ಹಳೆ ಕಥೆಗಳೇನೋ ಇರಲಿ, ಹೊಸ ಹೊಸ ಅನುಭವವಾಗಬೇಕಾದರೆ ಪುಣೆ ನೋಡಿ ಬರಬೇಕು. ✡

ಚನ್ನ ನಮ್ಮಣ್ಣನ ಮಗ. ಎರಡು ವರ್ಷದ ಮುದ್ದು ಪೋರ. ಅವನ ಹೆಸರಿನ ಉತ್ಪತ್ತಿಯೂ ಬಹಳ ಸ್ವಾರಸ್ಯವಾಗಿದೆ. ಆತನ ಹೆಸರು ಯಶೋವರ್ಧನ. ಅದನ್ನಿಟ್ಟವಳೂ ನಾನೇ. ಮುದ್ದಿಗಾಗಿ ಅದು ಯಶಣ್ಣ ಆಯಿತು. ನನ್ನ ಪ್ರೇಮಾತಿಶಯದಲ್ಲಿ ಯಶಣ್ಣ ‘ಯಚನ್ನ, ಅಚನ್ನ’ ಆಗಿ ಕಡೆಗೆ ಚನ್ನ ಆದ. ಆತನ ಪ್ರಖ್ಯಾತಿ ಮನೆಗಷ್ಟೇ ಸೀಮಿತವಲ್ಲ, ಅಸುಪಾಸಿನ ಹತ್ತು ಮನೆಗಳಲ್ಲಿ ಈತನದೇ ಮೆರೆದಾಟ. ಅವನಜ್ಜಿಯ ಪಾಲಿಗೆ ‘ಬೆಳ್ಳಿ ಚೆಂಡು ಬೆಣ್ಣೆ ಮುದ್ದೆ.’ ಆತ ಕೆಲವೊಮ್ಮೆ ಪರಮ ಬುದ್ಧಿವಂತಿಕೆಯ ಪ್ರಶ್ನೆಗಳಿಂದ ನಮ್ಮನ್ನೇ ತಬ್ಬಿಬ್ಬುಗೊಳಿಸಿಬಿಡುತ್ತಾನೆ. ಶಿಷ್ಟಾಚಾರವೂ ಹಾಗೇ. ಒಮ್ಮೆ ಹೀಗಾಯಿತು.

ನನ್ನ ಮದುವೆ ಆಗಷ್ಟೇ ನಡೆದಿತ್ತು. ಮೈಸೂರು ಅರಮನೆಯ ದೀಪೋತ್ಸವವನ್ನು ನೋಡಲು ಮನೆಯವರೆಲ್ಲ ಹೋಗಿದ್ದೆವು. ಈ ‘ದೊಡ್ಡ ಮನುಷ್ಯ’ ತನ್ನ ಮಾವನ ಹೆಗಲನ್ನಲಂಕರಿಸಿದ್ದ. ಹೋದೊಡನೆ ಸೌತೆಕಾಯಿಗಳನ್ನು ವ್ಯಾಪಾರಮಾಡಿ, ಹೋಳುಗಳನ್ನು ಎಲ್ಲರೂ ಕೈಲಿ ಹಿಡಿದು ತಿನ್ನುತ್ತಾ ಕುಳಿತೆವು. ಏಕೋ ಏನೋ ಮಗುವಿನತ್ತ ಯಾರ ಗಮನವೂ ಹರಿಯಲಿಲ್ಲ. ಆತನಿಗೆ ಸೌತೆಕಾಯಿಯನ್ನು ಕೊಡಲೂ ಇಲ್ಲ. ಹರಟೆ ಸಾಗುತ್ತಿತ್ತು. ಇದ್ದಕ್ಕಿದ್ದಂತೆ ಮಗು “ಬಾಪ್ಪಿ ಮಾಮ” ಅಂದಿತು. (ನಾನಾತನಿಗೆ ‘ಬಾಪ್ಪಿ’ ಆದ್ದರಿಂದ ನನ್ನವರು ‘ಬಾಪ್ಪಿ ಮಾಮ’) ಇವರು “ಏನಮ್ಮಾ” ಎಂದರು. “ಸೌತೆಕಾಯಿ ಚೆನ್ನಾಯಿದಾ?” (ಸೌತೆಕಾಯಿ ಚೆನ್ನಾಗಿದೆಯಾ) ನನ್ನವರು ಥಟ್ಟನೆ ಮಗುವಿನತ್ತ ದಿಟ್ಟಿಸಿದರು. ಆತನ ಆಸೆಗಣ್ಣುಗಳು ಅವರ ಕೈಲಿದ್ದ ಸೌತೆಕಾಯಿ ತುಂಡಿನತ್ತ, ಮುಖದ ತುಂಬ ಸ್ನಿಗ್ಧ ಹಾಸ. ಮುಗ್ಧ ಶಿಶುವಿನ ಅಸೀಮ ಸಂಯಮದ, ಸಭ್ಯತೆಯ ಈ ವರ್ತನೆ ನಮ್ಮನ್ನೆಲ್ಲ ದಂಗುಬಡಿಸಿತು, ನಾಚಿಸಿತು. ಕೂಡಲೇ ಓಡಿ ಮತ್ತೊಂದಷ್ಟನ್ನು ತಂದು ಮಗುವಿಗೆ ಕೊಟ್ಟ ಮೇಲೆಯೇ ನಮಗೆಲ್ಲ ಸಮಾಧಾನವಾದದ್ದು.

—ಭಾರತೀ ಕಾಸರಗೋಡ್

ಇವರಾಡುವ ಭಾಷೆಯಲ್ಲಿ ಸಂಧಿ, ಸಮಾಸಗಳು, ಕ್ರಿಯಾಪದಗಳೆಲ್ಲ ಇವೆ. ಮೂರು ವಚನಗಳು (ಏಕ, ದ್ವಿ ಹಾಗೂ ಬಹುವಚನ), ಏಳು ವಿಭಕ್ತಿಗಳೂ ಇವೆ. ವಾಕ್ಯ ರಚನೆಯೂ ಸಂಸ್ಕೃತಕ್ಕಿಂತ ಭಿನ್ನವಾಗಿಲ್ಲ. ಇವರು ಮಾತಿನಲ್ಲಿ ಉಪಯೋಗಿಸುವ ಶಬ್ದಗಳೆಲ್ಲ ಸಂಸ್ಕೃತಮಯವೇ. ಕೆಲವೊಮ್ಮೆ ಪ್ರಾಕೃತದ ಪ್ರಾರಂಭಿಕ ಪ್ರಯೋಗಗಳೂ ತೋರಿಬರುತ್ತವೆ.

ಪಂಜಾಬ ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ಡಿ. ಡಿ. ಶರ್ಮಾ ಅವರು ಕೆಲವಾರು ತಿಂಗಳು ಹಿಂದೆ ಈ ಪ್ರದೇಶಕ್ಕೆ ಹೋಗಿದ್ದರು. ಅವರಿಂದಾಗಿ ಈ ಅಂಶ ಬೆಳಕಿಗೆ ಬಂತು. ಚಿನಾಲಿ ವಾಕ್ಯಗಳಲ್ಲಿ ಸಂಸ್ಕೃತದ ಸಾಮ್ಯವನ್ನು ಕೆಳಗಿನ ಉದಾಹರಣೆಗಳು ಸಾಬೀತುಪಡಿಸುತ್ತವೆ.

(೧) ಮೇ ಶುಕಲು ವಥುರು ಮೂ ದೇಹಿ

(ಸಂ— मे शुक्लं वस्त्रं मे देहि ।)

(೨) ತಸೇರ ರೋಪ್ಯಸ್ಯ ಅಂಗುಷ್ಠಿಕ್ಕಾ ತ್ರುಟಿ ಗಯೀ!

(ಸಂ— तस्य रौप्यस्य अङ्गुष्ठिका त्रुटिं गता ।)

(೩) ತೂ ಶೀತೇ ಬಹಿರಾಂ ಮಾ ಗಚ್ಛ

(ಸಂ— त्वं शीते बहिर् मा गच्छ ।)

(೪) ತವ ಸಾಠೆ ಅಣಿಕ ಕಊ ಅಸ?

(ಸಂ— तव सार्थे अन्यः कः अस्ति ?)

(೫) ತೂ ಕಿಂ ನೇದಸ?

(ಸಂ— त्वं किं नयसि ?।)

ಕುಟೀರೋದ್ಯೋಗವೇ ಜೀವನಾಧಾರವಾಗಿರುವ ಚಿನಾಲರು ಪರಿಶಿಷ್ಟ ಜಾತಿಗೆ ಸೇರಿದವರು. ಇವರೂ ಸಂಸ್ಕೃತವನ್ನಾಡುತ್ತಿರುವಾಗ ಭಾರತದಲ್ಲಿ ಸಂಸ್ಕೃತವು ಜನಸಾಮಾನ್ಯರ ವ್ಯಾವಹಾರಿಕ ಭಾಷೆಯಾಗಿತ್ತೆಂದು ಭಾವಿಸುವದಕ್ಕೆ ತಪ್ಪೇನೂ ಆಗಲಾರದು.

ಸಂಸ್ಕೃತವಿಲ್ಲಿ ಇಂದಿಗೂ ಜನಭಾಷೆ

ಜನಾರ್ದನ ದೇವದಕೇರಿ

ಸಂಸ್ಕೃತವು ಜನಭಾಷೆಯಾಗಿತ್ತೆಂಬ ವಿಷಯದಲ್ಲಿ ಅನೇಕರಿಗೆ ಇನ್ನೂ ಸಂದೇಹವಿದೆ. ಅದನ್ನು ಹೋಗಲಾಡಿಸಲೋ ಎಂಬಂತೆ ಒಂದು ಮಹತ್ವದ ಅಂಶ ಇತ್ತೀಚೆಗೆ ಬೆಳಕಿಗೆ ಬಂದಿದೆ.

ಹಿಮಾಚಲ ಪ್ರದೇಶದ 'ಲಾಹೌಲ' ಕ್ಷೇತ್ರದಲ್ಲಿ ಪಟ್ಟಣಘಾಟಿಯೆಂಬುದು ಒಂದು ಗ್ರಾಮ. ಇಲ್ಲಿ 'ಚಿನಾಲ'ವೆಂಬ ಹೆಸರಿನ ಒಂದು ಜನಾಂಗ ವಾಸಿಸುತ್ತದೆ. ಅಕ್ಕ-ಪಕ್ಕದವರು ಈ ಜನಾಂಗದವರನ್ನು 'ದದ' ಅಥವಾ 'ಶಿಪ್ಪೀ' ಎಂದು ಕರೆಯುವದೂ ಇದೆ. ಈ ಜನರ ವ್ಯಾವಹಾರಿಕ ಭಾಷೆ ಇಂದಿಗೂ ಸಂಸ್ಕೃತವೇ!

ಚಿನಾಲರು ಅಶಿಕ್ಷಿತರು. ಸಾಹಿತ್ಯವೆಂದರೇನೆಂದು ಈ ಜನ ಅರಿಯರು. ಆದರೆ ಅವರ ಈ ಸಮಾಜದಲ್ಲಿ ಆಬಾಲವೃದ್ಧರೆಲ್ಲರೂ ಉಪಭಾಷೆಯ ರೂಪದಲ್ಲಿ ಸಂಸ್ಕೃತದಲ್ಲೇ ವ್ಯವಹರಿಸುತ್ತಾರೆ.



'ಅನುಶ್ಕ'ದ ಶೈಲಾ

ವಿಮಲಾ ಪಾಟೀಲ

ಮಹಿಳೆಯರಿಗೇ ಮೀಸಲಾಗಿರುವ ಪತ್ರಿಕೆಗಳನ್ನು, ಅವರಲ್ಲೂ ವಿಶೇಷವಾಗಿ ಹೊಸರುಚಿ ವಿಭಾಗವನ್ನು ನೋಡುವವರಿಗೆ ಶ್ರೀಮತಿ ಶೈಲಾ ಪತ್ತಂಗಡಿಯವರ ಹೆಸರು ಸುಪರಿಚಿತ. ದಕ್ಷಿಣ ಭಾರತದ ಪಾಕದ ರುಚಿಯನ್ನು ಮುಂಬೈವಾಸಿ ಉತ್ತರ ಭಾರತೀಯರಿಗೆ ತೋರಿಸಿ ಕೊಟ್ಟಿರುವ ಶೈಲಾ ಪಾಕಶಾಸ್ತ್ರದಲ್ಲಿ ನಿರಂತರ ಶೋಧಗಳನ್ನು ನಡೆಸುತ್ತಲೇ ಬಂದಿದ್ದಾರೆ. ಪಾಕಶಾಸ್ತ್ರದ ಶಿಕ್ಷಣ ನೀಡಿ, ಆಹಾರ ತಯಾರಿಕೆದಾರರಿಗೆ ಸಲಹೆಗಾರ್ತಿಯಾಗಿ, ನಮ್ಮ ಆಹಾರದ ರುಚಿ ಹಾಗೂ ಪೌಷ್ಟಿಕ ಗುಣವನ್ನು ಬಹುದಿನಗಳವರೆಗೆ ಕಾಪಾಡಿಕೊಂಡುಹೋಗುವುದು ಹೇಗೆಂಬ ವಿಷಯದಲ್ಲಿ ಮುಂಬೈಯಲ್ಲಿ ಹೆಸರುವಾಸಿಯಾಗಿರುವ ಈ ಕನ್ನಡತಿ ಈಗ ನವಮುಂಬೈ ಕೈಗಾರಿಕಾ ಕ್ಷೇತ್ರದಲ್ಲಿಯೂ ಹೆಜ್ಜೆಯಿಟ್ಟು ಮುನ್ನಡೆಯುತ್ತಿದ್ದಾರೆ.

ಶೈಲಾ ಸಿದ್ಧ ಆಹಾರ ತಯಾರಿಕೆಯ ಘಟಕವೊಂದನ್ನು ಪ್ರಾರಂಭಿಸುವ ತಮ್ಮ ಬಹುದಿನದ ಕನಸನ್ನು ಕಾರ್ಯರೂಪಕ್ಕಿಳಿಸಿದ್ದಾರೆ. ಅದೂ ಬೇರೆ ಯಾರದ ಸಹಾಯವಿಲ್ಲದೆಯೆ. ಈಗ 'ಅನುಶ್ಕ' ಎಂದರೆ ಮುಂಬೈ ಮಹಿಳೆಯರಿಗೆ ಅಪ್ಯಾಯಮಾನ ಹೆಸರು. ತಮ್ಮ ಬಹುಪಾಲು ಶ್ರಮವನ್ನು ಕಡಿಮೆ ಮಾಡಿರುವ 'ಅನುಶ್ಕ'ದ ರೂವಾರಿ ಶೈಲಾರಿಗೆ ಈ ಮಹಿಳೆಯರೀಗ ಕೃತಜ್ಞರು. ಈ ವರ್ಷದ ಮೊದಲಲ್ಲಿ ಮಾರುಕಟ್ಟೆಗೆ ಬಂದು ಈಗಾಗಲೇ ಹೊಟೆಲುಗಳನ್ನೂ ಮೆಚ್ಚಿಸಿರುವ ಈ ಮಿಶ್ರ ಆಹಾರದ ಪಾಕೆಟ್ಟುಗಳು ಆರೋಗ್ಯದಾಯಕವೂ ಹೌದೆಂಬುದನ್ನು ಜನ ಮನಗಂಡಿದ್ದಾರೆ.

ದಕ್ಷಿಣ ಭಾರತದ ಮಸಾಲೆ ಮತ್ತು ಇಲ್ಲಿಯ ವೈಶಿಷ್ಟ್ಯಗಳಾದ ಇಡ್ಲಿ ಮಿಕ್ಸ್, ಜೇಸೀ ಆಹಾರದ ಮಿಕ್ಸ್, ಕೇಕ್ ಮತ್ತು ಪುಡ್ಡಿಂಗ್ ಮಿಕ್ಸ್‌ಗಳನ್ನು 'ಅನುಶ್ಕ'ದಲ್ಲಿ ತಯಾರಿಸುವ ಶೈಲಾ. "ಇಡ್ಲಿ ಮಿಕ್ಸಿಗೇ ಹೆಚ್ಚು ಬೇಡಿಕೆ." ಎನ್ನುತ್ತಾರೆ. ಮುಂಬೈಯಲ್ಲಿರುವ ಉಡುಪಿ ಹೋಟೆಲುಗಳಿಗೆ ಹೆಚ್ಚು ಪ್ರಮಾಣದಲ್ಲಿ ಸಂಬಾರ್ ಮಿಕ್ಸ್ ಪೂರೈಕೆ ಮಾಡುತ್ತಾರೆ ಶೈಲಾ. ಅಲ್ಲದೆ ಕೆಲ ಆಸಕ್ತ ಗೃಹಿಣಿಯರ ಬೇಡಿಕೆಯಂತೆ ಅವರವರ ಮನೆಗಳಲ್ಲೇ ಪ್ರಾತ್ಯಕ್ಷಿಕೆಗಳನ್ನೂ ನೀಡುತ್ತಾರೆ. ಈ ಪ್ರಾತ್ಯಕ್ಷಿ

ಕೆಯ ಸಂದರ್ಭದಲ್ಲಿ ಮಾಸಲೆಗೆಂದು ತಮ್ಮ ಉತ್ಪಾದನೆಗಳ ಚಿಕ್ಕ ಪ್ಯಾಕೆಟ್ ನೀಡುತ್ತಾರೆ.

ಶೈಲಾರಿಗೆ ಇನ್ನೂ ಒಂದು ಮಹತ್ವಾಕಾಂಕ್ಷೆಯಿದೆ–'ಅನುಶ್ಕ'ದ ಪ್ರಚಾರಕಿಯರ ಪಡೆ ನಿರ್ಮಿಸುವುದು. "ಇದರಿಂದ ಎರಡು ಉದ್ದೇಶಗಳನ್ನು ಸಾಧಿಸಬಹುದು. ನಿರುದ್ಯೋಗಿ ಮಹಿಳೆಯರಿಗೆ ಉದ್ಯೋಗ ದೊರಕಿಸಿಕೊಡುವುದು ಮತ್ತು 'ಅನುಶ್ಕ'ವನ್ನು ಇನ್ನಷ್ಟು ಜನಪ್ರಿಯಗೊಳಿಸಿ ತನ್ಮೂಲಕ ಇನ್ನೂ ಶೀಘ್ರವಾಗಿ ಜನತೆಗೆ ನಮ್ಮ ಉತ್ಪಾದನೆಗಳನ್ನು ತಲುಪಿಸುವುದು," ಎನ್ನುವ ಶೈಲಾ ತಮ್ಮ ಕಾರ್ಯಾಗಾರದಲ್ಲಿ ಕೇವಲ ಅಂಗವಿಕಲರಿಗೆ ಉದ್ಯೋಗ ನೀಡುವುದಾಗಿ ಹೇಳುತ್ತಾರೆ.

"ಮದುವೆಯಾಗುವವರೆಗೆ ನನಗೆ ಒಂದು ಕಪ್ಪು ಚಹವನ್ನೂ ಸರಿಯಾಗಿ ತಯಾರಿಸಲು ಬರುತ್ತಿರಲಿಲ್ಲ – ಇನ್ನು ಅಡಿಗೆಮಾಡುವ ವಿಚಾರವಂತೂ ದೂರವೇ ಉಳಿಯಿತು," ಎನ್ನುವ ಶೈಲಾ ಇಂದು ಪಾಕಶಾಸ್ತ್ರದಲ್ಲಿ ಅಥಾರಿಟಿಯಾಗಿರುವುದರ ಹಿಂದೊಂದು ಸ್ವಾರಸ್ಯವಡಗಿದೆ.

ಅವರು ಹುಟ್ಟಿ ಬೆಳೆದದ್ದು ಹುಬ್ಬಳ್ಳಿಯಲ್ಲಿ; ಅಜ್ಜನ ಮನೆಯಲ್ಲಿ. ತಂದೆಗೆ ಸರಕಾರಿ ನೌಕರಿ. ಹೀಗಾಗಿ ಮೇಲಿಂದ ಮೇಲೆ ಊರಿಂದೂರಿಗೆ ವರ್ಗವಾಗುತ್ತಿತ್ತು. ಅಜ್ಜ ವ್ಯವಹಾರಕುಶಲರು. ಮೊಮ್ಮಗಳನ್ನು ಹತ್ತೂರು ಅಡ್ಡಾಡಿಸುವುದು ಬೇಡವೆಂದು ತಮ್ಮಲ್ಲಿಯೇ ಇಟ್ಟುಕೊಂಡರು. ಅವರು ದೇಶಾಭಿಮಾನಿಯಾಗಿದ್ದಂತೆಯೇ ಸ್ವಾತಂತ್ರ್ಯಪೂರ್ವದ ಭಾರತೀಯ ಹತ್ತಿ ಉದ್ಯಮದಲ್ಲಿ ಹೆಸರುಪಡೆದವರು. ಅವರ ಸಾಮೀಪ್ಯ ಶೈಲಾರಲ್ಲಿ ವ್ಯವಹಾರಕೌಶಲದ ವಿಕಾಸಕ್ಕೆ ಕಾರಣವಾಯಿತು. ಶೈಲಾಗೆ ತಾನೂ ಒಬ್ಬ ಉದ್ಯಮಿಯಾಗಬೇಕು–ಅದೂ ಸ್ವತಂತ್ರವಾಗಿ ಎಂಬಾಸೆ ಹುಟ್ಟಿತು.

ಹತ್ತೊಂಭತ್ತರಲ್ಲಿ ಅಡಿಯಿಡುತ್ತಿದ್ದಂತೆಯೇ ಗೃಹಿಣಿಯಾದ ಅವರು ಆಸೆಯನ್ನು ಮಾತ್ರ ಬಿಟ್ಟುಕೊಡಲಿಲ್ಲ. ಚಿಕ್ಕಂದಿನ ಕನಸನ್ನು ನನಸಾಗಿಸಿಕೊಳ್ಳುವತ್ತ ನಿತ್ಯ ಯತ್ನ ನಡೆಸಿಯೇ ಇದ್ದರು. ಆದರೆ ಯಾವ ಉದ್ಯಮ? ಮುಂಬೈಒಂದು ವಿಚಿತ್ರ ನಗರ. ಸಾವಿರಾರು ಉದ್ಯಮಿಗಳಿಗೆ ಅದು ತವರು. ಹೊಸ ಯತ್ನಗಳನ್ನು ಮನಃಪೂರ್ವಕವಾಗಿ ಮಾಡತೊಡಗಿದವರಿಗೆ ಮುಂಬೈ ಯಶಸ್ಸು ಗಳಿಸಿಕೊಡುತ್ತದೆ.

ಮದುವೆಯಾದದ್ದು ಆಹಾರ ಶಾಸ್ತ್ರದಲ್ಲಿ ಪ್ರಥಮದಲ್ಲಿ ಪ್ರಥಮನಾಗಿ ನಿಂತವರನ್ನು. ಅವರೆದುರು ಅಡಿಗೆ ಮಾಡಲು ಬಾರದ ಶೈಲಾ ಕೇವಲ ಆರು ತಿಂಗಳಲ್ಲಿ ಪಾಕ ಪ್ರವೀಣೆಯಾಗುವ ಪ್ರತಿಜ್ಞೆಗೈದರು. ಪ್ರಯತ್ನಶೀಲೆಯಾದರು. ಅಚ್ಚರಿ ಹುಟ್ಟಿಸುವ ರೀತಿಯಲ್ಲಿ ಅವರು ಅದನ್ನು ಸಾಧಿಸಿದರಷ್ಟೇ ಅಲ್ಲ ಆಹಾರದ ರುಚಿ ಹಾಗೂ ಪೌಷ್ಟಿಕ ಗುಣವನ್ನು ಬಹಳ ಕಾಲ ಉಳಿಸುವತ್ತ ಗಮನ ಹರಿಸಿದರು. ಜೀವನ ಗತಿ ನಮಗರಿವಾಗದಂತೆಯೇ ಬದಲಾಗಿ ಬಿಡುತ್ತದೆ. ಶೈಲಾರ ಜೀವನದಲ್ಲಿ ಆದದ್ದೂ ಅದೇ ರೀತಿ.

'ಫೆಮಿನಾ' ಪತ್ರಿಕೆಯ ಹೊಸ ರುಚಿ ಮತ್ತು ಪಾಕಶಾಸ್ತ್ರದ ಪುಟಕ್ಕೆ ಬರೆಯಲಾರಂಭಿಸಿದ ಶೈಲಾ ಅಡಿಗೆ ಮಾಡುವುದು, ಆಹಾರ ಸಿದ್ಧಪಡಿಸುವುದಕ್ಕೆ ಕೂಡ ಒಂದು ವೈಜ್ಞಾನಿಕ ಸಿದ್ಧಾಂತವಿದೆ ಎಂಬುದನ್ನು ಮಹಿಳೆಯರಿಗೆ ಮನದಟ್ಟು ಮಾಡಿದರು. ತಮ್ಮ ಅನುಭವಕ್ಕೆ ಬಂದದ್ದನ್ನು ಸಲಹೆಯ ರೂಪದಲ್ಲಿ ಓದುಗರಿಗೆ ನೀಡಿದರು.

ಒಂದು ಸಂದರ್ಭದಲ್ಲಿ ಶ್ರೀ ರಾಮಕೃಷ್ಣ ಬಜಾಜರನ್ನು ಭೇಟಿಯಾಗುವ ಅವಕಾಶವೊದಗಿತು. ಶ್ರೀ ಬಜಾಜ, ಶೈಲಾರ ಪಾಕಜ್ಞಾನವನ್ನು ಬಹುವಾಗಿ ಪ್ರಶಂಸಿಸಿದರು. ಅಷ್ಟೇ ಅಲ್ಲ, ಆ ಕುರಿತು ಒಂದು ಪುಸ್ತಕ ಬರೆಯಲೂ ಪ್ರೇರಣೆ ನೀಡಿದರು. ಈ ಪುಸ್ತಕ ಅದೆಷ್ಟು ಜನಪ್ರಿಯವಾಯಿತೆಂದರೆ ಶೈಲಾರಿಗೆ ಸಿದ್ಧ ಆಹಾರ ತಯಾರಿಕಾಗಾರಗಳಿಂದ ಮತ್ತು ಆಹಾರ ಸಂಸ್ಕರಣ ಕೇಂದ್ರಗಳಿಂದ ಸಲಹೆಗಾರ್ತಿಯಾಗಲು ಕರೆಬಂತು. 'ಕಾರ್ನ್ ಪ್ರಾಡಕ್ಟ್'ಗೋಸ್ಕರ ಶೈಲಾ ಅನೇಕ ರೀತಿಯಲ್ಲಿ ಕೆಲಸಮಾಡಿದರು. ಇದರಿಂದಾಗಿ ಸ್ವತಃಕ್ಕೂ, ಸಂಸ್ಥೆಗೂ ಆದ ಲಾಭ ಬಹಳ. ಇದಕ್ಕೆಲ್ಲ ಬೆಂಬಲವಾಗಿ ನಿಂತವರು ಪತಿ ಗುರುಪ್ರಸಾದ ಹತ್ತಂಗಡಿ.

'ಕಾರ್ನ್ ಪ್ರಾಡಕ್ಟ್'ಗೋಸ್ಕರ ಮಾಡಿದ ಕೆಲಸ ಮತ್ತು ಪಡೆದ ಅನುಭವ ಶೈಲಾರ ಬಹು ದಿನದ ಆಸೆ ಫಲಿಸಲು ಕಾರಣವಾಯಿತು. "ನನ್ನದೇ ಆದ ಸಿದ್ಧ ಆಹಾರ ತಯಾರಿಕಾ [illegible] ವಿಶಾ

ಹೊಳೆಯಿತು. ಸರಕಾರಿ ಸಂಸ್ಥೆಗಳು ಮತ್ತು ಬ್ಯಾಂಕುಗಳ ಸಹಾಯ ಪಡೆದು ನನ್ನದೇ ಆದ 'ಅನುಶ್ಕ' ವನ್ನು ಪ್ರಾರಂಭಿಸಿದೆ" ಎನ್ನುತ್ತಾರೆ ಶೈಲಾ. ಅನುಶ್ಕ ಎಂದರೆ ಅನ್ನ ಉದಕ ಶೀತಲ ಮತ್ತು ಕಾರ್ಯ.

ಸಣ್ಣ ಪ್ರಮಾಣದ ಕೈಗಾರಿಕೆ ಸ್ಥಾಪಿಸಲು ಸರಿಯಾದ ಮಾರ್ಗದರ್ಶನವನ್ನು ಪತಿಯಿಂದಲೇ ಪಡೆದರು. ಆದರೆ ಅದಕ್ಕೊಂದು ಸೂಕ್ತ ನಿವೇಶನ? ಮುಂಬಯಿಯಲ್ಲಿ ವಾಸಕ್ಕೇ ಸುಲಭದಲ್ಲಿ ಜಾಗ ಸಿಕ್ಕಂಥ ಪರಿಸ್ಥಿತಿ. ಅದರಲ್ಲೂ ಅಂಗವಿಕಲರು ಬಂದು ಸಂತೋಷದಿಂದ ಕೆಲಸ ಮಾಡುವಂಥ ಕೈಗಾರಿಕೆ ಸ್ಥಾಪಿಸಲು ಅಷ್ಟು ಜಾಗವೆಲ್ಲಿ ಸಿಕ್ಕಬೇಕು? ಆದರೂ ಪ್ರಯತ್ನಕ್ಕೆ ಫಲ ದೊರಕಿತು. ನಂತರ ಎದುರಾದ ಸಮಸ್ಯೆ ಅದನ್ನು ಕೊಳ್ಳಲು ಬೇಕಾದ ಹಣದ್ದು. ಬ್ಯಾಂಕ್ ಸಾಲ ಪಡೆಯಲು ದೊಡ್ಡ ತಪಸ್ಸನ್ನೇ ಮಾಡಿದಷ್ಟು ಶ್ರಮಪಡಿಸಬೇಕಾಗುತ್ತದೆ. ಶೈಲಾ, ಸಾಲ ಪಡೆಯಲು ರಾಷ್ಟ್ರೀಕೃತ ಬ್ಯಾಂಕೊಂದರ ಎದುರು 'ಧರಣಿ ಸತ್ಯಾಗ್ರಹ' ಹೂಡುವ ಬೆದರಿಕೆ ಹಾಕುವವರೆಗೂ ಬ್ಯಾಂಕಿನವರು ಸಾಲ ಕೊಡಲು ಮುಂದೆ ಬರಲಿಲ್ಲ.

ಇಂದು 'ಅನುಶ್ಕ' ಭರದಿಂದ ಮುನ್ನಡೆದಿದೆ. "ಮೂಗು ಮುರಿಯುವ ಮಡಿವಂತರೂ ಮೆಚ್ಚಿ ನಮ್ಮ ಇಡ್ಲಿ ಮಿಕ್ಸ್‌ನಿಂದ ತಯಾರಿಸಿದ ಇಡ್ಲಿಗಳನ್ನು ತಿನ್ನುತ್ತಿದ್ದಾರೆ. ನಮ್ಮಲ್ಲಿ ದಿನನಿತ್ಯ ನಾಲ್ಕು ಕ್ವಿಂಟಾಲು ಇಡ್ಲಿ ಮಿಕ್ಸ್ ತಯಾರಿಸುತ್ತೇವೆ." ಎನ್ನುವ ಶೈಲಾ. ಮೊದಲಿನ ತೊಂದರೆಗಳಾವೂ ಈಗ ಇಲ್ಲವೆನ್ನುತ್ತಾರೆ. ತಮ್ಮ ಮಗನನ್ನು ಆಹಾರ ಶಾಸ್ತ್ರಜ್ಞನನ್ನಾಗಿ ಮಾಡಿ ತಮ್ಮ ಸಂಸ್ಥೆಯ ಭವಿತವ್ಯಕ್ಕೆ ಭದ್ರಬುನಾದಿ ಹಾಕುವ ಸನ್ನಾಹದಲ್ಲಿದ್ದಾರೆ.

ಅವರು ವಾಶಿಯಲ್ಲಿಯ ತಮ್ಮ ಕಾರ್ಯಾಗಾರಕ್ಕೆ ಮುಂಜಾನೆ ಹೋದರೆಂದರೆ ಮಿಶ್ರಣ ತಯಾರಿಕೆಗೆ ಬೇಕಾಗುವ ಧಾನ್ಯಗಳ ಆಯ್ಕೆ, ತೂಕ, ನಂತರ ಅವುಗಳ ತಯಾರಿಕೆ, ಸಾಗಾಟ ಮುಂತಾದವುಗಳಲ್ಲಿ ತಲ್ಲೀನರಾಗುತ್ತಾರೆ. ಹೊಸ ಪ್ರಯೋಗಗಳಂತೂ ನಿತ್ಯದ ಮಾತು. ●

('ಫೆಮಿನಾ' ದಿಂದ)

ಎಷ್ಟೊಂದು ಅಂತರ!

ಸ್ವಾಮಿ ವಿವೇಕಾನಂದರು ತಮ್ಮ 'ಪ್ರಾಚ್ಯ ಮತ್ತು ಪಾಶ್ಚಾತ್ಯ' ಗ್ರಂಥದಲ್ಲಿ ಹೇಳಿದ ಕೆಲವು ವಿಚಾರಗಳು ಇವು—

"ನಾವು ಚೆನ್ನಾಗಿ ಸ್ನಾನ ಮಾಡಿ ಆದ ಮೇಲೆ ಎಣ್ಣೆಯಿಂದ ಅಂಟುತ್ತಿರುವ ಬಟ್ಟೆಯನ್ನು ಹಾಕಿಕೊಳ್ಳುತ್ತೇವೆ. ಪಾಶ್ಚಾತ್ಯರು ಸ್ನಾನ ಮಾಡದೇ ಕೊಳೆಯಾದ ದೇಹದ ಮೇಲೆ ಶುಭ್ರವಾದ ಬಟ್ಟೆಯನ್ನು ಧರಿಸುತ್ತಾರೆ. ಇಲ್ಲೇ ನಮಗೂ ಪಾಶ್ಚಾತ್ಯರಿಗೂ ಇರುವ ವ್ಯತ್ಯಾಸ; ಹಿಂದುಗಳ ಅಂತರ್‌ದೃಷ್ಟಿ ಅವರ ಆಚಾರ ವ್ಯವಹಾರದಲ್ಲೆಲ್ಲ ಕಾಣುವುದು. ಹಿಂದುವು ಯಾವಾಗಲೂ ಒಳಗೆ ನೋಡುವನು. ಹಿಂದೂ ತನ್ನ ದೇಹವನ್ನು ಶುದ್ಧವಾಗಿಡುವುದಕ್ಕೆ ಸ್ನಾನ ಮಾಡುತ್ತಾನೆ. ಅವನ ಬಟ್ಟೆ ಎಷ್ಟು ಕೊಳೆಯಾಗಿದ್ದರೂ ಚಿಂತೆ ಇಲ್ಲ. ಆದರೆ ಪಾಶ್ಚಾತ್ಯ ದೇಶದವನೋ ಶುಭ್ರವಾದ ಬಟ್ಟೆಯೇ ಬೇಕೆನ್ನುತ್ತಾನೆ. ಬಾಗಿಲಿನ ಹೊರಗೆ ಕಸದ ಗುಡ್ಡೆ ಇದ್ದರೂ ಚಿಂತೆಯಿಲ್ಲ; ಆದರೆ ಹಿಂದುವು ತನ್ನ ಮನೆಯ ಕೋಣೆ, ನೆಲ, ಬಾಗಿಲ ಎಲ್ಲವನ್ನೂ ಶುಭ್ರವಾಗಿಡುತ್ತಾನೆ. ಪಾಶ್ಚಾತ್ಯ ದೇಶದವ ಮನೆಯ ಒಳಗಿನ ನೆಲಕ್ಕೆ ಸುಂದರವಾದ ಜಮಖಾನೆಯನ್ನು ಹಾಸುತ್ತಾನೆ. ಆದರ ಕೆಳಗೆ ಇರುವ ಧೂಳು, ಕೊಳೆ ಕಣ್ಣಿಗೆ ಕಾಣದೆ ಇದ್ದರೆ ಸರಿ! ಹಿಂದುವು ಮನೆಯ ಚರಂಡಿ ನೀರನ್ನು ರಸ್ತೆಗೆ ಬಿಡುತ್ತಾನೆ. ದುರ್ವಾಸನೆಯಿಂದ್ದರೂ ಪರವಾಯಿಲ್ಲ, ಪಾಶ್ಚಾತ್ಯ ರಾಷ್ಟ್ರಗಳ ನಗರಗಳಲ್ಲಿ ನೆಲದೊಳಗೇ ಬಚ್ಚಲು, ಅದೇ ಟೈಫಾಯಿಡ್ ಜ್ವರಕ್ಕೆ ಮೂಲ. ಹಿಂದುವು ಒಳಗಿನದನ್ನು ತೊಳೆದರೆ, ಪಾಶ್ಚಾತ್ಯನವ ಹೊರಗಿನದನ್ನು ತೊಳೆಯುತ್ತಾನೆ. ಇಲ್ಲಿ ಅಂತರಂಗ ಮುಖ್ಯ; ಅಲ್ಲಿ ಬಹಿರಂಗ ಮುಖ್ಯ."

ಸಂಗ್ರಹ : ಎಂ. ಸೀತಾಲಕ್ಷ್ಮಿ

ಪೋಲೀಸರು ಮತ್ತು ಆಚಾರಿ


ಬಿ. ಸೀತಾರಾಮ ಭಟ್

ಪೋಲೀಸರ ಅತ್ಯಾಚಾರದ ಬಗ್ಗೆ ಸಾಕಷ್ಟು ವರದಿಗಳನ್ನು ಪತ್ರಿಕೆಗಳಲ್ಲಿ ಓದಿದ ನನಗೆ ಅಂಥಕ ಘಟನೆಂದರೆ ಪುರಾಣಕಾಲದ ಟಿಕೆಕೋರೆ ಹಲ್ಲುಗಳಿಂದ ವಿಕಾರವಾಗಿ ಕಾಣುವ 'ಚಂದಮಾಮ'ದ ರಾಕ್ಷಸರ ನೆನಪು ಬರುವುದು ಸ್ವಾಭಾವಿಕವೆ. ಬಹಳಷ್ಟು ಮುಂದುವರಿದ ನಮಗೇ ಹಾಗೆನಿಸಿದರೆ, ಸರಕಾರ ಅಂದರೆ ಪೋಲೀಸು ಎಂದೇ ತಿಳಿದಿದ್ದ ಇಂಗ್ಲೀಷರ ಕಾಲದಲ್ಲಿ, ಜನ ಪೋಲೀಸರೆಂದರೆ **ಅದೆಷ್ಟು** ಹೆದರುತ್ತಿದ್ದಿರ ಬೇಕು!

ಬಹುದಿನಗಳಿಂದ ನನ್ನನ್ನು ಕಾಡುತ್ತಿದ್ದ ಈ ಪ್ರಶ್ನೆಯನ್ನು ಒಮ್ಮೆ ನಮ್ಮೂರಿನಲ್ಲೇ ತೀರಾ ಮುದುಕನಾದ ಸೀಬಯ್ಯ ಆಚಾರಿಗೆಸೆದೆ. ಆಚಾರಿಗೆ ಹತ್ತಿರ ಹತ್ತಿರ ನೂರು ವಯಸ್ಸಾಗಿರ ಬೇಕು. ಅತ ಹುಟ್ಟಿದ ಮೇಲೆಯೇ ಕಾಂಗ್ರೆಸ್ಸು ಹುಟ್ಟಿದ್ದು. ಎರಡು ದೊಡ್ಡ ಯುದ್ಧಗಳು, ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ, ಕಾಂಗ್ರೆಸ್ಸು ಚಳವಳಿಯ ಎಲ್ಲಾ ಕಾಲಗಳಲ್ಲೂ ಬದುಕಿದ್ದವನು ಅವನು. ನನ್ನ ಪ್ರಶ್ನೆಗೆ ಉತ್ತರವಾಗಿ ಅವನು ತನ್ನದೇ ಅದ ಸ್ವಾರಸ್ಯಕರ ಘಟನೆಯನ್ನು ಹೇಳಿದ.

ದೊಡ್ಡಯುದ್ಧದ ಕಾಲ ಅದು. ಯುದ್ಧ ಅಂದ ಮೇಲೆ ಮತ್ತೇನು. ಎಲ್ಲಕ್ಕೂ ಬರ. ಎಲ್ಲವೂ ಹುಟ್ಟಿ ಅಕ್ಕಿಗೂ ರೇಶನ್ ಪಾಸ್ಸು ಪಡೆದು ಬಂತಾದರೂ ಇದೆಯೇನು? ಅದೂ ಇಲ್ಲ. ಆ ಹಾಳುಕಾಲದಲ್ಲಿ ನಮ್ಮೂರಿನ ಕೆಲವರು ಒಂದು ದರೋಡೆ ಕೇಸಿನಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟರು. ಚಂಬಲ್ ಕಣಿವೆ ದರೋಡೆಗಾರರ ಹಾಗೆ ಹಣಕ್ಕಾಗಿಯೋ ಅಥವಾ ಸೇಡಿಗಾಗಿಯೋ ದರೋಡೆ – ಖೂನಿ ಮಾಡುವವರಲ್ಲ ನಮ್ಮೂರಿನವರು. ಅಕ್ಕಿ, ಧಾನ್ಯ ಎಲ್ಲ ಸರಿಯಾಗಿ ಸಿಗದೆ ಹಸಿದ ಕಾಲದಲ್ಲಿ ನೆರೆಯೂರ ಕಳ್ಳಸಂತೆಯ ಶೆಟ್ಟಿಯೊಬ್ಬ ಮೂಟೆಗಟ್ಟಲೆ ಅಕ್ಕಿಯನ್ನು ಊರ ಮೇಲೆಯೇ ಸಾಗಿಸಿಕೊಂಡು ಹೋಗುವಾಗ, ನೀವಾದರೆ ಬಿಟ್ಟೀರೇನು? ಬಿಡಲಿಲ್ಲ ನಮ್ಮವರು. ಪೋಲೀಸು ಕೇಸಾಯಿತು. ಅದರಲ್ಲಿ ನಮ್ಮ ಸೀಬಯ್ಯ ಆಚಾರಿಯೂ ಇದ್ದ. ದಕ್ಕಿದ ಅಕ್ಕಿ ಯೆಲ್ಲಾ ಕರಗುವ ಹೊತ್ತಿಗೆ ಸರಿಯಾಗಿ ಕಾಕನವರ ಠಾಣೆಯಿಂದ ಇಬ್ಬರು ಪೋಲೀಸರು ನಮ್ಮ ಹಳ್ಳಿಗೆ ಬಂದಿದ್ದರು.

ಹೌದು ಪೋಲೀಸರು! ಊರ ಗಂಡಸರು ಮನೆಯೊಳಗೆ ಉಸಿರುಗಟ್ಟಿಕೊಂಡರೆ, ಮಕ್ಕಳು ಮುಂದೆ ಮನೆಯಲ್ಲಿ ತಿಂದುಂಡವನೆ ಜಾಣ ಎಂಬ ಮಾತು ನಂಬಿ ದರೋಡೆ ಕಾಲದಲ್ಲಿ ಸಿಕ್ಕಷ್ಟು ಅಕ್ಕಿ ದೊಡ್ಡವರ ಗಂಟಲಿನಿಂದಲೋ ಬಾಯಲ್ಲಿ ಬಂದು ಕೂತುಬಿಟ್ಟಿತು. ಆಚಾರಿಗಂತೂ ಅವರು ಸಾಕ್ಷಾತ್ ಯಮಧರ್ಮರಾಯನ ದೂತರೆ ಆಗಿದ್ದರು. ಹಿಂದೊಮ್ಮೆ ಪೋಲೀಸರ ಕೈಗೆ ಸಿಕ್ಕಿ ಠಾಣೆಯಲ್ಲಿ ಸಾಯುತ್ತಾ ಒದೆತ ಪೆಟ್ಟು ಎಲ್ಲ ತಿಂದು. ತೇಗಿದವನು ಆಚಾರಿ. ಈಗ ಅವನೇನು ಮಾಡಿದ?



ಅವನು ಮಾಡಿದ್ದು ಇದು. ನಮ್ಮೂರಲ್ಲಿದ್ದರೆ ಇವತ್ತಲ್ಲ ನಾಳೆಯಾದರೂ ಸಿಕ್ಕಿ ಬೀಳುವುದಿಲ್ಲ ಎಂದು ಹೇಗೆ ಹೇಳುವುದು! ಒಂದು ನಾಲ್ಕು ದಿನದ ಮಟ್ಟಿಗೆ ದೂರ ಹೋಗುವ ಎಂದುಕೊಂಡ. ಅದಕ್ಕಾಗಿ ಅಚಾರಿ ಸಿಲೆಕ್ಟ್ ಮಾಡಿದ್ದು ಇಂದಾವು ಎಂಬ ಹಳ್ಳಿಯನ್ನು. ಈಗಾದರೆ ನಾನು ಅರ್ಧ ಗಂಟೆಯಲ್ಲಿ ನಮ್ಮೂರಿನಿಂದ ಸೈಕಲ್ಲಿನ ಮೇಲೆ ಅಲ್ಲಿಗೆ ಹೋಗಿ ಬರುತ್ತೇನೆ. ಆಗ ಅದು ಸ್ವಲ್ಪ ದೂರ ಎಂಬಂಥ ಹಳ್ಳಿ. ಅಲ್ಲಿ ಆಚಾರಿಯ ಷಡ್ಡಕ ಇದ್ದ. ಅವನ ಮನೆಯಲ್ಲಿ ನಾಲ್ಕು ದಿನ

ಇದ್ದುಬಿಡುವಾ ಎಂದುಕೊಂಡ ನಮ್ಮ ಗೆಳೆಯ. ಮರುದಿನ ದಾರಿ ಕಂಡಿತೋ ಇಲ್ಲವೋ ಎಂಬಷ್ಟು ಹೊತ್ತಿಗೇ ಎದ್ದು ಇಂದಾರಿನ ದಾರಿ ಹಿಡಿದ.

ಆಚಾರಿಯ ಪಡ್ಡಕನಿಗೆ ಅಷ್ಟು ಹೊತ್ತಿನಲ್ಲಿ ಈತ ಬಂದದ್ದು ನೋಡಿ ಸ್ವಲ್ಪ ಅನುಮಾನ ಬಂದು ವಿಚಾರಿಸಿದಾಗ ಪೋಲೀಸರಿಗೆ ಹೆದರಿ ಓಡಿ ಬಂದದ್ದು ಗೊತ್ತಾಯಿತು. ಅವನೂ ಆಚಾರಿಯಂಥಹ ಮನುಷ್ಯನೆ. ಕಂಡವನ್ನು ಮನೆಯೊಳಗೆ ಇಟ್ಟುಕೊಳ್ಳಲಿಕ್ಕೆ ನಾವು ನೀವಾದರೆ ಒಪ್ಪುತ್ತೇವೇನು? ಆಚಾರಿಯನ್ನು ಇರಿಸಿಕೊಳ್ಳಲಿಕ್ಕೆ ಅವನು ತುಂಬ ತಕರಾರು ಮಾಡಿದ. ಕೊನೆಗೂ ಅಟ್ಟದ ಮೇಲೆ ಬೈಹುಲ್ಲಿನ ರಾಶಿಯೊಳಗೆ ಬೇಕಾದರೆ ನಾಲ್ಕೈದು ದಿನ ಇರು ಅಂತ ಮನಸ್ಸಿಲ್ಲದೆ ಒಪ್ಪಿಕೊಂಡುಬಿಟ್ಟ. ಅಲ್ಲಿಂದ ಇಳಿದು ಸುತ್ತಾಡಲು ಆಚಾರಿಗಾದರೂ ಧೈರ್ಯ ಇತ್ತೆನ್ನುತ್ತೀರಾ? ಇಲ್ಲವೇ ಇಲ್ಲ. ಹಾಗೂ ಹೀಗೂ ಅಟ್ಟದ ಬೈಹುಲ್ಲುರಾಶಿಯ ಮೇಲೆ ಆಚಾರಿಯ ಪ್ರತಿಷ್ಠಾಪನೆಯಾಯಿತು.

ಆ ಮೂರು ನಾಲ್ಕು ದಿನಗಳ ಅನುಭವವನ್ನು ಆಚಾರಿಯ ಮಾತಿನಲ್ಲೇ ಕೇಳಬೇಕು.

"ಬೈ ಹುಲ್ಲೊಳಗೆ ಕೂತ ಮೇಲೆ ನನ್ನ ಕೆಲಸವೇನು! ಮೈ ಕೈ ಎಲ್ಲಾ ತುರಿಸುವುದು! ಕೆಳಗೆ ಯಾರಾದರೂ ಬಂದು ಮಾತಾಡಲಿಕ್ಕಿಲ್ಲ. ನನ್ನನ್ನು ಹುಡುಕಿಕೊಂಡೇ ಬಂದ ಹಾಗೆ ಭ್ರಾಂತಿಯಾಗುವುದು. ಒಂದು ಸ್ವಲ್ಪ ಅಲುಗಾಡಲಿಕ್ಕಿಲ್ಲ. ಮೂಗಿಗೆ ಮಕ್ಕು* ಹೊಕ್ಕು ಪ್ರಾಣ ಹೋಗುವ ಸಂಕಟವಾದರೂ ಕೆಮ್ಮಲಿಕ್ಕಿಲ್ಲ! ಹಗಲಿನಲ್ಲಿ ಮೂತ್ರ ವಿಸರ್ಜನೆ ಮಾಡಬೇಕಾದರೆ ಎಲ್ಲಿ ಅಂತೀರಿ, ಅಟ್ಟದ ಮೂಲೆಯಲ್ಲಿ. ಮೂಲೆಗೆ ಬಂದು ಹೊರಗೆ ಹಾರಿಸುವುದು. ಒಮ್ಮೆ ಅಲ್ಲಿಗೆ ಒಂದು ಹುಡುಗಿಯಿದ್ದದ್ದು ನನಗೆ ಗೊತ್ತುಂಟಾ? ಅದರ ಮೇಲೆಯೇ ನೀರು ಬಿದ್ದು ಗಲಾಟೆಯೇ ಆಯಿತು. ಹೀಗೆ ಮೂರು ದಿನ ಆದ ಮೇಲೆ ಇದಾಗುವುದಿಲ್ಲ ಎಂದು ಎಣಿಸಿದೆ."

ಪೋಲೀಸರು ಹುಡುಕಿಕೊಂಡು ಇಂದಾರಿಗೂ ಬಂದಾರು ಎಂದೇ ಆಚಾರಿಗೆ ತಲೆಬಿಸಿ.

---

* ಬೈಹುಲ್ಲಿನ ಚುರಿಕೆಯಿಂದ ಏಳುವ ಧೂಳು.

ಆದ್ದರಿಂದ ಇನ್ನು ಇಂದಾರಿನಲ್ಲಿ ಇರಲಾಗದು ಎಂದು ನಿಶ್ಚಯಿಸಿ ಪಡ್ಡಕನಿಗೆ ಹೇಳಿ ರಾತ್ರೋರಾತ್ರಿ ಅಲ್ಲಿಂದ ಗಾಡಿಬಿಟ್ಟ. ಮೂಡಬಿದ್ರೆಗಾಗಿ ಹೋಗಿ ಘಟ್ಟ ಹತ್ತಿ ಭಗವತಿ, ಕುದುರೆಮುಖದ ದಾರಿಯಾಗಿ ಕಳಸಕ್ಕೆ ಹೋಗಿಬಿಟ್ಟರೆ ಬದುಕಿಬಿಟ್ಟೆ ಎಂದು ಅವನ ಯೋಜನೆ. ಆಗ ನಮ್ಮ ಕನ್ನಡ ಜಿಲ್ಲೆಯಿಂದ ಘಟ್ಟ ಹತ್ತಿ ಕಳಸದ ಕಡೆಗೆ ಹೋಗಿ ಕಾಫಿ ತೋಟದಲ್ಲಿ ಕೆಲಸ ಮಾಡುವ ಮಂದಿ ಕಡಿಮೆಯೇ? ಘಟ್ಟ ಹತ್ತಿದ ಎಂದರೆ ಈಗ ವಿಲಾಯತಿಗೆ ಹೋದ ಎಂದ ಹಾಗೆಯೇ. ಮೂಡಬಿದ್ರೆ, ಬೆಳ್ತಂಗಡಿ, ಉಜಿರೆಗಾಗಿ ಚಾರ್ಮಾಡಿ ಘಾಟ ಹತ್ತಿ ಹೋಗುವ ದಾರಿ ಒಂದಾದರೆ, ಕಾರ್ಕಳ, ಮೂಡಬಿದ್ರೆಯಿಂದ ನೇರವಾಗಿ ತಿರುಗಿ ಕತ್ತಿ, ದೊಣ್ಣೆ, ಹಿಡಿದು ಕಾಲ್ನಡಿಗೆಯಿಂದ ಪಶ್ಚಿಮ ಘಟ್ಟವನ್ನು ಏರಿ ಆ ಕಡೆಯಿಂದ ಇಳಿದು ಭಗವತಿ ಕುದುರೆಮುಖ ಅರಣ್ಯಗಳನ್ನು ಹೊಕ್ಕು ಆಚೆ ಹೋಗುವ ದಾರಿ ಇನ್ನೊಂದು. ಇದು ತುಂಬ ಕಠಿಣವಾದ ಹಾದಿ. ಎರಡು ಮೂರು ದಿನಗಳದ್ದು. ನಾಲ್ಕೈದು ಮಂದಿಯಾದರೆ ತೊಂದರೆಯಿಲ್ಲ. ದಾರಿಯಲ್ಲಿ ಹುಲಿ-ಕಾಟಿಗಳ ಉಪಟಳ ಹೆಚ್ಚು. ಅಪರಾಧ ಮಾಡಿ ಪಲಾಯನ ಸೂತ್ರ ಪಠಿಸುವ ಆಚಾರಿಯಂಥವರಿಗೆ ಇದೇ ಅಭಯ ಮಾರ್ಗ.

ಆಚಾರಿಯ ದೈವ ಬಹಳ ಗಟ್ಟಿಯಿದ್ದಿತೆಂದು ಕಾಣುತ್ತದೆ. ಅವನು ಮೂಡಬಿದ್ರೆಗೆ ಹೋಗುವಾಗ ನಮ್ಮೂರಿನ ಮೇಲಿಂದಲೇ ಹೋಗಬೇಕಾದರೂ ಯಾರೂ ಗಮನಿಸಲಿಲ್ಲ. ಏಕೆಂದರೆ ಅವನು ಊರು ಬಿಟ್ಟದ್ದೇ ಯಾರಿಗೂ ಗೊತ್ತಿರಲಿಲ್ಲ. ನಾಲ್ಕೈದು ಮಂದಿ ಘಟ್ಟ ಹತ್ತುವವರೂ ಸಿಕ್ಕಿದರು. ಅವರೆಲ್ಲ ಮೂಡಬಿದರೆಗಾಗಿ ಹೋಗುತ್ತಿರುವಾಗ ಆಚಾರಿಯ ಎದೆ ಗರ್ನಾಲು ಸಿಡಿಯುವಂತೆ ಹೊಡೆದುಕೊಳ್ಳುತ್ತಿತ್ತು. ಏಕೆ? ಕಾರಣ ಇದು. ಅವರು ಮೂಡಬಿದರೆಯ ಪೋಲೀಸು ಠಾಣೆಯ ಎದುರಿನಲ್ಲೇ ನಡೆದು ಹೋಗಬೇಕಾಗಿತ್ತು. ಠಾಣೆಯ ಮುಂಭಾಗದಲ್ಲಿ ಅವರು ಹೋಗುತ್ತಿದ್ದಂತೆ. ಒಳಗೆ ನಿಂತಿದ್ದ ಪ್ರತಿಯೊಬ್ಬ ಪೋಲೀಸನೂ 'ಬೀಳ್ಗನ

ಕಳ್ಳ ಆಚಾರಿ ಇವನೆ. ಓಡಿ ಹೋಗುತ್ತಿದ್ದಾನೆ, ಘಟಿಂಗ' ಎಂದು ಪಿಸುಗುಟ್ಟುತ್ತಿರುವಂತೆ ಆಚಾರಿ ಸುಮ್ಮನೆ ಊಹಿಸಿಕೊಳ್ಳುತ್ತಿದ್ದ. ಅಂತೂ ಠಾಣೆ ದಾಟಿದಾಗ ಪಾಪ. ನಖಶಿಖಾಂತ ಬೆವರಿಬಿಟ್ಟಿದ್ದ.

ಅವರೆಲ್ಲ ನಡೆಯುತ್ತ ಪಶ್ಚಿಮ ಘಟ್ಟದ ಬುಡಕ್ಕೆ ಬಂದರು. ಒಂದು ಸಣ್ಣ ಹೊಳೆ ದಾರಿಗೆ ಅಡ್ಡವಾಗಿ ಮಲಗಿತ್ತು. ದೋಣಿಯ ಹಗ್ಗವನ್ನು ಒಂದು ಗಿಡಕ್ಕೆ ಕಟ್ಟಿ ಅಂಬಿಗ ಎಲ್ಲಿಯೋ ಹೋಗಿಬಿಟ್ಟಿದ್ದ. ಅವನಿಗಾಗಿ ಇವರೆಲ್ಲ ಕಾದು ಕುಳಿತರು. ಆಗ ಸಾಯಂಕಾಲ ಬಂದ. ಇವರನ್ನು ಕೂರಿಸಿಕೊಂಡು ಅವನು ಜಲ್ಲೆಯನ್ನು ನೀರಿನಲ್ಲಿ ಎರಡು ಮೂರು ಬಾರಿ ಊರಿರಬೇಕು, ಅಷ್ಟರಲ್ಲಿ ಹಿಂದಿನಿಂದ ಜೋರಾಗಿ 'ಕೂ' ಎಂದು ಯಾರೋ ಕೂಗಿದ್ದು ಕೇಳಿಸಿತು. ದೋಣಿಯಲ್ಲಿ ದಾಟಬೇಕಾದ ಜಾಗ ಹತ್ತಿರವಾದಾಗ ದಾರಿಹೋಕರು ಹಾಗೆ ಕೂಗುವುದು ಸಾಮಾನ್ಯ. ದೋಣಿಯೇನಾದರೂ ಈಗ ತಾನೇ ಹೊರಟಿದ್ದರೆ ನಾವೂ ಬಂದುಬಿಟ್ಟೆವು, ನಿಲ್ಲಿ ಎಂಬುದರ ಅರ್ಥ. ಇವರ ದೋಣಿ ಪುನಃ ತಿರುಗಿ ದಡಕ್ಕೆ ಬಂತು.

ಯಾರು ಬಂದದ್ದು ಅದು?...ಒಬ್ಬ ಪೋಲೀಸ!

ಹೌದು, ಪೋಲೀಸ. ನಾನೇನಾದರೂ ಆಚಾರಿಯ ಜಾಗದಲ್ಲಿದ್ದಿದ್ದರೆ ನೀರಿಗೆ ಹಾರಿ ಬಚಾವಾಗಿ ಬಿಡುತ್ತಿದ್ದೆ. ಆದರೆ ಆಚಾರಿ ಹಾಗೆ ಮಾಡಲಿಲ್ಲ. ಈಜು ಗೊತ್ತಿಲ್ಲ ಅವನಿಗೆ. ಅವನು ಕಲ್ಲಿನ ಹಾಗೆ ಕೂತುಬಿಟ್ಟ. ಆ ಪೋಲೀಸನೂ ದೋಣಿಯಲ್ಲಿ ಜಾಗ ಮಾಡಿಕೊಂಡು ಕೂತ ಮೇಲೆ ಆಚಾರಿಗೆ ಸ್ವಲ್ಪ ಜೀವ ಬಂತು. ದೋಣಿಯಿಂದ ತನ್ನನ್ನು ಎಳೆದು ಹಾಕಿ ಕೋಳ ಸಿಕ್ಕಿಸಿ ಹಿಂದೆ ಕೊಂಡು ಹೋಗುತ್ತಾನೆ ಎಂದು ಕೊಂಡಿದ್ದರೆ ಹಾಗೇನೂ ಆಗದೆ ಅವನೇ ಬಂದು ಕೂತುಬಿಟ್ಟಿದ್ದಾನೆ!

ದೋಣಿ ಚಲಿಸಿತು. ಆ ಪೋಲೀಸ ತಾನು ದುರ್ಗ ಎಂಬ ಹಳ್ಳಿಗೆ ಹೊರಟಿದ್ದಾಗಿಯೂ ಒಬ್ಬನನ್ನು ಠಾಣೆಗೆ ಒಯ್ಯಬೇಕಾಗಿದೆಯೆಂದೂ ನಡುವೆ ದಾರಿ ತಪ್ಪಿ ಎಲ್ಲೆಲ್ಲಿ ಅಲೆದು ಇತ್ತ ಬಂದುದಾಗಿಯೂ ಉಳಿದವರೊಡನೆ ಹೇಳುತ್ತಿದ್ದ. ಆಚಾರಿಯೇನೂ ಮಾತಾಡಲಿಲ್ಲ. ದೋಣಿ ಆಚೆ ದಡ ಮುಟ್ಟುವಾಗ ಕತ್ತಲು ಕವಿಯುತ್ತಿತ್ತು. ಆಗಲೆ ದಾರಿ ಕಪ್ಪಾಗಿಬಿಟ್ಟಿದ್ದರಿಂದ ಅವರೆಲ್ಲ ತಮ್ಮ ಗಂಟುಗಳನ್ನು ಇಳಿಸಿ ಅಡುಗೆ ತಯಾರಿ ನಡೆಸಿದರು. ಪೋಲೀಸನೂ ಉಪಾಯ ಕಾಣದೆ ಅವರ ಜೊತೆ ಉಳಿಯಬೇಕಾಯಿತು.

ರಾತ್ರಿಯೆಲ್ಲ ಅವರು ಬೆಂಕಿ ಹಾಕಿ ಜಾಗರಣೆ ಮಾಡಿದರು. ಒಮ್ಮೆ ಪೋಲೀಸ ಸುಮ್ಮ ಸುಮ್ಮನೆ ಆಚಾರಿಯೊಡನೆ ಎಲ್ಲಿಗೆ ಹೋಗುವವನು ನೀನು? ಎಂದು ಕೇಳಿದಾಗ ಅವನು ಬೆಬ್ಬಳಿಸಿ ಬಿದ್ದು ಕ...ಕಳಸಕ್ಕೆ ಅಂದುಬಿಟ್ಟ. ಮರುಕ್ಷಣವೇ ತಾನು ಹೇಳಿದ್ದು ತಪ್ಪಾಯಿತು ಅನಿಸಿ ಆಚಾರಿಯ ಭಯ ನೂರ್ಮಡಿಯಾಯಿತು. ಮುಂದೆಲ್ಲಾದರೂ ಹುಡುಕಿಕೊಂಡು ಅಲ್ಲಿಗೇ ಬಂದು ಬಿಟ್ಟರೆ! ಪೋಲೀಸನಿಗೆ ಇವನ ಪರಿಪಾಟಲು ಕಂಡು ಸಂಶಯ ಬಂತು. ಎಲ್ಲಿಂದ ಬಂದವನು? ಎಂದು ಕೇಳಿಯೇ ಬಿಟ್ಟನಾತ. ಅವನು ಕೇಳಿ ಮುಗಿಸಿದನೋ ಇಲ್ಲವೋ, ಘುರೂ...ಶ್ ಅಂತ ದೀರ್ಘನಾದವೊಂದು ಆಚಾರಿಯ ಅಧೋದ್ವಾರದಿಂದ ಹೊರಬಿದ್ದಿತು. 'ಥತ್ತೇರಿ' ಎಂದು ತಡೆಯಲಾರದೆ ನಕ್ಕ ಪೋಲೀಸ ಮೂಗು ಹಿಡಿದುಕೊಂಡು, 'ಹೊರಗಾದರೂ ಹೋಗಿ ಬಾ ಮಹರಾಯ' ಎಂದಾಗ 'ಬದುಕಿದೆಯಾ' ಬಡಜೀವವೆ ಎಂದು ಚೊಂಬು ಹಿಡಿದು ಆಚೆ ಓಡಿದ ಆಚಾರಿ. ಈ ಗಮ್ಮತ್ತಿನಲ್ಲಿ ಪ್ರಶ್ನೆ ಹಾರಿ ಹೋಯಿತು. ಇದನ್ನು ನನಗೆ ಹೇಳುವಾಗ ಬಿದ್ದು ಬಿದ್ದು ನಕ್ಕ ಆಚಾರಿ.

ಮರುದಿನ ನಸುಕಿನಲ್ಲೇ ಪೋಲೀಸ ದುರ್ಗದ ದಿಕ್ಕು ಹಿಡಿದು ಹೊರಟುಬಿಟ್ಟ. ಆಚಾರಿಗೆ ಏನು ಖುಷಿಯಾಯಿತೆನ್ನುತ್ತೀರಿ! ಹೊಸಜನ್ಮವೇ ಸಿಕ್ಕಿದಂತಾಯಿತು. ಅವನು ಮುಂದುವರಿದು ಕಾಡು ಹೊಕ್ಕು, ಘಟ್ಟ ಹತ್ತಿ ಇಳಿದು, ಮೂರು ದಿನಗಳ ನಂತರ ಕಳಸ ಸೇರಿದ ಮೇಲೆ ಮೂರು ವರ್ಷ ಅಲ್ಲಿಂದ ಕದಲಲಿಲ್ಲ.

ಪೋಲೀಸರ ಬಗ್ಗೆ ನಾನು ಕೇಳಿದಾಗ ಮೇಲಿನ ಪ್ರಸಂಗವನ್ನು ಹೇಳಿದ ಆಚಾರಿ ಮೊನ್ನೆ ಮೊನ್ನೆ ತಾನೇ ತೀರಿಹೋದ. ಅವನೊಂದಿಗೆ ಒಂದು ಯುಗದ ನೆನಪೂ ಕಣ್ಮರೆಯಾಯಿತು.

ಆನೆ ಸೇಡನ್ನು ತೀರಿಸಿಕೊಂಡಿತು



ಸುದರ್ಶನ ದೇಸಾಯಿ

ಈ ಘಟನೆ ನಡೆದದ್ದು ೧೯೬೬ರಲ್ಲಿ. ಪೂರ್ವ ಆಫ್ರಿಕದ ತಾಂಜಾನಿಯಾ. ರುಫ್ರ ಹಾಗೂ ಘರಿಹಾನ ಪ್ರಾಂತಗಳಿಗೆ ಜಗತ್ಪ್ರಸಿದ್ಧವಾದ ಸಿಲಡ ಅರಣ್ಯವಿರುವ ತಾಂಜಾನಿಯಾ ಆಗ ಆನೆಗಳ ಹಾವಳಿಗೆ ಸಿಕ್ಕು ಜರ್ಜರಿತವಾಗಿತ್ತು. ಅಲ್ಲಿನ ಕಾಡಿನಿಂದ ಬಿಡಕ್ಕೆ ಹಿಂಡ್ತ್ರ ನಡೆದಿದ್ದ ಬಂದಿ ಪ್ಲೀರಿಂದು ಕರೆದ ದಾಳಿ ನಡೆಸಿ ಆನೆಗಳು ಉತ್ಪಾತ ನಡೆಸುತ್ತಲೇ ನಡೆಸುತ್ತಿದ್ದವು.

ಇದರಿಂದಾದ ಹಾನಿ ಅಪಾರ. ತಾಂಜಾನಿಯಾದ ಸರಕಾರ ಕಂಗೆಟ್ಟಿತ್ತು. ಎಷ್ಟು ಮುಂಜಾಗ್ರತೆಯ ಕ್ರಮಗಳನ್ನು ಕೈಕೊಂಡಿದ್ದರೂ ಸುಮಾರು ನೂರು ಜನ ಹೊಲ ಕಾಯುವ ಕೂಲಿಕಾರರು ಆನೆಗಳ ಕಾಲಡಿಗೆ ಸಿಕ್ಕು ಪ್ರಾಣ ಕಳೆದುಕೊಂಡಿದ್ದರು. ಉಳಿದವರು ಪ್ರಾಣಭಯದಿಂದ ಓಡಿ ಹೋಗಿದ್ದರು. ಹೀಗಾಗಿ ಹೊಲಕಾಯುವ ಕೆಲಸ ಸಂಪೂರ್ಣವಾಗಿ ನಿಂತು ಹೋಗಿದ್ದು ಇದರಿಂದ ಸಾವಿರಾರು ಡಾಲರುಗಳ ಹಾನಿ. ಎಷ್ಟು ಹೆಚ್ಚಿಗೆ ಕೂಲಿಯನ್ನು ಕೊಡುತ್ತೇವೆಂದರೂ. ಬೇರೆ ಆಳೆ ಅಷ್ಟು ಬಂದರೂ ಕೂಲಿಕಾರರು ದೊರೆಯದಾದರು. ಎಲ್ಲೆಡೆ ಆನೆಗಳ ರಾಜ್ಯ. ಸಾವಿರಾರು ಎಕರೆ ಭೂಮಿಯಲ್ಲಿ ಬೆಳೆದ ಫಲವತ್ತಾದ ಅಪ್ಪ ಬೆಳೆಯನ್ನು ನಾಶ ಮಾಡಿದವು. ಆಗ ಸರಕಾರ ಇದರ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಯಿತು. ಆನೆಗಳ ಕಾಟದಿಂದ ಪಾರಾಗಲು ಪರಿಹಾರ ಕಂಡು ಹಿಡಿಯಬೇಕೆಂದು ಕ್ರೀಡಾ ವಿಭಾಗಕ್ಕೆ ಸೂಚಿಸಿತು. ಅದರೊಂದಿಗೆ ಆನೆಗಳ ಸಂಹಾರಕ್ಕೆಂದು ಒಂದು ಲಕ್ಷ ಐದು ಸಾವಿರ ಡಾಲರುಗಳ ರಕಮನ್ನು ವೆಚ್ಚಕ್ಕೆಂದು ಮಂಜೂರ ಮಾಡಿತು. ಆನೆಗಳ ಮೇಲೆ ದಾಳಿ ಮಾಡಲು ಒಂದು ಯೋಜನೆ ರೂಪ ತಾಳಿತು. ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ತಾನು ಭರಿಸುತ್ತೇನೆಂದು ಫೋರ್ಡ್ ಫೌಂಡೇಶನ್ ಮುಂದೆ ಬಂದಿತು.

ಮೊದಮೊದಲು ಆನೆಗಳನ್ನು ಕೊಲ್ಲುವ ಯೋಜನೆ ಇರಲಿಲ್ಲ. ಅವುಗಳನ್ನು ಬೇರೆಡೆ ಓಡಿಸಬೇಕೆಂದು ನಿರ್ಧರಿಸಲಾಗಿತ್ತು. ಭಾರಿ ಶಬ್ದ ಮಾಡುವ ಡೋಲು ಪ. ಜಾಗಟೆ ಹಾಗೂ ಟ್ರಂಪೆಟ್ ವಾದ್ಯಗಳನ್ನು ಉಪಯೋಗಿಸಲಾಯಿತು. ಈ ಶಬ್ದಕ್ಕೆ ಹೆದರಿ ಆನೆಗಳು ಬೇರೆ ಕಡೆ ವಲಸೆ ಮಾಡುತ್ತವೆ ಎಂದು ಅವರು. ತಿಳಿದದ್ದು ಹುಸಿಯಾಯಿತು. ಆನೆಗಳು ಹೆದರಿ ಓಡಿ ಹೋಗುವ ಬದಲು. ಅದು ತಮ್ಮ ಅಪಮಾನ ಎಂದು ಬಗೆದು ತಿರುಗಿಬಿದ್ದವು. ಜಾಗಟೆ ಹಾಗೂ ಟ್ರಂಪೆಟ್ ವಾದ್ಯಗಳನ್ನು ಒಡೆದು ಚೂರುಚೂರು ಮಾಡಿದವು. ಎಷ್ಟೋ ಜನ ಪ್ರಾಣ ಉಳಿಸಿಕೊಳ್ಳಲು ಓಡಿ ಹೋದರು. ಉಳಿದವರನ್ನು ಆನೆಗಳು ಬೆನ್ನಟ್ಟಿ ಹೋಗಿ ಘೋರ ಮಾಡಿದವು. ಆನೆಗಳನ್ನು ಓಡಿಸಲು ಬಂದವರಲ್ಲಿ ನಲವತ್ತೈದು ಜನ ಪ್ರಾಣಕ್ಕೆರವಾದರು.

ಕೊನೆಗೆ ಸರಕಾರ ಈ ವಿಪತ್ತಿನಿಂದ ಪಾರಾಗಲು ಜಗತ್ಪ್ರಸಿದ್ಧ ಆನೆ ಬೇಟೆಗಾರ ಬ್ರಿಯಾನ್ ನಿಕೋಲಸನ್ನನಿಗೆ ಮೊರೆ ಹೋಯಿತು. ಅವನ ನೇತೃತ್ವದಲ್ಲಿ ಒಂದು ದೊಡ್ಡ ಬೇಟೆಗಾರರ ತಂಡ ಸಿದ್ಧವಾಯಿತು.

ಬ್ರಿಯಾನ್ ನಿಕೋಲಸನ್ನನಿಗೆ ಇದೊಂದು ಆಹ್ವಾನ. ತನ್ನ ಹದಿನೇಳು ವರ್ಷಗಳ ಬೇಟೆಗಾರನ ಜೀವನದಲ್ಲಿ ಆತ ನೂರಾರು ಮದೋನ್ಮತ್ತ ಆನೆಗಳನ್ನು ಗುಂಡಿಕ್ಕಿ ಕೊಂದಿದ್ದ. ಈ ಬಾರಿ ಆತ ಹೋಗಬೇಕಾದ ಪ್ರದೇಶವೂ ಅಂಥ ಆನೆಗಳ ತವರುಮನೆ ಎನಿಸಿದ ತಾಂಜಾನಿಯಾದ ದಟ್ಟ ಅಡವಿ. ಅದ್ವಿತೀಯ ಪರಾಕ್ರಮಿ ಎನಿಸಿದ ಎಷ್ಟೋ ಶಿಕಾರಿಗಳಿದ್ದರೂ ಅಲ್ಲಿ ಪರಸ್ಪರರನ್ನು ಎದುರಿಸಿದ್ದರು. ಪೂರ್ತಿ ಸಿದ್ಧತೆ ಮಾಡಿಕೊಂಡ ನಿಕೋಲಸನ್ ಅತ್ಯಂತ ಮಾರಕ ಶಸ್ತ್ರಾಸ್ತ್ರಗಳೊಂದಿಗೆ ಪ್ರಯಾಣ ಆರಂಭಿಸಿದ.

ನಿಶ್ಚಿತ ಪ್ರದೇಶ ತಲುಪಿದ ನಂತರ ಒಂದು ದಿನ ಪೂರ್ತಿ ವಿಶ್ರಾಂತಿ ಪಡೆದು ಬೇಟೆ ಪ್ರಾರಂಭಿಸಬೇಕೆಂದು ಆತನು ಯೋಚಿಸಿದ್ದ. ಆತನ ನಿರ್ಧಾರದ ಪ್ರಕಾರ ತಂಡ ಮಧ್ಯರಾತ್ರಿ ಬಂದು ತಲುಪಿತು. ಅಲ್ಲಿಂದ ಮೊದಲೇ ನಾಲ್ಕು ಮೈಲು ಅಂತರದಲ್ಲಿ ಕಿಲೊಂಬೆರಿ ನದಿಯ ದಂಡೆಯ ಮೇಲಿದ್ದ ಚಿಕ್ಕ ಹಳ್ಳಿಗೆ ಸಾಗಿ ಹತ್ತಿರದ ಗುಡಿಸಲುಗಳನ್ನು ನಾಶಮಾಡಿ ಅಲ್ಲಿನ ಕೂಲಿಕಾರರನ್ನು ಕೊಂದು ಹಾಕಿದ್ದವು. ಆ ಸುದ್ದಿ ತಿಳಿದ ತಕ್ಷಣ ಬ್ರಿಯಾನ್ ಒಂದು ದಿನದ ವಿಶ್ರಾಂತಿ ಪಡೆಯುವ ವಿಚಾರ ಕೈಬಿಟ್ಟ ನಿರ್ಧರಿಸಿದ. ಆತ ಅಲ್ಲಿ ತಲುಪುವದಕ್ಕೆ ಮೊದಲು

ನಿಮಿಷ ಮೊದಲು ಆನೆಗಳು ಮುಗಿಸಿ ಪಲಾಯನಗೈದಿದ್ದವು. ಅಲ್ಲಿಯ ಬೀಭತ್ಸ ದೃಶ್ಯವನ್ನು ಆತ ನಿಂತು ನೋಡಲಾಗಲಿಲ್ಲ. ರಕ್ತದ ಮಡುವಿನಲ್ಲಿ ಬಿದ್ದ ಅರ್ಧ ಶರೀರ ಅಲ್ಲಿಂದ ಸುಮಾರು ಇಪ್ಪತ್ತು ಅಡಿ ದೂರದಲ್ಲಿ ಬಿದ್ದಿದ್ದ ಮತ್ತರ್ಧ ಶರೀರ. ಆನೆ ಆಕೆಯನ್ನು ಮಧ್ಯಕ್ಕೆ ಸರಿಯಾಗಿ ಸೀಳಿ ತೂರಿ ಒಗೆದಿತ್ತು. ಆಕೆಯ ಪತಿ, ಶವದ ಬಳಿ ಕುಳಿತು ಮೂಕವಾಗಿ ರೋದಿಸುತ್ತಿದ್ದ.

ಅಲ್ಲಿಂದ ಪ್ರಾರಂಭವಾಯಿತು ನಿಕೋಲಸನ್ನನ ದಂಡ ಯಾತ್ರೆ. ಆನೆಗಳ ಹೆಜ್ಜೆಯ ಗುರುತುಗಳನ್ನು ಅನುಸರಿಸುತ್ತ ಆತ ಅವುಗಳನ್ನು ಹಿಂಬಾಲಿಸಿದ. ದಾರಿಯಲ್ಲಿ ಬಿದ್ದ ಭಾರಿ ಗಾತ್ರದ ಲದ್ದಿ ಅವನಿಗೆ ದಾರಿಯನ್ನು ತೋರಿಸಿದವು. ಮುಂದೆ ಬಂದಂತೆ ಹೆಜ್ಜೆ ಗುರುತುಗಳು ಕಾಣದಾದವು. ಹದಿನೈದು ಅಡಿ ಎತ್ತರದ ಹುಲ್ಲುಗಾವಲು ಅವನಿಗೆದುರಾಯಿತು. ಆನೆಗಳು ಆ ಹುಲ್ಲಿನಲ್ಲಿ ಮರೆಯಾಗಿದ್ದವು. ನಿಕೋಲಸನ್ ಒಂದು ಕ್ಷಣ ನಿಂತು ಆನೆಗಳು ಯಾವ ದಿಕ್ಕಿಗೆ ಹೋಗಿರಬಹುದೆಂದು ಯೋಚಿಸತೊಡಗಿದ.

ಅವನ ಅರ್ಧ ಆಯುಷ್ಯ ಅರಣ್ಯದಲ್ಲಿಯೇ ಕಳೆದಿತ್ತು. ಹೀಗಾಗಿ ಆತ ಕೇವಲ ಪ್ರಾಣಿಗಳನ್ನು ವಾಸನೆಯ ಮೇಲಿಂದ ಗುರುತಿಸುತ್ತಿದ್ದನಲ್ಲದೆ ಆ ಪ್ರಾಣಿ ತನ್ನಿಂದ ಎಷ್ಟು ದೂರದಲ್ಲಿ ಯಾವ ದಿಕ್ಕಿಗೆ ಇದೆ ಎಂಬುದನ್ನೂ ಊಹಿಸಬಲ್ಲವನಾಗಿದ್ದ.

ಒಂದೆರಡು ಬಾರಿ ಗಾಳಿಯಲ್ಲಿ ಜೋರಾಗಿ ಉಸಿರು ತೆಗೆದುಕೊಂಡು ಬಿಟ್ಟಾಗ ಅವನ ಘ್ರಾಣೇಂದ್ರಿಯಕ್ಕೆ ಆನೆಗಳ ವಾಸನೆ ತಗುಲಿತು. ತನ್ನಿಂದ ಬಲಗಡೆ ಸುಮಾರು ಫರ್ಲಾಂಗ್ ಅಂತರದಲ್ಲಿ ಅವು ಇವೆ ಎಂದು ಆತ ಗುರುತಿಸಿದ. ಕೈಯಲ್ಲಿ ರೈಫಲ್ ಹಿಡಿದುಕೊಂಡು ನಿಧಾನವಾಗಿ ಆ ದಿಕ್ಕಿಗೆ ಸಾಗಿದ. ಮೊರದಂತಹ ಕಿವಿಗಳ ಪಟಪಟ ಸಪ್ಪಳ, ಭಾರೀ ಶ್ವಾಸ ಬಿಡುವಿಕೆಯಿಂದ ತಾನು ಅವುಗಳ ಹತ್ತಿರ ಬಂದಿರುವೆ ಎಂದು ಮನದಟ್ಟಾದಾಗ ಹುಲ್ಲಿನಲ್ಲಿ ಅಡಗಿ ರೈಫಲ್ ಸರಿಪಡಿಸಿಕೊಂಡು ಎತ್ತರವಾದ ಹುಲ್ಲನ್ನು ಎಡಬಲಕ್ಕೆ ಸವರಿದ. ಒಂದು ಮರದಡಿ ಹಾಯಾಗಿ ನಿಂತ ನಾಲ್ಕು ಕಾಡಾನೆಗಳು ದೃಷ್ಟಿಗೆ ಬಿದ್ದವು. ತಮ್ಮದೇ ಆದ ಪ್ರಪಂಚದಲ್ಲಿ ವ್ಯಾಪರತ ಅವುಗಳಿಗೆ ಮೃತ್ಯು ತನ್ನ ಕರಾಳ ಛಾಯೆ ಬೀಸಿದೆ ಎಂಬುದರ ಕಲ್ಪನೆಯೇ ಇರಲಿಲ್ಲ.

ನಿಕೋಲಸನ್ ರೈಫಲ್ ಎತ್ತಿ ಒಂದು ಸೆಕೆಂದು ಗುರಿ ನೋಡಿ ಕುದುರೆಯನ್ನೆಳೆದ. "ಢಂ, ಢಂ," ಗುಂಡಿನ ಸಪ್ಪಳ ನೀರವತೆಯನ್ನು ಭೇದಿಸಿತು. ಎರಡು ಆನೆಗಳು ನೆಲದ ಮೇಲೆ ಬಿದ್ದು ಘೀಳಿಡುತ್ತ ಒದ್ದಾಡಲಾರಂಭಿಸಿದವು. "ಢಂ ಢಂ." ಮತ್ತೆರಡು ಗುಂಡುಗಳು ಸಿಡಿದಾಗ ಅವುಗಳ ಆಟ ಮುಗಿದಿತ್ತು. ಎರಡು ಆನೆಗಳು ವಿರುದ್ಧ ದಿಕ್ಕಿಗೆ ಓಡಿದಾಗ ನಿಕೋಲಸನ್ ಒಂದು ಆನೆಯತ್ತ ರೈಫಲ್ ಗುರಿ ಹಿಡಿದು ಕುದುರೆ ಎಳೆದ. ಹಾರಿದ ಎರಡು ಗುಂಡುಗಳೂ ಅದಕ್ಕೆ ತಗುಲದೆ ಅದರ ಬಲಗಿವಿಯನ್ನು ಹರಿದುಕೊಂಡು ಹೋದವು. ಆ ಆನೆ ಓಡಿ ಕಣ್ಮರೆಯಾಯಿತು. ನಿಕೋಲಸನ್ ಇನ್ನೊಂದು ದಿಕ್ಕಿಗೆ ಓಡಿದ ಆನೆಯ ಶೋಧಕ್ಕೆ ನಡೆದ. ಐದಾರು ನಿಮಿಷ ಕಳೆದಿರಬೇಕು ಅಷ್ಟೇ. ಮರಗಳ ಮರೆಯಲ್ಲಿ ಅಡಗಿ ನಿಂತು ತನ್ನತ್ತ ಭಯ ತುಂಬಿದ ದೃಷ್ಟಿ ಬೀರುತ್ತಿದ್ದ ಆನೆ ಗೋಚರಿಸಿತು. ರೈಫಲ್ ಮೇಲೆತ್ತಿ, ಗುಂಡು ಹಾರಿಸಿದ. ಎರಡು ಗುಂಡುಗಳು ಅದರ ಹಣೆಯನ್ನು ಪ್ರವೇಶಿಸಿದವು. ಆನೆಗೆ ಹುಚ್ಚು ಹಿಡಿದಂತಾಯಿತು. ಭಯಂಕರವಾಗಿ ಕೂಗುತ್ತ, ಮರಗಳಿಗೆ ಢೀ ಕೊಡುತ್ತ, ಅದು ನೆಲದ ಮೇಲೆ ಉರುಳಿತು. ಎರಡು ನಿಮಿಷ ಬಿಟ್ಟು ನಿಕೋಲಸನ್ ಆನೆಯ ಬಳಿ ಬಂದ. ಅದು ದೀರ್ಘ ಶ್ವಾಸ ಎಳೆದುಕೊಳ್ಳುತ್ತಿತ್ತು. ಅಂತಿಮ ಕ್ಷಣಗಳು; ಇನ್ನು ಸ್ವಲ್ಪ ಹೊತ್ತಿಗೆ ಅದರ ಪ್ರಾಣಪಕ್ಷಿ ಹಾರಿಹೋಗುತ್ತಿದೆ: ಈಗೋ ಇನ್ನೊಂದು ಗಳಿಗೆಗೋ ಸಾಯುವ ಆನೆಯ ಮೇಲೆ ಮತ್ತೆ ಗುಂಡು ಹಾರಿಸುವುದು ಹೇಡಿತನ ಎಂದು ಬಗೆದ ಆತ ಮುಂದಾದ.

ಸತ್ತಂತೆ ಬಿದ್ದುಕೊಂಡಿದ್ದ ಆನೆ ರೆಪ್ಪೆ ಬಡಿಯುವಷ್ಟರಲ್ಲಿ ಎದ್ದು ನಿಂತು ಅವನನ್ನು ಅಟ್ಟಿಸಿಕೊಂಡು ಬಂದಿತು. ಅದು ಗೊತ್ತಾದಾಗ ನಿಕೋಲಸನ್ನನಿಗೆ ಹೊರಳಿ ನಿಂತು ರೈಫಲ್ ಗುರಿ ಹಿಡಿಯಲೂ ಸಮಯವಿರಲಿಲ್ಲ. ಪ್ರಾಣ ಭಯದಿಂದ ಆತ ಓಡಲಾರಂಭಿಸಿದ. ಅದು ಅಟ್ಟಿಸಿಕೊಂಡು

ಬಳಸತ್ತಲೇ ಇತ್ತು. ಓಡುತ್ತಿದ್ದ ಬ್ರಿಯೆನ್ ಕಾಲು ತೊಡಕಿ ಉರುಳಿ ಬಿದ್ದ. ಇಂದಿಗೆ ಮುಗಿಯಿತು ತನ್ನ ಅವತಾರ ಎಂದವನಿಗೆ ಖಾತ್ರಿಯಾಯಿತು. ಓಡುತ್ತ ಬಂದ ಆನೆ ಅವನ ತಲೆಯ ಬಳಿ ಬಂದು ನಿಂತಿತು. ಕೇವಲ ಎರಡು ಮೂರು ಬೆರಳುಗಳ ಅಂತರ. ನಿಂತು ಸುತ್ತಲೂ ನೋಡಿತು. ನಿಕೋಲಸನ್ ಉಸಿರು ಬಿಗಿ ಹಿಡಿದು ಬಿದ್ದುಕೊಂಡಿದ್ದ. ಈಗ ಆನೆ ತನ್ನ ಮುಂದಿನ ಕಾಲೆತ್ತಿ ಹೊಟ್ಟೆಯ ಮೇಲಿಡುತ್ತದೆ. ಮುಂದಿನ ಕ್ಷಣ ಬಾಯಿಯಿಂದ ರಕ್ತ ಕಾರಿ ತಾನು ಕೊನೆಯುಸಿರೆಳೆಯುತ್ತೇನೆಂದು ತಿಳಿದ ಆತನಿಗೆ ಆಶ್ಚರ್ಯ ಕಾದಿತ್ತು. ಒಮ್ಮೆಲೆ ಆಗ ಮರಳಿತು. ಅದರ ವಿಚಿತ್ರ ನಡತೆಯಿಂದ ಸ್ಮೃತಿ ತಪ್ಪಿದಂತಾದ ನಿಕೋಲಸನ್ನನಿಗೆ ಸುಧಾರಿಸಿಕೊಳ್ಳಲು ತುಸು ಹೊತ್ತೇ ಹಿಡಿಯಿತು. ಮುಂದೆ ಆತ ಸುಧಾರಿಸಿಕೊಂಡು ರೈಫಲ್ ಎತ್ತಿ ಗುಂಡು ಹಾರಿಸಿದ. ಹುಚ್ಚನಂತಾದ ಆತ ಆ ಆನೆಯ ಮೇಲೆ ಹದಿಮೂರು ಗುಂಡುಗಳನ್ನು ಹಾರಿಸಿದ್ದ. ಅದು ಪೂರ್ತಿ ಸತ್ತಿದೆ ಎಂದು ಮನದಟ್ಟಾದ ಮೇಲೂ ಐದು ಗುಂಡು ಹಾರಿಸಿದ್ದ. ಭೀತಿಯಿಂದ ತರಗೆಲೆಯಂತೆ ಕಂಪಿಸುತ್ತಿದ್ದ ಆತ ಮೈಯೆಲ್ಲ ಬೆವತು ಹೋಗಿದ್ದ. ಅದೇ ವೇಳೆಗೆ ಬಲಗಡೆ ದಿಬ್ಬದ ಬಳಿ ಸದ್ದಾಯಿತು. ಸರಕ್ಕನೆ ಹೊರಳಿದ. ಅದೋ ಕಿವಿ ಹರಿದ ಆನೆ ಆತನತ್ತಲೇ ನೋಡುತ್ತಿತ್ತು. ಬಂದೂಕಿಗೆ ಗುಂಡು ತುಂಬುವಷ್ಟರಲ್ಲಿ ಅದು ಕಣ್ಮರೆಯಾಗಿತ್ತು. ಮುಂದೆ ಅರ್ಧ ಗಂಟೆ ಹುಡುಕಿದರೂ ಅದು ದೃಷ್ಟಿಗೆ ಬೀಳಲಿಲ್ಲ. ಕತ್ತಲೆ ಆವರಿಸತೊಡಗಿದ್ದರಿಂದ ನಿಕೋಲಸ್‌ನ್ ಕ್ಯಾಂಪಿಗೆ ಮರಳಿದ.

ಮೃತ್ಯುಮುಖದಿಂದ ಪಾರಾಗಿ ಬಂದ ಆತ ಇನ್ನು ಮುಂದೆ ಆನೆ ಪೂರ್ತಿ ಸತ್ತಿದೆ ಎಂದು ಮನದಟ್ಟಾಗುವ ವರೆಗೂ ಅದನ್ನು ಬಿಡಬಾರದು ಎಂಬ ಹೊಸ ಪಾಠವನ್ನು ಅಂದು ಕಲಿತಿದ್ದ. ಕ್ಯಾಂಪಿಗೆ ಬಂದು ಮೂರು ಆನೆಗಳನ್ನು ಕೊಂದ ಸಮಾಚಾರ ತಿಳಿಸಿದಾಗ ಆದಿವಾಸಿಗಳು ಸಂತಸದಿಂದ ಕೇಕೆ ಹಾಕುತ್ತ ಕತ್ತಿ ಚೂರಿಗಳೊಂದಿಗೆ ಓಡಿದರು. ಆನೆಯ ಮಾಂಸವೆಂದರೆ ಅವರಿಗೆ ತುಂಬಾ ಪ್ರೀತಿ. ಅದರ ಕೊಂಬು ಹಾಗೂ ಎಲುಬುಗಳನ್ನು ಕ್ರೀಡಾ ವಿಭಾಗಕ್ಕೆ ಒಪ್ಪಿಸಿ ಮಾಂಸವನ್ನು ಅವರು ಅಕ್ಕರೆಯಿಂದ ತಿನ್ನುತ್ತಾರೆ.

ಅಂದು ರಾತ್ರಿಯಿಡೀ ಅವನಿಗೆ ಒಂದೇ ವಿಚಾರ. ಆನೆ ತನ್ನ ತಲೆಯ ಬಳಿ ಬಂದು ನಿಂತಿದ್ದರೂ ತನ್ನನ್ನು ಏಕೆ ಕೊಲ್ಲಲಿಲ್ಲ? ಕೊನೆಗೆ, ಬಹುಶಃ ಹಣೆಗೆ ಗುಂಡು ತಾಕಿದ್ದರಿಂದ ಅದು ಕುರುಡಾಗಿರಬೇಕು; ಕಣ್ಣು ದೃಷ್ಟಿ ಕಳೆದುಕೊಂಡಿದ್ದರೂ ಕಿವಿಗೆ ಹಕ್ಕಿಯ ಸಪ್ಪಳ ಕೇಳಿಸುತ್ತಿದ್ದರಿಂದ ಅದು ಅಟ್ಟಿಸಿಕೊಂಡು ಬಂದಿರಬೇಕು. ಎಂದು ಆತನಿಗೆ ಹೊಳೆದದ್ದು. ಯಾವಾಗ ಆತ ತೊಡರಿಕೊಂಡು ಬಿದ್ದನೋ ಆಗ ಹಕ್ಕಿಯ ಸಪ್ಪಳ ಕೇಳದಂತಾಗಿರಬೇಕು. ಹೀಗಾಗಿ ಬೇಟೆ ತಪ್ಪಿಸಿಕೊಂಡಿತು ಎಂದು ಭಾವಿಸಿದ ಆನೆ ಮರಳಿರಬೇಕು. ತನ್ನ ತರ್ಕ ಸರಿ ಎಂದು ಅನಿಸಿದಾಗಲೇ ಆತನಿಗೆ ನಿದ್ರೆ ಬಂದದ್ದು.

ಮೊದಲು ಆತ ಕೇವಲ ಹೆಣ್ಣಾನೆಗಳನ್ನಷ್ಟೇ ಕೊಲ್ಲಬೇಕೆಂದು ನಿರ್ಧರಿಸಿದ್ದ। ಇದರಿಂದ ಎರಡು ಪ್ರಯೋಜನಗಳಾಗುತ್ತಿದ್ದವು. ಮೊದಲನೆಯದಾಗಿ



"ಎಂಬತ್ತರ ಬಸ್ಸು ಎಷ್ಟೊತ್ತಿಗೆ ಬಿಡ್ತದೆ ಸ್ವಾಮಿ?"

ಹೆಣ್ಣಾನೆ ಸಾಯುವುದರಿಂದ ಆನೆಗಳ ಸಂತತಿ ಕುಂಠಿತವಾಗುತ್ತದೆ. ಎರಡನೆಯದಾಗಿ ಹೆಣ್ಣಾನೆಗಳನ್ನು ಹೊಡೆಯುವುದರಿಂದ ಉಳಿದ ಆನೆಗಳು ಗಾಬರಿಯಾಗಿ ಓಡಿ ಹೋಗುತ್ತವೆ. ಹೌದು. ಹೆಣ್ಣಾನೆಗಳಿಗೆ "ಬುಂಡೀ" ಎಂದು ಕರೆಯುತ್ತಿದ್ದು ಅವೇ ಆನೆಗಳ ಗುಂಪಿಗೆ ನಾಯಕಿ ಆಗಿರುತ್ತವೆ. ನಾಯಕಿ ಸಾಯುತ್ತಲೂ ಅವು ಭೀತಿಯಿಂದ ಪಲಾಯನ ಮಾಡುತ್ತವೆ ಆದರೆ ಈ ಮಾತು ಇಲ್ಲಿ ತಲೆಕೆಳಗಾಯಿತು. ತಮ್ಮ ನಾಯಕಿ ಸಾಯುತ್ತಲೇ ಆನೆಗಳು ಹೆದರಿ ಪಲಾಯನ ಮಾಡುವುದನ್ನು ಬಿಟ್ಟು, ಬೇಟೆಗಾರರ ಮೇಲೆ ಆಕ್ರಮಣ ಮಾಡತೊಡಗಿದವು. ಹೀಗಾಗಿ ಕೈಗೆ ಸಿಕ್ಕ ಆನೆಗಳನ್ನು ಹೊಡೆಯಲೇಬೇಕಾಯಿತು.

ಒಂದು ದಿನ ನಸುಕಿನಲ್ಲಿ ನಿತ್ಯ ಕ್ರಿಯೆ ತೀರಿಸಿಕೊಳ್ಳಲೆಂದು ಹೊರಗಡೆ ಬಂದ ನಿಕೋಲಸನ್ನನ ಆಪ್ತಮಿತ್ರ ಕಿಮಾಂಡಾ, ಆನೆಗಳ ಕೈಗೆ ಸಿಕ್ಕಿ ಭೀಕರ ಮರಣವನ್ನಪ್ಪಿದ. ಮಿತ್ರನ ಮರಣದಿಂದ ನಿಕೋಲಸನ್ನನಿಗೆ ಹುಚ್ಚು ಹಿಡಿದಂತಾಯಿತು. ಹೊರಗಡೆ ಹೊಂಚು ಹಾಕಿಕೊಂಡು ಕುಳಿತ ಮೂರು ಆನೆಗಳು ಅವನ ಮೇಲೆ ಆಕ್ರಮಣ ಮಾಡಿದವು. ಮೊದಲು ಅವನನ್ನು ತಮ್ಮ ಕಾಲಡಿ ತುಳಿದು ಹಿಸುಕಿ ಹಾಕಿದ ಅವು ಕೊನೆಗೆ ಎರಡು ಭಾಗವಾಗಿ ಸೀಳಿ ಹಾಕಿದವು. ಊಟ...ನಿದ್ದೆ... ವಿಶ್ರಾಂತಿ... ಎಲ್ಲಾ ಮರೆತು, ಹಗಲು ಮೇಲೆ ರೈಫಲ್ ಹಿಡಿದುಕೊಂಡು ತಿರುಗುತ್ತ, ಕಣ್ಣಿಗೆ ಬಿದ್ದ ಆನೆಗಳ ಸಂಹರಿಸತೊಡಗಿದ. ಅವನ ವಾಸನೆ ಬಡಿದರೆ ಆನೆಗಳು ಓಡಿ ಹೋಗಲಾರಂಭಿಸಿದವು.

ಒಂದು ಮಾತು ಮಾತ್ರ ನಿಜ. ಬೇಟೆಗಾರ ಎಷ್ಟೇ ಕೆಚ್ಚೆದೆಯವನಾಗಿರಲಿ, ಚತುರನಾಗಿರಲಿ... ಒಂದಿಲ್ಲೊಂದು ದಿನ ಆತ ಅಡವಿಯ ಕ್ರೂರ ಪ್ರಾಣಿಗಳ ಕೈಗೆ ಸಿಲುಕಿ ಮರಣವನ್ನಪ್ಪಬೇಕಾಗುತ್ತದೆ. ಈ ಮಾತು ಬ್ರಿಯಾನ್ ನಿಕೋಲಸನ್ನನ ಪಾಲಿಗೆ ನೂರಕ್ಕೆ ನೂರರಷ್ಟು ನಿಜವಾಯಿತು.

ಒಂದು ಸಂಜೆ. ಅದೇ ಬೇಟೆಯಿಂದ ನಿಕೋಲಸನ್ ವಾಪಸವಾಗಿದ್ದ. ಗುಡಿಸಲ ಮುಂದೆ ಕುಳಿತು ರೈಫಲ್ ನಳಿಕೆ ಸ್ವಚ್ಛ ಮಾಡತೊಡಗಿದ್ದ. ಹಿಂದೆ ಫಶ್ ಫಶ್ ಎಂದು ಭಾರಿ ಸಪ್ಪಳವಾಯಿತು. ನಿಕೋಲಸನ್ ಸರಕ್ಕನೇ ಹೊರಳಿದ. ಕೇವಲ ಮೂರಡಿ ಅಂತರದಲ್ಲಿ ಒಂದು ಆನೆ ನಿಂತಿತ್ತು. ಆ ಆನೆಯನ್ನು ಆತ ಗುರುತಿಸಿದ. ಆದೇ ಅವನಿಂದ ತಪ್ಪಿಸಿಕೊಂಡ ಕಿವಿ ಹರಿದ ಆನೆ. ಅದರ ಚಿಕ್ಕ ಚಿಕ್ಕ ಕಣ್ಣುಗಳು ಕೆಂಡದುಂಡೆಯಾಗಿದ್ದವು. ನಿಕೋಲಸನ್ನನ ಎದುರು ಮೃತ್ಯು ಬಾಯ್ದೆರೆದು ನಿಂತಿತ್ತು. ಕೈಯಲ್ಲಿ ರೈಫಲ್ ಇದ್ದರೂ ಅದಕ್ಕೆ ಗುಂಡು ತುಂಬಲು ಸಮಯ ಬೇಡವೇ? ೮–೧೦ ದಿನಗಳಿಂದ ಅವನೊಡನೆ ಕಣ್ಣು ಮುಚ್ಚಾಲೆ ಆಟ ಆಡಿದ ಆ ಆನೆ ಇಂದು ಅವನನ್ನು ಹಿಡಿಯುವಲ್ಲಿ ಯಶ ಪಡೆದಿತ್ತು.

ನಿಕೋಲಸನ್ನನಿಗೆ ಅರ್ಧಾಂಗವಾಯು ಹೊಡೆದಂತಾಗಿತ್ತು. ಕೈಕಾಲುಗಳು ಚೈತನ್ಯ ಕಳೆದುಕೊಂಡಿದ್ದವು... ಮುಂದಿನ ಕ್ಷಣ ಆನೆಯು ಸೊಂಡಿಲು ಅವನನ್ನು ಸುತ್ತಿ ಹೂವಿನಂತೆ ಮೇಲೆತ್ತಿ ಗಾಳಿಯಲ್ಲಿ ನಾಲ್ಕಾರು ಬಾರಿ ಸುತ್ತಿಸಿ, ಬೀಸಿ ಒಗೆದಾಗ ಆತ ಮರವೊಂದರ ಕಾಂಡಕ್ಕೆ ಅಪ್ಪಳಿಸಿ ವಿಕಾರವಾಗಿ ಚೀರುತ್ತಾ ನೆಲಕ್ಕೆ ಬಿದ್ದ. ಹಿಂದೆಯೇ ಬಂದ ಆನೆ ಅವನ ಒಂದು ಕಾಲು ಮೇಲೆ ತನ್ನ ಕಾಲನ್ನಿರಿಸಿ, ಸೊಂಡಿಲಿನಿಂದ ಇನ್ನೊಂದು ಕಾಲನ್ನು ಬಲವಾಗಿ ಹಿಡಿದು ಸೀಳಿದಾಗ, ಅವನ ಆಕ್ರಂದನ ದಟ್ಟ ಅಡವಿಯಲ್ಲಿ ಪ್ರತಿಧ್ವನಿಸಿತು.

ರಕ್ತದ ಮಡುವಿನಲ್ಲಿ ಬಿದ್ದ ನಿಕೋಲಸನ್ನನನ್ನು ಆನೆ ಒಂದು ಕ್ಷಣ ದಿಟ್ಟಿಸಿ ನೋಡಿದಾಗ ಅದರ ಮುಖದ ಮೇಲೆ ಅಪಾರ ತೃಪ್ತಿ ಮೂಡಿತ್ತು. ತನ್ನ ಸಹಚರರನ್ನು ಬೇಟೆಯಾಡಿದ ಅವನನ್ನು ಕೊಂದು ಸೇಡು ತೀರಿಸಿಕೊಂಡ ಆನೆ ಸೊಂಡಿಲನ್ನು ಮೇಲೆತ್ತಿ ವಿಜಯದುಂದುಭಿ ಮೊಳಗಿಸುತ್ತ ದಟ್ಟಡವಿಯೊಳಗೆ ಓಡುವಾಗ ನೂರಾರು ಜನ ಗೊಂಬೆಯಂತೆ ನಿಂತು ನೋಡುತ್ತಿದ್ದರು. ಎಂಥಹ ಭೀಭತ್ಸ ದೃಶ್ಯ... ಎಂಥಹ ಸೇಡು? ಒಂದು ಮೂಕ ಪ್ರಾಣಿಗೂ ಇಂಥ ಪ್ರತಿರೋಧವೇ? ★

ನಂಬಿಕೆಟ್ಟವರಿಲ್ಲವೋ

ಜಿ. ಸುದರ್ಶನ

"ನಂಬಿ ಕೆಟ್ಟವರಿಲ್ಲವೋ..." ಎಂದು ದಾಸರು ಹಾಡಿದ್ದಾರೆ.

"ಯಾವ ದಾಸರು?" ಎಂದು ಕೇಳಬೇಡಿ. ಏಕೆಂದರೆ ಯಾವ ಯಾವ ದಾಸರು ಏನೇನು ಹಾಡಿದ್ದಾರೆ ಅನ್ನೋದು ನಾನಷ್ಟು ಅಭ್ಯಾಸ ಮಾಡಿಲ್ಲ.

ನಮ್ಮನೆಗೆ ಶನಿವಾರಕ್ಕೊಮ್ಮೆ ಒಬ್ಬ ದಾಸಯ್ಯ ಬರ್ತಾನೆ.

ಅವನ ಪೇಟೆಂಟ್ ಹಾಡಿನ ಮೊದಲನೆಯ, ಮಧ್ಯದ ಮತ್ತು ಕೊನೆಯ ಒಂದು ಸಾಲು— ನಂಬಿ ಕೆಟ್ಟವರಿಲ್ಲವೊ....ಟಿಂಗ್ ಟಿಂಗ ಅಂತ ತಾರಕ ಸ್ವರದಲ್ಲಿ ಬಡ್ಕೊಳ್ಳೋಕೆ ಪ್ರಾರಂಭ ಮಾಡ್ತಾನೆ.

ಅವನ ಟಿಂಗ್ ಟಿಂಗ್ ಕೇಳಲಿಕ್ಕಾಗದೆಂಲೊ ಅಥವಾ ತನ್ನ ಕೆಟ್ಟ ಸ್ವರದಲ್ಲಿ ಪುನಃ ನಂಬಿಕೆ ದೃಢ ಪಡಿಸೋ ಪ್ರಯತ್ನ ಮಾಡ್ತಾನೆ ಅಂತಲೊ ಅಥವಾ ಧರ್ಮಬುದ್ಧಿಯಿಂದಲೋ ಅಂತೂ ಒಂದು ಹಿಡಿ ಅಕ್ಕಿ ಇವಳ ಕೈಯಿಂದ ಆ ದಾಸಯ್ಯನ ಜೋಳಿಗೆಗೆ ಬೀಳುತ್ತೆ.

ಪಕ್ಕದ ಮನೆಗೆ ಆ ದಾಸಯ್ಯ ಹೋಗೋದಿಲ್ಲ. ಆಕಸ್ಮಾತಾಗಿ ಹೋದರೆ ಆ ಮನೆಯಾತ, "ದುಡ ಕೊಂಡು ತಿನ್ನೋಕೆ ನಿಂಗೇನಯ್ಯ ಧಾಡಿ," ಅಂತ ಬ್ಲಡ್‌ಹೌಂಡ ತರಹ ಮೇಲೆ ಬೀಳ್ತಾನೆ.


ಮೂರನೆ ಮನೆಗೆ 'ನಂಬಿಕೆಟ್ಟವ...'.

ಅಂತೂ ಅವನ ನಂಬಿಕೆ ಚೆನ್ನಾಗಿದೆ.

ಯಾರ ಮನೆ ಮುಂದೆ 'ನಂಬಿ'...ಹಾಡ್ತಾನೊ ಒಂದು ಹಿಡಿ ಅಕ್ಕಿಯೋ ಐದು ಪೈಸೆ ನಾಣ್ಯವೋ ಜೋಳಿಗೆಗೆ ಬೀಳುವದು ಗ್ಯಾರಂಟಿ.

ಅಥವಾ ಯಾವ ಮನೇಲಿ ಭಿಕ್ಷೆ ದೊರೆಯುತ್ತೆ ಅಂತ ಗೊತ್ತಿರುತ್ತೊ ಅವರ ಮನೆಯುಷ್ಟೇ ನಂಬಿ ಹಾಡ್ತಾನೊ?





ಈ ಮಾತು ಯಾಕೆ ಬಂತು ಅಂದ್ರೆ...

ಶೇವ್ ಮಾಡ್ಕೊಳ್ಳಿಕ್ಕೆಂತ ಕನ್ನಡಿ ಮುಂದೆ ಕೂತ್ಕೊಂಡಿದ್ದೆ. ಕುಂಚ, ರಂಟೆ ಎಲ್ಲ ಸಿದ್ಧವಾಗಿತ್ತು. ಸೋಪ್ ಹಾಕಿ ಹೆರೆಯೋದೊಂದೆ ಬಾಕಿ. ನನ್ನ ಬೆನ್ನ ಹಿಂದೆ ನನ್ನ ಮರಿ ತಿಪ್ಪಿಯ ತಲೆಯೂ ಮಿರಿ ಮಿರಿ ಮಿಂಚಿತು ಕನ್ನಡಿಯಲ್ಲಿ.

ಅಂದರೆ ಇಬ್ಬರ ತಲೆ, ನನ್ನ ಜೇಬು ಬೋಳಾಗಿತ್ತು.

ತಿರುಪತಿಗೆ ಹೋದರೆ "ಸೆತ್ತಿ ಬೋಡಿ— ತಿತ್ತಿ (ಹಣದ ಚೀಲ) ಬೋಡಿ" ಅನ್ನೋದನ್ನ ಚನ್ನಾಗಿ ಅನುಭವ ಮಾಡಿಸಿ ಕಳಿಸಿದ್ದ ಆ ತಿಮ್ಮಪ್ಪ.

"ಸುಖ ಪ್ರಸವವಾಗಿ ಗಂಡು ಮಗು ಆದರೆ ಸಂಸಾರ ಸಮೇತ ನಿನ್ನ ದರ್ಶನಕ್ಕೆ ಬರ್ತೀವಿ," ಎಂದು ನನ್ನಮ್ಮ, ನನ್ನ ಪೆಂಡತಿ ಜಾಯಿಂಟ್ ಆಗಿ ಬೇಡ್ಕೊಂಡಿದ್ರಂತೆ.

ಅತ್ತೆ-ಸೊಸೆಯ ಒಟ್ಟು ಬೇಡಿಕೆ ಅಂದ ಮೇಲೆ ನಾನು ತಿರಸ್ಕರಿಸಲು ಸಾಧ್ಯವೆ?

ಸರಿ. ಇವತ್ತು, ನಾಳೆ, ಮುಂದಿನ ತಿಂಗಳು ಅಂತ ಮುಂದಕ್ಕೆ ಹಾಕಿ ಹಾಕಿ ಮರೆತ ತಡೆಯದೆ ತಿಪ್ಪೀಗೆ ಒಂದ್ವರ್ಷ ಆದಾಗ "ರಾಯಲಸೀಮಾ ಎಕ್ಸ್‌ಪ್ರೆಸ್" ಏರಿ ತಿರುಪತಿಯಲ್ಲಿಳಿದೆವು.

ನೈಟ ಹಾಲ್ಟ್ ನಂತರ ಬೆಳಿಗ್ಗೆ ಬೇಗ ಎದ್ದ ಅತ್ತೆ-ಸೊಸೆ "ಹೂಂ ಬೇಗ ಏಳಿ (ಏಳು). ಇನ್ನು ಬೆಟ್ಟ ಹತ್ಬೇಕು," ಎಂದೂ ಆವಸರಿಸಿದರು.

ಹೇಳಿ ಕೇಳಿ ಸರ್ಕಾರಿ ನೌಕರ; 'ಅವಸರ ಅಂದ್ರೆ ಆರ್ ತಿಂಗ್ಳು' ಅಂತ ಹಾಯಾಗಿರೋನು.

"ಹೂಂ, ಹೂಂ, ಎದ್ಬಿಟ್ಟೆ," ಎಂದು ಪುನಃ ಗೊರಕೆ ಹೊಡೆಯಲು ಪ್ರಾರಂಭಿಸಿದೆ.

"ಏಳೋ ಬಾಬು, ಮನ್ಯಾಗ ಮಲಗಿದ್ಹಂಗ ಹೋದಲ್ಲಿ ಬಂದಲ್ಲಿ ಮಲಗಿದ್ರೂ ಹ್ಯಾಂಗ? ಇನ್ನೂ ಗುಡ್ಡ ಹತ್ಬೇಕಂ. ಏಳಂ" ಅಮ್ಮನ ಅರ್ಭಟ.

ತಿರುಪತಿ ಬೆಟ್ಟ ನಮ್ಮಮ್ಮನ ದೃಷ್ಟಿಯಲ್ಲಿ ಒಂದು ಗುಡ್ಡ.

"ಅಯ್ಯೋ, ಯಾಕ್ ಅವಸ್ರ ಮಾಡ್ತೀರಿ ಇಬ್ರೂ? ಬಸ್ ಹತ್ತಿದ್ರ ಅರ್ಧ ತಾಸಿನ್ಯಾಗ ಮ್ಯಾಲಿರ್ತೀವಿ," ಇಬ್ರಿಗೂ ಶಾಂತವಾಗಿ ಹೇಳಿ ಮತ್ತೆ ಮುಸುಕೆಳೆದೆ.

"ಬಸ್ಸ! ಕಾಲ್ನಡಿಗೇಲಿ ಬೆಟ್ಟ ಹತ್ಬೇಕು. ಹರಕೆ ಇದೆ," ಇವಳ ರಾಗ; ಅಮ್ಮನ ಸೋ—ರಾಗ.

ಈ ವಿಷಯ ಅವರೆಗೂ ನಂಗೆ ಯಾರೂ ಹೇಳಿರಲಿಲ್ಲ.

ಬಾಯ್ಬಿಟ್ಟು ಹೇಳದೆ ಇದ್ದರೆ ಇನ್ನೊಬ್ಬರ ಮನಸ್ಸಿನಲ್ಲಿರೋದು ಅರ್ಥ ಆಗೋದಾದ್ರೂ ಹೇಗೆ?

ಒಂದು ಪಕ್ಷ ಒಬ್ಬರ ಮನಸ್ಸಿನಲ್ಲಿ ಇರೋದು ಇನ್ನೊಬ್ಬರಿಗೆ ಅರ್ಥ ಆಗೋ ಹಾಗಿದ್ದರೆ ಪಾಪ! ಬಾಬು ಸಾಹೇಬರು ಪ್ರಧಾನಿ ಪಟ್ಟಕ್ಕೆ ಪ್ರಯತ್ನ ಮಾಡಿ ನಿರಾಶೆ ಆಗ್ತಿರಲಿಲ್ಲ.

ಲಗೇಜನ್ನು ಬೆಟ್ಟಕ್ಕೆ ಬುಕ್ ಮಾಡಿಸಿ ನಾವು ರಿಕ್ಷಾದಲ್ಲಿ ಬೆಟ್ಟದ ಬುಡ ಸೇರಿದೆವು.

ಗಾಳಿ ಗೋಪುರದ ವರೆಗೂ ಇರೋ ಕಡಿದಾದ ಮೆಟ್ಟಲುಗಳನ್ನು ನೋಡಿಯೆ ಆತಂಕ ಆಯ್ತು, 'ಹೇಗಪ್ಪಾ ಹತ್ತೋದು' ಅಂತ.

ಎಸ್ಕಲೇಟರ್ ಇದ್ರೆ ಚನ್ನಾಗಿತ್ತು. ಮೆಟ್ಲ ಹುಟ್ಟಿಸಾಂತರ ಹತ್ತಿ, ಹರಕೆ ತೀರಿಸಿದ ಹಾಗೂ ಆಗ್ತಿತ್ತು, ಆಯಾಸಾನೂ ಆಗ್ತಿರಲಿಲ್ಲ.

ಲಗೇಜೇನೊ ಬುಕ್ ಮಾಡಿಸಿದ್ದೆ. ಈ ತಿಪ್ಪೀನ್ನ ಲಗ್ಗೇಜ್‌ನೊಡನೆ ಬುಕ್ ಮಾಡೋ ಹಾಗಿರಲಿಲ್ಲಾ?

ಇದು ನನ್ನ ಸ್ವಂತ ಲಗ್ಗೇಜು.

ಇವಳು ಮತ್ತು ನನ್ನ ತಾಯವಳು ಮೊಜಗೆ

ನಮಸ್ಕಾರ ಮಾಡಿ, 'ಗೋವಿಂದ' ಎಂದು ಸರ ಸರ ಏರೋಕೆ ಪ್ರಾರಂಭ ಮಾಡೇಬಿಟ್ರು.

ಅವರು ಏರ್ತಾ ಇರೊ ಉತ್ಸಾಹ, ಸ್ಪೀಡ್ ನೋಡಿ ಒಂದು ಕಾಲ್ದಲ್ಲಿ ಇಂದ್ರಮ್ಮನೂ ಹೀಗೆ ಸರಸರಾಂತ ಮೇಲೇರಿದ್ದು ಜ್ಞಾಪಕ ಬಂತು.

ನನ್ನ ಲಗ್ಗೇಜನ್ನು ಎತ್ತಿಕೊಂಡು ಏರತೊಡಗಿದೆ. ಕೆಲವು ಮೆಟ್ಟಿಲುಗಳನ್ನು ಏರೋದರಲ್ಲೇ ಸುಸ್ತಾಯ್ತು.

ಮುಖ ಎತ್ತಿ ನೋಡಿದೆ. ದೂರದಲ್ಲಿ 'ಗಾಳಿಗೋಪುರ' ಕಾಣಿಸ್ತಾ ಇತ್ತು.

ನಿಜ ಜೀವನದಲ್ಲಿ ಗಾಳಿಗೋಪುರ ಕಾಣ್ದೆ ಇದ್ರೂ ತಿರುಪತೀಲಿ ಭವ್ಯವಾಗಿ ಕಾಣುತ್ತೆ.

ಅಷ್ಟು ದೂರದಲ್ಲಿ ಇರೋದು ನೋಡಿ ಅದು ನನ್ನ ಪಾಲಿಗೆ ಗಾಳಿಗೋಪುರಾನೇ ಆಗುತ್ತೇನೊ ಅನ್ನೋ ಅಷ್ಟು ಸುಸ್ತಾಗಿತ್ತು.

ನಾನು ಹಿಂದೆ ಬಿದ್ದದ್ದು ನೋಡಿ. ಅವರಿಬ್ಬರೂ ಗಾಳಿಗೋಪುರದಲ್ಲಿ ಕೂತ್ಕೊಂಡು ನನ್ನ ಕಾಯ್ತಾ ಇದ್ರು.

ಮೆಟ್ಲುಮೆಟ್ಲಿಗೂ 'ಗೋವಿಂದಾ ಗೋವಿಂದ' ಎಂದು ಏದುಸಿರು ಬಿಡ್ತಾ, ಅವರು ಕುಳಿತಲ್ಲಿಗೆ ಹೋಗಿ ಇವಳಿಗೆ ನನ್ನ ಲಗ್ಗೇಜ್ ಒಪ್ಪಿಸಿ 'ಉಸ್ಸಪ್ಪಾ' ಅಂತ ಕುಕ್ಕರಿಸಿದೆ.

ಹಿಮಾಲಯ ಏರಿದಷ್ಟೇ ಆಯಾಸ ಆಗಿತ್ತು.

ಚಳಿ ಬಿದ್ರೂ ಸೆಕೆ ಸೆಕೆಯಾಗಿ ಬೆವರು ಬರ್ತಾ ಇತ್ತು. ಹಿಮಾಲಯಕ್ಕೂ ಗಾಳಿಗೋಪುರಕ್ಕೂ ಅಷ್ಟೇ ವ್ಯತ್ಯಾಸ. "ಯಾಕ ಕಾಲ್‌ಬಾಡಿಗಿ ಕೊಡ್ತೀನಿ ಅಂತ ಅಂದ್ಕೊಂಡಿಲ್ಲೇನು?" ಸುಧಾರಿಕೊಂಡು ಫ್ರೆಶ್ ಆಗಿದ್ದ ಅಮ್ಮನ ಕುಶಲ.

'ಕಾಲ್ ಬಾಡಿಗೆ!?' ಅಂದ್ರೆ ಬದರಿಯಾತ್ರೇಲಿ ಕೈಲಾಗದವರಿಗೆ 'ಡೋಲಿ' ಬಾಡಿಗೆಗೆ ಸಿಕ್ಕ ಹಾಗೆ ತಿರುಪತೀಲಿ ಕಾಲು ಬಾಡಿಗೆಗೆ ಸಿಕ್ಕುತ್ತಾ!

ಮೊದಲೆ ಗೊತ್ತಿದ್ದರೆ ನಾಕೈದು ಜೊತೆ ಕಾಲುಗಳನ್ನು ಬಾಡಿಗೆ ತರಬಹುದಾಗಿತ್ತು.

"ಹೌದ್ರು, ವೆಂಕಟರಮಣ ಸ್ವಾಮಿಗೆ ಕಾಲು ಬಾಡಿಗೆ ಹಾಕ್ತೀನಿ ಅಂತ ಬೇಡ್ಕೊಂಡ್ರೆ ಒಂಚೂರೂ ಆಯಾಸ ಆಗ್ಲಿ, ಕಾಲು ನೋವು ಆಗ್ಲಿ ಆಗೋಲ್ಲ." ಇವಳ ವಿವರಣೆ.

ಭಪ್ಪರೆ ವೆಂಕಟರಮಣ! ವ್ಯಾಪಾರ ಅನ್ನೋಕು ಏಂದೇ. ನಮ್ಮ ಕಾಲಿಂದ ನಾವು ನಡ್ಕೊಂಡು ಬಂದ್ರೆ, ಅದೂ ನಿನ್ನ ನೋಡೋಕೆ – ಬಾಡಿಗೆ ಬೇರೆ ಕೊಡ್ಬೇಕಾ!?

ಆ ವರೆಗೆ ರಾಜಕಾರಣ ಒಂದೆ ಬಂಡವಾಳ ಇಲ್ಲದ ವ್ಯಾಪಾರ ಅಂದ್ಕೊಂಡಿದ್ದೆ ನಾನು.

ರಾಜ್ಯ ಸರಕಾರ ಬೇರೆ ಡಿಪಾರ್ಟಮೆಂಟಿನವರಿಗೆ ಕೊಟ್ಟಷ್ಟೆ ಸಂಬಳ ಟ್ರೆಜರಿಯವರಿಗೆ ಕೊಟ್ಟರೂ ಹಬ್ಬ ಹುಣ್ಣಿಮೆ ಗಮನಿಸದೆ ಅಕೌಂಟ್ ಮಾಡೋ ನಾವೆಲ್ಲಿ? ಕೂತಲ್ಲೆ ಕೂತು ನಮ್ಮ ಕಾಲಿನ ಬಾಡಿಗೆ ನಮ್ಮಿಂದಲೇ ವಸೂಲುಮಾಡಿ ಹಣ ಮಾಡೋ ಆವನೆಲ್ಲಿ? ಅಸೂಯೆ ಆಗೋದು ಸ್ವಾಭಾವಿಕವೇ ಅಲ್ವೆ!

ಒಂದು ವೇಳೆ ವೆಂಕಟರಮಣ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ಟ್ರೆಜರಿ ಉದ್ಯೋಗಕ್ಕೆ ಬಂದು ನೌಕರಿ ಮಾಡಿದ್ರೆ ಅಂದಾಜು ಎಷ್ಟು ಸಂಬಳ ಕೇಳಬಹುದೂಂತ ಯೋಚನೆ ಬಂದು ನಗು ಬಂತು.



ಮುಡಿಯ ಗಳಿಸೋ ಹಾಗಿದ್ರೆ ಅವನ ದೇವತ್ವ ಎಲ್ಲಿ ಉಳೀತಿತ್ತು?

ಹೀಗೇ ಕಮರ್ಷಿಯಲ್ ಹಾದಿನಲ್ಲಿ ಯೋಚಿಸುತ್ತಾ ಸಾಗಿದ್ದೆ.

"ಛೀ. ಅಷ್ಟೇನು ಯೋಚಿಸುವಷ್ಟು ಇಲ್ಲ. 'ಕಾಲ್ ಬಾಡಿಗೆ' ಎಷ್ಟಾದ್ರೂ ಹಾಕಬಹುದು. ಹುಂಡೀಲಿ ಹಾಕಿದ್ರೆ ಆಯ್ತು. ನಾನಂತೂ ಐದು ಪೈಸೆ ಹಾಕ್ತೀನಿ ಅಂತ ಹೇಳ್ಕೊಂಡೆ." ನನ್ನ ಆಲೋಚನೆ ಕಟ್ ಮಾಡಿದ್ವು.

ಇದಪ್ಪ ವ್ಯಾಪಾರದ ವರಸೆ! ಬಂದಷ್ಟೇ ಬಂತು. ಬರೀ ಲಾಭಾನೆ ಹೊರತು ನಷ್ಟದ ಬಾಬತ್ತೇ ಇಲ್ವಲ್ಲಾ !?

'ಕಾಲು ಬಾಡಿಗೆ' ಕೊಡಲು ಇಷ್ಟವಿರಲಿಲ್ಲ. ಇಬ್ಬರಿಂದಲೂ ಒತ್ತಾಯ ಬಂತು.

'ಬೋವರ್ ಸಿಸ್ಟರ್' ಮತ್ತು 'ಫುಡ್-ಸಿಸ್ಟರ್' ಇಬ್ಬರಿಂದಲೂ ಒತ್ತಾಯ ಬಂದ ಮೇಲೆ ಇನ್ನೇನಿದೆ? ಅಲ್ಲದೆ ಹೇಗಾದ್ರೂ ಆಯಾಸ ಆಗಿದ್ರೆ ಸಾಕಾಗಿತ್ತು.

ಗೌಳಿಗರು ತಮಗೆ ತಿಳಿದಷ್ಟು ಹಾಲನ್ನು ನೀರಿಗೆ ಬೆರೆಸೋತ್ರೆ. ಹಾಗೆ ನನ್ನ ಕೈಲಿ ಸಾಧ್ಯವಿದ್ದಷ್ಟು ನಂಬಿಕೆ 'ಕಾಲ್ ಬಾಡಿಗೆ'ಯ ಹರಕೆಗೆ ಬೆರೆಸಿ.. ಹತ್ತು ಪೈಸೆ ಹಾಕ್ತೀನಿ ಅಂತ ಹೇಳ್ಕೊಂಡೆ.

ಮುಂದೆಲ್ಲ ಏರು ಇಳುವು ಇದ್ರೂ ಒಳ್ಳೇ ರಸ್ತೆ (ರೋಡ್) ಇತ್ತು. ಆಹ್ಲಾದಕರ ತಂಗಾಳಿ. ಹಸಿರು ಗಿಡಗಂಟೆ. ತಿಪ್ಪೀಯೊಡನೆ ಮುದ್ದು ಮಾತು. ಆಗಾಗ ಇವಳೊಡನೆ ಕುಡಿನೋಟದ ಆಟ. ಏಳು ಮೈಲಿ ಸವೆದಿದ್ದೇ ಗೊತ್ತಾಗಿಲ್ಲ.

"ಸ್ವಂತ ಕಾಲಿಗೆ ಬಾಡಿಗೆ ಕೊಟ್ಟು ದರ್ಶನಕ್ಕೆ ಕಾಲ್ನಡಿಗೇಲಿ ಬಂದ್ರೆ ಆಯಾಸ ಆಗೋಲ್ಲ." ಅನ್ನೊ ನಂಬಿಕೆ ಭಕ್ತರಲ್ಲಿ ಹುಟ್ಟಿಸಿದ ತಿರುಪತಿ ವೆಂಕಟ-ರಮಣ ನಿಜವಾಗಿಯೂ ಮಹಿಮಾವಂತ.

ಇದೇ ತರಹ ಯಾವ ಯಾವ ದಾಸರಿಗೆ ಯಾವ ಯಾವ 'ನಂಬಿಕೆ' ಹುಟ್ಟಿಸಿದ್ನೋ ವೆಂಕಟರಮಣ.

ಅದಕ್ಕೇ ನಂಬಿ ಕೆಟ್ಟವರಿಲ್ಲವೊ...ಅಂತ... ಹಾಯಾಗಿ ಹಾಡ್ಕೊಂಡು ತಿರುಗಾಡಿದ್ದು ಆ ದಾಸಯ್ಯ.

ಬೆಂಗಳೂರಿನ ಗವಿಪುರ ವಿಸ್ತರಣೆಯ ೪೩-೪೪ ನೇ ನಂಬರಿನ ಮನೆ ಎಲ್ಲಾ ಸಾಹಿತಿಗಳಿಗೂ ಸಾಹಿತ್ಯ ಪ್ರೇಮಿಗಳಿಗೂ ಚಿರಪರಿಚಿತವಾದದ್ದು. ಒಮ್ಮೆ ಅಲ್ಲಿಗೆ ಹೋದವರು ಏನಾದರೊಂದು ಹೊಸ ಅನುಭವವನ್ನು ಸವಿಯದೆ ಹಿಂದಿರುಗುತ್ತಿರಲಿಲ್ಲ. ಅಲ್ಲದೆ ಆತಿಥ್ಯದಲ್ಲಿಯೂ ಅಷ್ಟೆ, ಬಂದವರಿಗೆಲ್ಲಾ ಅಷ್ಟೊಂದು ಆದರ.

ಒಮ್ಮೆ ಕು. ಶಿ. ಹರಿದಾಸಭಟ್ಟರು ಯಾವುದೋ ಕಾರ್ಯನಿಮಿತ್ತ ಗವಿಪುರ ವಿಸ್ತರಣೆಯಲ್ಲಿರುವ ಮಾಸ್ತಿಯವರ ಮನೆಗೆ ಹೋಗಿದ್ದರು, ಪಾದರಕ್ಷೆಗಳನ್ನು ಹೊರಗಡೆ ಕಳಚಿಟ್ಟು, ಒಳಹೊಕ್ಕು 'ಶ್ರೀನಿವಾಸ' ದರ್ಶನವನ್ನು ಪಡೆದು, ಅವರ ಸಾನ್ನಿಧ್ಯದಲ್ಲಿ ಕೊಂಚ ಕಾಲ ಕುಳಿತು ಮಾತಿನ ಸವಿಬೆಲ್ಲದ ರುಚಿ ಪಡೆದು ಹಿಂದಿರುಗುವ ವೇಳೆಗೆ ಹೊರಗಡೆ ಕಳಚಿಟ್ಟಿದ್ದ ಪಾದರಕ್ಷೆಗಳು ಕಣ್ಮರೆ. ಗಾಬರಿಗೊಳ್ಳುವಷ್ಟರಲ್ಲಿ ಮಾಸ್ತಿಯವರೇ ಭಟ್ಟರ ಬೆನ್ನು ತಟ್ಟುತ್ತಾ, "ಗಾಬರಿ ಬೇಡ. ಯಾರಾದರೂ ಕೊಂಡೊಯ್ಯಾರೆಂದು ನಾನೇ ಒಳಗಿಡಿಸಿದ್ದೀನಿ," ಎಂದು ಸಮಾಧಾನ ಹೇಳಿದರಂತೆ.

ಎಷ್ಟೋ ಸಲ ನೋಡಲು ಬಂದವರ ಪಾದರಕ್ಷೆಗಳು ಮಾಸ್ತಿಯವರ ಮನೆಯಲ್ಲಿ ಕಳುವಾಗಿ ಹೋಗುತ್ತಿದ್ದುದನ್ನು ಕುರಿತು, ಭಟ್ಟರಿಗೆ ಅವರ ಸ್ನೇಹಿತರು ಹೇಳಿದ್ದು ನೆನಪಾಯಿತು. ಚಪ್ಪಲಿ ಕಳುವಾಗಬಾರದೆಂದು ಪಾಪ, ಮಾಸ್ತಿಯವರೇ ಅವುಗಳನ್ನು ಎತ್ತಿಡುತ್ತಿದ್ದರು.

ಒಳಗೆಯೇ ಭಟ್ಟರಿಗೆ ನೋವಾಯಿತು. ತಮ್ಮ ಹೀಗೆಯೇ ಪಾದರಕ್ಷೆಗಳನ್ನೂ... ಮನಸ್ಸಿನಲ್ಲಿಯೇ 'ಶಾಂತಂ ಪಾಪಂ' ಎಂದುಕೊಂಡು ಹೊರಬಂದರು.

— ಶ್ರೀ. ನಾರಾಯಣರಾವ್

ಚಾರ್ವಾಕ ಮುಂತಾದವರು ಆದರ ಅಧ್ವರ್ಯುಗಳು

ಪ್ರಾಚೀನ ಭಾರತದಲ್ಲಿ ಧಾರ್ಮಿಕ ಬಂಡಾಯ

ಆರ್. ಡಿ. ಹೆಗಡೆ

ಧಾರ್ಮಿಕ ಆಚರಣೆಯು, ಜಾತಿ-ಮತಗಳ ವಿಚಾರವಾಗಿ ಇತ್ತೀಚೆಗೆ ಹೆಚ್ಚು ಹೆಚ್ಚು ವಿರೋಧದ ಹಾಗೂ ಬಲವಾದ ಪರಿವರ್ತನೆಯ ಬೇಡಿಕೆ ಕೇಳಿ ಬರುತ್ತಿದೆ. ಇದನ್ನು ನಮ್ಮ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಟ್ಟು ಹೇಳುವುದಾದರೆ ಪುರೋಹಿತ ವರ್ಗವನ್ನು ವಿರೋಧಿಸುವವರ ಮೂಲಕ ಇದರ ನಾಂದಿ ಅರ್ಧ ಶತಮಾನದಷ್ಟು ಹಿಂದೆಯೇ ಕಂಡು ಬಂದಿತು. ಈಗ ಇದು ಅಷ್ಟು ಬಲವಾಗಿಲ್ಲವಾದರೂ ವ್ಯಾಪಕವಾಗಿ ದೇಶದ ಉದ್ದಗಲಕ್ಕೆ ಹರಡಿಕೊಳ್ಳ ತೊಡಗಿದೆ. ಒಂದು ಮಟ್ಟದಲ್ಲಿ ನಿಂತು ಹೋದ, ಇಂದು ಅರ್ಥ ಕಳೆದುಕೊಂಡ ಸಾಮಾಜಿಕ ಕಟ್ಟುಪಾಡುಗಳುಳ್ಳ ವ್ಯವಸ್ಥೆಯನ್ನು ಪರಿವರ್ತಿಸಲು ವಿಚಾರವಾದಿಗಳು ಬಂಡಾಯವೆದ್ದಿರುವುದು ಇದೇ ಮೊದಲಲ್ಲ. ಇಂತಹ ಬಂಡಾಯಗಳ ಒಂದು ಪರಂಪರೆಯೇ ಈ ದೇಶದ ಇತಿಹಾಸದಲ್ಲಿದೆ. ಆಗಾಗ ಕಂಡು ಬರುತ್ತಿರುವ ಈ ಬಂಡಾಯ ಅಥವಾ ಒಂದು ಧರ್ಮ ನಿರಪೇಕ್ಷವಾದ ಬದಲೀ ಸಾಮಾಜಿಕ ವ್ಯವಸ್ಥೆಗಾಗಿ ಹೋರಾಟ ವೇದಕಾಲದಲ್ಲಿ ಕೂಡ ಇತ್ತು. ಆದರೆ ಅವರನ್ನು ಇಂದಿನಂತೆ ವಿಚಾರವಾದಿಗಳೆಂದಾಗಲಿ, ಸಮಾಜ ಸುಧಾರಕರೆಂದಾಗಲಿ ಕರೆಯದೆ 'ಬಾರ್ಹಸ್ಪತರು', 'ಲೋಕಾಯತರು', ಹಾಗೂ 'ಚಾರ್ವಾಕರು', ಎಂದು ಕರೆಯುವ ರೂಢಿಯಿತ್ತು.

ವೇದಗಳ ಕಾಲದಲ್ಲಿ ಈ ಹೋರಾಟ ಯಾವ ಸ್ವರೂಪದಲ್ಲಿತ್ತೆಂಬುದು ಸರಿಯಾಗಿ ತಿಳಿದು ಬಾರದಿದ್ದರೂ ಇದು ಜಾಗೃತವಾಗಿತ್ತು. ಎನ್ನುವುದಕ್ಕೆ ಋಗ್ವೇದದಲ್ಲಿ ಬರುವ ಮಂಡೂಕ ಸೂಕ್ತ ಮೊದಲಾದವು ಸಾಕ್ಷಿಯಾಗಿವೆ. ಈ ಸೂಕ್ತದಲ್ಲಿ ವೇದಮಂತ್ರವನ್ನು ಪಠಿಸುವ ವಟುಗಳನ್ನು ಮತ್ತು ಋಷಿಗಳನ್ನು ವರ್ಷಾಕಾಲದಲ್ಲಿ ಎಲ್ಲ ದಿಕ್ಕಿನಲ್ಲೂ ವಟಗುಟ್ಟುವ ಕಪ್ಪೆಗಳಿಗೆ ಹೋಲಿಸಿ ಟೀಕಿಸಲಾಗಿದೆ. ಆ ಕಾಲದಲ್ಲಿ ಇಷ್ಟು ಟೀಕೆ ಬಂದಿರುವುದು ನಿಜವಾಗಿ ನಂಬಲಾಗದ ಸಂಗತಿ. ಇಂತಹ ಸೂಕ್ತವು ವೇದಗಳಲ್ಲಿ ಸೇರಿಕೊಂಡು ಇನ್ನೂ ಉಳಿದಿರುವದು ಅದಕ್ಕೂ ಮಿಗಿಲಾದ ಆಶ್ಚರ್ಯವಾಗಿದೆ.

ಇದೇ ಸಮಯದಲ್ಲಿ ಅಥವಾ ಕೆಲವು ಶತಮಾನಗಳ ಅಂತರದಲ್ಲಿ ಬೃಹಸ್ಪತಿಯೆಂಬ ವಿಚಾರವಾದಿ ಇಂತಹ ವಿಚಾರಗಳನ್ನು ಬೋಧಿಸುತ್ತ ವೇದಗಳ ಹಾಗೂ ಧಾರ್ಮಿಕ ಮೂಢನಂಬಿಕೆಗಳ ವಿರುದ್ಧ ಆಂದೋಲನವನ್ನು ನಡೆಸಿದ ಕುರುಹುಗಳು ದೊರೆಯುತ್ತವೆ. ಈ ಬೃಹಸ್ಪತಿಯ ಕಾಲ ಮತ್ತು ಜೀವನ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಆದರೆ ಇವನೇ ರಚಿಸಿದ ಕೆಲವು ಸೂತ್ರಗಳು ಇಂದು ಉಪಲಬ್ಧವಾಗಿವೆ. 'ಸರ್ವದರ್ಶನ ಸಂಗ್ರಹ'ದಲ್ಲಿ ಬೃಹಸ್ಪತಿಯ ಸೂತ್ರಗಳ ಅರ್ಥಾನುವಾದ ಮತ್ತು ಕೆಲವು ಪ್ರಮುಖ ವಿಚಾರಗಳ ಉಲ್ಲೇಖ ದೊರೆಯುತ್ತದೆ. ಅವನ ಕಾಲದಲ್ಲಿ ಈ ಆಂದೋಲನ ಧರ್ಮವನ್ನು ಮತ್ತು ಸಾಮಾಜಿಕ ವರ್ಣ

ವ್ಯವಸ್ಥೆಯನ್ನು ಖಂಡಿಸುವ ರೂಪದಲ್ಲಿ ಮಾತ್ರ ಇತ್ತು. ಬೃಹಸ್ಪತಿಯ ಮುಖ್ಯ ಗುರಿ ವೇದಗಳ ಅರ್ಥಹೀನತೆಯನ್ನು ಹಾಗೂ ವೇದಗಳಲ್ಲಿಯೇ ಕಂಡುಬರುವ ಪರಸ್ಪರ ವಿರೋಧಗಳನ್ನು ಜನರಿಗೆ ಮನಗಾಣಿಸಿಕೊಡುವುದಾಗಿತ್ತು. ಈ ಆಂದೋಲನ ದೊಡ್ಡ ಪ್ರಮಾಣದಲ್ಲಿ ಹಮ್ಮಿಕೊಳ್ಳಲು ಸಾಧ್ಯವಾಗದಿದ್ದರೂ ಹಲವಾರು ಜನರು ತಮ್ಮ ಪರಿಸರ ಹಾಗು ವ್ಯವಸ್ಥೆಯನ್ನು ವಿಮರ್ಶಿಸಿಕೊಳ್ಳುವಂತೆ ಮಾಡಿತು. ಬೃಹಸ್ಪತಿಯಂತೆ ವಿಚಾರಮಾಡಲು ಪ್ರಾರಂಭಿಸಿದ ಜನರನ್ನು ಆಮೇಲೆ ಬಾರ್ಹಸ್ಪತರೆಂದು ಕರೆಯುವ ರೂಢಿ ಬಂದಿತು.

ಬಾರ್ಹಸ್ಪತರ ಕಾಲವನ್ನು ಈ ಬಂಡಾಯದ ಮೊದಲು ಹಂತವೆಂದು ಕರೆಯಬಹುದು. ಆಮೇಲೆ ಇದು ಎರಡನೆಯ ಮಜಲನ್ನು ಪ್ರವೇಶಿಸಿತು. ಎರಡನೆಯ ಯತ್ನವನ್ನು ಸೈದ್ಧಾಂತಿಕವಾಗಿ ಸ್ವಭಾವವಾದಿಗಳ ಆಂದೋಲನವೆಂದು ಇತಿಹಾಸಕಾರರು ಹೆಸರಿಸುತ್ತಾರೆ. ಈ ಬಾರಿ ಇದರ ಮುಂಚೂಣಿಯಲ್ಲಿ ಅಜಿತಕೇಶ, ಕರಿಬಲಿನ್, ಕಂಬಲಾಶ್ವತ ಮತ್ತು ಪುರಾಣ ಕಾಶ್ಯಪ ಮೊದಲಾದ ಮೇಧಾವಿಗಳಿದ್ದರು. ಇವು ಇಂದು ಉಪಲಬ್ಧವಾದ ಹೆಸರುಗಳು ಮಾತ್ರ. ಇನ್ನೂ ಎಷ್ಟೋ ಸ್ವಭಾವವಾದಿಗಳು ಇತಿಹಾಸದ ಗರ್ಭದಲ್ಲಿ ಕಣ್ಮರೆಯಾಗಿರಬಹುದು. ಭಾರತೀಯ ದರ್ಶನಗಳ ಇತಿಹಾಸಕಾರರು ಈ ಸ್ವಭಾವದವನ್ನೇ 'ಲೋಕಾಯತ' ಎಂದು ಗುರುತಿಸುತ್ತಾರೆ. ಡಾ. ದಕ್ಷಿಣಾರಂಜನ ಶಾಸ್ತ್ರಿಯವರು ತಮ್ಮ ಗ್ರಂಥವೊಂದರಲ್ಲಿ ಈ ಅವಧಿಯಲ್ಲಿ ಲೋಕಾಯತರೆಂದು ಕರೆಯಲ್ಪಟ್ಟ ವಿಚಾರವಾದಿಗಳು ತಮ್ಮದೇ ಆದ ಒಂದು ಸೈದ್ಧಾಂತಿಕ ಬುನಾದಿಯ ಮೇಲೆ ಹೋರಾಡುತ್ತಿದ್ದರೆಂದು ಹೇಳುತ್ತಾರೆ.

ಇವರು ಕೇವಲ ವೈದಿಕ ಸಂಪ್ರದಾಯ ಮತ್ತು ವರ್ಣವ್ಯವಸ್ಥೆಯನ್ನು ಟೀಕಿಸದೇ ಅದಕ್ಕಿಂತ ಮುಂದುವರಿದು, ಒಂದು ತತ್ವಶಾಸ್ತ್ರದಲ್ಲಿ ಒಪ್ಪಿಕೊಂಡ ಪ್ರತ್ಯಕ್ಷ, ಅನುಮಾನ ಮತ್ತು ಆಪ್ತವಾಕ್ಯ ಮೊದಲಾದ ಪ್ರಮಾಣಗಳನ್ನು ಮತ್ತು ಆತ್ಮದ ವಿಷಯದಲ್ಲಿರುವ ಸಿದ್ಧಾಂತಗಳನ್ನು ವಿಮರ್ಶಿಸಿ ತಮ್ಮದೇ ಆದ ವಾದದಿಂದ ಅವುಗಳನ್ನು ಅಲ್ಲಗಳೆದರು. ಪ್ರತ್ಯಕ್ಷವೊಂದನ್ನು ಒಪ್ಪಿಕೊಂಡ ಲೋಕಾಯತರು ಸ್ವರ್ಗ, ಪರಲೋಕಗಳ ಕಲ್ಪನೆಯನ್ನು ಸುಳ್ಳೆಂದು ವಿದಿತಪಡಿಸಿದರು. ಲೋಕಾಯತರ ಈ ಬಾರಿಯ ಹೋರಾಟದ ರೂಪ ಹೆಚ್ಚು ಸ್ಪಷ್ಟವಾಗಿ ತಿಳಿದು ಬಾರದಿದ್ದರೂ ಬೃಹಸ್ಪತಿಯ ಆಂದೋಲನಕ್ಕಿಂತ ಈ ಕಾಲದಲ್ಲಿಯೇ ಹೆಚ್ಚು ಅನುಯಾಯಿಗಳು ಹಾಗೂ ಹೆಚ್ಚು ವೈಚಾರಿಕ, ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯವನ್ನು ಅಪೇಕ್ಷಿಸುವವರು ಇದ್ದಿರಬೇಕು. ಇದೇ ಸಮಯದಲ್ಲಿ ಆಂದೋಲನದ ನೇತಾರರಾದ ಪುರಾಣಕಾಶ್ಯಪ ಮೊದಲಾದವರು ಲೋಕಾಯತ ಸಿದ್ಧಾಂತವನ್ನು ಪ್ರತಿಪಾದಿಸುವ ಗ್ರಂಥಗಳನ್ನು ರಚಿಸಿದರು. ಹೀಗೆ ಈ ಧಾರ್ಮಿಕ ಬಂಡಾಯಕ್ಕೆ ಒಂದು ಮೂರ್ತ ಸ್ವರೂಪ ಬಂದು ಇವರು ಬರವಣಿಗೆಯ ಮಾಧ್ಯಮವನ್ನು ಬಳಸತೊಡಗಿದರು.

ಲೋಕಾಯತರ ಆಂದೋಲನವು ಜನಪ್ರಿಯತೆಯನ್ನು ಸಂಪಾದಿಸುತ್ತಿರುವ ಸಮಯದಲ್ಲಿ ಚಾರ್ವಾಕನೆಂಬ ಮತ್ತೊಬ್ಬ ಪ್ರಗತಿಶೀಲ ವಿಚಾರವಾದಿಯು ಇವರನ್ನು ಸೇರಿಕೊಂಡು ಲೋಕಾಯತರ ತತ್ವಗಳನ್ನು ಇನ್ನೂ ಬಲವಾಗಿ ಸಮಾಜದಲ್ಲಿ ಜನಪ್ರಿಯವಾಗುವಂತೆ ಮಾಡತೊಡಗಿದನು. ಚಾರ್ವಾಕನೆಂಬುದು ಈ ವ್ಯಕ್ತಿಯ ಹೆಸರಾಗಿತ್ತೋ ಅಥವಾ ಅವನಿಗೆ ಅಂದು ದೊರೆತ ಬಿರುದೋ ಎನ್ನುವುದು ತಿಳಿದು ಬರುವದಿಲ್ಲ. 'ಚಾರ್ವಾಕ', ಎಂದರೆ ಆಕರ್ಷಕವಾಗಿ ಮಾತನಾಡುವವನು ಎಂದು ಅರ್ಥವಾಗುತ್ತದೆ. ಬಹಳ ಜನರು ಇವನಿಂದ ಆಕರ್ಷಿತರಾದರು. ಆಂದೋಲನವು ಜಾಗೃತವಾಗಿ ಹೊಸ ಹೊಸ ಅಲೆಗಳೊಂದಿಗೆ ಹಬ್ಬತೊಡಗಿತ್ತು. ಹಿಂದುಗಳ ರೂಢಮೂಲ ಪರಂಪರೆಗಳು ಮತ್ತು ಆಸ್ತಿಕ ದರ್ಶನಗಳು ತಮ್ಮ ಅಸ್ತಿತ್ವ ಬುಡಮೇಲಾಗುವ ಅನುಭವ ಪಡೆಯತೊಡಗಿದವು. ಇದರ ಸಂಗಡ, ಇವರ ಸಿದ್ಧಾಂತಗಳಿಗೆ ಒಂದು ದರ್ಶನದ ಸ್ವರೂಪಬಂದು ಇದು ಚಾರ್ವಾಕದರ್ಶನ ಎಂದು ಕರೆಯಲ್ಪಡತೊಡಗಿತು. ಇನ್ನೂ ಕೆಲವು ಗ್ರಂಥಗಳು ಈ

ಹೊತ್ತಿಗೆ ಬರೆಯಲ್ಪಟ್ಟವು. ನೈಯಾಯಿಕನಾದ ಭಟ್ಟ ಜಯಂತನ ಷಣ್ಮತ ನಾಟಕ ಅಥವಾ 'ಆಗಮಡಂಬರ'ವೆಂಬ ಕೃತಿಯಲ್ಲಿ ತತ್ವಶಾಸ್ತ್ರದ ಉನ್ನತ ಚರ್ಚೆಗಳಲ್ಲಿ ಚಾರ್ವಾಕವಿಚಾರವಾದಿಗಳು ಸಹ ಭಾಗವಹಿಸಿದ್ದರೆಂದು ಹೇಳಲಾಗಿದೆ. ಇದರಿಂದ ಚಾರ್ವಾಕರ ಸಾಮಾಜಿಕ ಹಾಗೂ ಧಾರ್ಮಿಕ ಪರಿವರ್ತನೆಯ ಈ ಆಂದೋಲನ ಒಂದು ಬಲವಾದ ಶಕ್ತಿಯಾಗಿ ಪರಿಣಮಿಸಿ ಜನರನ್ನು ವಿಚಾರಪರರನ್ನಾಗಿ ಮಾಡಿತೆನ್ನಬಹುದು. ಆಂದೋಲನ ಸಾಮಾಜಿಕ ಬಂಡಾಯದ ರೂಪ ತಾಳಿ ಮಠೀಯ ಶಕ್ತಿಗಳನ್ನು ಹಾಗೂ ಹಿಂದು ದಾರ್ಶನಿಕರನ್ನು ಎಚ್ಚರಗೊಳಿಸಿತು.

ಈ ಕ್ರಮದಲ್ಲಿ ಚಾರ್ವಾಕನು ಸಾಕಷ್ಟು ನಂತರದವನಾದರೂ ಐತಿಹಾಸಿಕವಾಗಿ ಇವನನ್ನು ಪ್ರಾಚೀನನೆಂದೇ ಕರೆಯಬಹುದು. ಇವನಿಗಿಂತ ಪುರಾಣಕಾಶ್ಯಪ ಮೊದಲಾದವರು ಪ್ರಾಚೀನರು. ಚಾರ್ವಾಕನು ಅಷ್ಟು ಪ್ರಾಚೀನನಲ್ಲದಿದ್ದರೂ ಜನಪ್ರಿಯನೆಂಬುದರಲ್ಲಿ ಸಂಶಯವಿಲ್ಲ. ಇವನ ಹೆಸರು ಮಹಾಭಾರತದಲ್ಲಿ ಹಾಗೂ ಕೆಲವು ಪುರಾಣಗಳಲ್ಲಿ ಉಧೃತವಾಗಿದೆ. ಪಾಣಿನಿಯ ಅಷ್ಟಾಧ್ಯಾಯಿ, ಪತಂಜಲಿಯ ಮಹಾಭಾಷ್ಯಗಳಲ್ಲಿ ಸಹ ಇವರು ಉಲ್ಲೇಖಿಸಲ್ಪಟ್ಟಿರುವುದರಿಂದ ಇವರು ಅಂದಿನವರ ಗಮನ ಸೆಳೆದಿದ್ದರೆನ್ನುವುದು ಸ್ಪಷ್ಟ.

ವ್ಯಾಕರಣ ಮಹಾಭಾಷ್ಯದಲ್ಲಿ ಪತಂಜಲಿಯು ಇದೇ ಗುಂಪಿಗೆ ಸೇರಿದ ಭಾಗುರಿಯೆಂಬ ವ್ಯಕ್ತಿಯನ್ನು ಹೆಸರಿಸಿದ್ದಾನೆ. ಇವನು ಈ ಬಂಡಾಯದ ಹಲವಾರು ನೇತಾರರಲ್ಲಿ ಒಬ್ಬ. ಅಲ್ಲಿ ಬಂದಿರುವ ಸೂಚನೆಯ ಪ್ರಕಾರ ಭಾಗುರಿಯು ಸಂಗ್ರಾಹಕವಾದ ಒಂದು ಲೋಕಾಯತ ಗ್ರಂಥವನ್ನು ರಚಿಸಿದ್ದನೆಂಬುದು ತಿಳಿದು ಬರುತ್ತದೆ. ಆಮೇಲೆ ಭಾವಿವಿಕ್ತನೆಂಬ ಮೇಧಾವಿಯು ಈ ಆಂದೋಲನವನ್ನು ಮುನ್ನಡೆಸುತ್ತಾನೆ. ಭಾವಿವಿಕ್ತನ ಕೆಲವು ವಿಚಾರಗಳು ಅಲ್ಲಲ್ಲಿ ಉಪಲಬ್ಧವಾಗಿವೆ. ಇವನ ಅನಂತರ ಬಂದವರಲ್ಲಿ ಮತ್ತೊಬ್ಬ ಪ್ರಮುಖ ಧುರೀಣನೆಂದರೆ ಮಹಾ ಚಾರ್ವಾಕನೆನ್ನಿಸಿಕೊಂಡ ಭಟ್ಟ ಕೆಲವರು ಅಭಿಪ್ರಾಯಪಡುತ್ತಾರೆ. ಇವನ 'ತತ್ವಸಂಗ್ರಹ'ವೆಂಬ ಗ್ರಂಥದಲ್ಲಿ ವೈದಿಕ ಸಂಪ್ರದಾಯಗಳ ಮತ್ತು ಹಿಂದು ದರ್ಶನಗಳ ಹಾದಿಯಲ್ಲಿರುವ ಅವಾಸ್ತವಿಕತೆಯನ್ನು ಮತ್ತು ಲೌಕಿಕ ಅಸಂಬದ್ಧತೆಯನ್ನು ಎತ್ತಿ ತೋರಿಸಲಾಗಿದೆ. ಸ್ಯಾದ್ವಾದ ರತ್ನಾಕರವೆಂಬ ಜೈನ ಗ್ರಂಥವು ಉದ್ಭಟನ ಸಿದ್ಧಾಂತಗಳನ್ನು ಸಾಕಷ್ಟು ಉದಾಹರಿಸಿದೆ. ಇವರೆಲ್ಲರಿಗಿಂತ ಶ್ರೇಷ್ಠ ಹಿರಿಯನೆಂದರೆ ಪುರಂದರ. ಇವನು ಯಶಸ್ವಿಯಾದ ಹೋರಾಟಗಾರ. ಇವನು ಬೃಹಸ್ಪತಿಯ ಸೂಕ್ತಗಳಿಗೆ ವ್ಯಾಖ್ಯಾನ ಮಾಡಿದ್ದಲ್ಲದೆ ತನ್ನ ಸಿದ್ಧಾಂತಗಳನ್ನು ಯುಕ್ತಿಯಿಂದ ಪ್ರತಿಪಾದಿಸಿರುವದರಿಂದ ಆಚಾರ್ಯ ಪದವಿಗೇರುತ್ತಾನೆ. ಆಸ್ತಿಕ ದರ್ಶನಕಾರರು ಕೂಡ ಪುರಂದರನನ್ನು ಗೌರವದಿಂದ ಉಲ್ಲೇಖಿಸಿದ್ದಾರೆ. ಈ ವಿಚಾರವಾದಿಗಳ ಕೃತಿಗಳ ಯಾವ ಭಾಗವೂ ಈಗ ಉಪಲಬ್ಧವಿಲ್ಲ. ಇವರನ್ನು ಖಂಡಿಸಿದ ಆಸ್ತಿಕ ದರ್ಶನಗಳ ಗ್ರಂಥಗಳಿಂದಲೇ ಇವರನ್ನು ಅರಿತುಕೊಳ್ಳಬೇಕಾಗಿದೆ. ಆದ್ದರಿಂದ ವಿರೋಧಿಗಳು ಇವರನ್ನು ಸಾಕಷ್ಟು ವಿಕೃತಗೊಳಿಸಿ ಉದಾಹರಿಸಿರಬಹುದಾದ ಸಾಧ್ಯತೆಯನ್ನು ಪೂರ್ಣವಾಗಿ ಅಲ್ಲಗಳೆಯುವಂತಿಲ್ಲ. ಆದರೆ, ಜಯರಾಶಿಯೆಂಬ ನಾಸ್ತಿಕ ಬರೆದ ತೋಪಪ್ಲವ ಅಥವಾ ತತ್ತ್ವೋಪಪ್ಲವಸಿಂಹವೆಂಬ ಗ್ರಂಥ ಮಾತ್ರ ಇಂದು ಪೂರ್ಣ ರೂಪದಲ್ಲಿ ಲಭ್ಯವಾಗಿದೆ. ಇದನ್ನು ೧೯೪೦ರಲ್ಲಿ ಬರೋಡೆಯ ಗಾಯಕವಾಡ ಸಂಸ್ಕೃತ ಗ್ರಂಥಮಾಲೆಯು ಪ್ರಕಟಿಸಿ ಉಪಕರಿಸಿದೆ. ಜಯರಾಶಿ ಪ್ರಾಯಶಃ ಕ್ರಿಸ್ತಶಕ ಆರು ಅಥವಾ ಏಳನೆಯ ಶತಮಾನಕ್ಕೆ ಸೇರಿದವನು. ಇವನೇ ಚಾರ್ವಾಕರ ಧಾರ್ಮಿಕ ಬಂಡಾಯದ ಕೊನೆಯ ಮತ್ತು ಶ್ರೇಷ್ಠ ವ್ಯಕ್ತಿಯೆಂದರೆ ತಪ್ಪಾಗಲಾರದು. ಇವನ ಗ್ರಂಥದಿಂದ ಈ ಸಿದ್ಧಾಂತದ ಬಗ್ಗೆ ಸರಿಯಾದ ಚಿತ್ರಣವೊಂದು ದೊರೆಯುತ್ತದೆ.

ಚಾರ್ವಾಕರ ಬಂಡಾಯದ ಪ್ರಧಾನ ಗುರಿ ಸಮಾಜವನ್ನು ಅನರ್ಥಕ ವೈದಿಕ ಸಂಪ್ರದಾಯಗಳಿಂದ ಬಿಡುಗಡೆಮಾಡುವದಾಗಿತ್ತು. ಅದಕ್ಕಾಗಿ ಅವರು ವೇದಗಳ ಪ್ರಾಮಾಣ್ಯದ ಬಗ್ಗೆ ಅವಿಶ್ವಾಸ

ಪ್ರಚುರಪಡಿಸಿದ ವಿಚಾರಗಳನ್ನು ಈ ಕೆಳಗಿನಂತೆ ಸಂಕ್ಷೇಪವಾಗಿ ಸಂಗ್ರಹಿಸಬಹುದು: "ಸ್ವರ್ಗವೂ ಇಲ್ಲ ನರಕವೂ ಇಲ್ಲ; ಅಥವಾ ಪರಲೋಕಕ್ಕೆ ತೆರಳುವಂಥ ಆತ್ಮವೂ ಇಲ್ಲ. ನಾಲ್ಕು ವರ್ಣ ಮತ್ತು ನಾಲ್ಕು ಆಶ್ರಮಗಳು ಯಾವ ಫಲವನ್ನು ನೀಡಲಾರವು. ಅಗ್ನಿಹೋತ್ರ, ವೇದಗಳು, ಸಂನ್ಯಾಸ ಮತ್ತು ಭಸ್ಮಲೇಪಿಸಿಕೊಳ್ಳುವುದು ಇವೆಲ್ಲ ಬುದ್ಧಿಯಿಲ್ಲದ ಹೇಡಿಗಳ ಬದುಕುವ ಉಪಾಯವಾಗಿವೆ.

"ಸ್ವರ್ಗಕ್ಕೆ ಹೋಗಲು ಜ್ಯೋತಿಷ್ಟೋಮವನ್ನು ಮಾಡುತ್ತ ಅದರಲ್ಲಿ ಬಲಿಕೊಟ್ಟ ಪಶುವು ಸ್ವರ್ಗವನ್ನು ಪಡೆಯುವದೆಂದು ಬ್ರಾಹ್ಮಣರು ಹೇಳುತ್ತಾರೆ. ಹಾಗಾದರೆ ಯಜಮಾನನು ತನ್ನ ತಂದೆಯನ್ನೇ ಜ್ಯೋತಿಷ್ಟೋಮದಲ್ಲಿ ಬಲಿ ಕೊಟ್ಟು ಕೂಡಲೇ ಅವನನ್ನು ಸ್ವರ್ಗಕ್ಕೆ ಏಕೆ ಕಳುಹಿಸುವದಿಲ್ಲ? ಸತ್ತು ಹೋದವರನ್ನು ಶ್ರಾದ್ಧದಿಂದ ತೃಪ್ತಿಪಡಿಸುವುದು ಶಕ್ಯವಾದರೆ ಆರಿಹೋದ ದೀಪಕ್ಕೆ ಕೇವಲ ಎಣ್ಣೆ ಸುರಿದು ಕೂಡಲೆ ಅದು ಉರಿಯಬೇಕಲ್ಲವೆ? ಅಂತೆಯೇ ಮನೆಯಲ್ಲಿ ಶ್ರಾದ್ಧಮಾಡಿ ಪ್ರಯಾಣ ಮಾಡುತ್ತಿರುವ ವ್ಯಕ್ತಿಯ ಹಸಿವನ್ನು ಹೋಗಲಾಡಿಸಬಹುದಲ್ಲವೆ? ಇದರಿಂದ ಬುತ್ತಿ ಕಳಿಸುವ ಪ್ರಯಾಸವನ್ನು ಹೋಗಲಾಡಿಸಿಕೊಂಡಂತಾಗುವದು. ಇಲ್ಲಿಂದ ಪರಲೋಕಕ್ಕೆ ಹೋದ ಆತ್ಮ ಅಲ್ಲಿ ಬೇಸರ ಬಂದು ಬಂಧುಗಳ ನೆನಪಾಗಿ ತಿರುಗಿ ಬಂದ ಉದಾಹರಣೆಯೇಕೆ ಎಲ್ಲಿಯೂ ದೊರೆಯುವದಿಲ್ಲ? ಆದ್ದರಿಂದ ವೇದಗಳು ಸುಳ್ಳನ್ನು ಬೋಧಿಸುತ್ತವೆ. ಇವು ಬ್ರಾಹ್ಮಣರ ಜೀವನೋಪಾಯಗಳಾಗಿವೆ. ಮೂರು ವೇದಗಳನ್ನು ರಚಿಸಿದವರು ಕ್ರಮವಾಗಿ ಭಂಡರು, ಧೂರ್ತರು ಮತ್ತು ನಿಶಾಚರರು ಆಗಿದ್ದಾರೆ.

"ಫಲಪ್ರಾಪ್ತಿಯ ವಿಚಾರದಲ್ಲಿ ಬಲವಾದ ಸಂಶಯವಿರುವುದರಿಂದ ಧರ್ಮವೆಂಬುದು ವ್ಯರ್ಥ. ಜೀವನವನ್ನು ಸರಿಯಾಗಿ ಅನುಭವಿಸಬೇಕು. ಕೈಯಲ್ಲಿರುವ ಪಾರಿವಾಳವು ನಾಳೆ ದೊರೆಯಬಹುದಾದ ನವಿಲಿಗಿಂತ ಉತ್ತಮವೆಂಬ ಮಾತನ್ನು ಮರೆಯಬಾರದು. ಆದ್ದರಿಂದ ಬದುಕಿರುವವರೆಗೆ ಸುಖವಾಗಿದ್ದು ಸಾಲಮಾಡಿಯಾದರೂ ತುಪ್ಪವನ್ನು ಸವಿಯಬೇಕು. ಬೆಂಕಿಗೆ ಸೇರಿ ಬೂದಿಯಾಗುವ ಈ ದೇಹಕ್ಕೆ ಪುನರ್ಜನ್ಮವಿದೆಯೆಂಬುದು ಸುಳ್ಳಿನ ಕಂತೆ. ಈ ಶರೀರದ ಮತ್ತು ಇಂದ್ರಿಯಗಳ ಸಮುದಾಯವೇ ಆತ್ಮ. ಶರೀರ ಬೂದಿಯಾದರೆ ಆತ್ಮವೂ ಬೂದಿಯಾದಂತೆ. ಪುರುಷಾರ್ಥಗಳು ನಾಲ್ಕಲ್ಲ; ಒಂದು ಮಾತ್ರ. ಅದೇ ಕಾಮ. ಮರಣವೇ ಮೋಕ್ಷ. ಪರಲೋಕದವರನ್ನು ಯಾರೂ ಕೇಳರಿಯದಿರುವದರಿಂದ ಪರಲೋಕವೆನ್ನುವುದು ಕೇವಲ ಕಲ್ಪನೆ. ಇಂದ್ರಿಯಗಳಿಗೆ ಗೋಚರವಾಗುವದು ಮಾತ್ರ ವಾಸ್ತವಿಕವಾಗಿರುವದರಿಂದ ಪ್ರತ್ಯಕ್ಷವೊಂದೇ ಪ್ರಮಾಣ. ಪ್ರತಿಯೊಂದು ವಸ್ತುವಿಗೆ ಅದರ ಸ್ವಭಾವವೇ ಕಾರಣ, ದೇವರಲ್ಲಿ ಮುಳ್ಳನ್ನು ಮೊನಚುಗೊಳಿಸುವವರು ಯಾರು? ಕಬ್ಬು ಹೇಗೆ ಸಿಹಿಯಾಯಿತು? ನಿಂಬೆ ಹೇಗೆ ಹುಳಿಯಾಯಿತು? ಇವು ಆ ವಸ್ತುಗಳ ಸ್ವಭಾವ: ಆದ್ದರಿಂದ ಎಂದೂ ಗೋಚರವಾಗದ ಈಶ್ವರನ ಕಲ್ಪನೆ ಭ್ರಮಾತ್ಮಕವಾದದ್ದು ಮತ್ತು ಸುಳ್ಳು ಈ ನೆಲಕ್ಕೆ ಯೋಗ್ಯರಾಗಿ ಬದುಕಬೇಕು. ಚಿತ್ತಲೆಯಾಗಿ ಶ್ರಮಣಕರಾಗಿ, ತ್ರಿದಂಡಿಯಾಗಿ, ಶರೀರಕ್ಕೆ ಹಿಂಸೆ ಕೊಡುತ್ತ ಬದುಕುವ ಈ ವಿಧಾನವನ್ನು ಜನರಿಗೆ ಕಲಿಸಿದವರಾರು?" ಎಲ್ಲವನ್ನು ಪ್ರಶ್ನಿಸಿ ಸರಿಯಾಗಿ ಅರಿಯುವುದೆ ಬೃಹಸ್ಪತಿಯ ಉದ್ದೇಶವಾಗಿದೆ.

ಇವು ಚಾರ್ವಾಕರು ಬೋಧಿಸಿದ ಮುಖ್ಯವಾದ ವಿಚಾರಗಳು. ಬಹಳ ಅಪ್ರಿಯವಾದವಾಗಿರುವ ಚಾರ್ವಾಕರ ವಿಚಾರಗಳು ಮೊದ ಮೊದಲು ಜನರಿಗೆ ಒಪ್ಪಿಗೆಯಾದರೂ ಕಾಲಕ್ರಮದಲ್ಲಿ ಅವರ ಮನಸ್ಸಿನಿಂದ ಮರೆಯಾಗುತ್ತ ಬಂದವು. ಇದಕ್ಕೆ ಕಾರಣಗಳು ಹಲವಾರು. ವೈಚಾರಿಕವಾಗಿ ಮುಕ್ತಾವಕಾಶ ಹಾಗೂ ಸ್ವಾತಂತ್ರ್ಯಕ್ಕಾಗಿ ಪ್ರಾರಂಭವಾದ ಈ ಆಂದೋಲನವು ಕಾಲಕಳೆದಂತೆ ಸ್ವಾತಂತ್ರ್ಯದ ಜಾಗದಲ್ಲಿ ಸ್ವಚ್ಛಂದತೆಯನ್ನು ಬೆಳೆಸಿಕೊಳ್ಳತೊಡಗಿತು. ಇದಕ್ಕಿಂತ ಮಿಗಿಲಾಗಿ ಬೃಹಸ್ಪತಿಯ ಅಥವಾ ಲೋಕಾಯತರ ಕಾಲದಲ್ಲಿದ್ದ ಧರ್ಮನಿರಪೇಕ್ಷವಾಗಿದ್ದರೂ ನೈತಿಕವಾಗಿ ಭದ್ರವಾದ ತಳಹದಿಯನ್ನು ಚಾರ್ವಾಕರ ಕಾಲದ ಆಂದೋಲನವು ಕಳೆದುಕೊಂಡಿರುವದನ್ನು ಸಮಾಜ

ನಿಧಾನವಾದರೂ ಸರಿಯಾಗಿ ಗುರುತಿಸಿತು. ಪರಿವರ್ತನೆಯನ್ನುಂಟುಮಾಡಲು ಹಂಗೆಯೇಳುವ, ಬಂಡಾಯವೆಸಗುವ ಯಾವುದೇ ಗುಂಪು ಕೇವಲ ಬೇರುಬಿಟ್ಟ ಸಂಪ್ರದಾಯ, ಧರ್ಮಗಳನ್ನು ಟೀಕಿಸುವುದರ ಹೊರತಾಗಿ ತನ್ನದೇ ಆದ ಪ್ರಾಮಾಣಿಕ ತತ್ವಗಳನ್ನು ಹೊಂದಿರಬೇಕೆಂಬ ದೃಷ್ಟಿಯಲ್ಲಿ ಚಾರ್ವಾಕರಿಗೆ ಪ್ರಾಯಶಃ ನಂಬಿಕೆಯಿದ್ದಂತಿಲ್ಲ. ಧಾರ್ಮಿಕ ತಳಹದಿಯ ಮೇಲೆ ನಿಂತ ಸಾಮಾಜಿಕ ವ್ಯವಸ್ಥೆಯಲ್ಲಿ ಪರಿವರ್ತನೆಯು ಕೇವಲ ಅಸಂಬದ್ಧ ಪದ್ಧತಿಯನ್ನು ತೆಗೆದು ಹಾಕಿದರೆ ಸಾಧ್ಯವಾಗುವದೆಂಬ ಅವರ ನಂಬಿಗೆ ತಪ್ಪಾಗಿತ್ತು. ಸಮಾಜವು ನಂಬಿಕೆಗಾಗಿ ಬಲವಾದ ಆಸರೆಯನ್ನು ಅಪೇಕ್ಷಿಸುವದನ್ನು ಅವರು ಕಡೆಗಣಿಸಿದರು. ಹೀಗೆ ಜನರಿಗೆ ತಮ್ಮಲ್ಲಿ ಶಾಶ್ವತವಾಗಿ ವಿಶ್ವಾಸವುಂಟಾಗುವಂತೆ ಮಾಡಲು ಈ ಬಂಡಾಯ ಕ್ರಮೇಣ ವಿಫಲವಾಯಿತು. ಈ ಬಂಡೆದ್ದವರ ಮಾತಿನಲ್ಲಿ ವೈದಿಕ ಧರ್ಮದ ಹಾಗೂ ದರ್ಶನಗಳ ವಿರುದ್ಧ ಮಾತ್ರ ಘೋಷಣೆಗಳು ಕೇಳಿಬಂದದ್ದರಿಂದ ಅವರ ಪೊಳ್ಳುತನವನ್ನು ಜನರು ಅರಿತರು.

ಬಾರ್ಹಸ್ಪತರು, ಲೋಕಾಯತರು ಮತ್ತು ಚಾರ್ವಾಕರು ಎಷ್ಟೋ ಶತಮಾನಗಳ ವರೆಗೆ ಅಲ್ಲಲ್ಲಿ ನಡೆಸಿದ ಈ ಬಂಡಾಯದ ಕ್ರಮದಿಂದ ಮತ್ತೊಂದು ಕಡೆ ವೈದಿಕಧರ್ಮದಲ್ಲಿ ಸಂಘಟನೆಯುಂಟಾಗತೊಡಗಿತು. ಇದಕ್ಕೆ ಚಾರ್ವಾಕರಂತೆ ನಾಸ್ತಿಕರಾದ ಬೌದ್ಧರು ಮತ್ತು ಜೈನರು ಕೂಡ ಕಾರಣರಾದರು. ಇವರ ಆಂದೋಲನದಿಂದ ಹಿಂದುಧರ್ಮದ ಪುನರುತ್ಥಾನವಾಯಿತು.

ಈ ಬಂಡಾಯ ವಿಫಲವಾಗಲು ಚಾರ್ವಾಕರು ಕಾರಣರಾದಂತೆ, ಮತ್ತೊಂದೆಡೆ ಶಂಕರಾಚಾರ್ಯರು ನಡೆಸಿದ ಸಂಘಟನೆಯ ಕಾರ್ಯಗಳಿಂದ ಈ ಬಂಡಾಯ ಅವನತಿಗೊಂಡಿತು. ಶಂಕರಾಚಾರ್ಯರ ಅನಂತರ ನಮ್ಮ ವಿಶಾಲ ದೇಶದಲ್ಲಿ ಚಾರ್ವಾಕರ ಕುಟುಕುತ್ತಿರುವ ಜೀವ ಕೂಡ ಹೊರಟುಹೋಯಿತು. ಬಹಳ ಹಿಂದೆ ಬೃಹಸ್ಪತಿಯ ಜನಪ್ರಿಯತೆಯು ಮಹಾಭಾರತದ ರಚನೆಯಿಂದ ಕಡಿಮೆಯಾದ ಹಾಗೆ, ಶಂಕರಾಚಾರ್ಯರ ಧರ್ಮ ಪ್ರಚಾರದ ಕಾರ್ಯದಿಂದ ಚಾರ್ವಾಕರ ರಭಸ ಕುಗ್ಗಿ ಶಕ್ತಿ ಪೂರ್ತಿ ನಾಶವಾಗಿ ಹೋಯಿತು. ಇತಿಹಾಸದ ಈ ಪಾಠಗಳಿಂದ, ಹಿಂದು ಧರ್ಮವನ್ನು ಕತ್ತರಿಸ-ಯಲು ಶಕ್ತಿಗಳು ಒಂದಾದಂತೆಲ್ಲ ಹಿಂದು ಧರ್ಮವು ಇಮ್ಮಡಿ ಸ್ಫೂರ್ತಿಯಿಂದ ಸಂಘಟಿತವಾಯಿತೆಂಬುದನ್ನು ಸ್ಮರಿಸಿಕೊಳ್ಳಬಹುದು. ಇತ್ತೀಚೆಗೆ ತಮಿಳುನಾಡಿನಲ್ಲಿ ಪುರೋಹಿತ ಶಾಹಿಯ ವಿರುದ್ಧ ಹಾಗೂ ಜಾತೀಯ ಚಟುವಟಿಕೆಯ ವಿರುದ್ಧ ಹೋರಾಟ ಜೋರಾಗಿ ಸಾಗಿದೆ. ಇದು ಕರ್ನಾಟಕದಲ್ಲೂ ವ್ಯಾಪಿಸಿಕೊಂಡಿದೆ. ಇದೇ ಸಮಯದಲ್ಲಿ ಹಿಂದೂಗಳಲ್ಲಿ ಹೊಸದಾಗಿ ಮೆರವಣಿಗೆಗಳು, ಧರ್ಮದ ಪುನರುತ್ಥಾನಕ್ಕೆ ಬೇಕಾದ ಕಲಾಪಗಳೂ ಹೆಚ್ಚಾಗತೊಡಗಿವೆ. ತಮಿಳುನಾಡಿನಲ್ಲಿ ಮೊನ್ನೆ ತಾನೆ ಹತ್ತು ಸಾವಿರದಷ್ಟು ಬ್ರಾಹ್ಮಣರು ಜಾಥಾದಲ್ಲಿ ಹೋಗಿ ರಾಜ್ಯಪಾಲರಿಗೆ ತಮ್ಮ ಮೇಲೆ ರಾಜ್ಯದಲ್ಲಿ ನಡೆಯುವ ಸಲ್ಲದ ಅಪಮಾನಗಳು ನಿಲ್ಲಬೇಕೆಂದು ಮನವಿ ಸಲ್ಲಿಸಿ, ರಾಜ್ಯಾದ್ಯಂತ ಚಳವಳಿಯಾಗುವ ಸೂಚನೆಯನ್ನು ನೀಡಿದ್ದಾರೆ. ಈ ಬಾರಿಯ, ಅಂದರೆ ಈ ಶತಮಾನದಲ್ಲಿ ಮತ್ತೆ ಹುಟ್ಟಿಕೊಂಡ ಈ ಹೋರಾಟದಲ್ಲಿ ಯಾವ ಸಂಘಟನೆಗೂ ಪರಿಪೂರ್ಣವಾಗಿ ಜಯ ಲಭಿಸದಿದ್ದರೂ ಅದರ ಸ್ಪಷ್ಟ ಸಾಮಾಜಿಕ ಪ್ರಗತಿ ಉಂಟಾಗುವುದರಲ್ಲಿ ಸಂಶಯವಿಲ್ಲ. ✡

ಜನವರಿ 1982

"ಅಂತೂ ಕೊನೆಗೊಮ್ಮೆ ನಮ್ಮ ಜಮಾನ್ರು ಧೂಮಪಾನ ನಿಲ್ಲಿಸಿಬಿಟ್ರು."
"ವಾಹ್, ಅವರ ಇಚ್ಛಾಶಕ್ತೀನ ಮೆಚ್ಚಲೇಬೇಕು."
"ಅವರದಲ್ಲ ಕಣೆ, ನನ್ನ ಇಚ್ಛಾಶಕ್ತೀನ ಮೆಚ್ಚು."

ಘಟಿಸಲಿಕ್ಕಿಲ್ಲ !

ಗರಬಡಿಸಿದ ಮೆರವಣಿಗೆ

ಎಸ್. ಕೆ ಕಲ್ಲಾಪುರ

ಸರಸಕ್ಕನು ದೋಸೆ ಹಿಟ್ಟನ್ನು ತಿರುವುತ್ತಿದ್ದಳು. ಪಕ್ಕದಲ್ಲಿ ಆಕೆಯ ೮–೧೦ ತಿಂಗಳ ಮಗುವು ಮಲಗಿತ್ತು. ಮುದ್ದಾದ ಗಂಡು ಮಗು. ಕೇರಿಯಲ್ಲಿಯ ಹುಡುಗಿಯರಿಗೆಲ್ಲ ಆ ಮಗುವೆಂದರೆ ಜೀವ. ತೊಟ್ಟಿಲಲ್ಲಿ ಮಲಗಿ ನಿದ್ರಿಸುತ್ತಿರುವಾಗಲೂ ತಾಯಿಗೆ ತಿಳಿಸದೆ ಎಬ್ಬಿಸಿ ಎತ್ತಿಕೊಂಡು ಹೋಗಿಬಿಡುತ್ತಿದ್ದರು.

ಅಂದು ಆ ಊರಿನ ಶ್ರೀಮಂತನೊಬ್ಬನ ಮಗನ ಮದುವೆ. ಊರಿನವರು ಎಂದೂ ಕಾಣದಂಥ ಮೆರವಣಿಗೆಯಲ್ಲಿ ವರನು ವಧುವಿನ ಮನೆಗೆ ಹೊರಟಿದ್ದನು. ಅದು ಸರಸಕ್ಕನ ಮನೆಯ ಎದುರಿನಿಂದಲೇ ಹೋಗತಕ್ಕದ್ದಿತ್ತು. ಶಹನಾಯಿ ಬ್ಯಾಂಡುಗಳ ಸದ್ದು ಆಕೆಗೆ ಕೇಳಿಸುತ್ತಿತ್ತು. ತಿರುವುವ ಕೆಲಸವನ್ನು ಕೈಲಾದಷ್ಟು ಬೇಗನೆ ಮುಗಿಸಿ, ಹಿಟ್ಟಿನ ತಪ್ಪೇಲಿಯನ್ನು ನಾಗಂದಿಗೆಯ ಮೇಲಿಟ್ಟು ಕೂಸನ್ನು ಎತ್ತಿಕೊಂಡು ರಸ್ತೆಯ ಪಕ್ಕಕ್ಕೆ ಹೋಗಬೇಕೆಂದು ಆಕೆಯ ಮನಸ್ಸಿನಲ್ಲಿತ್ತು. ಆದರೆ ಊಹಿಸಿದ್ದಕ್ಕಿಂತ ಬೇಗನೇ ಮೆರವಣಿಗೆಯು ಮನೆಯನ್ನು ಸಮೀಪಿಸಿತು. ಕೂಡಲೆ ಹಿಟ್ಟನ್ನು ತಪ್ಪೇಲಿಯಲ್ಲಿ ತುಂಬಿದಳು. ಮತ್ತು ಗಡಿಬಿಡಿಯಲ್ಲಿ ಅದನ್ನು ನಾಗಂದಿಗೆಯ ಮೇಲೆ ಇಡುವುದರ ಬದಲು, ಕೂಸನ್ನೇ ಅದರ ಮೇಲೆ ಇಟ್ಟಳು. ಗುಂಡಕಲ್ಲನ್ನು ಬಗಲಲ್ಲಿ ಇಟ್ಟುಕೊಂಡಳು. ಮತ್ತು ಬಾಗಿಲನ್ನು ಎಳೆದುಕೊಂಡು ಚಿಲಕ ಹಾಕಿ ಬೀದಿಗೆ ಇಳಿದುಬಿಟ್ಟಳು.' ಕೇರಿಯವರೆಲ್ಲ ಮೊದಲೇ ಬೀದಿಯ ಪಕ್ಕದಲ್ಲಿ ನೆರೆದಿದ್ದರು.

ಸರಸಕ್ಕನ ಬಗಲಲ್ಲಿ ಗುಂಡಕಲ್ಲು ಇರುವುದನ್ನು ಅನೇಕರು ಕಂಡಿದ್ದರು. ಎಲ್ಲೋ ನೆರೆಮನೆಯಿಂದ ಕಡ ತೆಗೆದುಕೊಂಡು ಮನೆಗೆ ಹಿಂದಿರುಗುವಾಗ ಮೆರವಣಿಗೆಯು ಬಂದುಬಿಟ್ಟದರಿಂದ ನೋಡುತ್ತ ನಿಂತಿರಬಹುದು ಎಂದು ಕೆಲವರು ಊಹಿಸಿದರು. ಎಲ್ಲರ ಲಕ್ಷ್ಯವು ಮೆರವಣಿಗೆಯ ಕಡೆಗೇ ಇದ್ದುದರಿಂದ ಸರಸಕ್ಕನತ್ತ ವಿಶೇಷ ಲಕ್ಷ್ಯವನ್ನು ಹಾಕಲಿಲ್ಲ. ಸಮವಸ್ತ್ರಧಾರಿಗಳ ಎರಡು ಬ್ಯಾಂಡಿನ ಮೇಳಗಳು, ಶಹನಾಯಿಯವರ ಎರಡು ಮೇಳಗಳು, ಕುಣಿಯುವವರ, ಕೋಲಾಟದವರ ಮೇಳಗಳು. [illegible]

ಅಲಂಕೃತ ಮಹಿಳೆಯರ ಸಾಲುಗಳು ನಂತರ ಗಂಡಸರ ಸಾಲುಗಳು, ಎಲ್ಲಕ್ಕೂ ಹಿಂದೆ ಅಶ್ವಾರೂಢನಾದ ಚಿನ್ನ, ರತ್ನಾಭರಣ, ಬೆಲೆಯುಳ್ಳ ವಸ್ತ್ರಾಲಂಕೃತನಾದ ವರ, ಅವನ ಪರಿವಾರಗಳು ಸಾಗಿದ್ದವು. ಅದು ಪೂರ್ಣವಾಗಿ ಕಣ್ಮರೆಯಾಗುವವರೆಗೂ ಮಹಿಳೆಯರು ಅಲ್ಲೇ ನಿಂತಿದ್ದರು.

ಅಷ್ಟರೊಳಗೆ ಆಚೆ ಮನೆಯ ಸೀತಾಬಾಯಿಯು ಒಂದು ಮಹತ್ವದ ವಿಷಯವನ್ನು ಸರಸಕ್ಕನೊಡನೆ ಪ್ರಾರಂಭಿಸಿಬಿಟ್ಟಿದ್ದಳು. ಕೇರಿಯೊಳಗಿನ ಒಂದು ಮನೆಯ ಅತ್ತೆ-ಸೊಸೆಯರ ಪ್ರಕರಣ. ಅದು ಅಲ್ಲಿ ಕೊನೆಗೊಳ್ಳುವ ಲಕ್ಷಣ ತೋರದ್ದರಿಂದ ಇಬ್ಬರೂ ಸರಸಕ್ಕನ ಮನೆಯತ್ತ ಮನೆಯತ್ತ ತೆರಳಿದರು. ಮಾತಿನಲ್ಲಿ ಎಲ್ಲವನ್ನೂ ಮರೆತ ಸರಸಕ್ಕನು ಯಾಂತ್ರಿಕವಾಗಿ ಬಾಗಿಲನ್ನು ತೆರೆದು ಗುಂಡು ಕಲ್ಲನ್ನು ಇದ್ದಿಲ ಕಲ್ಲಿನ ಪಕ್ಕದಲ್ಲಿ ಇಟ್ಟು, ಹೊರಗಿನ ತುಳಸೀ ಕಟ್ಟೆಯ ಬದಿಯಲ್ಲಿ ನಿಂತು ಮಾತನ್ನು ಮುಂದುವರಿಸಿದಳು. ಅದು ಬೇಗನೆ ಕೊನೆಗೊಳ್ಳುವ ಲಕ್ಷಣ ತೋರಲಿಲ್ಲ. ಅಷ್ಟರೊಳಗಾಗಿ ಹಾಲನ್ನು ಸ್ಟೋವಿನ ಮೇಲೆ ಕಾಯಲಿಕ್ಕೆ ಇಟ್ಟು ಹಾಗೆಯೇ ಮೆರವಣಿಗೆಯನ್ನು ನೋಡಲಿಕ್ಕಾಗಿ ಬಂದಿದ್ದೆನೆಂದು ಸೀತಾಬಾಯಿಗೆ ನೆನಪಾಯಿತು. ಕೂಡಲೇ ಅದೇನಾಯಿತೆಂದು ನೋಡಿಕೊಂಡು ಹಿಂದಿರುಗುವೆನೆಂದು ಹೇಳಿ ಗಾಬರಿಯಿಂದ ಮನೆಯತ್ತ ಹೋದಳು. 'ಹಾಲು' ಎಂಬ ಶಬ್ದವನ್ನು ಕೇಳಿದೊಡನೆ ಮಗುವಿಗೆ ಹಾಲನ್ನು ಕುಡಿಸುವ ಸಮಯವಾಯಿತೆಂದು ಸರಸಕ್ಕನಿಗೆ ನೆನಪಾಯಿತು. ಒಳಗೆ ಬಂದು ನೋಡಿದಳು, ಕೂಸು ಇರಲಿಲ್ಲ. ತೊಟ್ಟಿಲಲ್ಲಿ ನೋಡಿದಳು ಅಲ್ಲಿಯೂ ಇರಲಿಲ್ಲ!! ಗಾಬರಿಯಾದಳು.

ಕೇರಿಯ ಯಾವುದಾದರೂ ಹುಡುಗಿ ಕರೆದುಕೊಂಡು ಹೋಗಿರಬಹುದೆಂದು ತಿಳಿದು ಕೇರಿಯೆಲ್ಲ ಸುತ್ತಾಡಿಕೊಂಡು ಬಂದಳು. ಎಲ್ಲಿ ಕೇಳಿದರೂ ಒಂದೇ ಉತ್ತರ, "ನಾವು ನೋಡಿಲ್ಲ, ನಮಗೆ ಗೊತ್ತಿಲ್ಲ."

ಸರಸಕ್ಕನ ಗಾಬರಿಗೆ ಮಿತಿಯಿಲ್ಲ. ಮನೆಗೆ ಬಂದವಳೇ "ಪುಟ್ಟಾ, ಪುಟ್ಟಾ" ಎಂದು ಮಗುವಿನ ಹೆಸರನ್ನು ಕೂಗುತ್ತ ಬಿಕ್ಕಿ ಬಿಕ್ಕಿ ಅಳಹತ್ತಿದಳು. ನೆರೆಯವರೆಲ್ಲ ಕೂಡಿದರು.

ಅದೇ ಸಮಯದಲ್ಲಿ ವಂಜಾರಿಗಳದೊಂದು ತಂಡವು ಆ ಊರಿನಲ್ಲಿ ಠಾವು ಹೂಡಿತ್ತು. ಸಣ್ಣ ಪ್ರಾಯದ ಕೂಸುಗಳನ್ನು ಹಿಡಿದುಕೊಂಡು "ಕೂಸಿನ ಹಾಲಿಗೆ ದುಡ್ಡನ್ನು ಕೊಡಿರಿ," "ತಲೆಗೆ ಎಣ್ಣೆಯನ್ನು ಖರೀದಿಸುವದಕ್ಕೆ ದುಡ್ಡನ್ನು ಕೊಡಿರಿ", ಎಂದು ಅವುಗಳನ್ನು ದಾರಿಹೋಕರ ಮುಂದೊಡ್ಡಿ ಬೇಡುವದು ಅವರ ವೃತ್ತಿಯಾಗಿತ್ತು. "ಅವರಲ್ಲಿ ಒಬ್ಬನು ಕೂಸನ್ನು ಕದ್ದೊಯ್ದಿರಬಹುದು," ಎಂದು ನೆರೆಯವರಲ್ಲಿ ಒಬ್ಬಾಕೆ ಹೇಳಿದಳು. ಅನೇಕರು "ಹಾಗೆಯೇ ಆಗಿರಬೇಕು." ಎಂದರು. ಧೈರ್ಯವುಳ್ಳ ಒಬ್ಬಾಕೆ ಕೂಡಲೇ ಟೆಲಿಫೋನ್ ಇದ್ದ ಒಂದು ಮನೆಗೆ ಹೋಗಿ, ವಂಜಾರಿಗಳು ಕೂಸನ್ನು ಕದ್ದೊಯ್ದಿದ್ದಾರೆಂದು ಅದರ ತಂದೆ ವಾಸುದೇವರಾಯರಿಗೆ ತಿಳಿಸಿದಳು. ಅವರು ಕೂಡಲೇ ಆಫೀಸಿಗೆ ಒಂದು ದಿನದ ರಜೆಹಾಕಿ, ನೇರವಾಗಿ ಪೋಲೀಸ್ ಠಾಣೆಗೆ ಹೋಗಿ ಪೋಲೀಸ್ ಇನ್ಸಪೆಕ್ಟರರಿಗೆ ದೂರು ಕೊಟ್ಟರು. ಇನ್ಸಪೆಕ್ಟರರು ಇಬ್ಬರು ಕಾನ್ಸಟೇಬಲರನ್ನು ವಂಜಾರಿಗಳ ಮುಖ್ಯಸ್ಥನನ್ನು ಕರೆತರುವದಕ್ಕೆ ಕಳುಹಿಸಿದರು.

ಅಷ್ಟರೊಳಗಾಗಿ ಸರಸಕ್ಕನ ಮನೆಯಲ್ಲಿ ನೆರೆದವರಲ್ಲಿ ಒಬ್ಬಾಕೆಯು, ವಂಜಾರಿಗಳು ಕದ್ದೊಯ್ದ ಕೂಸುಗಳ ಕೈಕಾಲುಗಳನ್ನು ಮುರಿದು ವಿರೂಪಗೊಳಿಸಿ ಹೆಚ್ಚು ಹಣವನ್ನು ಗಳಿಸುತ್ತಾರೆಂದೂ ಹೇಳಿದಳು. ಆಗಂತೂ ಸರಸಕ್ಕ ಇನ್ನಿಷ್ಟು ಗೋಳೋ ಎಂದು ಅಳಹತ್ತಿದಳು. ತನ್ನ ಕೂಸಿನ ಕೈಕಾಲುಗಳು ಮುರಿಯಲ್ಪಟ್ಟು ವಿರೂಪಗೊಂಡ ಚಿತ್ರವು ಆಕೆಯ ಕಣ್ಣೆದುರಿಗೆ ಕಾಣಹತ್ತಿತು.

ಪೋಲೀಸ್ ಕಾನಸ್ಟೇಬಲರು ವಂಜಾರಿ ಮುಖ್ಯಸ್ಥನನ್ನು ಕರೆತಂದರು. ಆತನು ಮೊದಲೇ ಗಾಬರಿಗೊಂಡಿದ್ದನು. ತನ್ನನ್ನು ಯಾಕೆ ಬರಮಾಡಿಕೊಂಡಿರುತ್ತಾರೆಂಬುದು ಆತಗೆ ತಿಳಿದಿರಲಿಲ್ಲ. ಠಾಣೆಯೊಳಗೆ ಅವನು ಕಾಲಿಟ್ಟದ್ದೇ ತಡ, ಇನ್ಸಪೆಕ್ಟರು ನಾಲ್ಕು ಛಡಿ ಏಟುಗಳನ್ನು ಚೆನ್ನಾಗಿ ಬಿಗಿದರು. ವಂಜಾರಿಯು ವಿಲಿವಿಲಿ

ಒದ್ದಾಡ ಹತ್ತಿದನು, "ಮೇರೊ ಮೇಲೋ ಮ್ಯಾ ಕಾಯ ನಾಯ ಕೇಲಾ ಸಾಬ" ಎಂದು ಕೂಗಾಡ ಹತ್ತಿದನು. "ಕಾಯಿನಾಯ ಕೇಲಾ" ಎನ್ನುತ್ತ ಇನ್ನೂ ನಾಲ್ಕು ಏಟುಗಳನ್ನು ಬಿಗಿದರು. ವಾಸುದೇವರಾಯರನ್ನು ತೋರಿಸುತ್ತ, "ಇವರ ಮಗುವನ್ನು ಎಲ್ಲಿಟ್ಟಿದ್ದೀ? ಈ ಕೂಡಲೆ ತಂದು ಹಾಜರು ಮಾಡು" ಎಂದು ಹೇಳುತ್ತ ಇನ್ನೂ ಎರಡನ್ನು ಬಿಗಿದರು. ವಂಜಾರಿಯು, ಒದ್ದಾಡ ಹತ್ತಿದನು. "ತನಗೆ ಏನೊಂದೂ ಗೊತ್ತಿಲ್ಲ," ಎಂದು ಪ್ರಮಾಣ ಮಾಡಹತ್ತಿದನು. "ನೀನಲ್ಲ ದಿದ್ದರೆ ನಿನ್ನ ತಾಂಡೇದ ಇನ್ನೊಬ್ಬನು ಕದ್ದಿರ ಬೇಕು. ಒಂದು ತಾಸಿನೊಳಗಾಗಿ ಕೂಸನ್ನು ತಂದುಕೊಡದಿದ್ದರೆ ನಿಮ್ಮೆಲ್ಲರನ್ನೂ ಜೈಲಿಗೆ ಹಾಕುವೆನು," ಎಂದು ಹೇಳಿ ಅವನನ್ನು ಹೋಗ ಗೊಟ್ಟರು.

ಮನೆಗೆ ಬಂದವನೇ ವಾಸುದೇವರಾಯರು ಹೆಂಡತಿಗೆ ನಿಘಂಟಿನೊಳಗಿನ ಯಾವ ಶಬ್ದ ವನ್ನೂ ಬಿಡದೆ, "ನಿನಗೆ ಮಾತಿಗೆ ಯಾರಾದರೂ ಸಿಕ್ಕಿದರೆಂದರೆ ಸರಿ ಮನೆ ಸೂರೆಗೊಂಡರೂ ಲಕ್ಷ್ಯ ಹೋಗುವದಿಲ್ಲ," ಎಂದು ಹೇಳುತ್ತ ಬೈದರು. ಆಗ ಆದ ಗಲಾಟೆಯ ಕಾರಣದಿಂದಲೋ ನಿದ್ರೆ ಮುಗಿದ ಕಾರಣದಿಂದಲೋ ಮಗುವು ಎಚ್ಚತ್ತು ಅಳಹತ್ತಿತು. ಚಕಿತರಾಗಿ ಮೇಲೇನು ಎಂದು ಒಬ್ಬರು ನಾಗಂದಿಗೆಯ ಮೇಲೆ ನೋಡು ತ್ತಲೆ— ಮಗು! ಕೆಳಗಿಳಿಸಿಕೊಂಡರು. ಎಲ್ಲರಿಗೂ ಆನಂದವೇ ಆನಂದ. ಕುಣಿದಾಡಿದರು.

ನೆಲದ ಮೇಲೆ ಮಲಗಿದ್ದ ಎಂಟು ತಿಂಗಳ ಕೂಸು, ನಾಗಂದಿಗೆ ಮೇಲೆ ಹೋಗುವದು ಹೇಗೆ? ಉತ್ತರ ದೊರೆಯಲು ತಡವಾಗಲಿಲ್ಲ, "ದೆವ್ವದ ಕಾಟ. ಸರಸಕ್ಕನ ಪುಣ್ಯ ದೊಡ್ಡದು. ಈ ದೆವ್ವವು ನಾಗಂದಿಗೆಯ ಮೇಲೆ ಇಟ್ಟಿತು. ಕೆಲವು ಎತ್ತರ ವಾದ ಗಿಡಗಳ ತುದಿಯ ಟೊಂಗೆಗಳ ಮೇಲೆ ಇಟ್ಟು ಬಿಡುತ್ತವೆ. ಕೂಸುಗಳು ಕೆಳಗೆ ಬಿದ್ದು ಸಾಯುತ್ತವೆ. ಆ ಮೇಲೆ ದೆವ್ವಗಳು ಅವನ್ನೇ ತಿನ್ನಹತ್ತುತ್ತವೆ," ಎಂದು ಒಬ್ಬಾಕೆ ಅಂದಳು.

ಸರಸಕ್ಕನ ಪುಣ್ಯ ದೊಡ್ಡದು. ಒಂದೇ ದಿವಸ ಮಟ್ಟಿಗೆ, "ದೆವ್ವಗಳು ಹಿಡಿದು ಬಿಟ್ಟವೆಂದ ಮೇಲೆ ಬಿಡುವದಿಲ್ಲ. 'ನಾ ನಿನ್ನ ಬಿಡಲಾರೆ' ಎಂಬ ಸಿನೆಮಾ ನೋಡಲಿಲ್ಲೇನು? ನಾಳೆ ಇನ್ನೇನೋ ಮಾಡಿ ಬಿಟ್ಟೀತು. ಕೂಡಲೆ ಏನಾದರೂ ಮಾಡಲೇ ಬೇಕು. ರಾಮ ನಾಮಕ್ಕೆ ಅವು ಹೆದರುತ್ತವೆ. ಅದ್ದರಿಂದ ಮನೆಯಲ್ಲಿ ಇಂದಿನಿಂದಲೇ ರಾಮಾ ಯಣ ಹೇಳಿಸಲಿಕ್ಕೆ ಹಚ್ಚಿರಿ ಎಂದು ಇನ್ನೊ ಬ್ಬಾಕೆ ಅಂದಳು. "ಪ್ರಾಣೇಶಾಚಾರ್ಯರನ್ನು ಕರೆಯಿಸಿರಿ. ಅವರಿಗೆ ಇದೆಲ್ಲಾ ಗೊತ್ತು" ಎಂದು ಮೂರನೆಯವಳ ಸಲಹೆಯಾಯಿತು. ಒಬ್ಬ ಹುಡುಗನು ಆ ಬಗ್ಗೆ ಹೋಗಿಯೆ ಬಿಟ್ಟನು. ಇನ್ನೊಬ್ಬಾತನು ಮನೆ ಬಾಗಿಲು, ಕಿಡಿಕಿ, ಗೋಡೆ ಗಳ ಮೇಲೆಲ್ಲಾ, "ರಾಮಾರಾಮ" ಎಂದು ಬರೆ ದನು ಇನ್ನೊಬ್ಬ ಹುಡುಗನು ಎಲ್ಲ ಬಾಗಿಲು ಕಿಡಿಕಿ ಗೋಡೆಗಳ ಮೇಲೆ "ನಾಳೆ ಬಾ" ಎಂದು ಬರೆದನು. "ರಾಮದೇವರಿಗಿಂತಲೂ ಹನುಮಂತ ದೇವರಿಗೆ ದೆವ್ವಗಳು ಹೆಚ್ಚು ಹೆದರುತ್ತವೆ. ಹನುಮಂತ ದೇವರ ಮೂರ್ತಿಯನ್ನು ಬಾಗಿಲಿಗೆ ಕಟ್ಟಿರಿ ಮತ್ತು ಪ್ರತಿ ಶನಿವಾರ ಹನುಮಂತ ದೇವರ ಆರಾಧನೆ ಮಾಡಿರಿ" ಎಂದು ಕೂಡಿದ ಇನ್ನೊಬ್ಬಳು ಹೇಳಿದಳು: "ಹನುಮಂತ ದೇವರ ಪ್ರೀತ್ಯರ್ಥವಾಗಿ ದಿನಾಲು ಬೆಳಗ್ಗೆ ಒಂದು ಮಂಗ ನಿಗೆ ಒಂದು ಬಟ್ಟಲು ಹಾಲು ಮತ್ತು ಒಂದು ಬಾಳೆಯ ಹಣ್ಣನ್ನು ಕೊಡಿರಿ" ಎಂದು ಇನ್ನೊ ಬ್ಬಾಕೆ ಅಂದಳು.

ಅಷ್ಟರೊಳಗಾಗಿ ಪ್ರಾಣೇಶಾಚಾರ್ಯರು ಬಂದರು. ಏನು ವಿಚಾರ ಎಂದು ಅವರು ಕೇಳು ವಷ್ಟರೊಳಗಾಗಿ ಎಂಟು ಹತ್ತು ಸ್ತ್ರೀಯರು ತಮಗೆ ಗೊತ್ತಿದ್ದುದನ್ನೇ ಹೇಳತೊಡಗಿ ದರು. "ಈ ಪ್ರಕಾರ ಎಲ್ಲರೂ ಒಮ್ಮೆಲೇ ಮಾತಾಡಹತ್ತಿದರೆ ನನಗೆ ಹ್ಯಾಗೆ ತಿಳಿಯ ಬೇಕು. ಒಬ್ಬೊಬ್ಬರೇ ಮಾತಾಡಿರಿ. ಮೊದಲು ಸರಸಕ್ಕ ಮಾತಾಡಲಿ?" ಎಂದು ಪ್ರಾಣೇಶಾಚಾ ರ್ಯರು ಹೇಳಿದರು. ಸರಸಕ್ಕ ಹೇಳಲು ಪ್ರಾರಂಭಿ ಸಿದಳು.

"ನಾನು ದೋಸೆ ಹಿಟ್ಟನ್ನು ತಿರುವುತ್ತ ಲಿದ್ದೆ. ಅಷ್ಟರೊಳಗೆ ಮೆರವಣಿಗೆ ಬರುವ ಶಬ್ದ ವಾಯಿತು. ಕೂಡಲೇ ಕೆಲಸ ಬೇಗ ಮುಗಿಸಿ

ಪಿಟ್ಟನ್ನು ತಪ್ಪೇಲಿಯಲ್ಲಿ ಹಾಕಿ ನಾಗಂದಿಗೆಯ ಮೇಲೆ ಇಟ್ಟು, ಕೂಸನ್ನು ಬಗಲಲ್ಲಿ ಇಟ್ಟುಕೊಂಡು ಬಾಗಿಲನ್ನು ಸರಿಸಿ ರಸ್ತೆಗೆ ಹೋದೆ. ಅಲ್ಲಿ ಮೆರವಣಿಗೆ ನೋಡುತ್ತ ನಿಂತೆ." ಇಷ್ಟನ್ನು ಹೇಳುವಷ್ಟರೊಳಗಾಗಿ ನೆರೆಯವರ ಹುಡುಗಿ ಕಮಲೆ ಮಾತಿಗೆ ಅಡ್ಡ ಬಂದಳು. "ಸುಳ್ಳು ಹೇಳಬ್ಯಾಡ ಕಕ್ಕೀ. ಪುಟ್ಟನ್ನ ಎಲ್ಲಿ ಬಗಲಲ್ಲಿ ಹಾಕಿದ್ದಿ? ನಾನು ಇಡೀ ಮನೆ ಹುಡುಕಿದೆ ಅತನಿಗೆ— ಕುಣಿತ, ಕೋಲ್ಬ್ಯಾಂಡು ಇವನ್ನೆಲ್ಲ ತೋರಿಸಬೇಕೆಂದು. ನಿನ್ನ ಬಗಲಲ್ಲಿ ಇದ್ದದ್ದು ಗುಂಡು ಕಲ್ಲು" ಕೂಡಿದ ಅನೇಕರು ಮಂಗಾಟ್ಟುವರು. "ನಿನ್ನ ಬಗಲಲ್ಲಿ ಇದ್ದ ಗುಂಡುಕಲ್ಲು ನಾವೂ ನೋಡಿದ್ದೇವೆ ಎಂದು ಅನೇಕರು ಹೇಳಿದರು. "ಪಿಟ್ಟಿನ ತಪ್ಪೇಲಿ ನಾಗಂದಿಗೆಯ ಮೇಲಿಲ್ಲದೆ. ಕೆಳಗೇ ಇದೆಯಲ್ಲ" ಎಂದು ರಾಧಾಬಾಯಿ ಕೇಳಿದಳು? ಸರಸಕ್ಕನ ಎದೆ ಧಸ್ಸೆಂದಿತು. ಒಂದೊಂದೇ ಸಂಗತಿಗಳು ನೆನಪಿಗೆ ಬರಹತ್ತಿದವು. ಸೀರೆಯ ಸೆರಗಿನಿಂದ ಮೋರೆಯನ್ನು ಮುಚ್ಚಿಕೊಂಡು ಅಲ್ಲೇ ಕೂತು ಬಿದ್ದು ಬಿದ್ದು ನಗಹತ್ತಿದಳು. ಆಕೆಗೆ ದೆವ್ವ ಹಿಡಿದಿರಬೇಕೆಂದು ಕೆಲವರು ತಿಳಿದರು. ತಮಾಷೆಯೋ ತಮಾಷೆ. ಆಚಾರ್ಯರೊಬ್ಬರಿಗೆ ಮಾತ್ರ ನಿರಾಶೆ. ಸರಸಕ್ಕ ೧೫ ದಿನಗಳತನಕ ಮನೆಯಿಂದ ಹೊರಬೀಳಲಿಲ್ಲ. ✡

ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಕಲಾವಿದರ ಸಂಘದವರು ಕಳೆದ ವರ್ಷ ಎಪ್ರಿಲ್ ೨೪ ರಿಂದ ೨೭ ರ ವರೆಗೆ ನಡೆಸಿದ ದಕ್ಷಿಣ ಭಾರತ ಕಲಾ ಮಹೋತ್ಸವದ ಮೊದಲನೆ ದಿನ. ಉದ್ಘಾಟನೆ ಸಮಾರಂಭದ ಮನರಂಜನೆಯ ಕಾರ್ಯಕ್ರಮ ನಡೆದಿದ್ದಾಗ ಪ್ರೇಕ್ಷಕರ ಮುಂದಿನ ಸಾಲಿನಲ್ಲಿ ಡಾ. ಗೋರೂರು ರಾಮಸ್ವಾಮಿ ಅಯ್ಯಂಗಾರರೂ, ಅಭಿನೇತ್ರಿ ಶ್ರೀಮತಿ ಬಿ. ಜಯಮ್ಮನವರೂ ಕುಳಿತಿದ್ದರು. ಅವರಿಂದ ಸ್ವಲ್ಪ ದೂರದಲ್ಲಿ ವಿಕ್ರಂ, ಲೋಕೇಶ್, ರಾಮಕೃಷ್ಣ ಇವರೆಲ್ಲ.

ಹಸ್ತಾಕ್ಷರ ಸಂಗ್ರಹಿಸುವ ಮುಖ್ಯ ಉದ್ದೇಶದಿಂದಲೇ ಉತ್ಸವದ ಸ್ವಯಂಸೇವಿಕೆಯರಾಗಿದ್ದ ಇಬ್ಬರು ಕುಮಾರಿಯರು ತಮ್ಮ 'ಬೇಟೆ'ಯನ್ನು ನಡೆಸಿದ್ದರು. ಗೋರೂರರನ್ನು ದಾಟಿ ಜಯಮ್ಮನವರ ಬಳಿ ಹೋದ ಉತ್ಸಾಹಿ ಸಂಗ್ರಾಹಕಿಯೊಬ್ಬಳನ್ನು ಕರೆದು, "ಅವರ ಆಟೊಗ್ರಾಫ್ ತಗೊಳ್ಳಮ್ಮ" ಎಂದು ಪುಸಲಾಯಿಸಿದೆ. "ಅವರು ಯಾರು?" ಎಂದುದಕ್ಕೆ, "ಪ್ರಸಿದ್ಧ ಸಾಹಿತಿ ಡಾ. ಗೋರೂರು ರಾಮಸ್ವಾಮಿ ಅಯ್ಯಂಗಾರರು," ಎಂದು ವಿವರಿಸಿದೆ. ಅದಕ್ಕೆ ಮೊದಲೇ ವೇದಿಕೆಯ ಮೇಲೆ ಅವರ ಪರಿಚಯ-ಸನ್ಮಾನ ಇತ್ಯಾದಿ ನಡೆದಿದ್ದರೂ ಹುಡುಗಿಗೆ ನೆನಪಾಗಿರಲಿಲ್ಲ. ಒಲ್ಲದ ಮನಸ್ಸಿನಿಂದಲೇ ಪುಸ್ತಕವನ್ನು ಅವರ ಮುಂದೊಡ್ಡಿದಳು. "ನಾನೇನಮ್ಮ ಸಿನೆಮಾ ತಾರೇನಾ? ಇದೆಲ್ಲ ಯಾಕೆ?" ಎನ್ನುತ್ತಾ ಗೋರೂರರು ತಮ್ಮ ಹಸ್ತಾಕ್ಷರ ಇತ್ತರು.-

ಅಷ್ಟೇನೂ ತೃಪ್ತಿ ತೋರದ ಮುಖಭಾವದಿಂದಲೇ ಪುಸ್ತಕ ಹಿಡಿದು ನಿಂತಿದ್ದ ಆವಳೊಡನೆ, "ಏನಮ್ಮಾ 'ಬೂತಯ್ಯನ ಮಗ ಅಯ್ಯು' ಚಿತ್ರ ನೋಡಿದ್ದೀಯಾ?" ಎಂದು ವಿಚಾರಿಸಿದೆ. ನೋಡಿರುವುದಾಗಿ ಉತ್ತರ ಬಂತು. "ನೋಡು, ಆ ಸಿನೆಮದ ಕಥೆ ಬರೆದವರು ಇವರೇ," ಎಂದುದೇ ತಡ, ಮುಖ ಅರಳಿತು. ಗೋರೂರರ ಹಸ್ತಾಕ್ಷರವಿದ್ದ ಪುಟವನ್ನು ತಿರುತಿರುಗಿ ನೋಡಿದ್ದೂ ಅಲ್ಲದೆ, ಕುಣಿಯುತ್ತಲೇ ಹೋದ ಕುಮಾರಿ, ಆ 'ಸಿನೆಮಾ ಸಾಹಿತಿ'ಯ ಆಟೋಗ್ರಾಫ್ ಪಡೆದುದನ್ನು ತನ್ನ ಗೆಳತಿಯರಿಗೆಲ್ಲ ವರ್ಣಿಸಿ ಮೆರೆದಳು.

— ಸ. ಗೋಪಾಲಕೃಷ್ಣ


ಅನುದಿನ ಭಾವ
ನಲಿವು,
ಒಲವು, ಗೆಲವು...
ಅಭಿವ್ಯಕ್ತಿಗೆ
ಮಫತ್‌ಲಾಲ್
ಉಡುಪು
ಬಟ್ಟೆಗಳಲ್ಲಿ ನವೀನ ಆವಿಷ್ಕಾರ.
ಬಣ್ಣದ ಬೆಡಗು, ನೆಯ್ಗೆಯ ನಯ,
ಮತ್ತು ವಿನ್ಯಾಸದ ಅಂದ
ನಿಮ್ಮ ಚೆಲುವನ್ನು ಹೆಚ್ಚಿಸುತ್ತವೆ..
ಬೆಳಗಿನಿಂದ ಬೈಗಿನವರೆಗೆ.
ಮಫತ್‌ಲಾಲ್ ಫ್ಯಾಬ್ರಿಕ್ಸ್

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ.

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಹಂಬಲ
(ಅ) ಹಾಳೆ (ಆ) ನೆನಪು (ಇ) ಅತಿಯಾದ ಆಸೆ (ಈ) ಹರಹು

೨. ಕಾರ್ಮಿಕ
(ಅ) ಪುರೋಹಿತ (ಆ) ಕೆಲಸಗಾರ (ಇ) ಬಿಳಿ (ಈ) ಮೊಟ್ಟೆಕಿತ್ತಿನವ

೩. ಕಾರಸ್ಥಾನ
(ಅ) ಪಿತೂರಿ (ಆ) ಅಂಗೈ (ಇ) ಅಪಾಯದ ಎಡೆ (ಈ) ಕರುಳು

೪. ಓವರಿ
(ಅ) ಮಂತ್ರ (ಆ) ಒಳಮನೆ (ಇ) ಪ್ರಶ್ನೆ (ಈ) ಪ್ರೀತಿ

೫. ಓನಾಮ
(ಅ) ಆರಂಭ (ಆ) ಹುತ್ತರಿ ಹಬ್ಬ (ಇ) ಹುಯ್ಯಲು (ಈ) ಪಚ್ಚಳ

೬. ಅಮಿತ
(ಅ) ಸುಧೆ (ಆ) ಹಂಡ (ಇ) ಅಳತೆಗೆ ಸಿಕ್ಕದ (ಈ) ಕಹಿ

೭. ಅನಿರ್ಣೇಯ
(ಅ) ದುಡುಕು (ಆ) ಖಂಡಿತ (ಇ) ಒರಟಾದ (ಈ) ನಿಶ್ಚಯಿಸಲಾಗದ

೮. ಪೈತೃಕ
(ಅ) ಹುಚ್ಚು (ಆ) ತಂದೆಯ (ಇ) ಏಳಿಯ (ಈ) ಪೈಶಾಚಿಕ

೯. ಪೈತ್ಯ
(ಅ) ತಂದೆಗೆ ಸಂಬಂಧಿಸಿದ (ಆ) ದಾಂಡಿಗ (ಇ) ಹುಚ್ಚು (ಈ) ಶಾಂತಿ

೧೦. ನಿಬ್ಬೆರಗು
(ಅ) ತೀರ ಸಾಮಾನ್ಯ (ಆ) ಅತ್ಯಾಶ್ಚರ್ಯ (ಇ) ಅವಲಂಬನ (ಈ) ಉತ್ಸಾಹ

೧೧. ಪುದುವಾಳಿಕೆ
(ಅ) ಕೂಡಿಕೊಂಡು ಬಾಳುವುದು (ಆ) ಸುಖೀರಾಜ್ಯ (ಇ) ಹೊಸ ಬದುಕು (ಈ) ಗುಟ್ಟಿನ ಪ್ರೇಮ

೧೨. ಕೂಳ್ಕುದಿ
(ಅ) ಕಟಕಾಳಿ (ಆ) ತಿಳಿಸಾರು (ಇ) ಅರೆಬೆಂದದ್ದು (ಈ) ಒಳಗಿನ ದುಃಖ

೧. **ಹಂಬು** (ಈ) ಹರಡು, ವ್ಯಾಪಿಸು; ಆದ್ದರಿಂದ) ಹಬ್ಬಿಕೊಳ್ಳುವ ವೀಳ್ಯದೆಲೆ ಮೊದಲಾದ ಬಳ್ಳಿ. [ದೇಶ್ಯ]

೨. **ಕಾರ್ಮಿಕ** (ಅ) ಕೆಲಸಗಾರ, ಕೂಲಿಗಾರ, ದುಡಿಯುವವ, ಶ್ರಮಜೀವಿ. ಉದಾ:— ಕಾರ್ಮಿಕರಿಗೆ ತಕ್ಕ ಪ್ರತಿಫಲ ಸಿಗಬೇಕು. [ಸಂ. ಕರ್ಮ=ಕೆಲಸ-ಎಂಬುದರಿಂದ]

೩. **ಕಾರಸ್ಥಾನ** (ಅ) ಪಿತೂರಿ, ಒಳಸಂಚು, ಕುತಂತ್ರ, ವಂಚನೆ. ಉದಾ:— ರಾಜಕೀಯ ಕಾರಸ್ಥಾನದಿಂದ ಅಧಿಕಾರ ಸಂಪಾದಿಸಿದ. [ಫಾರಸಿ]—ಕಾರಸ್ತಾನೀ=ಮೋಸ]

೪. **ಓವರಿ** (ಅ) ಒಳಮನೆ, ಕೋಣೆ, ಮುಚ್ಚುಮರೆ; ಪಕ್ಕ, ಮಗ್ಗುಲು. ಉದಾ:— ಓವರಿಯಲ್ಲೇ ಅವನ ಪೌರುಷ. [ಪ್ರಾಕೃತ, ಓವರಿಯಾ]

೫. **ಓನಾಮ** (ಅ) ಕಾರ್ಯಾರಂಭದ ಮೊದಲು ಹೇಳುವ ಓಂನಮಃ; (ಆದ್ದರಿಂದ) ಯಾವುದೇ ಕೆಲಸದ ಆರಂಭ ಅಥವಾ ಎತ್ತುಗಡೆ. ಉದಾ:— ರಾಜಕೀಯಕ್ಕೆ ಓ ನಾಮ ಹಾಕಿದ. [ಸಂ.—ಓಂನಮಃ]

೬. **ಅಮಿತ** (ಇ) ಅಳತೆಯಿಲ್ಲದ, ಮೇರೆಯಿಲ್ಲದ, ಬಹಳ. ಉದಾ:— ಅಮಿತ ಉತ್ಸಾಹದಿಂದ ಕೆಲಸಕ್ಕಿಳಿದ. [ಸಂ. ಅ=ಇಲ್ಲ+ಮಿತ=ಅಳತೆಯುಳ್ಳ].

೭. **ಅನಿರ್ಣೇಯ** (ಈ) ನಿಶ್ಚಯಿಸಲಾರದ, ನಿಂತಿತವಾಡಿಸಲಸಾಧ್ಯವಾದ. ಉದಾ:— ದೇವರುಂಟೇ ಎಂಬುದು ಅನಿರ್ಣೇಯ ಪ್ರಶ್ನೆ. [ಸಂ. ಅ=ಅಲ್ಲ+ನಿರ್ಣೇಯ=ನಿಶ್ಚಯಿಸಲು ಬರುವ]

೮. **ಪೈತೃಕ** (ಅ) ತಂದೆಯ, ಅವನಿಗೆ ಸಂಬಂಧಿಸಿದ; ಪೂರ್ವಜರಿಂದ ಬಂದ; ತಂದೆ ತಾಯಿಗಳ ಶ್ರಾದ್ಧಕರ್ಮ. ಉದಾ:— ಪೈತೃಕ ಸಂಪತ್ತು. [ಸಂ. ಪಿತೃ=ತಂದೆ, ಪೂರ್ವಜ—ಎಂಬುದರಿಂದ]

೯. **ಪೈತ್ಯ** (ಇ) ಹುಚ್ಚು, ಮರುಳು, ಬುದ್ಧಿ ಭ್ರಮಣೆ; ಪಿತ್ತ ಹೆಚ್ಚಾಗುವುದು. ಉದಾ:— ಪೈತ್ಯ ಹಿಡಿದವ. [ಸಂ. ಪಿತ್ತ—ದಿಂದ, ತಮಿಳು—ಪೈತ್ಯ]

೧೦. **ನಿಬ್ಬೆರಗು** (ಅ) ಅತ್ಯಾಶ್ಚರ್ಯ, ಅದ್ಭುತ ಪಡುವಿಕೆ, ವಿಸ್ಮಯ. ಉದಾ:— ಅವಳ ಧೈರ್ಯಕ್ಕೆ ನಿಬ್ಬೆರಗಾದ. [ದೇಶ್ಯ—ನಿರ್=ಅಧಿಕ+ಬೆರಗು]

೧೧. **ಪುದುವಾಳಿಕೆ** (ಅ) ಕೂಡಿ ಬಾಳುವುದು ಅನ್ಯೋನ್ಯವಾಗಿ ಒಟ್ಟಿಗಿರುವುದು; ಸೇರುವಿಕೆ. ಉದಾ:— ಅವಳೊಡನೆ ಪುದುವಾಳಿಕೆ ಸಾಧ್ಯವಿಲ್ಲ. [ದೇಶ್ಯ, ಪುದು=ಸೇರುವಿಕೆ+ಬಾಳಿಕೆ]

೧೨. **ಕೂಳ್ಕುದಿ** (ಈ) ಒಳಗಿನ ದುಃಖ, ಒಳಗಿನ ತಳಮಳ; ಕೊರಗು. ಉದಾ:— ಕೂಳ್ಕುದಿಯಲ್ಲೇ ಸತ್ತ. [ದೇಶ್ಯ—ಕೂಳ್=ಅನ್ನ—ಕುದಿ=ಅನ್ನದಂತೆ ಬೇಯು]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮	ಸರಿಯಿದ್ದರೆ	...	ಸಾಧಾರಣ
೯—೧೦	,,	...	ಉತ್ತಮ
೧೧—೧೨	,,	...	ಅತ್ಯುತ್ತಮ

ಎರಡು ಕಿರುಚಿತ್ರಗಳು

ಎಸ್. ಅನಂತನಾರಾಯಣ

ಕರ್ನಾಟಕ ಸಂಗೀತ ಕಚೇರಿಗಳಲ್ಲಿ ಸಂಗೀತದ ತ್ರಿಮೂರ್ತಿಗಳಾದ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ಯಾಮಾಶಾಸ್ತ್ರಿಗಳು ಇವರ ಕೃತಿಗಳ ಜತೆಗೆ ಸಾಮಾನ್ಯವಾಗಿ ಇನ್ನಿಬ್ಬರು ವಾಗ್ಗೇಯಕಾರರ ಕೃತಿಗಳೂ ಕೇಳಿಬರುತ್ತವೆ. ಕರ್ನಾಟಕ ಸಂಗೀತದ ಪಿತಾಮಹ ಪುರಂದರದಾಸರು ಹಾಗೂ ಮಹಾರಾಜಾ ಸ್ವಾತಿ ತಿರುನಾಳ್ ಅವರೇ ಈ ಇಬ್ಬರು ವಾಗ್ಗೇಯಕಾರರು. "ತ್ಯಾಗರಾಜ ವಿನುತ", "ಪುರಂದರ ವಿಠಲ", "ಗುರು ಗುಹ" ಮುಂತಾದ ಅಂಕಿತಗಳ ಜತೆಗೇ ಕೇಳಿ ಬರುವ ಮತ್ತೊಂದು ಅಂಕಿತ "ಶ್ರೀ ಪದ್ಮನಾಭ" ಅಂಕಿತವುಳ್ಳ ಸ್ವಾತಿ ತಿರುನಾಳರ ಕೃತಿಗಳನ್ನು ಎಲ್ಲ ಸಂಗೀತ ಕಚೇರಿಗಳಲ್ಲೂ ಕೇಳಬಹುದು. ಅತ್ಯಂತ ಶ್ರೇಷ್ಠ ಕೀರ್ತನೆಗಳನ್ನು ರಚಿಸಿದ ಕೀರ್ತಿ ಈ ಸ್ವಾತಿ ತಿರುನಾಳ್ ಅವರದು.

ತಿರುವಾಂಕೂರು ಸಂಸ್ಥಾನದಲ್ಲಿ ೧೮೧೩ನೆಯ ವರ್ಷದ ಏಪ್ರಿಲ್ ೧೬ನೆಯ ತಾರೀಖು ಮಹಾರಾಣಿ ಲಕ್ಷ್ಮೀಬಾಯಿ ಹಡೆದ ಗಂಡು ಮಗುವಿಗೆ ಶ್ರೀ ರಾಮವರ್ಮ ಮಹಾರಾಜನೆಂದು ಹೆಸರಿಟ್ಟರು. ಈತ ಹುಟ್ಟಿದುದು ಪವಿತ್ರವಾದ ಸ್ವಾತಿ ನಕ್ಷತ್ರದಲ್ಲಿ. ತಿರುವಾಂಕೂರು ಅರಸರ ಪದ್ಧತಿಯಂತೆ ಈತನ ಹೆಸರಿಗೆ ಹುಟ್ಟು ನಕ್ಷತ್ರದ ಹೆಸರನ್ನು ಸೇರಿಸಿದ್ದು ಈತನಿಗೆ ಶ್ರೀಸ್ವಾತಿ ತಿರುನಾಳ್ ರಾಮವರ್ಮ ಮಹಾರಾಜನೆಂದು ನಾಮಕರಣ ಮಾಡಲಾಯಿತು. ಸ್ವಾತಿ ತಿರುನಾಳ್ ಎಂದರೆ ಸ್ವಾತಿಯ ಶುಭದಿನ ಎಂದು ಅರ್ಥ. ಮುಂದೆ ಈತನೇ ಸ್ವಾತಿ ತಿರುನಾಳ್ ಎಂಬ ಪ್ರಸಿದ್ಧ ವಾಗ್ಗೇಯಕಾರನಾಗಿ ಸಂಗೀತ ಪ್ರಪಂಚದಲ್ಲಿ ಸ್ವಾತಿನಕ್ಷತ್ರದಂತೆ ಬೆಳಗಿದ. ರಾಮವರ್ಮನೆಂಬ ಹೆಸರು ಮರೆತೇಹೋಯಿತು.

ತಂದೆ ತಾಯಿ ಇಬ್ಬರ ಅಪೂರ್ವ ಸಂಸ್ಕಾರ, ವಿದ್ಯಾಪಕ್ಷಪಾತ ಎರಡೂ ಈತನಲ್ಲಿ ಮೈಗೂಡಿಕೊಂಡವು. ಬಹಳ ಚಿಕ್ಕವಯಸ್ಸಿನಲ್ಲಿಯೇ ಸ್ವಾತಿ ತಿರುನಾಳನಿಗೆ ಸಂಸ್ಕೃತ ಹಾಗೂ ಮಲಯಾಳಿ ಭಾಷೆಗಳಲ್ಲಿ ಶಿಕ್ಷಣ ದೊರೆಯಿತು. ನಾಟಕ ಹಾಗೂ ಕಾವ್ಯಗಳ ಪಾಠವಾಯಿತು. ಬೇರೆ ಬೇರೆ ಅಧ್ಯಾಪಕರು ಈತನಿಗೆ ತಮಿಳು, ಮರಾಠಿ, ಇಂಗ್ಲೀಷ್, ಹಿಂದೂಸ್ಥಾನಿ, ಪರ್ಷಿಯನ್, ತೆಲುಗು ಮತ್ತು ಕನ್ನಡ ಭಾಷೆಗಳನ್ನು ಕಲಿಸಿದರು. ಸ್ವಾತಿ ತಿರುನಾಳ್ ಒಂದು ಬಾರಿ ಕೇಳಿದುದನ್ನು ಸಂಪೂರ್ಣವಾಗಿ ತನ್ನದಾಗಿಸಿಕೊಳ್ಳುವ ವಿಶೇಷ ಗುಣ ಪಡೆದಿದ್ದು ಈ ಎಲ್ಲ ಭಾಷೆಗಳಲ್ಲಿಯೂ ಸಾಧಾರಣವಾಗಿ ಸಾಕಷ್ಟು ಪಾಂಡಿತ್ಯ ಪಡೆದ. ತಂಜಾವೂರಿನ ಸುಬ್ಬರಾವ್ ಈತನಿಗೆ ಗುರುವಾಗಿ ಅರಮನೆಗೆ ಬಂದು ಅಲ್ಲಿಯೇ ನೆಲೆಸಿದರು. ಸ್ವಾತಿ ತಿರುನಾಳ್ ಪಟ್ಟಕ್ಕೆ ಬಂದ ನಂತರ ಸುಬ್ಬರಾವ್ ಸಂಸ್ಥಾನದ ದಿವಾನರಾದರು. ಸುಬ್ಬರಾವ್ ಸ್ವತಃ ಸಂಗೀತವನ್ನು ಬಲ್ಲವರು; ಕಲಾಪಕ್ಷಪಾತಿ. ಅವರ ನೇತೃತ್ವದಲ್ಲಿ ಸ್ವಾತಿ ತಿರುನಾಳನಿಗೆ ಸಂಗೀತದ ಲಕ್ಷ್ಯ ಲಕ್ಷಣಗಳ ಪಾಠವೂ ಸಾಂಗವಾಗಿ ನಡೆಯಿತು. ಮೇರುಸ್ವಾಮಿ ಎಂಬ ಸಂನ್ಯಾಸಿ ಸಂಗೀತದಲ್ಲಿ ಅಪಾರ ವಿದ್ವತ್ತನ್ನು ಪಡೆದಿದ್ದ. ಸ್ವಾತಿ ತಿರುನಾಳನಿಗೆ ಈ ಸಂನ್ಯಾಸಿ ಸಂಗೀತಗಾರ ತತ್ವಶಾಸ್ತ್ರ, ಭಾರತೀಯ ಸಂಸ್ಕೃತಿಯ ಪಾಠದ ಜೊತೆಗೆ ಕರ್ನಾಟಕ ಮತ್ತು ಹಿಂದೂಸ್ಥಾನೀ ಪದ್ಧತಿಗಳೆರಡರ ಸಂಗೀತವನ್ನೂ ಆಳವಾಗಿ ಅಭ್ಯಾಸ ಮಾಡಿಸಿದ. ಇವೆಲ್ಲ ಪ್ರಭಾವಗಳನ್ನು ಮೈಗೂಡಿಸಿಕೊಂಡು ಸ್ವಾತಿ ತಿರುನಾಳ್ ನಾದೋಪಾಸಕರಾಗಿ ಭಕ್ತಿತುಂಬಿದ ಅಗ್ರಗಣ್ಯ ಪಂಕ್ತಿಯ ವಾಗ್ಗೇಯಕಾರರಾಗಿ ಹೆಸರಾದರು.

ಆಡಳಿತಗಾರರಾಗಿ ಸ್ವಾತಿ ತಿರುನಾಳ್ ಮಹಾರಾಜರು ಸಾಧಿಸಿದ್ದು ಬಹಳ ಜನರಿಗೆ ತಿಳಿಯದು. ಜನರ ಹಿತವನ್ನೇ ಮುಖ್ಯವಾಗಿಟ್ಟು

ಕೊಂಡ ಇವರ ಸಾಧನೆಗಳು ಪ್ರಪ್ರಥಮವೆಂದು ಹೇಳಬಹುದು. ಮೊತ್ತ ಮೊದಲ ಬಾರಿಗೆ ಭಾರತ ದೇಶದ ಯಾವುದೇ ಪ್ರದೇಶದಲ್ಲಿಯೂ ಆರೋಗ್ಯ ಇಲಾಖೆಯನ್ನೇ ಸ್ಥಾಪಿಸಿದ್ದು ಸ್ವಾತಿ ತಿರುನಾಳ್ ಮಹಾರಾಜರ ಆಡಳಿತ ತಿರುವಾಂಕೂರು ಸಂಸ್ಥಾನದಲ್ಲಿ, ಕೊಡೆಯಾರ್ ನದಿಗೆ ಸಣ್ಣದೊಂದು ಅಣೆಕಟ್ಟು ಕಟ್ಟಿಸಿ ಕಾಲುವೆಗಳನ್ನು ತೋಡಿಸಿ ವ್ಯವಸಾಯಕ್ಕೆ ಅನುಕೂಲ ಕಲ್ಪಿಸಿದರು. ಕರಮಣ ನದಿಯ ಮೇಲೆ ಸೇತುವೆ ಕಟ್ಟಿಸಿ ಕನ್ಯಾಕುಮಾರಿಯೊಂದಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸಿಕೊಟ್ಟರು. ೧೮೩೭ರಲ್ಲಿ ದಕ್ಷಿಣ ಭಾರತದಲ್ಲೇ ಮೊತ್ತಮೊದಲನೆಯ ನಕ್ಷತ್ರ ವೀಕ್ಷಣಾಲಯವನ್ನು ಸ್ಥಾಪಿಸಿದರು. ಉತ್ತರ ಮತ್ತು ದಕ್ಷಿಣ ಭಾರತಗಳ ನಡುವೆ ಸಂಪರ್ಕ ಬಹಳ ಕಷ್ಟವಾಗಿದ್ದ ಆ ಕಾಲದಲ್ಲಿ ಕೂಡ ಪಂಜಾಬ, ನೇಪಾಳ ಹಾಗೂ ದಿಲ್ಲಿಗಳಿಂದ ಉತ್ತಮ ತಳಿಯ ದನಗಳನ್ನು ತರಿಸಿ ಜನರಲ್ಲಿ ಹಂಚಿ ಹೆಚ್ಚು ಹಾಲು ಉತ್ಪಾದನೆಗೆ ನೆರವಾದರು. ಇಂದು ಜಗತ್ತಿನಲ್ಲೇ ಪ್ರಸಿದ್ಧವಾಗಿರುವ ತಿರುವನಂತಪುರದ ಮೃಗಾಲಯವನ್ನು ಸ್ಥಾಪಿಸಿ ಅದಕ್ಕೆಂದೇ ದೇಶ ವಿದೇಶಗಳಿಂದ ಅಪರೂಪದ ಮೃಗ ಪಕ್ಷಿಗಳನ್ನು ತರಿಸಿದರು. ಹೀಗೆ ಜನಸೇವೆಯೇ ಪ್ರಮುಖ ಧ್ಯೇಯವಾಗಿಟ್ಟುಕೊಂಡ ಸ್ವಾತಿ ತಿರುನಾಳ್ ಮಹಾರಾಜರು ಜನಹಿತ ಸಾಧಕರಾದ ಆಡಳಿತಗಾರರಾಗಿದ್ದರು. ಸಂಗೀತ ಪ್ರಪಂಚದಲ್ಲಿ ಅದ್ಭುತ ಹೆಸರುಗಳಿಸಿದ್ದುದರಿಂದ ಅವರ ಆಡಳಿತ ಸಾಧನೆ ಅಷ್ಟಾಗಿ ಜನರ ಗಮನಕ್ಕೆ ಬಂದಿಲ್ಲ.

ಸಂಗೀತ ಕ್ಷೇತ್ರದಲ್ಲಿ ಸ್ವಾತಿ ತಿರುನಾಳ್ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಹಳೆಯ ರಾಗಗಳಾದ ಗೋಪಿಕಾ ವಸಂತ, ಮಂಗಳ ಕೈಸಿಕೀ ಮತ್ತು ಲಲಿತ ಪಂಚಮಗಳಿಗೆ ಪುನರುಜ್ಜೀವನ ನೀಡಿದ್ದೇ ಅಲ್ಲದೆ, ಘನರಾಗಗಳಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದರು. ಒಂದು ರಾಗದ ಆರೋಹಣ ಮತ್ತು ಇನ್ನೊಂದು ರಾಗದ ಅವರೋಹಣಗಳನ್ನು ಕೂಡಿಸಿ ಹೊಸ ರಾಗ ರಚನೆ ಮಾಡಿದರು. ಮೋಹನ ಹಾಗೂ ಕಲ್ಯಾಣಿ ರಾಗಗಳನ್ನು ಕೂಡಿಸಿ ಮೋಹನ ಕಲ್ಯಾಣಿ ರಾಗವನ್ನು ನೀಡಿದ ಕೀರ್ತಿ ಸ್ವಾತಿ ತಿರುನಾಳ್‌ರದು. ಅನಂತರ ಅವರ ಮೇಲ್ಪಂಕ್ತಿಯನ್ನು ಅನುಸರಿಸಿ – ಬೇರೆಯವರು - ಕಲ್ಯಾಣವಸಂತ ಮುಂತಾದ ಕೂಡುರಾಗಗಳನ್ನು ರಚಿಸಿದರು.

ಸಂಗೀತದಲ್ಲಿಯೂ ಒಂದು ಬಗೆಯ ರಾಷ್ಟ್ರೀಯ ಐಕ್ಯವನ್ನು ಸಾಧಿಸಿ ತೋರಿಸಿದವರು ಸ್ವಾತಿ ತಿರುನಾಳರು. ಸಂಸ್ಕೃತ, ಮಲಯಾಳಿ ಮುಂತಾದ ಭಾಷೆಗಳಲ್ಲಿ ಕರ್ನಾಟಕ 'ಸಂಗೀತದ ರಚನೆಗಳನ್ನು ಮಾಡಿದಂತೆಯೇ ಶುದ್ಧ ಹಿಂದೂಸ್ತಾನೀ ರಾಗಗಳಾದ ಧನಾಶ್ರೀ, ಕಾಫೀ ಹಾಗೂ ಬಿಹಾಗ್ ರಾಗಗಳಲ್ಲಿಯೂ ಧ್ರುಪದ್, ಠಪ್ಪಾ ಮತ್ತು ಖ್ಯಾಲಗಳ ರೀತಿಯಲ್ಲಿ ಹಿಂದೀ ಭಾಷೆಯಲ್ಲಿಯೂ ಚೌಪಾಸದ ರಾಗಮಾಲಿಕೆಯನ್ನು ರಚಿಸಿದರು. ಸಂಗೀತದಲ್ಲಿ ಉತ್ತರಾದಿ ಹಾಗೂ ಹಾಗೂ ದಕ್ಷಿಣಾದಿಗಳ ಐಕ್ಯ ಹಾಗೂ ಸಮನ್ವಯ ಸಾಧಿಸಿದ ಕೀರ್ತಿ ಸ್ವಾತಿ ತಿರುನಾಳರಿಗೆ ಸಲ್ಲುತ್ತದೆ. ಕನ್ನಡದಲ್ಲಿ ಅವರು ರಚಿಸಿದ ಒಂದೇ ಒಂದು ಕೃತಿ "ರಾಜೀವಾಕ್ಷ ಬಾರೋ" ಶಂಕರಾಭರಣ ರಾಗದಲ್ಲಿದೆ.

ಸಾಹಿತ್ಯ ಕ್ಷೇತ್ರದಲ್ಲೂ ಅಪೂರ್ವ ಸಿದ್ಧಿಯನ್ನು ಪಡೆದ ಸ್ವಾತಿ ತಿರುನಾಳರು ಭಕ್ತಿ ಮಂಜರಿ ಪದ್ಮನಾಭಶತಕ, ಸ್ಯಾನಂದೂರಪುರ ವರ್ಣನ ಪ್ರಬಂಧ (ಅನಂತಶಯನನ ವರ್ಣನೆ) ಎಂಬ ಕೃತಿಗಳನ್ನು ರಚಿಸಿದರು. ಕಾವ್ಯಸತ್ವವನ್ನು ಒಳಗೊಂಡ ಈ ಕೃತಿಗಳಲ್ಲಿ ಪದ್ಮನಾಭನ ಬಗ್ಗೆ ಭಕ್ತಿ ಸುಮಾಂಜಲಿಯ ಸಮರ್ಪಣೆಯನ್ನು ಕಾಣಬಹುದು. ಮೀರಾ, ಆಂಡಾಳ್, ಚೈತನ್ಯ ಮಹಾಪ್ರಭು ಮುಂತಾದವರನ್ನು ಈ ಕೃತಿಗಳು ನೆನಪಿಗೆ ತರುತ್ತವೆ. ಭಕ್ತಿಯೇ ಮುಕ್ತಿಮಾರ್ಗವೆಂಬ ತತ್ವ ಇಲ್ಲಿ ಕಾಣುತ್ತದೆ.

ಹೀಗೆ ಆದರ್ಶ ಆಡಳಿತಗಾರರಾಗಿ, ಲೌಕಿಕದಲ್ಲಿ ತತ್ವಜ್ಞಾನಿ ಹಾಗೂ ವಾಗ್ಗೇಯಕಾರರಾಗಿ ಸಂಗೀತಾಭಿಮಾನಿಯೂ ಸಾಹಿತಿಯೂಗಿಯೂ ಭಕ್ತಿ ಪಂಥ ಪ್ರವರ್ತಕರಾಗಿಯೂ ತಿರುಸ್ವಾತಿನಾಳರು 'ಮೆರೆದು ಮಹತ್ತರ ಆದರ್ಶಪ್ರಾಯ ವ್ಯಕ್ತಿಯಾಗಿದ್ದಾರೆ.

✿

ಬಂಗಾಲೀ ಸಾಹಿತ್ಯದಲ್ಲಿ ಅತ್ಯಂತ ಶ್ರೇಷ್ಠ ಕವಿಯಾಗಿ, ಸಣ್ಣ ಕತೆಗಾರನಾಗಿ

ನಾಗಿ, ನಾಟಕಕಾರನಾಗಿ, ವಿಮರ್ಶಕನಾಗಿ ಹಾಗೂ ದರ್ಶನಪ್ರತಿಪಾದಕನಾಗಿ ಮೆರೆದ ರವೀಂದ್ರನಾಥ ಠಾಕೂರರು ಸಾಹಿತ್ಯಕ್ಕಾಗಿ ನೋಬೆಲ್ ಬಹುಮಾನ ಪಡೆದ ಮೊತ್ತಮೊದಲ ಹಾಗೂ ಏಕೈಕ ಭಾರತೀಯ. ಭಾರತದ ಅನುಭಾವ ಭಕ್ತಿಪಂಥಗಳ ಆಳ ಹಾಗೂ ಹಿರಿಮೆಯನ್ನು ತಮ್ಮ "ಗೀತಾಂಜಲಿ" ಕಾವ್ಯಸಂಕಲನದಿಂದ ಜಗತ್ತಿಗೆ ಸಾರಿದ ಮಹಾಕವಿ. ತಮ್ಮ ಕೃತಿಗಳಿಂದ ಭಾರತೀಯ ಮತ್ತು ಹೊರಜಗತ್ತಿನ ಬಹುಜನರ ಮನವನ್ನು ಹೊಸ ವಿಚಾರಗಳ ಕಡೆಗೆ ಹೊರಳಿಸಿದ ವಿಚಾರಶೀಲ. ತಮ್ಮ ಹಾಡುಗಳನ್ನು ಸಾಂಪ್ರದಾಯಿಕ ಸಂಗೀತದ ಬಂಧನದಿಂದ ಬಿಡುಗಡೆ ಮಾಡಿ ಹೊಸಬಗೆಯ ಹಾಡುಗಾರಿಕೆಯನ್ನೇ ಸೃಜಿಸಿ "ರವೀಂದ್ರ ಸಂಗೀತ" ಎಂಬ ನೂತನ ಮಾರ್ಗವನ್ನು ಸ್ಥಾಪಿಸಿಕೊಟ್ಟ ಕ್ರಾಂತಿಕಾರಿ. ವೈಚಾರಿಕತೆಯಲ್ಲಿದೆ ಇಂದಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಪ್ರಕೃತಿಗೂ ಮಾನವನಿಗೂ ಸಂಬಂಧವಾಗುವ ಮಹತ್ಪರಿಣಾಮವಿದೆಯೆಂದು ಗುರುತಿಸಿ ಪ್ರಕೃತಿಯ ಮಡಿಲಲ್ಲೇ ಎಲ್ಲ ಬಗೆಯಲ್ಲಿಯೂ ಮಾನವನ ಬುದ್ಧಿ, ವಿಚಾರ, ಕಲೆಗಳ ಅಭ್ಯುದಯವೆಯೆಂದು ಸಾರಿ ಅದನ್ನು ಪ್ರಯೋಗ ರೂಪಕ್ಕೆ ತಂದು ಶಾಂತಿ ನಿಕೇತನವನ್ನು ಸ್ಥಾಪಿಸಿದ ಪ್ರಯೋಗಶೀಲ. ಕವಿ ಮಾತ್ರವೇ ಅಲ್ಲ. ಈತ ದಾರ್ಶನಿಕನೂ ಹೌದು ಎಂದು ಎಲ್ಲರಿಂದಲೂ ಮನ್ನಣೆಗಳಿಸಿಕೊಂಡು ವಿಶ್ವಮಾನವ ತತ್ವಪ್ರಸಾರಮಾಡಿದ ದರ್ಶನ ಕೋವಿದ. ಮಕ್ಕಳಿಗಾಗಿ ಅವರ ಮನೋಬುದ್ಧಿಯ ಜಾಡನ್ನೇ ಅನುಸರಿಸಿ ಸಾಹಿತ್ಯ ರಚಿಸಿ ಮಕ್ಕಳೊಡನೆ ಮಗುವಾಗಿ ನಲಿದಾಡಿದ ಮಕ್ಕಳ ಪ್ರೇಮಿ. ರಾಜಕೀಯದ ದುರ್ಭಾಚಾರಕ್ಕೆ ಮರುಳಾಗದೆ ಗಾಂಧೀಜಿಯೊಂದಿಗೆ ಭಿನ್ನಾಭಿಪ್ರಾಯ ತಳೆದಿದ್ದೂ ಅವರ ಗೌರವ ಪ್ರೀತಿಯನ್ನು ಸಂಪಾದಿಸಿಕೊಂಡು ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ ತನ್ನದೇ ರೀತಿಯಲ್ಲಿ ಹೋರಾಡಿ ರಾಷ್ಟ್ರಗೀತೆಗಳನ್ನು ರಚಿಸಿದ ರಾಷ್ಟ್ರಪ್ರೇಮಿ. ತನ್ನ ಸಾಹಿತ್ಯದ ಮೌಲ್ಯವನ್ನರಿತು ಗೌರವದಿಂದ ಬ್ರಿಟಿಷ್ ಸರ್ಕಾರ ತನಗೆ ನೀಡಿದ್ದ ನೈಟ್‌ಹುಡ್ ಎಂಬ "ಸರ್" ಪದವಿಯನ್ನು ಪಡೆದಿದ್ದ ಠಾಕೂರರು. ಜಲಿಯನ್‌ವಾಲಾಬಾಗಿನ ಹತ್ಯಾಕಾಂಡದ ದುಷ್ಟದುರಂತದಿಂದ ನೊಂದು ಭಾರತಕ್ಕೆ ಅದು ಅಪಮಾನವೆಂದು ಪರಿಭಾವಿಸಿ ಪ್ರತಿಭಟನಾ ರೂಪವಾಗಿ ಪದವಿಯನ್ನೇ ಬ್ರಿಟಿಷ್ ಸರ್ಕಾರಕ್ಕೆ ಹಿಂದಿರುಗಿಸಿದ ಧೀರ. ಸಂಸ್ಕೃತಿಯಿಲ್ಲದ ಸ್ವಾತಂತ್ರ್ಯಕ್ಕೆ ಬೆಲೆಯಿಲ್ಲ. "ಎಲ್ಲಿ ಜನ ತಲೆಯೆತ್ತಿ ನಡೆಯುತ್ತಾರೋ, ಎಲ್ಲಿ ವಿಚಾರವಂತಿಕೆಯು ಸಂಪ್ರದಾಯದ ಮರಳಿನ ಅಳಿಸಿ ಹೋಗಿಲ್ಲವೋ, ಎಲ್ಲಿ ಮಾನವತೆ ಅರಳಿರುತ್ತದೋ ಅಲ್ಲಿಯೇ ನಿಜವಾದ ಸ್ವಾತಂತ್ರ್ಯ ಇರುತ್ತದೆ. ಅಂತಹ ಸ್ವಾತಂತ್ರ್ಯಕ್ಕೆ ನನ್ನ ದೇಶ ಅರಳಲಿ," ಎಂದು ಹಂಬಲಿಸಿದ ಸಂಸ್ಕೃತಿಯ ಮೂರ್ತಿರೂಪ. ಹೀಗೆ ಬಹುಮುಖವ್ಯಕ್ತಿತ್ವ ಠಾಕೂರರು.

"ವಾಲ್ಮೀಕಿ ಪ್ರತಿಭಾ"ದಂತಹ ಗೀತ ನಾಟಕ, "ರಕ್ತ ಕರಬಿ" (ಕೆಂಪು ಕಣಗಿಲೆ), ರಾಜಾ ಮುಂತಾದ ಸಾಂಕೇತಿಕ ನಾಟಕಗಳು, "ಅಂಚೆ ಮನೆ" ಮುಂತಾದ ಸಾಮಾಜಿಕ ವಸ್ತುವುಳ್ಳ ನಾಟಕಗಳನ್ನು ರಚಿಸಿದ ಠಾಕೂರರು ಬಂಗಾಲಿ ನಾಟಕಕ್ಕೆ ಒಂದು ಹೊಸ ಆಯಾಮವನ್ನೇ ತಂದು ಕೊಟ್ಟರು. ಕತೆಗಾರರಾಗಿಯೂ ಪ್ರಸಿದ್ಧಿ ಪಡೆದರು ರವೀಂದ್ರರು. "ನಾಯಂಜೋರಿನ ಬಾಬುಗಳು" ಅವರ ಕಾಲದ ಉಚ್ಚಮನೆತನಗಳ ಅವನತಿಯ "ದಾರುಣಕತೆ. "ಕಾಬೂಲೀವಾಲಾ" ಹೃದಯ ಹಿಡಿಸುವಂತಹ ಮಾನವೀಯತೆಯನ್ನು ತುಂಬಿಕೊಂಡಂತಹ ಅತ್ಯಂತ ಜನಪ್ರಿಯ ಕತೆ. ರವೀಂದ್ರರ "ಗೋರಾ"ದಂತಹ ಕಾದಂಬರಿ ನಿಷ್ಠುರವಾದ ಹೊಸ ರಾಜಕೀಯ ಕ್ರಾಂತಿಯ ಸ್ವಾತಂತ್ರ್ಯದ ಅಶಾಂತಿಯನ್ನು ಹರಡಿತೆಂದು ಬಂಗಾಲೀ ಸಾಹಿತ್ಯ ವಿಮರ್ಶಕರು ಸಾರಿದ್ದಾರೆ. ಮನೆ ಮತ್ತು ಜಗತ್ತು "ನೌಕಾಘಾತ" ಮುಂತಾದ ಅತ್ಯುತ್ತಮ ಕಾದಂಬರಿಗಳಲ್ಲಿ ರವೀಂದ್ರರ ಪ್ರತಿಭೆ, ಜನಮನವನ್ನು ಅರ್ಥಮಾಡಿಕೊಂಡ ಸಹಾನುಭೂತಿ, ಅನುಕಂಪ ಎದ್ದುಕಾಣುತ್ತವೆ. ರವೀಂದ್ರನಾಥ ಠಾಕೂರ್ ಮತ್ತು ಶರಚ್ಚಂದ್ರ ಚಟ್ಟೋಪಾಧ್ಯಾಯ ಬಂಗಾಲಿ ಕಾದಂಬರಿಕಾರರಲ್ಲಿ ಸೂರ್ಯ ಚಂದ್ರರೆಂದು ಕರೆಸಿಕೊಳ್ಳುತ್ತಿದ್ದಾರೆ.

ರವೀಂದ್ರರ ಕೃತಿಗಳಲ್ಲೆಲ್ಲ ಬಹು ಹೆಚ್ಚಿನ ಪ್ರಚಾರ ಪಡೆದಿರುವುದು ಗೀತಾಂಜಲಿ; ರವೀಂ-

ನ್ನರು ತಾವು ಅವರಿಗೆ ರಚಿಸಿದ್ದ ಬಂಗಾಲೀ ಗೀತೆಗಳ ಸಂಗ್ರಹದಿಂದ ಆಯ್ದ ಒಂದುನೂರು ಗೀತೆಗಳನ್ನು ಇಂಗ್ಲೀಷಿಗೆ ಪಚನಕಾವ್ಯ, ಗದ್ಯ ಪದ್ಯವಾಗಿ ಅನುವಾದಿಸಿದ ಕೃತಿ "ಗೀತಾಂಜಲಿ"ಯಲ್ಲಿ ಭಕ್ತಿಯೇ ಪ್ರಧಾನವಾದ ಅಂಶ. ಅನುಭಾವ ಪಂಥದ ಗೀತಗಳನ್ನೊಳಗೊಂಡ ಈ ಇಂಗ್ಲೀಷ್ ಕೃತಿಯನ್ನು ಹಸ್ತಪ್ರತಿಯಲ್ಲಿ ಓದಿದ ಇಂಗ್ಲೆಂಡಿನ ಪ್ರಖ್ಯಾತ ಕವಿ ಡಬ್ಲ್ಯು. ಬಿ. ಯೇಟ್ಸ್ ಅವರಿಂದ ತೀವ್ರವಾಗಿ ಪ್ರಭಾವಿತರಾದರು. ಅವರ ಸೊಗಸಿಗೆ, ಆಳವಾದ ಭಾವಕ್ಕೆ, ವಿಚಾರ ಮತ್ತು ಅನುಭವಗಳ ಅಭಿವ್ಯಕ್ತಿಗೆ ಮಾರುಹೋದ ಯೇಟ್ಸ್ ಅನು-ಭಾವದ ದೇಶದಿಂದ ಮತ್ತೊಂದು ಹೊಸ ದನಿಯೆಂದು ರವೀಂದ್ರರನ್ನು ಮೆಚ್ಚಿಕೊಂಡರು. ಅವರಿಗೆ ನೋಬೆಲ್ ಬಹುಮಾನ ಬರಲು ಕಾರಣರಾದರು. ೧೯೧೩ರಲ್ಲಿ ರವೀಂದ್ರನಾಥ ಠಾಕೂರರಿಗೆ ಸಾಹಿ-ತ್ಯದ ನೋಬೆಲ್ ಬಹುಮಾನ ಬಂದಿತು. ಅನಂತರ "ಕವಿ ಸಮ್ರಾಟ", "ಭಾರತ ತೀರ್ಥ", ಡಾಕ್ಟ-ರೇಟ್ ಮುಂತಾದ ಪ್ರಶಸ್ತಿಗಳು ರವೀಂದ್ರರನ್ನು ಹುಡುಕಿಕೊಂಡು ಬಂದವು. ವಿಶ್ವಮಾನ್ಯತೆ ಅವ ರಿಗೂ ಅವರ ಮೂಲಕ ಭಾರತೀಯ ಸಾಹಿತ್ಯಕ್ಕೂ ದೊರಕಿತು.

ಹೀಗೆ ರವೀಂದ್ರನಾಥ ಠಾಕೂರರು ಬಾಲ್ಯದಲ್ಲಿ ತಮ್ಮ ಮನೆಯ ಸಾಂಸ್ಕೃತಿಕ ವಾತಾವರಣದಲ್ಲಿ ತಮ್ಮ ಬಾಳಿನ ಸಮಸ್ತವೂ ಸಾಧನೆಗೆ ಸ್ಫೂರ್ತಿ ಯನ್ನು ಕಂಡುಕೊಂಡರು. ಮಹರ್ಷಿ ದೇವೇಂದ್ರ ನಾಥ ಠಾಕೂರರ ಹದಿನಾಲ್ಕನೆಯ ಮಗು ವಾಗಿ ೧೮೬೧ರ ಮೇ ೭ರಂದು ಜನಿಸಿದ ರವೀಂದ್ರ ರಿಗೆ ಮನೆಯಲ್ಲಿದ್ದ ಸಂಗೀತ, ಸಾಹಿತ್ಯ, ಸ್ವಾತಂತ್ರ್ಯ ಹಾಗೂ ತತ್ವಶಾಸ್ತ್ರ, ದರ್ಶನಗಳ ಸಮನ್ವಯದ ಸಾಂಸ್ಕೃತಿಕ ವಾತಾವರಣವೇ ಇದ್ದು ಮುಂದೆ ತನ್ನ ಸಾಧನೆಗೆ ಮೂಲವಾಯಿತು. ಪ್ರಕೃತಿ-ಪ್ರೇಮ, ಶಾಂತಿ ಹಾಗೂ ಸ್ಥಿರಪ್ರಜ್ಞೆ ಪಡೆದಿದ್ದ ತಂದೆಯ ಪ್ರಭಾವ ಸ್ವತಃ ಸಾಹಿತಿ ಹಾಗೂ ಕಲಾವಿದರಾದ ಅಣ್ಣಂದಿರ ಒಡನಾಟ, ಸದಾ ಇವರ ಮನೆಯಲ್ಲಿ ನೋಡುತ್ತಿದ್ದ ಸಾಂಸ್ಕೃತಿಕ ಕೂಟಗಳ ವಿವಿಧ ನಾಟಕೋತ್ಸವ, ನಡೆಯುತ್ತಿದ್ದ ಗಾಳಿ ಬೀಸಿದ್ದ ಕಲ್ಕತ್ತೆಯ ಸುಸಂಸ್ಕೃತ ವಾತಾ ವರಣ ಇವೆಲ್ಲ ಬಾಲಕ ರವೀಂದ್ರನ ಪ್ರತಿಭೆ ಬೆಳೆಯಲು ನೆರವಾದವು. ಇಂಗ್ಲೆಂಡಿನಲ್ಲಿ ವಿದ್ಯಾ ಭ್ಯಾಸಕ್ಕಾಗಿ ಕಳೆದ ಕಾಲ ಕೂಡ ಸಾಹಿತ್ಯದ ಕಡೆಗೆ ಪಕ್ಷಿನ ಒಲವಿದ್ದ ರವೀಂದ್ರರಿಗೆ ಸಾಹಿತಿ ಯಾಗಲು ಅವಕಾಶವೊದಗಿಸಿತು. ಭಾರತದ ಉತ್ತರ ಹಾಗೂ ದಕ್ಷಿಣ ಪ್ರದೇಶಗಳಲ್ಲಿ ಕಳೆದ ಕಾಲವೂ ರವೀಂದ್ರರಲ್ಲಿ ವಿಶಾಲ ದೃಷ್ಟಿಯನ್ನು ಮೂಡಿಸಿತು. ಮನೆಯಲ್ಲಿ ನಡೆಯುತ್ತಿದ್ದ ಗೋಷ್ಠಿ ಗಳಲ್ಲಿ ಸಾಹಿತ್ಯ ವಿಚಾರದ ಚರ್ಚೆ, ಧರ್ಮ ಸಿದ್ಧಾಂತ ಗಳ ಬಗ್ಗೆ ಆಳವಾದ ವಿವೇಚನೆ ಇವು ರವೀಂದ್ರ ರಲ್ಲಿ ವಿಚಾರಶೀಲತೆಯನ್ನು ಬೆಳೆಸಿದವು. ನಿತ್ಯ ಸಂಗೀತೋತ್ಸವ ಕಾತನಲ್ಲಿ ಗೀತ ಹಾಗೂ ಸಂಗೀತಗಳ ನೆಲೆಯಾಗಿ ರೂಪುಗೊಂಡಿತು. ಮುಂದೆ ರವೀಂದ್ರನಾಥ ಠಾಕೂರರು ಈ ಎಲ್ಲ ಕ್ಷೇತ್ರಗಳಲ್ಲಿಯೂ ಅಪರೂಪವೂ ಅಪೂ-ರ್ವವೂ ಆದ ಸಾಧನೆ ನಡೆಸಿ ಸಿದ್ಧಿ ಪಡೆದರು. ಅವರ ಸಾಧನಾ ಎಂಬ ತತ್ವದರ್ಶನ ಕೃತಿ ಸಮ ಸ್ತವು ಕೃತಿಯಾಗಿದೆ. ಹಲವಾರು ಕಾದಂಬರಿ ಗಳು, ಕತೆಗಳು, ಹದಿನೈದು ನಾಟಕಗಳು ಹಾಗೂ ಸುಮಾರು ೧೬೦೦ ಸುಂದರ ಕವಿತೆಗಳನ್ನು ರಚಿಸಿದ್ದೇ ಅಲ್ಲದೆ ತಮ್ಮದೇ ಸಂಗೀತ ಶೈಲಿಯನ್ನು ಸ್ಥಾಪಿಸಿ "ರವೀಂದ್ರ ಸಂಗೀತ"ದ ಸಂಪ್ರದಾಯಕ್ಕೆ ಮೂಲಪುರುಷರಾದರು. ತಮ್ಮದೇ ಆದ ಚಿತ್ರ ಶೈಲಿಯನ್ನು ರೂಪಿಸಿಕೊಂಡು ಚಿತ್ರಕಾರ-ರಾಗಿಯೂ ಪ್ರಸಿದ್ಧರಾದರು. ಕಲಾವಿದರಿಗೆ, ಸಂಗೀತಗಾರರಿಗೆ ವಿದ್ಯಾರ್ಜನೆ ಮಾಡುವವರಿ-ಗಾಗಿ "ವಿಶ್ವಭಾರತಿ"ಯ ಸ್ಥಾಪಕರಾದರು. ನಿಸರ್ಗದ ನೆರಳಿನಲ್ಲೇ ಮಾನವ ಬೆಳೆಯಬೇಕೆಂಬ ತತ್ವದ ಆಧಾರದ ಮೇಲೆ ಶಾಂತಿನಿಕೇತನವನ್ನು ಸ್ಥಾಪಿಸಿದರು. ವಿಶ್ವಮಾನ್ಯತೆಯನ್ನು ಪಡೆದ ರವೀಂದ್ರರು ೧೯೪೧ರ ಅಗಸ್ಟ್ ೭ ರಂದು ತೀರಿಕೊಂಡಾಗ ಜಗತ್ತು ಒಬ್ಬ ಮಹಾಪುರುಷ ನನ್ನು ಕಳೆದುಕೊಂಡಿತು.

★

ಕೆಲವು ಜೆನ್ ಪ್ರಸಂಗಗಳು

ಪಾಂಡುರಂಗ ವಿಠ್ಠಲ

ಬುದ್ಧ ನಿಷ್ಕಾಮ ಕರ್ಮ, ಪ್ರೀತಿ ಹಾಗೂ ಧ್ಯಾನ ನಿರ್ವಾಣಕ್ಕೆ ಮಾರ್ಗಗಳೆಂದ. ಆದರೆ ಬೌದ್ಧ ಧರ್ಮದ ಮುಖ್ಯ ಶಾಖೆ ಜೆನ್ ಧ್ಯಾನವನ್ನು ಅತಿ ಮುಖ್ಯವೆಂದು ಪರಿಗಣಿಸಿತು. ಇಲ್ಲಿ ವ್ಯವಹಾರಕ್ಕಿಂತ ವ್ಯಕ್ತಿ ಮುಖ್ಯ. ತನ್ನ ತಾನರಿತವ ಬುದ್ಧನಿಗೆ ಸಮ.

ಬೋಧಿ ಧರ್ಮ (ಕ್ರಿ. ಶ. ೫೨೦) ಚೀನಕ್ಕೆ ಹೋಗಿ ಸ್ಥಾಪಿಸಿದ ಧ್ಯಾನ ಪಂಥ 'ಚಾನ್' (ಧ್ಯಾನ). ಅದು ಇಡೀ ಚೀನವನ್ನು ಆವರಿಸಿ ಜಪಾನಿಗೆ ಕಾಲಿಟ್ಟಿದ್ದು ಕ್ರಿ. ಶ. ೧೨ನೆಯ ಶತಮಾನದಲ್ಲಿ. ಎಲ್ಲ ಜೀವಿಗಳಲ್ಲೂ ಬುದ್ಧ ಚೇತನ ಅಡಗಿದ್ದು ಅದರ ವಿಕಾಸಕ್ಕೆ ಹೊರಗಿನ ಯಾವುದೂ ನೆರವಾಗದು; ಆತ್ಮನಿರೀಕ್ಷಣೆಯ ಒಳನೋಟವನ್ನು ಧ್ಯಾನಾರೂಢನಾಗಿ ಅರಿತರೆ ಅದನ್ನು ಸಾಕ್ಷಾತ್ಕರಿಸಬಹುದು—ಎಂಬುದು ಜೆನ್ ತತ್ತ್ವದ ತಿರುಳು. ಜೆನ್ ಗುರುಗಳು ತಮ್ಮನ್ನು ಬೌದ್ಧಾನುಯಾಯಿಗಳೆಂದುಕೊಳ್ಳುವುದಿಲ್ಲ—ಬುದ್ಧಮಿತ್ರರು ಅವರು.

ಈ ತತ್ತ್ವ ಯೋಧರಿಗೆ ಅಮಿತ ಚೇತನವನ್ನು ತಂದುಕೊಟ್ಟಿತು. ಸಾಹಿತ್ಯ-ಚಿತ್ರ-ನೃತ್ಯ-ತೋಟಗಾರಿಕೆ ಎಲ್ಲ ಕಲೆಗಳನ್ನೂ ಬೆಳೆಸಿತು. ಈ ತತ್ತ್ವವನ್ನು ಅಳವಡಿಸಿಕೊಂಡವರಿಂದ ಹೆದರಿಕೆ, ಸಂಶಯ, ಗೀಳು, ದುರಾಸೆಗಳು ದೂರ. ಆನಂದದ ಶಾಂತಿಯಲ್ಲಿ ಅವರ ಜೀವನ ಅರಳುತ್ತದೆ. ಅಂಥವರ ಕತೆಗಳು ಇವು!

೧

ಜೆನ್ ಪ್ರವೀಣ ಶೆಂಗಾಯಿ ಬಳಿ ಕೆಲವರು ಶಿಷ್ಯರಿದ್ದರು. ಅವರಲ್ಲೊಬ್ಬ ದೇವಸ್ಥಾನದ ಪ್ರಾಕಾರವನ್ನು ಹಾರಿ ರಾತ್ರಿಯನ್ನು ಮಜವಾಗಿ ಕಳೆದು ಬರುತ್ತಿದ್ದ.

ಒಂದು ರಾತ್ರಿ ಶೆಂಗಾಯಿ ಎದ್ದು ನೋಡುವಾಗ ಇವನ ಈ ಚಟ ತಿಳಿಯಿತು. ಆತ ಗೋಡೆ ಹಾರಲು ಶಿಷ್ಯ ಬಳಸಿದ್ದ ಎತ್ತರದ ಕುರ್ಚಿಯನ್ನು ಪಕ್ಕಕ್ಕಿಟ್ಟು ತಾನೇ ಆ ಜಾಗದಲ್ಲಿ ನಿಂತ.

ತಿರುಗಾಡಿದ ಶಿಷ್ಯ ಹಿಂದಿರುಗಿದ. ಶೆಂಗಾಯಿ ಕುರ್ಚಿಯ ಬದಲು ನಿಂತಿರುವುದು ತಿಳಿಯದೆ ಗುರುವಿನ ತಲೆಯ ಮೇಲೆಯೆ ಕಾಲಿಟ್ಟು ಇಳಿದ. ತಾನೇನು ಮಾಡಿದನೆಂದು ಗೊತ್ತಾದೊಡನೆ ಚಕಿತನಾದ.

"ಬೆಳಗ್ಗೆ ತುಂಬ ಚಳಿ ಬಿದ್ದಿರುತ್ತೆ. ಶೀತವಾಗದಂತೆ ನೋಡಿಕೋ ತಮ್ಮಾ" ಎಂದ, ಶೆಂಗಾಯಿ. ಆ ಶಿಷ್ಯ ಪುನಃ ಎಂದೂ ರಾತ್ರಿ ಹೊರಹೋಗಲಿಲ್ಲ.

೨

ಪ್ರಸಿದ್ಧ ಖಡ್ಗವೀರನ ಮಗನ ಹೆಸರು ಮಟ ಜುರೋ ಯಗ್ಯು. ತುಂಬ ಸಾಧಾರಣನಾಗಿದ್ದ ಇವನು ಎಂದೂ ಪ್ರವೀಣನಾಗುವುದಿಲ್ಲ ಎಂದು ಅರಿತ ತಂದೆ ಇವನನ್ನು ಮನೆಯಿಂದ ಹೊರ ಹಾಕಿದ. ಮಗ ನೊಂದು, ಫುಟಾರಾ ಪರ್ವತ ದಲ್ಲಿ ವಾಸಿಸುತ್ತಿದ್ದ ಬಾಂಜೋ ಎಂಬ ಪ್ರವೀಣ ನಲ್ಲಿಗೆ ಹೋದ. ಆತನೂ, "ನೀನು ತುಂಬ ಸಾಮಾನ್ಯ; ನನ್ನ ಹತ್ತಿರ ಕಲಿಯಲು ಅವಶ್ಯವಾದ ಯೋಗ್ಯತೆ ನಿನ್ನಲ್ಲಿಲ್ಲ," ಎಂದ.

ಪಟ್ಟು ಬಿಡದ ತರುಣ, "ತೀರ ಕಷ್ಟಪಟ್ಟು ಕಲಿತರೆ ಪ್ರವೀಣನಾಗಲು ಎಷ್ಟು ವರ್ಷ ಬೇಕು?" ಎಂದು ಕೇಳಿದ.

"ಇಡೀ ಜೀವಮಾನ," ಬಾಂಜೊ ಹೇಳಿದ.

"ಎಷ್ಟೇ ಪರಿಶ್ರಮವಾದರೂ ನೀವು ಕಲಿಸು ವುದಾದರೆ ನಿಮ್ಮ ಸೇವಕನಾಗುತ್ತೇನೆ. ಹಾಗಿದ್ದರೆ ಎಷ್ಟು ವರ್ಷ ಬೇಕಾದೀತು ?"

"ಹತ್ತು ವರ್ಷ," ಕನಿಕರದಿಂದ ಬಾಂಜೋ ಹೇಳಿದ.

"ನನ್ನ ತಂದೆಗೆ ವಯಸ್ಸಾಯ್ತು. ಅವನನ್ನು ನೋಡಿಕೋಬೇಕು. ಇನ್ನೂ ಹೆಚ್ಚು ಕಷ್ಟಪಟ್ಟರೆ ಬೇಗ ಆಗದೆ?"

"ಮೂವತ್ತು ವರ್ಷ."

"ಏನು! ಮೊದಲು ಹತ್ತು ವರ್ಷ ಹೇಳಿ ಈಗ ಮೂವತ್ತೆನ್ನುವಿರಿ. ಈ ವಿದ್ಯೆಯನ್ನು ಅತಿ ಸ್ವಲ್ಪ ಕಾಲದಲ್ಲಿ ಕಲಿಯುವಂತಿದ್ದರೆ ಎಂಥ ತೊಂದರೆ ಗಳನ್ನೂ ಸಹಿಸಿಯೇನು ?"

"ಹಾಗಿದ್ದರೆ ನೀನು ಎಪ್ಪತ್ತು ವರ್ಷ ನನ್ನ ಸೇವೆ ಮಾಡಬೇಕು. ನಿನ್ನಂಥ ಆತುರಗಾರನಿಗೆ ನಿಜವಾದ ವಿದ್ಯೆ ಹತ್ತೋದು ತುಂಬ ತಡವಾಗಿ."

ತನ್ನ ಅಸಹನೆಗೆ ಗುರು ಸಿಟ್ಟಾದನೆಂದು ಅರಿತ ಮಟಜುರೋ "ಆದೀತು" ಎಂದು ನಿಂತ. ಖಡ್ಗ ಗುರಾಣಿ ರಕ್ಷಣೆಯ ಪಟ್ಟುಗಳ ಬಗ್ಗೆ ಮಾತಾ ಡುವುದಿರಲಿ, ಮುಟ್ಟಲೂಬಾರದೆಂದು ಗುರು ಹೇಳಿದ. ಖಡ್ಗವಿದ್ಯೆಯ ಬಗ್ಗೆ ಅಕ್ಷರವನ್ನೂ ಯೋಚಿಸದೆ ಗುರುವಿಗೆ ಅಡುಗೆ ಮಾಡಿ ಪಾತ್ರೆ ತೊಳೆದು, ಹಾಸಿಗೆ ಹಾಸಿ, ಮನೆ ಗುಡಿಸಿ, ತೋಟ ನೋಡಿಕೊಳ್ಳುತ್ತ ಮಟಜುರೋ ಮೂರು ವರ್ಷ ಕಳೆದ. ಭವಿಷ್ಯವನ್ನು ನೆನೆದು ದುಃಖಿತನಾದರೂ ಸೇವೆಯಲ್ಲಿ ಲೋಪಮಾಡಲಿಲ್ಲ.

ಒಂದು ದಿನ ಬೆಕ್ಕಿನಂತೆ ಒಂದೆ ನುಸುಳಿ ಬಂದ ಬಾಂಜೋ ಒಂದು ಮರದ ಕತ್ತಿಯಿಂದ ಬಲ ವಾದ ಹೊಡೆತ ಕೊಟ್ಟ.

ಮರುದಿನ ಮಟಜುರೋ ಅನ್ನ ಮಾಡುತ್ತಿರು ವಾಗ ತೀರ ಅನಿರೀಕ್ಷಿತವಾಗಿ ಇನ್ನೊಂದು ಪೆಟ್ಟು ಬಿತ್ತು.

ಅನಂತರ ಮಟಜುರೋ ಹಗಲೂ ರಾತ್ರಿ ಅನಿರೀಕ್ಷಿತವಾಗಿ ಬೀಳುವ ಪೆಟ್ಟುಗಳಿಂದ ತನ್ನನ್ನು ರಕ್ಷಿಸಿಕೊಳ್ಳಬೇಕಾಯಿತು. ಆತ ದಿನದ ಪ್ರತಿ ಕ್ಷಣವೂ ಬಾಂಜೋನ ಕತ್ತಿಯ ರುಚಿಯನ್ನು ಕುರಿತೇ ಯೋಚಿಸತೊಡಗಿದ.

ಈಗ ಅವನು ಎಷ್ಟು ಬೇಗ ಕಲಿಯಲು ಆರಂಭಿ ಸಿದನೆಂದರೆ, ಗುರು ಈಗ ಸಂತೋಷದಿಂದ ನಕ್ಕ. ಶೀಘ್ರದಲ್ಲೇ ಮಟಜುರೋ ಆ ನಾಡಿನಲ್ಲೆಲ್ಲ ಅತಿ ದೊಡ್ಡ ಖಡ್ಗವೀರನಾದ.

೩

ಜೆನ್ ಕಲಿಯುತ್ತಿದ್ದ ತರುಣ ಯಮಾಓಕಾ ಟೆಷ್ಷು ಒಬ್ಬರಾದ ಮೇಲೊಬ್ಬರಂತೆ ಅನೇಕ ಗುರು ಗಳನ್ನು ನೋಡಿದ. ಕೊನೆಗೆ ದೊಕು ಆನ್ ಬಳಿ ಬಂದ. ಇದುವರೆಗೆ ಪಡೆದ ಜ್ಞಾನವನ್ನು ತೋರಿಸು ವಂತೆ ಹೀಗೆ ಹೇಳಿದ: "ಬುದ್ಧ, ಮನಸ್ಸು, ಭಾವ ನಾತ್ಮಕ ಜೀವಿಗಳು ಎಲ್ಲ ನಿಜವಾಗಿ ಇಲ್ಲ. ಶೂನ್ಯವೇ ಪ್ರಕೃತಿಯ ನಿಜ ಸ್ವಭಾವ. ನಿಜವಾಗಿ ಸಾಕ್ಷಾ ತ್ಕಾರವೆಂಬುದಾಗಲಿ ಭ್ರಮೆಯಾಗಲಿ ಇಲ್ಲ. ಸಂತನಾಗಲಿ ಸಾಮಾನ್ಯನಾಗಲಿ ಇಲ್ಲ. ಯಾರೂ ಏನನ್ನಾದರೂ ಕೊಡುವುದೂ ಸುಳ್ಳು, ಪಡೆಯು ವುದೂ ಸುಳ್ಳು."

ದೊಕು ಆನ್ ಶಾಂತವಾಗಿ ತನ್ನ ಉದ್ದ ಬಿದಿ ರಿನ ಕೊಳವೆಯಲ್ಲಿ ಹೊಗೆ ಸೇದುತ್ತ ಎಲ್ಲ ಕೇಳಿದ; ಆದರೆ ಏನೂ ಹೇಳಲಿಲ್ಲ. ಇದ್ದಕ್ಕಿದ್ದಂತೆ ತನ್ನ ಬಿದಿ ರಿನ ಕೊಳವೆಯಿಂದ ಟೆಷ್ಷುನನ್ನು ಬಲವಾಗಿ ಬಡಿದ. ತರುಣ ಸಾಧುವಿಗೆ ತಡೆಯಲಾಗದ ಸಿಟ್ಟು ಬಂತು.

ಆಗ ದೊಕು ಅನ್ ಕೇಳಿದ, "ಏನೂ ಇಲ್ಲದೆ ಎಲ್ಲವೂ ಶೂನ್ಯವಾಗಿರುವಾಗ, ಈ ಸಿಟ್ಟು ಎಲ್ಲಿಂದ ಬಂತು?"

೪

ಗಾಸನ್ ತನ್ನ ಶಿಷ್ಯರಿಗೆ ಬೋಧಿಸುತ್ತ ಹೀಗೆ ಹೇಳಿದ: "ಕೆಲವರು ಅಹಿಂಸೆ ಬೋಧಿಸುತ್ತ ಜೀವಿಗಳನ್ನು ಕೊಲ್ಲದೆ ಇರುವುದೇನೊ ಸರಿಯೆ. ಪ್ರಾಣಿಗಳನ್ನಷ್ಟೇ ಅಲ್ಲ ಕೀಟಗಳನ್ನೂ ರಕ್ಷಿಸಬೇಕೆನ್ನುವುದು ಒಳ್ಳೆಯದು. ಆದರೆ ಸಮಯವನ್ನು ಕೊಲ್ಲುವವರ ಬಗ್ಗೆ? ಯಾರು ಸಂಪತ್ತನ್ನು ಧ್ವಂಸ ಮಾಡುತ್ತಿದ್ದಾರೊ ಯಾರು ದೇಶದ ಭವಿಷ್ಯವನ್ನೇ ನಾಶ ಮಾಡುತ್ತಿದ್ದಾರೊ ಅವರ ಬಗ್ಗೆ? ನಾವು ಇವರನ್ನು ಗಮನಿಸದೆ ಹೋಗಬಾರದು. ಇನ್ನು, ಸ್ವತಃ ಜ್ಞಾನಿಯಾಗದೆ, ಸತ್ಯ ಸಾಕ್ಷಾತ್ಕಾರ ಮಾಡಿಕೊಳ್ಳದೆ ಇತರರಿಗೆ ಉಪದೇಶಕೊಡುವವರ ಬಗ್ಗೆ? ಅವರು ಬೌದ್ಧ ತತ್ವವನ್ನೆ ಕೊಲ್ಲುತ್ತಿದ್ದಾರೆ!"

೫

ಒಬ್ಬ ಜೈನ ಗುರುವಿನ ಹತ್ತಿರ ಇಪ್ಪತ್ತು ಸಂನ್ಯಾಸಿಗಳು ಮತ್ತು ಎ ಶುನ್ ಎಂಬ ಸಂನ್ಯಾಸಿನಿ ಧ್ಯಾನವನ್ನು ಅಭ್ಯಾಸ ಮಾಡುತ್ತಿದ್ದರು.

ಎ. ಶುನ್ ತುಂಬ ಲಾವಣ್ಯವತಿ. ತಲೆ ಬೋಳಿಸಿ ಸಾದಾ ಉಡುಪು ಧರಿಸಿದ್ದರೂ ಅವಳ ಸೌಂದರ್ಯ ಕುಂದಿರಲಿಲ್ಲ. ಕೆಲವು ಸಂನ್ಯಾಸಿ ಶಿಷ್ಯರು ಗುಪ್ತವಾಗಿ ಅವಳಲ್ಲಿ ಮೋಹಗೊಂಡರು. ಒಬ್ಬನಂತೂ ಅವಳಿಗೆ ಪ್ರೇಮಪತ್ರ ಬರೆದು ಗುಟ್ಟಾಗಿ ತನ್ನನ್ನು ಭೇಟಿಯಾಗುವಂತೆ ಕೇಳಿದ.

ಎ. ಶುನ್ ಉತ್ತರ ನೀಡಲಿಲ್ಲ. ಮರುದಿನ ಗುರು ಶಿಷ್ಯರಿಗೆ ಉಪದೇಶ ನೀಡಿ ಆದ ನಂತರ ಎದ್ದು ನಿಂತಳು. ತನಗೆ ಪತ್ರ ಬರೆದವನನ್ನು ನಿರ್ದೇಶಿಸಿ ಹೇಳಿದಳು, "ನೀನು ನನ್ನನ್ನು ಅಷ್ಟೊಂದು ಪ್ರೀತಿಸುತ್ತಿರುವಿಯಾದರೆ ಬಾ; ಈಗ ನನ್ನನ್ನು ಅಪ್ಪಿಕೋ!" ✡



ಸ್ವಾಭಿಮಾನ

ಸೂರ್ಯನ ಹತ್ತಿರ "ಸರ್ಪವಿದೆ" ಎಂಬುದರ ಬಗ್ಗೆ ಸಂಶೋಧನೆಯು ಪುಟಗಳೇ ಆರುನೂರರಷ್ಟಕ್ಕೆ ಬಂದಾಗ ಎಪ್ಪತ್ತಕ್ಕೂ ಮಿಗಿಲಾದ ವಯಸ್ಸಿನ ಗಡಿದಾಟಿದ್ದ ಸಂಶೋಧಕರಿಗೆ ಹಣದ ಮುಗ್ಗಟ್ಟು ನೂರ್ಮಡಿಸಿತು. ದಿಕ್ಕುತೋಚದೆ ಶಿವರಾಮ ಕಾರಂತರಿಗೆ ಈ ಬಗ್ಗೆ ಪತ್ರ ಬರೆದು ತಿಳಿಸಿದಾಗ ಮರುಟಪಾಲಿಗೇ ಅವರು ಐದುನೂರು ರೂಪಾಯಿಗಳನ್ನು ಮನಿಆರ್ಡರ್ ಮೂಲಕ ಕಳುಹಿಸಿ, ಇನ್ನೂ ಐನೂರು ರೂಪಾಯಿಗಳನ್ನು ಶೀಘ್ರದಲ್ಲಿಯೇ ಕಳುಹಿಸುವುದಾಗಿ ತಿಳಿಸಿದರು. ದೀರ್ಘಕಾಲದ ಸ್ನೇಹವಿದ್ದರೂ ಸ್ವಾಭಿಮಾನಕ್ಕೆ ಕುಂದು ಬರುವುದೆಂದು ಅವರು ಹಣವನ್ನು ತೆಗೆದುಕೊಳ್ಳದೆ ಯಾವುದಾದರೂ ಪ್ರಕಾಶನದ ನೆರವನ್ನು ಕೊಡಿಸಿಕೊಡಲು ವಿನಂತಿಸಿಕೊಂಡರಂತೆ. ಕಾರಂತರು ಇದರಿಂದ ಕೊಂಚವೂ ಕುಪಿತರಾಗದೆ ಮೈಸೂರು ವಿಶ್ವವಿದ್ಯಾನಿಲಯದ 'ದೇಜಗೌ'ರವರಿಗೆ ಒಂದು ಪತ್ರ ಬರೆದು ಈ ಸಂಶೋಧನ ಗ್ರಂಥವನ್ನು ಪ್ರಕಟಿಸಲು ಒಪ್ಪಿಗೆ ಕೊಡಿಸಿದರಂತೆ. ಇಂತಹ ಸ್ವಾಭಿಮಾನಿ ಸಂಶೋಧಕ ಶಂ. ಬಾ. ಅವರೇ ಎಂಬುದು ಇದನ್ನೋದಿದವರಿಗೆ ಈಗಾಗಲೇ ಗೊತ್ತಾಗಿರಬಹುದು.

–ಕೃ. ನಾರಾಯಣರಾವ್



ಮೂಲ: **ರಾಮಚಂದ್ರ ಮೌಳಿ** ಕನ್ನಡಕ್ಕೆ: **ಅಜ್ಜಂಪುರ ಜಿ. ಸೂರಿ**

ಮತ್ತೆ ಆ ಕಡೆ ನೋಡಿದೆ.

ಆತ ನನ್ನಂತೆಯೇ ಕುರ್ಚಿಯ ಮೇಲೆ ಕುಳಿತು ನಿಶ್ಶಬ್ದವಾಗಿ ಆಕಾಶದತ್ತ ನೋಡುತ್ತಿದ್ದ.

ಕೂಡಲೆ ನನ್ನ ದೃಷ್ಟಿಯೂ ಅತ್ತ ಹರಿಯಿತು.

ನೀಲಿ ಆಕಾಶದಲ್ಲಿ ಒಂದು ಒಂಟಿ ಹಕ್ಕಿ ಮೋಡಗಳತ್ತ ಹಾರುತ್ತಿತ್ತು. ವಿಶಾಲವಾದ ಆಕಾಶ. ಒಂಟಿಯಾಗಿ ಹಾರುವ ಹಕ್ಕಿ.

ಏಕೋ ಮನಸ್ಸು ಚುರುಗುಟ್ಟಿತು. ಮತ್ತೆ ಆತನನ್ನು ಕುತೂಹಲದಿಂದ ನೋಡಿದೆ. ಆತನ ಕಣ್ಣಿನಲ್ಲಿ ಬರೀ ಶೂನ್ಯ ದೃಷ್ಟಿ! ಮುಖ ಬಿಳಿಚಿಕೊಂಡಿತ್ತು.

ಆತ ಕೈಯಲ್ಲಿದ್ದ ಸಿಗರೇಟನ್ನು ಎಸೆದು ಹೊಸದನ್ನು ಹಚ್ಚಿಕೊಂಡು ಒಂದೆರಡು ದಂ ಎಳೆದು ಹಾಗೆಯೇ ಕುಳಿತ. ಅದು ಬೆರಳಿನ ಸಂದಿಯಲ್ಲಿ ಹಾಗೆಯೇ ಬೂದಿಯಾಗುತ್ತಿತ್ತು. ಉರಿದು ಉಳಿದ ಸಿಗರೇಟಿನ ತುಂಡನ್ನು – ಸತ್ತ ಮಗುವಿನ ಕಡೆ ತಾಯಿ ನೋಡುವಂತೆ – ದೀನವಾಗಿ ನೋಡಿ ಆ ಮೇಲೆ ಎದ್ದು ಹೊರಟುಬಿಟ್ಟ.

ಯಾವಾಗಲೂ ಮೌನವಾಗಿರುತ್ತಾನೆ...... ಯಾರೊಂದಿಗೂ ಮಾತನಾಡುವುದಿಲ್ಲ.

ಆತನ ಹೆಸರು ಕನಕರಾಜು.

ಕನಕರಾಜು ನನ್ನ ಪಕ್ಕದ ರೂಮಿನವನು. ಆವನಿಗೂ ನನಗೂ ಯಾವ ಪರಿಚಯವಾಗಲಿ, ಸ್ನೇಹವಾಗಲಿ ಇರಲಿಲ್ಲ.

ಆತ ನನಗೆ ಗೊತ್ತು ಅಷ್ಟೆ!

ಹೊಸದಾಗಿ ವರ್ಗಾಯಿಸಲ್ಪಟ್ಟು ಅದೇ ತಾನೆ ಊರಿಗೆ ಬಂದಿದ್ದೆ. ಹೀಗಾಗಿ ನನಗೆ ಯಾರ ಪರಿಚಯವೂ ಇರಲಿಲ್ಲ. ಬ್ರಹ್ಮಚಾರಿ, ಒಬ್ಬಂಟಿಗ, ಮೇಲಾಗಿ ಹೊಸ ಪರಿಸರ. ಊಟ, ತಿಂಡಿ, ಸ್ನಾನ, ಎಲ್ಲವೂ ಆಗ ನನಗೆ ಸಮಸ್ಯೆಯೆ ಆಗಿತ್ತು.

ಅದೃಷ್ಟವಶಾತ್ ನನಗೆ ಒಂದು ಅನುಕೂಲವಾಯಿತು. ನಮ್ಮ ಆಫೀಸಿನ ಎದುರಿನಲ್ಲೇ ಒಂದು ಹೋಟೆಲು ಇತ್ತು. ಆ ಹೋಟೆಲಿನ ಮಾಲೀಕರು ಹೊಟೆಲಿನ ಹಿಂಬದಿಯಲ್ಲಿ ವಾಸವಾಗಿದ್ದರು. ಅವರ ಮನೆಗೆ ಹೊಂದಿಕೊಂಡು ಎರಡು ರೂಮುಗಳಿದ್ದವು. ನಾನು ಒಂದು ರೂಮನ್ನು ಬಾಡಿಗೆಗೆ ಹಿಡಿದೆ, ಮತ್ತೊಂದು ರೂಮಿನಲ್ಲಿ ಕನಕರಾಜು ವಾಸವಾಗಿದ್ದರು. ಆತ ಅಲ್ಲಿಗೆ ಬಂದು ನಾಲ್ಕು ತಿಂಗಳಾಗಿತ್ತಂತೆ. ನಾನಿದ್ದ ಆಫೀಸಿನ ಪಕ್ಕದ ಕಂಪನಿಯೊಂದರಲ್ಲಿ ಮೊದಲ ವರ್ಗದ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದಾರೆಂದೂ, ಆ ಕೆಲಸಕ್ಕೆ ಇತ್ತೀಚೆಗೆ ಬಂದು ಸೇರಿದ್ದಾರೆಂದೂ ಅನಂತರ ತಿಳಿಯಿತು.

ನನಗಿರುವ ಹವ್ಯಾಸಗಳು ಮೂರು. ಒಂದು ಪುಸ್ತಕ ಓದುವುದು; ಎರಡು, ತಲೆಗೇನಾದರೂ ಹೊಳೆದರೆ ಕಥೆ ಬರೆಯುವುದು; ಮೂರು ಅಕ್ಕಪಕ್ಕದವರ ಗೆಳೆತನ ಬೆಳೆಸಿ ನಗುನಗುತ್ತಾ ಹಾಯಾಗಿದ್ದುಬಿಡುವುದು.

ಈ ಎಲ್ಲ ಅಭಿರುಚಿಗಳೂ ಮನೆಯ ಬಳಿಯೇ ದೊರಕುತ್ತಿದ್ದುದರಿಂದ ಹೋಟೆಲ್ ಮಾಲೀಕ

ರಾಮರಾಯರ ಪರಿಚಯವಾಗಿ ಸ್ನೇಹವಾಗಿ, ಆತ್ಮೀಯತೆ ಬೆಳೆದಿತ್ತು.

ನಾನು ಅಲ್ಲಿಗೆ ಬಂದು ಎರಡು ತಿಂಗಳಾದರೂ ಕನಕರಾಜುವಿನ ಗೆಳೆತನ ಮಾಡಲಾಗಲಿಲ್ಲ. ಒಂದು ಸಾರಿ,

"ನಿಮ್ಮ ಹೆಸರೇನು ಸಾರ್?" ಎಂದು ಕೇಳಿದೆ.

"ಕನಕ ರಾಜು," ಎಂದಷ್ಟೇ ಆತ ಹೇಳಿದ.

"ಒಂಟಿಯಾಗಿದ್ದೀರಾ ಸಾರ್?" ಎಂದು ದಡ್ಡ ಪ್ರಶ್ನೆ ಕೇಳಿದೆ.

"ಹೌದು," ಎಂದು ಸಮಾಧಾನ ಹೇಳಿ ಹೊರಟುಹೋಗಿದ್ದ.

ನಿಜ ಹೇಳಬೇಕೆಂದರೆ ನಾನೇ ಸ್ನೇಹ ಹಸ್ತ ನೀಡಿದರೂ ಅವನು ಬೇಕೆಂದೇ ದೂರವಾಗಿ ಹೋಗುತ್ತಿದ್ದ. ಕೆಲವರು ಒಂಟಿಯಾಗಿರುವುದರಲ್ಲೇ ಬ್ರಹ್ಮಾನಂದವನ್ನು ಅನುಭವಿಸುತ್ತಾರೆ. ಕನಕರಾಜು ಕೂಡ ಅಂಥವರಲ್ಲಿ ಒಬ್ಬನಿರಬಹುದೆಂದು ಆತನ ಸ್ನೇಹ ಬೆಳೆಸುವ ಪ್ರಯತ್ನ ಕೈಬಿಟ್ಟೆ.

ಆದರೂ ಕನಕರಾಜು ಒಂಟಿಯಾಗಿ ಕುಳಿತು ನೀಲಿಯ ಆಕಾಶವನ್ನು ದಿಟ್ಟಿಸುವಾಗಲೆಲ್ಲ ಆತನ ಹೃದಯದಲ್ಲೇನೋ ಬಿರುಗಾಳಿ ಬೀಸುತ್ತಿದೆ ಎನ್ನಿಸುತ್ತಿತ್ತು. ಆಗ ಆತ ಶಿಲುಬೆಗೇರಿದ್ದ ಕ್ರಿಸ್ತನ ನಿರ್ಲಿಪ್ತ ಮುಖಮುದ್ರೆ ಹೊತ್ತು ಕುಳಿತಿರುತ್ತಿದ್ದ.

ಹೋಟೆಲ್ ಮಾಲೀಕರ ಮಗಳು ಉಮಾ ಎಸ್. ಎಸ್. ಎಲ್. ಸಿ. ಕಟ್ಟಿದ್ದಳು. ಬಿಡುವಾದಾಗಲೆಲ್ಲ ನನ್ನ ಬಳಿ ಲೆಕ್ಕ ಹೇಳಿಸಿಕೊಳ್ಳುತ್ತಿದ್ದಳು. ಹಾಗಾಗಿ ಆ ಮನೆಯಲ್ಲಿನ ಉಳಿದವರೆಲ್ಲರಿಗಿಂತ ಉಮಳ ಹತ್ತಿರ ಹೆಚ್ಚು ಸಲಿಗೆಯಿಂದಿದ್ದೆ.

"ಕನಕರಾಜು ಎಂ. ಎ. ಓದಿದಾರಂತೆ; ನಿಮಗೆ ಗೊತ್ತಾ?" ಎಂದಳು ಉಮಾ ಒಮ್ಮೆ ನನ್ನ ಹತ್ತಿರ.

"ಹೌದಾ?" ಎಂದೆ ನಾನು. ನಿಜಕ್ಕೂ ಕನಕರಾಜು ಎಂ. ಎ. ಓದಿರಬಹುದೆಂದು ನಾನು ಭಾವಿಸಿರಲಿಲ್ಲ.

"ನೀವು ಬರೋದಕ್ಕೆ ಮೊದಲು ನನಗೊಂದು ಲೆಕ್ಕಹೇಳಿಕೊಡು ಅಂತ ಅವರನ್ನು ಕೇಳಿದ್ದೆ" ಎಂದಳು ಉಮಾ.

"ಏನೆಂದರು?"

"ಹೇಳೊಲ್ಲ; ಹೇಳಿಕೊಡೋಲ್ಲ..." ವಾಕ್ಯವನ್ನು ಅರ್ಧಕ್ಕೆ ನಿಲ್ಲಿಸಿ ಮನೆಯ ಒಳಕ್ಕೆ ಓಡಿಹೋದಳು.

ಆಕೆ ಹೋದ ಬಳಿಕ ಕನಕರಾಜು ತನ್ನ ರೂಮಿಗೆ ಹೋಗುತ್ತಿರುವುದನ್ನು ಕಂಡೆ.

ಉಮಳ ಮಾತನ್ನೇ ಮೆಲುಕು ಹಾಕುತ್ತಾ ಆತನನ್ನೊಮ್ಮೆ ದೃಷ್ಟಿಸಿ ನೋಡಿದೆ. ನಾನು ಎಷ್ಟೋ ಸಾರಿ ಆತನನ್ನು ದಿಟ್ಟಿಸಿ ನೋಡಿದರೂ ಅವನ ಮುಖದಲ್ಲಿ ನನಗೆ ಕಂಡದ್ದು ಬರೀ ಶೂನ್ಯ.

ಈ ಎರಡು ತಿಂಗಳಲ್ಲಿ ಒಂದೇ ಒಂದು ಬಾರಿ ಆತನ ರೂಮಿಗೆ ಹೋಗಿದ್ದೆ. ಅಲ್ಲಿ ಒಂದು ಸೂಟ್‌ಕೇಸು, ಒಂದು ಬೆಡ್ಡಿಂಗು ಆಕಾಶಕ್ಕೆ ಹಾರುತ್ತಿರುವ ಒಂಟಿ ಹಕ್ಕಿಯ ಕ್ಯಾಲೆಂಡರು ಬಿಟ್ಟು ಹೆಚ್ಚೇನೂ ಕಣ್ಣಿಗೆ ಬೀಳಲಿಲ್ಲ.

ನಾನು ಊಟಮಾಡುವ ಹೋಟೆಲಿನಲ್ಲಿಯೇ ಆತನೂ ಊಟ ಮಾಡುತ್ತಿದ್ದನಾದರೂ ನಿತ್ಯವೂ ಊಟ ಮಾಡುತ್ತಿರಲಿಲ್ಲ. ಇಷ್ಟ ಬಂದಾಗ ಯಾವಾಗಲಾದರೂ ಬಂದು ತಿಂದು ಹೋಗುತ್ತಿದ್ದ ಅಷ್ಟೆ. ಆತ ಯಾವಾಗಲೂ ಬಿಳಿಯ ಪೈಜಾಮ, ಬಿಳಿಯ ಜುಬ್ಬ ಧರಿಸಿರುತ್ತಿದ್ದ. ಸದಾ ಕುರುಚಲು ಗಡ್ಡ. ಮುಖದ ಮೇಲೊಂದು ಕನ್ನಡಕ.

ಹೀಗಾಗಿ ಕನಕರಾಜು ನನಗೆ ಒಬ್ಬ ವಿಚಿತ್ರ ವ್ಯಕ್ತಿಯಂತೆ ಕಾಣುತ್ತಿದ್ದ. ಅವನ ಬಗ್ಗೆ ವಿವರ ತಿಳಿಯಲು ಎಲ್ಲರಿಗೂ ಕುತೂಹಲ; ಆದರೆ ಯಾರಿಗೂ ಸಾಧ್ಯವಾಗಿರಲಿಲ್ಲ.

ಒಮ್ಮೊಮ್ಮೆ ಸಾಯಂಕಾಲ ಆಫೀಸಿನಿಂದ ಬಂದ ಬಳಿಕ ಸ್ನಾನಮಾಡಿ ಎಲ್ಲಿಗೋ ಹೋಗುತ್ತಿದ್ದ. ರಾತ್ರಿ ಎಷ್ಟು ಸಮಯವಾದರೂ ಬರುತ್ತಿರಲಿಲ್ಲ. ಅನೇಕ ಸಲ ನಾವೆಲ್ಲ ಮಲಗಿ ನಿದ್ರಿಸಿದ ಬಳಿಕ ಯಾವಾಗಲೋ ಬಂದು ವರಾಂಡದಲ್ಲಿ ಮಲಗುತ್ತಿದ್ದ.

■

ನಾನು ಕನಕರಾಜುವನ್ನೇ ನೋಡುತ್ತಾ ಆಲೋಚಿಸುತ್ತಿರುವಂತೆಯೇ ಆತ ಎದ್ದು

ರೂಮಿಗೆ ಬೀಗ ಹಾಕಿ ಸಿಗರೇಟು ಹತ್ತಿಸಿಕೊಂಡು ಮಾಮೂಲಾಗಿ ಹೊರಟೇಬಿಟ್ಟ.

ದಿನವೂ ಈತ ಹೋಗುವುದಾದರೂ ಎಲ್ಲಿಗೆ? ಅಷ್ಟು ಸಮಯ ಎಲ್ಲಿ ಕಳೆಯುತ್ತಾನೆ? ಇಷ್ಟಕ್ಕೂ ಈತನ ಹವ್ಯಾಸಗಳೇನು?

ಈ ಎಲ್ಲಾ ಪ್ರಶ್ನೆಗಳು ನನ್ನನ್ನು ಬಾಧಿಸುತ್ತಲೇ ಇದ್ದವು. ಈಗ ಕನಕರಾಜುವಿಗೆ ತಿಳಿಯದಂತೆ ಹಿಂದಿನಿಂದ ಫಾಲೋ ಮಾಡಿ ಆತನ ಗುಟ್ಟನ್ನು ತಿಳಿದರೆ ಹೇಗೆ? ಎನ್ನಿಸಿತು.

ಕೂಡಲೆ ಎದ್ದು ಮುಖ ತೊಳೆದು, ಬಟ್ಟೆ ಬದಲಾಯಿಸಿಕೊಂಡು ಹೊರಟೆ. ನಾನು ಗೇಟು ದಾಟುತ್ತಿದ್ದಂತೆ ಅಲ್ಲಿಗೆ ಬಂದ ಉಮ,

"ಎಲ್ಲಿಗೆ ಹೊರಟಿರಿ?" ಎಂದಳು.

"ಸುಮ್ಮನೆ ಹೀಗೇ ಹೊರಟೆ," ಎಂದೆ.

"ಓಹೋ! ಗಾಳಿ ಕುಡಕೊಂಡು ಬರೋಕಾ?" ಎಂದು ನಗುತ್ತಾ ಒಳಗೆ ಓಡಿದಳು. ನಾನು ಬೀದಿಗಿಳಿಯುವಷ್ಟರಲ್ಲಿ ಕನಕರಾಜು ಎರಡು ಫರ್ಲಾಂಗಿಗಿಂತ ದೂರ ಹೋಗಿದ್ದ.

ಮುಂದೆ ಆತ ಹಿಂದೆ ಆತನಿಗೆ ತಿಳಿಯದಂತೆ ನಾನು ಮೇಲೆ ಆಕಾಶದಲ್ಲಿ ಕಪ್ಪಾಗಿ ಹೆಪ್ಪಿಟ್ಟ ಮೋಡ ಮಳೆ ಸುರಿಯಲು ಕಾತುರವಾಗಿ ಕಾಯುತ್ತಿತ್ತು.

ವಾತಾವರಣವನ್ನು ನೋಡಿದರೆ ಯಾವ ಕ್ಷಣದಲ್ಲಾದರೂ ಮಳೆ ಬರಬಹುದು ಎನ್ನಿಸಿತು.

ಕನಕರಾಜು ರೈಲ್ವೆ ಸ್ಟೇಶನ್ನಿನ ಕಡೆಗೆ ಹೊರಟ. ಸ್ಟೇಶನ್ನಿನಲ್ಲಿ ಈತನಿಗೇನಪ್ಪ ಕೆಲಸ ಎಂದುಕೊಂಡೆ. ಇಬ್ಬರೂ ನಡೆಯುತ್ತಲೇ ಇದ್ದೆವು.

ಸ್ಟೇಷನ್ ಒಳಕ್ಕೆ ಬಂದು ಬಿಟ್ಟಿದ್ದೆವು. ಔಟ್ ಗೇಟಿನಲ್ಲಿ ನಾನು ನಿಂತು ಹೊರಕ್ಕೆ ನೋಡುತ್ತಾ ಕನಕರಾಜುವಿನ ಚಲನವಲನಗಳನ್ನು ಗಮನಿಸುತ್ತಿದ್ದೆ. ಆತ ಬುಕಿಂಗ್ ಕೌಂಟರಿನಲ್ಲಿ ಕೈಯಿಟ್ಟು "ಪ್ಲಾಟ್‌ಫಾರ್ಮ್ ಟಿಕೆಟ್" ಎಂದ. ಟಿಕೇಟನ್ನು ಕೊಂಡು ಪ್ಲಾಟಫಾರ್ಮಿನ ಮೇಲೆ ದೂರದ ಒಂದು ಸಿಮೆಂಟ್ ಬೆಂಚಿನ ಮೇಲೆ ಕುಳಿತು ಸಿಗರೇಟು ಹತ್ತಿಸಿದ. ಮತ್ತೆ ಆಕಾಶದ ಕಡೆಗೆ ದೃಷ್ಟಿ ಹಾಯಿಸುತ್ತ ಕುಳಿತ.

ಪ್ಲಾಟಫಾರಂ ಮೇಲೆ ಹೆಚ್ಚು ಜನರಿರಲಿಲ್ಲ. ಐದಾರು ಜನ ಪ್ರಯಾಣಿಕರು, ಕೂಲಿಗಳು, ತಿಂಡಿಮಾರುವ ಹುಡುಗರು ಅಷ್ಟೆ. ನಾನು ಟೈಮ್ ಟೇಬಲ್ ನೋಡಿದೆ. ಆ ಸಮಯದಲ್ಲಿ ರೈಲುಗಳು ಇಲ್ಲವೇ ಇಲ್ಲ.

ಮತ್ತೆ ಯಾರನ್ನು ಕಾಣಲು ಈತ ಸ್ಟೇಶನ್ನಿಗೆ ಬಂದಿರಬಹುದು?

ಒಂದು...ಎರಡು...ಮೂರು......

ನಿಮಿಷಗಳು ಓಡುತ್ತಲೇ ಇದ್ದವು.

ಅರ್ಧಗಂಟೆ ಕಳೆಯಿತು. ಒಂದು ಗಂಟೆ ಕಳೆಯಿತು. ಆದರೂ ಕನಕರಾಜು ನಿರ್ಲಿಪ್ತರಾಗಿ ಕುಳಿತಲ್ಲಿಯೆ ಕುಳಿತಿದ್ದ.

ಆಕಾಶದಲ್ಲಿ ಗುಡುಗಿನ ಅರ್ಭಟವಾಗಿ ಕ್ರಮೇಣ ಟಪ ಟಪ ಮಳೆ ಸುರಿಯಲಾರಂಭಿಸಿತು. ಕನಕರಾಜು ಮಾತ್ರ ಯೋಗಿಯಂತೆ ಮಳೆಯಲ್ಲಿಯೇ ನಿಧಾನವಾಗಿ ನಡೆದುಬಂದ. ಅವನಲ್ಲಿ ಉತ್ಸಾಹವೇ ಇರಲಿಲ್ಲ.

ಆಗಲೆ ಎರಡು ಗಂಟೆ ಆಗಿತ್ತು.

ಕನಕರಾಜು ಪ್ಲಾಟಫಾರಂ ರೂಫ್ ಕೆಳಗೆ



"ಕನ್ನಡ ಚೆನ್ನಾಗಿ ಬಲ್ಲವನು ನಮ್ಮ ಆಫೀಸಿನಲ್ಲೇ ಇರೋ ವಿಷಯ ಈಚೆಗೆ ತಾನೇ ತಿಳಿಯಿತು."

ಒಂದು ಕಡೆ ಒಂಟಿಯಾಗಿ ನಿಂತು ಸಿಗರೇಟು ಹತ್ತಿಸಿದ.

ಆ ಎರಡು ಗಂಟೆಗಳ ಅಂತರದಲ್ಲಿ ಎರಡು ರೈಲುಗಳು ಬಂದು ಹೋಗಿದ್ದವು. ಕನಕರಾಜು ಯಾರನ್ನೂ ಕಾಯಲು ಬಂದಿಲ್ಲ. ಹಾಗಾದರೆ ಪ್ಲಾಟಫಾರಂನಲ್ಲಿ ಬಂದು ಕುಳಿತುಕೊಳ್ಳುವದು ಆತನಿಗಿದ್ದ ರೂಢಿ ಎಂದುಕೊಂಡೆ.

ಇನ್ನೂ ಹೆಚ್ಚು ಸಮಯ ಕಾಯಲು ನನ್ನಿಂದಾಗಲಿಲ್ಲ. ಪ್ಲಾಟಫಾರಂನಲ್ಲಿದ್ದ ಬುಕ್‌ಸ್ಟಾಲಿನಲ್ಲಿ ಒಂದು ಪುಸ್ತಕ ಕೊಂಡು ರಿಕ್ಷಾ ಏರಿ ರೂಮಿಗೆ ಬಂದುಬಿಟ್ಟೆ.

ರಿಕ್ಷಾ ಇಳಿದು ರೂಮಿನ ಕಡೆ ಹೊರಟ ನಾನು ನನ್ನ ರೂಮಿನ ಹೊರಗಡೆ ಕುರ್ಚಿಯ ಮೇಲೆ ಒಬ್ಬಳು ಹೆಂಗಸು ಕುಳಿತಿರುವುದನ್ನು ಕಂಡೆ.

ಆಕೆ ಬಿಳೀ ಶಾಲು ಹೊದ್ದಿದ್ದಳು. ಸುಂದರ ವಾಗಿದ್ದಳು. ವಯಸ್ಸು ಸುಮಾರು ಇಪ್ಪತ್ತೆರಡರಷ್ಟು ಇರಬಹುದು.

ಇದಕ್ಕೆ ಮುಂಚೆ ನಾನೆಂದೂ ಆಕೆಯನ್ನು ನೋಡಿರಲಿಲ್ಲ. ರೂಮಿನ ಹತ್ತಿರಕ್ಕೆ ಬರುವಷ್ಟರಲ್ಲಿ ಉಮಾ ಕೈಯಲ್ಲಿ ಕಾಫಿ ಲೋಟದೊಂದಿಗೆ ಬಂದಳು.

"ಇವರು ಕನಕರಾಜು ಅವರ ಹೆಂಡತಿಯಂತೆ ಹೆಸರು ರಾಜಲಕ್ಷ್ಮಿ. ನಾಲ್ಕು ತಿಂಗಳ ಹಿಂದೆ ಕನಕರಾಜು ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ ಇಲ್ಲಿಗೆ ಬಂದುಬಿಟ್ಟಿದ್ದಾರಂತೆ. ಪಾಪ ಇಬ್ಬರು ಮಕ್ಕಳೂ ಇದ್ದಾರಂತೆ. ಮೊನ್ನೆ ಯಾರೋ ಇವರ ಊರಿನವರು ಕನಕರಾಜು ಅವರನ್ನು ನೋಡಿ ಇವರಿಗೆ ತಿಳಿಸಿದರಂತೆ. ಕಡೂರಿನಿಂದ ಆವಸರದಲ್ಲಿ ಬಂದುಬಿಟ್ಟಿದ್ದಾರೆ," ಎಂದು ಹೇಳಿ,

"ಇವರು ಸೂರ್ಯನಾರಾಯಣ ಅಂತ. ಈ ರೂಮಿನಲ್ಲಿ ವಾಸವಾಗಿದ್ದಾರೆ. ಒಳ್ಳೆ ಕತೆಗಳನ್ನು ಬರೀತಾರೆ" ಎಂದು ನನ್ನ ಪರಿಚಯ ಮಾಡಿಸಿದಳು.

ಆಕೆ ವಿನಯದಿಂದ ನಮಸ್ಕಾರ ಮಾಡಿದಳು. ಹೂವಿನಂತೆ ನಿರ್ಮಲಳಾದ ಹೆಂಗಸು. ರಾಜಲಕ್ಷ್ಮಿಗೆ ಉಮ ಕಾಫಿ ಕೊಟ್ಟು ಮತ್ತೆ ನನಗೂ ತರಲು ಒಳಕ್ಕೆ ಹೋದಳು.

ಕನಕರಾಜು ಮನೆಯವರಿಗೂ ತಿಳಿಸದೆ ಓಡಿ ಬಂದನೆ? ಎಂ. ಎ. ಓದಿ! ನೌಕರಿ ಮಾಡುತ್ತಾ! ಇಬ್ಬರು ಮಕ್ಕಳಿದ್ದೂ!.........

ಛೇ ಛೇ ಇದೇನು ಇವನ ಹಾಳು ಬುದ್ಧಿ. ಇಂಥಾ ಒಳ್ಳೆಯ ಮಡದಿಯನ್ನು ಬಿಟ್ಟು.

ಕನಕರಾಜುವಿನ ಬಗ್ಗೆ ನನ್ನಲ್ಲಿ ಮೊಟ್ಟ ಮೊದಲ ಬಾರಿಗೆ ಅಸಹ್ಯ ಭಾವನೆ ಬಂತು.

ಆಕೆಯ ಕಡೆ ನೋಡಿದೆ.

ಹೇಗೂ ಕನಕರಾಜು ಬಂದೇ ಬರುತ್ತಾನಲ್ಲ, ಆಗ ಏನಾಗುತ್ತೋ ನೋಡಬಹುದು, ಎಂದು ಕುಳಿತುಕೊಂಡೆ. ನನ್ನ ಹಾಗೆಯೆ ರಾಮರಾಯರ ಕುಟುಂಬದವರೂ ಕಾಯುತ್ತಾ ಕುಳಿತರು.

ಅರ್ಧ ರಾತ್ರಿಯಾದರೂ ಕನಕರಾಜು ಬರಲಿಲ್ಲ.

ಅಷ್ಟರಲ್ಲಿ—ರಾಜಲಕ್ಷ್ಮಿ ತಮ್ಮ ಸಂಸಾರದ ಕಷ್ಟ ನಷ್ಟಗಳನ್ನು ಅನೇಕ ಸಾರಿ ಹೇಳಿಕೊಂಡು ಕಣ್ಣೀರು ಒರೆಸಿಕೊಂಡಿದ್ದಳು.

ರಾತ್ರಿ ಮೂರು ಗಂಟೆ ಆಯಿತು ನಾಲ್ಕೂ ಆಯಿತು ಅವನ ಸುಳಿವೇ ಇಲ್ಲ.

ರಾಮರಾವ್, ನಾನು, ರಾಜಲಕ್ಷ್ಮಿಯನ್ನು ಹೊರತುಪಡಿಸಿ ಉಳಿದವರೆಲ್ಲ ಸುಸ್ತಾಗಿ ಮಲಗಿಬಿಟ್ಟರು.

ಬೆಳಗಾಯಿತು. ಕನಕರಾಜು ಬರಲಿಲ್ಲ.

ರಾಜಲಕ್ಷ್ಮಿಯ ಮುಖ ಕಳವಳದಿಂದ ಕೂಡಿತು. ಬಿಸಿಲು ಏರಿ ಹತ್ತು ಗಂಟೆಯಾಯಿತು.

ನಾನು ಆಫೀಸಿಗೆ ಹೊರಡುವ ಸಮಯವಾಯಿತು. ಆಫೀಸಿಗೆ ಹೋದೆ.

ಮನಸ್ಸು ಹಿಡಿತದಲ್ಲಿರಲಿಲ್ಲ. ನಿದ್ದೆ ಇಲ್ಲದೆ ಕಣ್ಣು ಕೆಂಪಗಾಗಿದ್ದವು.

ಹನ್ನೊಂದು ಗಂಟೆಯ ಸುಮಾರಿಗೆ ಜವಾನ ಪೋಸ್ಟ್ ಮೂಲಕ ಬಂದ ಒಂದು ಕವರನ್ನು ಕೊಟ್ಟು ಹೋದ. ಅದನ್ನು ಕನಕರಾಜು ಬರೆದಿದ್ದ.

"ಶ್ರೀ ಸೂರ್ಯನಾರಾಯಣರವರಿಗೆ—

ನಮಸ್ಕಾರಗಳು.

ಈ ವೇಳೆಗೆ ನನ್ನ ಪತ್ನಿ ರಾಜಲಕ್ಷ್ಮಿ ನನ್ನ ರೂಮಿಗೆ ಬಂದಿರುತ್ತಾಳೆ. ಆಕೆಯ ಮೂಲಕ ಎಲ್ಲವನ್ನೂ ಕೇಳಿ ತಿಳಿದ ನೀವು ಬಹುಶಃ

ಡಿನನ್ನ ಬಗ್ಗೆ ಅಸಹ್ಯಪಟ್ಟುಕೊಂಡಿರುತ್ತೀರಿ. ದಯವಿಟ್ಟು ಈ ಕೆಳಗಿನ ಎರಡು ಮಾತು-ಗಳನ್ನು ಗಮನಿಸಿ.

"ನಾನು ಎಂ. ಎ. ಓದಿದ್ದೇನೆ. ನೌಕರಿಯನ್ನು ಮಾಡುತ್ತಿದ್ದೇನೆ. ಈಗ ನನಗೆ ಮನಮೆಚ್ಚಿದ ಮಡದಿ ಬಂಗಾರದಂತಹ ಇಬ್ಬರು ಮಕ್ಕಳು ಇದ್ದಾರೆ- ಇಲ್ಲಿಯವರೆಗೆ ನಾನು ಸಂಪಾದಿಸಿದ ಇಪ್ಪತ್ತು ಸಾವಿರ ರೂಪಾಯಿಗಳಷ್ಟು ಹಣ ಬ್ಯಾಂಕಿನಲ್ಲಿಯೂ ಇದೆ.

"ಆದರೂ ಯಾವದೋ ಶಾರೀರಿಕ ತೊಂದರೆಗೆ ಒಳಗಾಗಿ -ನಾಲ್ಕು ತಿಂಗಳ ಹಿಂದೆ ನಾನು ವೈದ್ಯರ ಬಳಿ ಪರೀಕ್ಷಿಸಿಕೊಂಡಾಗ ನನಗೆ ಕ್ಯಾನ್ಸರ್ ಆಗಿದೆ ಎಂದೂ ಇನ್ನು ನನ್ನ ಆಯುಸ್ಸು ಕೇವಲ ಆರು ತಿಂಗಳು ಮಾತ್ರವೆಂದೂ ತಿಳಿಯಿತು. ಈ ಸಂಗತಿ ನನ್ನ ಹೆಂಡತಿಗೆ ಗೊತ್ತಾದರೆ ಮಮತೆಯನ್ನು ಕಡಿದುಕೊಳ್ಳಲಾರದೆ ಆಕೆಯ ಬಳಿ ಇರುವ ಇಪ್ಪತ್ತು ಸಾವಿರ ರೂಪಾಯಿಗಳನ್ನೂ ಚಿಕಿತ್ಸೆಗೆಂದೇ ಖರ್ಚುಮಾಡಿಬಿಡುತ್ತಾಳೆ. ಹೇಗೂ ನಾನು ಖಂಡಿತ ಬದುಕುವುದಿಲ್ಲ. ಆಮೇಲೆ ನನ್ನ ಮುದ್ದಿನ ಮಡದಿ, ನನ್ನ ಪ್ರೀತಿಯ ಮಕ್ಕಳು ಬೀದಿಪಾಲಾಗುತ್ತಾರೆ. ಅದನ್ನು ಮಾತ್ರ ನಾನು ಸಹಿಸಲಾರೆ. ಆದಕ್ಕಾಗಿಯೇ ನಾನು ಈ ಅಜ್ಞಾತವಾಸಕ್ಕೆ ಬರಬೇಕಾಯಿತು.

"ನಾನೀಗ ಮಂಕಾದ ಬೆಳಕು. ಇಂದೇ ನೌಕರಿಗೆ ರಾಜೀನಾಮೆ ಕಳುಹಿಸಿದ್ದೇನೆ. ಮತ್ತೆಲ್ಲಿಗಾದರೂ ಬಿರುಗಾಳಿಗೆ ಸಿಕ್ಕಿದ ತರಗಲೆಯಂತೆ ಹೋಗುತ್ತೇನೆ. ಇಲ್ಲಿಂದಲೂ ನಿನ್ನ ನತದೃಷ್ಟ ಗಂಡ ತಪ್ಪಿಸಿಕೊಂಡು ಹೋದನೆಂದು ರಾಜಲಕ್ಷ್ಮಿಗೆ ತಿಳಿಸಿ ಆದರೆ ಉಳಿದ ಸಂಗತಿಯನ್ನು ಮಾತ್ರ ಆಕೆಗೆ ದಯವಿಟ್ಟು ತಿಳಿಸಬೇಡಿ.

ನೀವು ನನ್ನನ್ನು ಕ್ಷಮಿಸುತ್ತೀರೆಂದು ತಿಳಿಯುವೆ

— ಇಂತು ಕನಕರಾಜು."

ಪತ್ರವನ್ನೋದಿ ಮುಗಿಸುತ್ತಲೆ ನನ್ನ ಕಣ್ಣಿನಲ್ಲಿ ತಂತಾನೆ ನೀರು ತುಂಬಿಬಂತು. ●

ಕೃಷ್ಣಾರ್ಪಣ

ಹೆಸರಾಂತ ಸಂಗೀತಕಾರ ಮೈಸೂರು ಸದಾಶಿವರಾಯರಲ್ಲಿ ನಂಬುಗೆಯಿರಿಸಿದ್ದ ವರಲ್ಲಿ ಹಿರಿಯ ಜವಳಿ ವರ್ತಕ ಅರುವೆಟ್ಟಿ ರಾಮಸ್ವಾಮಿಯೂ ಒಬ್ಬ. ಆತನಿಗೆ ಅವರಲ್ಲಿ ಗೌರವವೂ ಇತ್ತು. ಒಮ್ಮೆ ಪರದೇಶಕ್ಕೆ ಹೋಗಬೇಕಾದ ಸಂದರ್ಭ ಬಂದಾಗ ಅಂಗಡಿಯ ವ್ಯವಹಾರವನ್ನೆಲ್ಲ ಕೆಲವು ದಿನ ನೋಡಿಕೊಳ್ಳಬೇಕೆಂದು ರಾಯರಲ್ಲಿ ಬೇಡಿ, ಅವರನ್ನೊಪ್ಪಿಸಿ ಹೊರಟುಹೋದ.

ಶೆಟ್ಟಿ ಹಿಂದಿರುಗಿ ಬಂದಾಗ ಅಂಗಡಿ ಪೂರ್ಣ ಖಾಲಿಯಾಗಿತ್ತು. ಮಹಾ ದಾನಿಗಳಾದ ರಾಯರು ತಮ್ಮಲ್ಲಿ ಬಂದು ಬೇಡಿದ ಬಡಬಗ್ಗರಿಗೆ ಬಟ್ಟೆಗಳನ್ನೆಲ್ಲ ದಾನಧರ್ಮ ಮಾಡಿದ್ದರು. ಆಗ ದಿಗಿಲುಬಿದ್ದ ಶೆಟ್ಟಿಯೊಡನೆ ರಾಯರು ಹೇಳಿದರಂತೆ: "ಶೆಟ್ಟರೇ, ಹರಿಗೆ ಪ್ರೀತಿಯಾಗಲೆಂದು ಬಟ್ಟೆಗಳನ್ನೆಲ್ಲಾ ದಾನ ಮಾಡಿದ್ದೇನೆ. ಅದರ ಪುಣ್ಯ ನಿಮ್ಮ ಪಾಲಿನದು. ನಿಮಗೆ ಒಪ್ಪಿಗೆಯಿಲ್ಲವಾದರೆ ಹೇಳಿ ಬಿಡಿ. ಹಣವನ್ನೆಲ್ಲ ನಾನೇ ಹಿಂತಿರುಗಿ ಕೊಡುತ್ತೇನೆ. ಆ ಪುಣ್ಯವೆಲ್ಲ ನನಗಿರಲಿ."

ಶೆಟ್ಟಿ ಹೆಚ್ಚು ಮಾತನಾಡದೆ "ಕೃಷ್ಣಾರ್ಪಣಮಸ್ತು" ಎಂದನಂತೆ. ಮುಂದೆ ಸ್ವಲ್ಪ ದಿನಗಳಲ್ಲಿಯೇ ಆತನ ವ್ಯಾಪಾರ ಹತ್ತುಪಟ್ಟು ಅಭಿವೃದ್ಧಿಯಾಯಿತೆಂದು ಹೇಳುತ್ತಾರೆ.

—ಪ. ರಾಮಕೃಷ್ಣ ಶಾಸ್ತ್ರಿ



ಯಹೂದಿ ಮಕ್ಕಳಿಗೆ ಮರುಹುಟ್ಟು ಕೊಟ್ಟ ಮಹಾಮಾನವರು

ರೇಣುಕ



ಪೂರ್ವ ಫ್ರಾನ್ಸಿನ ರೈಲ್ವೆ ನಿಲ್ದಾಣವೊಂದರ ಪಾರ್ಶ್ವದಲ್ಲಿ ಗೂಡ್ಸ್ ಗಾಡಿಯೊಂದು ನಿಂತಿತ್ತು. ಫ್ರೆಂಚ್ ರೆಡ್‌ಕ್ರಾಸ್ ಘಟಕದ ಕಾರ್ಯಕರ್ತೆಯೊಬ್ಬಳು ಗೂಡ್ಸ್ ಗಾಡಿಯ ಬೋಗಿಗಳ ಪಕ್ಕದಲ್ಲಿ ನಡೆದು ಹೋಗುತ್ತಿದ್ದಾಗ ಯಾವುದೋ ಬೋಗಿಯೊಂದರಿಂದ ಅಸ್ಪಷ್ಟವಾದ ಅಳುವ ಸದ್ದು ಕೇಳಿಸಿದಂತೆ ಆಕೆಗೆ ಭಾಸವಾಯಿತು. ಕುತೂಹಲ ಕೆರಳಿ ಆಕೆ ಒಂದೊಂದೇ ಬೋಗಿಯ ಬಳಿ ನಿಂತು ಕಿವಿಗೊಟ್ಟು ಆಲಿಸಿದಾಗ ಬೋಗಿಯೊಂದರಿಂದ ಮಕ್ಕಳು ಅಳುವ ಸದ್ದು ಸ್ಪಷ್ಟವಾಗಿ ಕೇಳಿಬಂದು ಆಕೆಗೆ ಗಾಬರಿಯಾಯಿತು. ಒಡನೆಯೆ ಅವಳು ಅಲ್ಲಿಗೆ ಸ್ಟೇಶನ್ ಮಾಸ್ಟರನನ್ನು ಕರೆದುಕೊಂಡು ಬಂದಳು. ಬೋಗಿಯ ಬಾಗಿಲಿಗೆ ಹಾಕಿದ್ದ ಬೀಗವನ್ನು ಮುರಿದು ಬಾಗಿಲು ತೆರೆಯಲಾಯಿತು.

ಬೋಗಿಯಲ್ಲಿ ಕಂಡ ದೃಶ್ಯ ಹೃದಯ ವಿದ್ರಾವಕವಾಗಿತ್ತು. ಆ ಚಿಕ್ಕ ಬೋಗಿಯಲ್ಲಿ ಎಂಬತ್ತು ಮಂದಿ ಯಹೂದಿ ಮಕ್ಕಳನ್ನು ಅಡಕಲಾಗಿತ್ತು. ಕೈಕಾಲು ಆಡಿಸಲಿಕ್ಕೂ ಆಸ್ಪದ ಇಲ್ಲದಂತಹ ಆ ಇಕ್ಕಟ್ಟಿನಲ್ಲಿ ಒಬ್ಬರಿಗೊಬ್ಬರು ಅಂಟಿಕೊಂಡಂತಿದ್ದ ಮಕ್ಕಳು ಭಯಾಕ್ರಾಂತರಾಗಿ ಅಳುತ್ತಿದ್ದರು. ಯಹೂದ್ಯ ತಂದೆ ತಾಯಿಗಳಿಂದ ವಶಪಡಿಸಿಕೊಂಡ ಈ ಮಕ್ಕಳನ್ನು ನಾಜಿಗಳು ತಮ್ಮ ದೇಶಕ್ಕೆ ಸಾಗಿಸಿ ಕೊಲ್ಲಬೇಕೆಂದು ಪ್ಯಾರಿಸ್ ರೈಲ್ವೆ ನಿಲ್ದಾಣದಿಂದ ರೈಕ್‌ಗೆ ಹೊರಟಿದ್ದ ಗೂಡ್ಸ್ ಗಾಡಿಯಲ್ಲಿ ಅವರನ್ನೆಲ್ಲ ತುಂಬಿದ್ದರು.

ಎಂಬತ್ತು ಮಕ್ಕಳಿಗಾಗಿ ಬೋಗಿಯಲ್ಲಿಟ್ಟಿದ್ದ ಆಹಾರವೆಂದರೆ ಒಂದು ಗಿಂಡಿ ನೀರು, ಸ್ವಲ್ಪ ಗಿಣ್ಣು ಮತ್ತು ಎರಡು ಬ್ರೆಡ್ಡಿನ ತುಂಡುಗಳು ಮಾತ್ರ. ಗಾಳಿಯಾಡದ ಆ ಗೂಡ್ಸ್ ಗಾಡಿಯ ಬೋಗಿಯಲ್ಲಿ ಮಕ್ಕಳನ್ನು ಕೂಡಿಟ್ಟು ಹದಿನೆಂಟು ಗಂಟೆಗಳಿಗೂ ಮೇಲಾಗಿತ್ತು. ಬಾಗಿಲು ತೆರೆದಾಗ ನಾಲ್ಕು ಮಕ್ಕಳು ಉಸಿರುಕಟ್ಟಿ ಸತ್ತುಬಿದ್ದಿದ್ದರು. ಬೋಗಿಯಲ್ಲಿನ ಕತ್ತಲಲ್ಲಿ ಮಕ್ಕಳು ತಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತಾರೋ ಕರೆದೊಯ್ದು, ಏನು ಮಾಡುತ್ತಾರೋ ಎಂಬ ಶಂಕೆಯಿಂದ ದಿಗ್ಭ್ರಾಂತರಾಗಿದ್ದರು.

ಮಕ್ಕಳ ಕೈಗೆ ಕಟ್ಟಿದ್ದ ಗುರುತಿನ ಚಿಲ್ಲೆಗಳನ್ನು ಜರ್ಮನ್ನರು ಕಿತ್ತುಹಾಕಿದ್ದರು. ಬಹು ಪಾಲು ಮಕ್ಕಳು ತಮ್ಮ ಹೆಸರೇ ಗೊತ್ತಿಲ್ಲದಷ್ಟು ಚಿಕ್ಕವರಾಗಿದ್ದರು. ಒಂದು ಚಿಕ್ಕ

ಹುಡುಗಿಗೆ ತನ್ನ ಮನೆಯ ನಂಬರು ಹದಿನಾರೆಂಬುದು ಮಾತ್ರ ನೆನಪಿತ್ತೇ ಹೊರತು ಮನೆಯಿದ್ದ ರಸ್ತೆಯ ಹೆಸರೇ ಗೊತ್ತಿರಲಿಲ್ಲ. ಈ ಮೊದಲು ಫ್ರಾನ್ಸಿನಲ್ಲಿ ವಶಪಡಿಸಿಕೊಂಡು ಜರ್ಮನಿಗೆ ರವಾನೆ ಮಾಡಿದ ಹದಿನೈದು ಸಾವಿರ ಯಹೂದಿ ಮಕ್ಕಳು ಈ ಮಕ್ಕಳಷ್ಟು ಅದೃಷ್ಟವಂತರಾಗಿರಲಿಲ್ಲ. ಅವರಲ್ಲಿ ಬಹುಪಾಲು ಮಕ್ಕಳನ್ನು ಪೋಲೆಂಡಿನ ವಿಷಾನಿಲ ಕೊಠಡಿಗಳಲ್ಲಿ ತುಂಬಿ ಕೊಲ್ಲಲಾಯಿತೆನ್ನುವುದು ಯುದ್ಧಾನಂತರ ತಿಳಿದುಬಂತು.

ಈಗ ಹೇಳಲಿರುವ ಪ್ರಸಂಗ ನಾಜಿಗಳ ಕೈಗೆ ಸಿಗದೆ ತಪ್ಪಿಸಿಕೊಂಡ ಸುಮಾರು ಹನ್ನೆರಡು ಸಾವಿರಕ್ಕೂ ಹೆಚ್ಚು ಯಹೂದಿ ಮಕ್ಕಳಿಗೆ ಸಂಬಂಧಿಸಿದ್ದು. ಇವರಲ್ಲಿ ನಾಲ್ಕು ಸಾವಿರ ಮಕ್ಕಳನ್ನು ನಾಜಿಗಳ ಕಣ್ಣು ತಪ್ಪಿಸಿ ದೇಶದ ಗಡಿ ದಾಟಿಸಿ ಸ್ವಿಟ್ಸರ್‌ಲೆಂಡ್ ಮತ್ತು ಸ್ಪೇನ್ ದೇಶಗಳಿಗೆ ರವಾನೆ ಮಾಡಲಾಯಿತು. ಎಂಟು ಸಾವಿರ ಮಕ್ಕಳನ್ನು ನಾಜಿಗಳ ಕಾಕದೃಷ್ಟಿಗೆ ಬೀಳದಂತೆ ರಕ್ಷಿಸಲು ಫ್ರಾನ್ಸಿನಾದ್ಯಂತ ನಿರ್ಮಿಸಲಾದ ಭೂಗತ ಸುರಕ್ಷಾಧಾಮಗಳಲ್ಲಿ ಅಡಗಿಸಿಟ್ಟು ಕಾಪಾಡಲಾಯಿತು.

ಹೀಗೆ ಈ ಅನಾಥ ಮಕ್ಕಳನ್ನು–ಪ್ರಾಣದ ಹಂಗು ತೊರೆದು–ಕಾಪಾಡಿದವರು ಚೈಲೆಟ್, ಡುವಾಕ್ಸ್ ಮತ್ತು ರೆವರೆಂಡ್ ಪೌಲ್ ವೆರಗಾರ್ ಎಂಬ ಕ್ರೈಸ್ತ ಪಾದ್ರಿಗಳು. ಇವರಲ್ಲಿ ಮೊದಲಿನವರಿಬ್ಬರು ಕ್ಯಾಥೋಲಿಕರಾದರೆ. ಉಳಿದವನೊಬ್ಬ ಪ್ರೊಟೆಸ್ಟಂಟ್.

ಫಾದರ್ ಚೈಲೆಟ್ ನರದೌರ್ಬಲ್ಯದಿಂದ ನರಳುತ್ತಿದ್ದ. ನಿಸ್ತೇಜವಾದ ಕಣ್ಣುಗಳ ಆತ ಯಾವಾಗಲೂ ಬಹಳ ಬಳಲಿದವನಂತೆ ಕಾಣುತ್ತಿದ್ದ. ಆದರೆ ಅಸಾಧಾರಣ ಕಾರ್ಯಕೌಶಲ ಅವನಿಗಿತ್ತು. ಪ್ರತಿದಿನ ಹದಿನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ಅವಿಶ್ರಾಂತವಾಗಿ ದುಡಿಯುತ್ತಿದ್ದ. ಫಾದರ್ ಡುವಾಕ್ಸ್ ನೀಳಗಡ್ಡದ ಗುಲಾಬಿ ಮೈಬಣ್ಣದ ಸ್ಥೂಲಕಾಯದ ವ್ಯಕ್ತಿ. ನರೆತ ತಲೆಗೂದಲಿನ ಮುಖದಲ್ಲಿ ಕೆನ್ನೆಯ ಮೂಳೆಗಳೆದ್ದು ಕಾಣುತ್ತಿದ್ದ ಕುಳ್ಳನೆಯ ವ್ಯಕ್ತಿ ಫಾದರ್ ವೆರಗಾರ್. ಆಪತ್ಕಾಲದಲ್ಲಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟ ಈ ಮೂವರು ಮಹಾನುಭಾವರು ತೋರಿದ ಧೈರ್ಯ, ಕರ್ತವ್ಯ ತತ್ಪರತೆ, ನಿಸ್ವಾರ್ಥ ಸೇವಾ ಮನೋಭಾವ ಮತ್ತು ಮಾನವೀಯ ಅನುಕಂಪಗಳಿಂದಾಗಿ ಯಹೂದಿ ಜನಾಂಗ ಎಂದೆಂದಿಗೂ ಇವರಿಗೆ ಕೃತಜ್ಞರಾಗಿರಬೇಕು.

ಈ ಮಕ್ಕಳನ್ನು ನಾಜಿಗಳ ಕೈಗೆ ಸಿಗದಂತೆ ರಕ್ಷಿಸುವ ಉದ್ದೇಶದಿಂದ ಈ ಮೂವರು ಪಾದ್ರಿಗಳು ಫ್ರಾನ್ಸಿನಾದ್ಯಂತ ಅನೇಕ ಭೂಗತ ಸೇವಾ ಸಂಸ್ಥೆಗಳನ್ನು ಪ್ರಾರಂಭಿಸಿದರು. ಯುದ್ಧ ಮುಗಿಯುವವರೆಗೂ ಈ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಅವುಗಳ ಮೇಲ್ವಿಚಾರಣೆಯನ್ನು ನೋಡಿಕೊಂಡಿದ್ದು ಅವರ ಅಸಾಧಾರಣ ಕಾರ್ಯಕೌಶಲಕ್ಕೊಂದು ಉತ್ತಮ ನಿದರ್ಶನ.

ಫಾದರ್ ಚೈಲೆಟ್ ಒಬ್ಬನೇ ನಾಲ್ಕು ಸಾವಿರಕ್ಕೂ ಹೆಚ್ಚು ಮಕ್ಕಳನ್ನು ಸುರಕ್ಷಿತ ತಾಣಗಳಲ್ಲಿ ನೆಲೆಗೊಳಿಸಿದ. ಫಾದರ್ ಡುವಾಕ್ಸ್ ಸಾವಿರಕ್ಕೂ ಹೆಚ್ಚು ಮಕ್ಕಳನ್ನು ಸುರಕ್ಷಿತ ನೆಲೆಗಳಿಗೆ ತಲುಪಿಸಿದ. ರೆವರೆಂಡ್ ಪೌಲ್ ವೆರಗಾರ್ ಇತರ ಪ್ರೊಟೆಸ್ಟಂಟ್ ಪಾದ್ರಿಗಳ ಸಹಾಯದಿಂದ ಮತ್ತೊಂದು ಸಾವಿರ ಯಹೂದಿ ಮಕ್ಕಳನ್ನು ಸುರಕ್ಷಾಧಾಮಗಳಲ್ಲಿ ಪುನರ್ವಸತಿಗೊಳಿಸಿದ. ಮಕ್ಕಳ ಮೇಲಿನ ಪ್ರೇಮದಿಂದಲೋ ಜರ್ಮನ್ನರ ಮೇಲಿನ ದ್ವೇಷದಿಂದಲೋ ಫ್ರಾನ್ಸಿನ ನಾಗರಿಕರು ಉಳಿದ ಯಹೂದಿ ಮಕ್ಕಳನ್ನು ತಮ್ಮ ಬಳಿಯಿಟ್ಟುಕೊಂಡು ಸಲಹತೊಡಗಿದರು.

ಪ್ರಖ್ಯಾತ ವೈದ್ಯನೊಬ್ಬ ಆಸ್ಪತ್ರೆಯ ದಾಖಲೆ ಪುಸ್ತಕದಲ್ಲಿ ಖೊಟ್ಟಿ ಕಾಯಿಲೆಗಳನ್ನು ನಮೂದಿಸಿ ಅನೇಕ ಯಹೂದಿ ಮಕ್ಕಳನ್ನು ನಾಜಿಗಳ ಪಾಶದಿಂದ ರಕ್ಷಿಸಿದ.

ಮಾನವೀಯ ಅನುಕಂಪವುಳ್ಳ ಐದು ಮಂದಿ ಪ್ರೊಟೆಸ್ಟಂಟ್ ಮತ್ತು ಐದು ಮಂದಿ ಕ್ಯಾಥೋಲಿಕ್ ಮಧ್ಯವಯಸ್ಕ ಮಹಿಳೆಯರ ಸಮಿತಿಯೊಂದು ನಾಜಿಗಳಿಂದ ತಮಗೊದಗಬಹುದಾದ ಪ್ರಾಣಾಪಾಯವನ್ನೂ ಲೆಕ್ಕಿಸದೆ ಮೂವತ್ತೆಂಟು ಮಂದಿ ಯಹೂದಿ ಮಕ್ಕಳಿಗೆ ರಕ್ಷಣೆಯಿತ್ತು ಪಾಲಿಸತೊಡಗಿದರು. ಆದರೆ ಅವರ ದುರದೃಷ್ಟಕ್ಕೆ ಸುಳಿವು ಸಿಕ್ಕ ನಾಜಿಗಳು ಅವರನ್ನು ಬಂಧಿಸಿದರು. ಅವರಲ್ಲಿ ಒಬ್ಬಾಕೆಯನ್ನು [illegible]

[illegible]ನ್ನಾಗಿ ಮಾಡಿ ಪತ್ರ ಮೇಲೆ ಒತ್ತು ಕೊಡುವ ನೀರನ್ನು ಮತ್ತೊಮ್ಮೆ ತರಪಾದ ನೀರನ್ನು ಬಳಸಿ ಅಕ್ಷರವನ್ನು ಓದಿಸಿದರು. ಅವರ ಜೊತೆ ಅನೇಕರು ನಾಜಿಗಳ ಹಿಂಸೆಯನ್ನು ತಾಳಲಾರದೆ ಸತ್ತರು. ಅನಾಥ ಯಹೂದಿ ಮಕ್ಕಳಿಗೆ ರಕ್ಷಣೆ ನೀಡಿದ್ದೇ ನಾಜಿಗಳ ದೃಷ್ಟಿಯಲ್ಲಿ ಅವರ ಅಪರಾಧವಾಗಿತ್ತು.

ಈ ಕಾರ್ಯದಲ್ಲಿ ಕಂಕಣಬದ್ಧನಾಗಿದ್ದ ಫಾದರ್ ಜೈಲೆಟ್ ಸ್ವತಂತ್ರ ವಿಚಾರಗಳನ್ನು ಪ್ರತಿಪಾದಿಸುವ 'ದಿ ಕ್ರಿಶ್ಚಿಯನ್ ವಿಟ್‌ನೆಸ್' ಎಂಬ ವಾರ ಪತ್ರಿಕೆಯನ್ನು ಹೊರಡಿಸಿದ. ನಾಜಿ ಜರ್ಮನಿಯ ವಿರುದ್ಧ ಉಗ್ರ ಘೋರಣೆಯನ್ನು ತಳೆದಿದ್ದ ಈ ಪತ್ರಿಕೆಗೆ ಅಸಂಖ್ಯಾತ ತರುಣ ತರುಣಿಯರು ಮಾರುಹೋಗಿದ್ದರು.

೧೯೪೨ರ ಪ್ರಾರಂಭದಲ್ಲಿ ನಾಜಿಗಳು ಸಾವಿರಾರು ಮಂದಿ ಯಹೂದ್ಯರನ್ನು ಜರ್ಮನಿಗೆ ಸಾಗಿಸಿ ಬಂಧನದಲ್ಲಿಟ್ಟರು. ಜೈಲೆಟ್ ವಾಸಿಸುತ್ತಿದ್ದ ನಗರದಲ್ಲಿ ನಾಜಿಗಳಿಂದ ಬಂಧಿಸಲ್ಪಟ್ಟು ಜರ್ಮನಿಗೆ ಸಾಗಿಸಲ್ಪಟ್ಟ ಸುಮಾರು ೧೨೦ ಮಂದಿ ಯಹೂದ್ಯರು ತಮ್ಮ ಕರುಳಿನ ಕುಡಿಗಳನ್ನು ಹಿಂದೆ ಬಿಟ್ಟು ಹೋಗಿದ್ದರು. ಹಸಿವಿನಿಂದ ಪರಿತಪಿಸುತ್ತ ಹಠಾತ್ತನೆ ತಂದೆ ತಾಯಿಗಳ ಆಸರೆಯಿಂದ ವಂಚಿತರಾಗಿ ಭಯಭ್ರಾಂತರಾಗಿದ್ದ ಹಸುಳೆಗಳನ್ನು ನಾಜಿಗಳು ರಹಸ್ಯ ನೆಲಮಾಳಿಗೆಗಳಲ್ಲಿ ತುಂಬಿದ್ದರು. ಫಾದರ್ ಜೈಲೆಟ್ ಈ ಮಕ್ಕಳನ್ನೆಲ್ಲಾ ಉಪಾಯದಿಂದ ಕಳೆಹಾಕಿ ಭೂಗತ ಸುರಕ್ಷಾ ಧಾಮಗಳಿಗೆ ಕಳುಹಿಸಿದ.

ಫಾದರ್ ಜೈಲೆಟ್ ಈ ಅನಾಥ ಮಕ್ಕಳು ನಾಜಿಗಳ ಕೈಗೆ ಸಿಕ್ಕದಂತೆ ಸಾಕಷ್ಟು ಮುಂಜಾಗ್ರತೆಯ ಕ್ರಮಗಳನ್ನು ಕೈಗೊಂಡನಲ್ಲದೆ. ಯುದ್ಧ ಮುಗಿದ ಬಳಿಕ ಅವರು ತಮ್ಮ ತಂದೆ ತಾಯಿಗಳನ್ನು ಕೂಡಿಕೊಳ್ಳಲು ಸಾಧ್ಯವಾಗುವಂತಹ ಎಲ್ಲಾ ಕ್ರಮಗಳನ್ನೂ ವ್ಯವಸ್ಥಿತವಾಗಿ ಸಿದ್ಧಪಡಿಸಿದ್ದ. ಮಕ್ಕಳ ಹೆಸರು, ವಿಳಾಸ, ದೇಹದ ಮೇಲಿನ ಕಣ್ಣಿಗೆ ಕಾಣಿಸುವಂತಹ ಚಿಹ್ನೆಗಳು ಮೊದಲಾದ ವಿವರಗಳುಳ್ಳ ದಾಖಲೆಗಳನ್ನು ಆತ ಸಿದ್ಧಪಡಿಸಿಟ್ಟುಕೊಂಡಿದ್ದನಲ್ಲದೆ ಪ್ರತಿಯೊಂದು ಮಗುವಿನ ಬೆರಳಚ್ಚನ್ನೂ ಪಡೆದುಕೊಂಡಿದ್ದ. ಈ ದಾಖಲೆಗಳನ್ನು ಯುದ್ಧ ಮುಗಿಯುವವರೆಗೂ ರಹಸ್ಯವಾಗಿಡಲಾಗಿತ್ತು.

ಜೈಲೆಟ್ ತನ್ನ ಕಾರ್ಯದ ಅಂಗವಾಗಿ ಹದಿನೆಂಟರಿಂದ ಇಪ್ಪತ್ತರ ಹರೆಯದ ನಂಬುಗೆಯ ಕಾರ್ಯಕರ್ತರನ್ನು ತಾನು ವಾಸಿಸುತ್ತಿದ್ದ ಲಿನ್ ಪಟ್ಟಣದ ಸುತ್ತಮುತ್ತಲಿನ ಹಳ್ಳಿಗಳಿಗೆ ಕಳುಹಿಸಿದ. ಅವರು ಸೈಕಲ್ ಮೇಲೆ ಹಳ್ಳಿಗಾಡಿನಲ್ಲಿ ಸುತ್ತುತ್ತಾ ಮಾನವೀಯ ಅನುಕಂಪವುಳ್ಳ ದೇವಭೀರುಗಳಾದ ರೈತರನ್ನು ಗುರುತಿಸಿ ಅನಾಥ ಯಹೂದಿ ಮಕ್ಕಳನ್ನು ಅವರ ಬಳಿ ಇರುವಂತೆ ವ್ಯವಸ್ಥೆ ಮಾಡಿದರು. ಕ್ಯಾಥೋಲಿಕ್ ಅನಾಥಾಲಯಗಳಲ್ಲಿಯೂ ಬಹು ಮಂದಿ ಯಹೂದಿ ಮಕ್ಕಳಿಗೆ ಎಡೆ ಮಾಡಿ ಕೊಡಲಾಯಿತು. ಅನುಮಾನ ಬಾರದಂತೆ ಪ್ರತಿಯೊಂದು ಶಿಶುವಿಗೂ ಸಂಬಂಧಿಸಿದಂತೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಲಾಯಿತು. ಲಿನ್ ಪಟ್ಟಣದ ನೂರು ಮೈಲಿಗಳ ಪರಿಧಿಯ ಗ್ರಾಮೀಣ ಪ್ರದೇಶದಲ್ಲಿ ಜೈಲೆಟ್‌ನ



"ನಾನು ಹಣ ಸ್ವೀಕರಿಸುತ್ತಿರುವುದೇನೋ ನಿಜವೇ. ಆದ್ರೆ ಅದೆಲ್ಲವನ್ನು ತಿರುಪತಿ ತಿಮ್ಮಪ್ಪನ ಹುಂಡಿಗೇ ಹಾಕುತ್ತಿರುವೆನಲ್ಲಾ..."

ಈ ತರುಣ ಕಾರ್ಯಕರ್ತೆಯರು ಅನಾಥ ಯಹೂದಿ ಮಕ್ಕಳಿಗಾಗಿ ಸ್ವರ್ಗ ಸಮಾನವಾದ ತಾಣವನ್ನೇ ನಿರ್ಮಿಸಿದರು.

ಈ ಮಕ್ಕಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಮುಟ್ಟಿಸುವ ಹೊಣೆಯನ್ನು ಆಸ್ಪತ್ರೆಯೊಂದರ ವಯಸ್ಸಾದ ಮುಖ್ಯ ಪರಿಚಾರಿಕೆಯೊಬ್ಬಳಿಗೆ ವಹಿಸಲಾಗಿತ್ತು. ಅನುಮಾನ ಬಾರದಂತೆ ಅಲ್ಲಿ ಬಂದ ಮಕ್ಕಳ ಹೆಸರುಗಳನ್ನು ಬದಲಾಯಿಸ-ಲಾಗುತ್ತಿತ್ತು. ಪುಟ್ಟ ಬಾಲಿಕೆಯೊಬ್ಬಳು, "ಹೀಗೆ ಹೊಸದಾಗಿ ಹೆಸರಿಟ್ಟರೆ ಅಮ್ಮ ಕರೆದೊಯ್ಯಲು ಬಂದಾಗ ನನ್ನನ್ನು ಹೇಗೆ ಗುರುತಿಸುತ್ತಾಳೆ?" ಎಂದು ಅಳತೊಡಗಿದಳಂತೆ. ಆರು ವರ್ಷದ ಪುಟ್ಟ ಡಚ್ ಬಾಲಕ ಅವನು ಮಾತನಾಡುತ್ತಿದ್ದ ಒತ್ತಾದ ಉಚ್ಚಾರದ ಫ್ರೆಂಚ್‌ನಿಂದ ಆತ ಯಹೂದ್ಯನೆಂಬುದು ಸುಲಭವಾಗಿ ಹೊರಬೀಳುವ ಸಂಭವವಿದ್ದುದರಿಂದ ಪ್ರಯಾಣ ಕಾಲದಲ್ಲಿ ಒಂದೂ ಮಾತನಾಡಕೂಡದೆಂದು ಎಚ್ಚರಿಕೆ ನೀಡಲಾಯಿತು. ತಲುಪಬೇಕಾದ ನೆಲೆಯನ್ನು ಸೇರಿದಾಗ ಆ ಹುಡುಗನ ಚಣ್ಣ ಒದ್ದೆಯಾಗಿತ್ತು. ಮೂತ್ರ ವಿಸರ್ಜನೆ ಮಾಡಬೇಕೆಂದು ಏಕೆ ಕೇಳಲಿಲ್ಲವೆಂದು ಪರಿಚಾರಿಕೆ ಹುಡುಗನನ್ನು ಕೇಳಿದಾಗ, "ಪ್ರಯಾಣ ಕಾಲದಲ್ಲಿ ಮಾತನಾಡದಿರುವಂತೆ ನೀನೇ ಹೇಳಿದ್ದೆ" ಎಂದು ಮುಗ್ಧವಾಗಿ ಉತ್ತರಿಸಿದನಂತೆ ಆ ಹುಡುಗ.

ಹಳ್ಳಿಗಾಡಿನ ರೈತ ಮಕ್ಕಳೊಂದಿಗೆ ಬೆರೆತು ಈ ಅನಾಥ ಮಕ್ಕಳು ಚೆನ್ನಾಗಿಯೇ ಬೆಳೆಯತೊಡಗಿದರು. ಆದರೆ ಈ ಹೊಸ ಮಕ್ಕಳು ಹಳ್ಳಿಗಳಿಗೆ ಬಂದು ಸೇರಿದ ಸುಳಿವು ನಾಜಿಗಳಿಗೆ ದೊರೆಯಲು ತಡವಾಗಲಿಲ್ಲ. ಈ ಸುದ್ದಿ ದೊರೆತೊಡನೆ ಆ ಮಕ್ಕಳನ್ನು ವಶಪಡಿಸಿಕೊಳ್ಳಲು ಅವರು ತುಂಬ ಪ್ರಯತ್ನಪಟ್ಟರೂ ಲಿನ್ ಪಟ್ಟಣದ ಸುತ್ತಮುತ್ತಲ ಹಳ್ಳಿಗಳಿಂದ ಕೇವಲ ಆರು ಮಂದಿ ಮಕ್ಕಳನ್ನು ಮಾತ್ರ ವಶಪಡಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು.

ಫಾದರ್ ಚೈಲೆಟ್‌ನ್ನು ಯಹೂದಿ ಮಕ್ಕ-ಳನ್ನು ಅಡಗಿಸಿಟ್ಟ ಕೆಲವಾರು ತಿಂಗಳಲ್ಲಿ ನಾಜಿಗಳು, ಇನ್ನೂರು ಮಂದಿ ಯಹೂದಿ ಮಕ್ಕಳನ್ನು ಕಡ್ಡಾಯವಾಗಿ ಹಿಡಿದೊಪ್ಪಿಸುವಂತೆ ಪೋಲೀಸರಿಗೆ ಆದೇಶ ನೀಡಿದರು. ತಮಗೆ ವಹಿಸಲಾಗಿದ್ದ ಕೆಲಸವನ್ನು ಪೂರೈಸಲು ಅವರು ನಗರ ಗಲ್ಲಿಗಲ್ಲಿಗಳನ್ನೂ ಮನೆ ಮನೆಗಳನ್ನೂ ಶೋಧಿಸತೊಡಗಿದರು. ಆಗ ಫಾದರ್ ಚೈಲೆಟ್ ನಾಜಿಗಳ ಈ ಅಮಾನುಷ ಕ್ರಮವನ್ನು ಬಹಿರಂಗವಾಗಿ ಖಂಡಿಸಿದಾಗ ಆತನನ್ನು ಸೆರೆಮನೆಗೆ ದೂಡಲಾಯಿತು.

ಯಹೂದ್ಯರಿಗೆ ರಕ್ಷಣೆ ನೀಡುವಂತೆ ಪ್ರೊಟೆಸ್ಟಂಟ್ ಮತ್ತು ಕ್ಯಾಥೋಲಿಕ್ ಚರ್ಚುಗಳಿಗೆ ಮನವಿಮಾಡಿಕೊಂಡು ಫಾದರ್ ಚೈಲೆಟ್ ಬರೆದ ಪತ್ರವೊಂದು ರಹಸ್ಯವಾಗಿ ಜೈಲಿನಿಂದ ಹೊರಗೆ ಹೋಯಿತು. ಈ ಪತ್ರದ ಪ್ರತಿಗಳನ್ನು ಹತ್ತು ಸಾವಿರ ಕ್ರಿಶ್ಚಿಯನ್ ಪಾದ್ರಿಗಳಿಗೆ ತಲುಪಿಸಿದ ಪರಿಣಾಮವಾಗಿ ಹಿಟ್ಲರನ ಸರ್ವಾಧಿಕಾರದ ವಿರುದ್ಧ ಫ್ರಾನ್ಸಿನಾದ್ಯಂತ ಚರ್ಚು ಉಗ್ರವಾಗಿ ಚಳವಳಿಯನ್ನೇ ನಡೆಸಿತು.

ಮೂರು ತಿಂಗಳ ನಂತರ ಚೈಲೆಟ್ ಸೆರೆಮನೆಯಿಂದ ಬಿಡುಗಡೆಯಾದಾಗ, ಆತ ಕೈಗೊಂಡ ಮೊದಲ ಕೆಸವೆಂದರೆ ತನ್ನ ಸಂಸ್ಥೆಯೊಂದಿಗೆ ಭೂಗತ ಚಟುವಟಿಕೆಯಲ್ಲಿ ತೊಡಗಿದ್ದು. ಆಗ ನಾಜಿ ಜರ್ಮನಿಯ ಆಡಳಿತವನ್ನು ಉಗ್ರವಾಗಿ ಖಂಡಿಸಿ ಹೊರಡಿಸುತ್ತಿದ್ದ ಈತನ 'ದಿ ಕ್ರಿಶ್ಚಿನ್ ವಿಟ್‌ನೆಸ್' ಪತ್ರಿಕೆಯ ರಹಸ್ಯ ಪ್ರಸಾರ ಎರಡು ಲಕ್ಷಕ್ಕೂ ಮಿಕ್ಕಿತ್ತು.

ಫಾದರ್ ಚೈಲೆಟನನ್ನು ಜನರು ನಾಜಿಶಾಹಿಯ ಪ್ರತಿರೋಧ ಚಳುವಳಿಯ ಅಧ್ಯಾತ್ಮಿಕ ಗುರುವೆಂದು ಅಂಗೀಕರಿಸಿದರು. ನಾಜಿಗಳ ವಿರುದ್ಧ ಹೋರಾಡುತ್ತಿದ್ದ ಫ್ರೆಂಚ್ ಸೇನಾನಿ ಜನರಲ್ ಡಿಗಾಲ್ ಭೂಗತ ಸಮಾಜ ಸೇವಾ ಸಂಸ್ಥೆಗಳೆಲ್ಲದರ ಮುಖ್ಯಸ್ಥನನ್ನಾಗಿ ಫಾದರ್ ಚೈಲೆಟನನ್ನು ನೇಮಿಸಿದ.

ಗ್ರೆನೊಬೆಲ್ ನಗರದ ಕೊಳಗೇರಿಯಲ್ಲಿದ್ದ ಚಿಕ್ಕ ಕೋಣೆಯೊಂದು ಚೈಲೆಟನ ಭೂಗತ ಕಾರ್ಯಚರಣೆಗಳ ಕೇಂದ್ರವಾಗಿತ್ತು. ನಾಜಿಗಳ ಕಾಕದೃಷ್ಟಿಯಿಂದ ಯಹೂದಿ ಮಕ್ಕಳನ್ನು ಅಡಗಿಸಿಡಲು ಅನೇಕ ಕ್ಲಿಷ್ಟವಾದ ಯೋಜನೆಗಳನ್ನು ಆತ ನಿಯೋಜಿಸಿ ಯಶಸ್ವಿಯಾದದ್ದು ಈ ಕೋಣೆಯಿಂದಲೇ. ಒಂದು ಸಲ ಚೈಲೆಟ್ ಭೂಗತ ಕಾರ್ಯ

ಕರ್ತರಿಗೆ ರಹಸ್ಯ ಪತ್ರಗಳನ್ನು ಬರೆಯುತ್ತಿರುವಾಗ ನಾಜಿ ರಹಸ್ಯ ಪೋಲೀಸು ಪಡೆಯವರು ಇವನ ಕೋಣೆಯಲ್ಲಿ ಅನಿರೀಕ್ಷಿತವಾಗಿ ನುಗ್ಗಿದರು. ಕೂಡಲೆ ಜೈಲೆಟ್ ಆ ಪತ್ರಗಳನ್ನು ಅವಸರವಸರವಾಗಿ ನುಂಗಿ ಅಲ್ಲಿಂದ ಪಾರಾಗಿ ಹೋದ.

ಕ್ರಮೇಣ ತನ್ನ ಚಳುವಳಿಯನ್ನು ಜೈಲೆಟ್ ಫ್ರಾನ್ಸಿನ ಮೂಲೆ ಮೂಲೆಗೂ ವಿಸ್ತರಿಸಿದ. ಅವನ ಅಸಂಖ್ಯಾತ ಕಾರ್ಯಕರ್ತರಲ್ಲಿ ಸಂದೇಶವಾಹಕರಾದ ಚಿಕ್ಕ ಚಿಕ್ಕ ಬಾಲಕರೂ ಸೇರಿದ್ದರು.

೧೯೪೨ರ ಜುಲೈ ತಿಂಗಳೊಂದು ದಿನ ಪ್ಯಾರಿಸ್ ನಗರದಲ್ಲಿ ಜರ್ಮನ್ನರು ಹದಿಮೂರು ಸಾವಿರ ಯಹೂದ್ಯರನ್ನು ಹಿಡಿದು ವೆಲೊಡ್ರೊಮ್ ಡಿ ಹೈವರ್ ಎಂಬ ದೊಡ್ಡ ಕ್ರೀಡಾಂಗಣದಲ್ಲಿ ದೂಡಿ ಬಂಧನದಲ್ಲಿಟ್ಟರು. ಇದನ್ನು ಕಂಡ ಫ್ರೆಂಚ್ ನಾಗರಿಕರಲ್ಲಿ ತಕ್ಷಣ ಕರ್ತವ್ಯಪ್ರಜ್ಞೆ ಮೂಡಿ ತಂದೆ ತಾಯಿಗಳನ್ನು ಕಳೆದುಕೊಂಡು ರೋದಿಸುತ್ತಾ ಬೀದಿಗಳಲ್ಲಿ ಅಲೆಯುತ್ತಿದ್ದ ಯಹೂದಿ ಮಕ್ಕಳನ್ನು ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ತಮ್ಮ ಮಕ್ಕಳಂತೆಯೆ ಸಲಹಿದರು.

ಡೊಮಿನಿಕನ್ ಪಂಥದ ಪಾದ್ರಿ ಡುವಾಕ್ಸ್ ಅನಾಥ ಯಹೂದಿ ಮಕ್ಕಳನ್ನು ಸಂಗ್ರಹಿಸಿ ತರಲು ಕ್ಯಾಥೋಲಿಕ್ ಸಂನ್ಯಾಸಿನಿಯರನ್ನು ಪ್ಯಾರಿಸ್ ನಗರದಾದ್ಯಂತ ಕಳುಹಿಸಿದ. ಈ ಸಂನ್ಯಾಸಿನಿಯರು ನಾಜಿಗಳ ಕಣ್ಣು ತಪ್ಪಿಸಿ ಮೂವತ್ತು ಮಕ್ಕಳನ್ನು ಡುವಾಕ್ಸ್‌ನ ಬಳಿ ಕರೆತಂದರು. ಪ್ಯಾರಿಸ್ ನಗರದ ಹೊರವಲಯದ ಹಳ್ಳಿಗಾಡಿನಲ್ಲಿ ಈ ಮಕ್ಕಳಿಗೆ ಸ್ಥಿರವಾದ ನೆಲೆ ದೊರಕಿಸುವವರೆಗೂ ಅವರನ್ನು ಪ್ಯಾರಿಸ್ ನಗರದ ತಮ್ಮ ಗೆಳೆಯರ ಮನೆಗಳಲ್ಲಿ ಅಡಗಿಸಿಡುವ ಏರ್ಪಾಟು ಮಾಡಲಾಯಿತು. ಮತ್ತೆ ಡುವಾಕ್ಸ್‌ನ ಸಂನ್ಯಾಸಿನಿಯರು ಯಹೂದಿ ಮಕ್ಕಳ ಸಂಗ್ರಹಕ್ಕಾಗಿ ಪ್ಯಾರಿಸ್ ನಗರದಲ್ಲೆಲ್ಲ ಅಲೆಯತೊಡಗಿದರು.

ಅವರನ್ನು ರಕ್ಷಿಸುವುದು ಅತಿ ಕಷ್ಟಕರವಾಗಿತ್ತು. ಎರಡನೆಯ ಮಹಾಯುದ್ಧ ಆರಂಭವಾಗುವುದಕ್ಕೆ ಮೊದಲೇ ನಾಜಿಗಳ ವಿರುದ್ಧ ಆತ ತಳೆದ ಉಗ್ರಧೋರಣೆಯಿಂದಾಗಿ ಡುವಾಕ್ಸ್ ಯುರೋಪಿನ ತುಂಬೆಲ್ಲ ಪರಿಚಿತನಾಗಿದ್ದ. ಒಂದು ದಿನ ನಾಜಿಗಳು ಅವನ ಮನೆಯನ್ನು ಮುತ್ತಿ ಅಲ್ಲಿ ದೊರೆತ ಕಾಗದ ಪತ್ರಗಳನ್ನು ವಶಪಡಿಸಿಕೊಂಡರು. ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ನಾಜಿಗಳ ರಹಸ್ಯಪಡೆ ಆತನ ಚಲನವಲನಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿತ್ತು.

ಪ್ಯಾರಿಸ್ ನಗರದಲ್ಲಿ ಜುಲೈ ತಿಂಗಳಲ್ಲಿ ನಾಜಿಗಳು ಯಹೂದ್ಯರ ಮೇಲೆ ನಡೆಸಿದ ದಾಳಿಯ ನಂತರ ರಹಸ್ಯ ಪಡೆಯವರು ಅನೇಕ ಯಹೂದಿ ಮಕ್ಕಳನ್ನು ಹಿಡಿದುಕೊಂಡು ಹೋಗಿ ಸೆರೆಮನೆಗೆ ದೂಡಿದರು. ಅನಂತರ ನಾನಾ ರೀತಿಯಲ್ಲಿ ಆ ಹಸುಳೆಗಳ ಅವಸಾನವಾಯಿತು.

ಬಂಧನದಲ್ಲಿ ಹಿಂಸಿಸಲ್ಪಡುತ್ತಿದ್ದ ಯಹೂದಿ ಮಕ್ಕಳನ್ನು ಕಂಡ ರೆಡ್ ಕ್ರಾಸ್ ಕಾರ್ಯಕರ್ತನೊಬ್ಬ ಪಾದ್ರಿ ಪೌಲ್ ವೆರಗಾರನಿಗೆ ಹೇಳಿದಾಗ



"ಪಕ್ಕದ ಮನೆಯೋರು ಕೇಳಿದ್ದಕ್ಕೆಲ್ಲಾ ಇಲ್ಲ ಅನ್ನು ಅಂದೆಯಲ್ಲ; ಈಗ ತಾನೇ ಅವರು ನಿಮ್ಮಮ್ಮನಿಗೆ ಬುದ್ಧಿ ಇದೆಯಾಂತ ಕೇಳಿದ್ರು."

ಕುಬ್ಜಕಾಯದ ಆ ಪಾದ್ರಿ ಕೋಪದಿಂದ ಕೆಂಡವಾದ. ಆ ಅಪಾಯಕರಮಕ್ಕಳನ್ನು ಪಾರುಮಾಡುವ ಬಗ್ಗೆ ಅಪಾಯಕರವಾದ ಉಪಾಯವೊಂದು ಅವನ ತಲೆಯಲ್ಲಿ ಮಿಂಚಿತು. ಗೆಸ್ಟಪೋ ಕೇಂದ್ರ ಕಛೇರಿಯಿಂದ ಮಕ್ಕಳನ್ನು ಬಂಧನದಿಂದ ಬಿಡುಗಡೆ ಮಾಡುವಂತೆ ಆದೇಶವುಳ್ಳ ಖೊಟ್ಟಿ ಪತ್ರವೊಂದನ್ನು ಚಾಕಚಕ್ಯತೆಯಿಂದ ವೆರಗಾರ್ ಸೃಷ್ಟಿಸಿದ. ಬಳಿಕ ಪ್ಯಾರಿಸ್ಸಿನ ಕೊಳಗೇರಿಯೊಂದರಲ್ಲಿ ತಾನು ನಡೆಸುತ್ತಿದ್ದ ಅನಾಥಾಲಯದಿಂದ ತನ್ನ ಪತ್ನಿಯೂ ಸೇರಿದಂತೆ ಹನ್ನೆರಡು ಮಂದಿ ಮಹಿಳೆಯರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಬಂದೀಖಾನೆಯ ನಾಜಿ ಅಧಿಕಾರಿಗಳಿಗೆ ಖೊಟ್ಟಿ ಆಜ್ಞಾಪತ್ರವನ್ನೊಪ್ಪಿಸಿ ಯಹೂದಿ ಮಕ್ಕಳನ್ನು ಬಿಡಿಸಿಕೊಂಡು ಬಂದ.

ಮಾರನೆಯ ದಿನ ಚೈಲೆಟ್ ಮತ್ತು ಡುಪಾಕ್ವಿರ ಸಹಕಾರದೊಂದಿಗೆ ಪಾದ್ರಿ ವೆರಗಾರ್ ನಾಜಿ ರಕ್ಕಸರ ಮೂಗಿನಡಿಯಲ್ಲೇ ಆ ಅನಾಥಮಕ್ಕಳಿಗೊಂದು ಸ್ಥಿರವಾದ ಸುರಕ್ಷಿತ ನೆಲೆಯನ್ನು ಹುಡುಕುವ ಸಾಹಸದಲ್ಲಿ ತೊಡಗಿದ.

ಅನಂತರ ಎರಡು ಸಲ ಆತನ ಅನಾಥಾಲಯದ ಮೇಲೆ ನಾಜಿ ರಹಸ್ಯ ಪಡೆಗಳು ದಾಳಿ ನಡೆಸಿದವು. ಮೊದಲ ಸಲ ನಡೆದ ದಾಳಿಯಲ್ಲಿ ವೆರಗಾರನ ಭಾವ ಕೊಲ್ಲಲ್ಪಟ್ಟ. ನಾಜಿಗಳು ವೆರಗಾರನ ಹೆಂಡತಿ ಹಾಗೂ ಮಗನನ್ನು ಬಂಧಿಸಿ ಚಿತ್ರಹಿಂಸೆಗೆ ಒಳಪಡಿಸಿದರು. ಅನಂತರ ಆತನ ಮಗನನ್ನು ದೇಶದಿಂದ ಗಡಿಪಾರು ಮಾಡಲಾಯಿತು.

ಈ ಮೂವರು ಪಾದ್ರಿಗಳು ನಡೆಸುತ್ತಿದ್ದ ಭೂಗತ ಸೇವಾ ಸಂಸ್ಥೆಗಳಲ್ಲಿ ಸುಮಾರು ಎಂಟು ಸಾವಿರಕ್ಕೂ ಮಿಕ್ಕಿ ಯಹೂದಿ ಮಕ್ಕಳನ್ನು ಅಡಗಿಸಿಡಲಾಗಿತ್ತೆಂದು ಅನಂತರ ತಿಳಿದು ಬಂದಿತು. ಈ ಕ್ರೈಸ್ತ ಪಾದ್ರಿಗಳ ನಿಃಸ್ವಾರ್ಥಭಾವ, ಮಾನವೀಯ ಅನುಕಂಪ ಮತ್ತು ಅಸಾಧಾರಣ ಕಾರ್ಯಕೌಶಲವನ್ನು ಎಷ್ಟು ಕೊಂಡಾಡಿದರೂ ಸಾಲದು. ಯುದ್ಧ ಮುಗಿದಾಗ ಈ ಅನಾಥಾಲಯಗಳಿಂದ ತಮ್ಮ ಮಕ್ಕಳನ್ನು ಹಿಂದಕ್ಕೆ ಪಡೆಯಲು ಕೇವಲ ಕೆಲವೇ ಮಂದಿ ಯಹೂದ್ಯರು ಮಾತ್ರ ಬದುಕಿ ಉಳಿದಿದ್ದರು.

ಯಹೂದ್ಯರ ಕಗ್ಗೊಲೆಯಿಂದಾಗಿ ದೇಶವನ್ನಾವರಿಸಿದ್ದ ದುಃಖದ ಕಾರ್ಮೋಡಗಳ ನಡುವೆಯೂ ಆಗಾಗ ಸಂತಸದ ಸೆಳಕೊಂದು ಮಿಂಚುತ್ತಿತ್ತು. ಸಾವಿರಾರು ಅನಾಥ ಯಹೂದಿ ಮಕ್ಕಳ ತಂದೆ-ತಾಯಿಗಳು ಬದುಕಿರದ ಕಾರಣ ಅವರೆಲ್ಲಾ ಅವರ ಸಾಕು ತಂದೆತಾಯಿಗಳ ಮಕ್ಕಳೇ ಆಗಿ ಅವರ ಸಂತಸಕ್ಕೆ ಕಾರಣರಾದರು. ✡

ಅವಕಾಶ ಸಿಕ್ಕಿದರೆ ಈ ಕಾಲದಲ್ಲಿ ಮಂತ್ರಿಗಳಿಂದ ಹಿಡಿದು ತಂತ್ರಿಗಳ ವರೆಗೆ ಎಲ್ಲರೂ ತಮ್ಮ ಕಾಲಕ್ಕೇ ಅಲ್ಲ, ತಮ್ಮ ಮೊಮ್ಮಕ್ಕಳ ಕಾಲದ ವರೆಗೂ ಆಗಬಹುದಾದಷ್ಟು ಆಸ್ತಿ-ಪಾಸ್ತಿಗಳನ್ನು ಮಾಡಿಕೊಳ್ಳುವದು ಸಾಮಾನ್ಯ ಎಂದಾಗ ಈ ಘಟನೆ ನೆನಪಾಗುತ್ತದೆ.

ವಿಶ್ವೇಶ್ವರಯ್ಯನವರು ಮೈಸೂರಿನಲ್ಲಿ ತಮ್ಮ ಹುದ್ದೆಯಿಂದ ನಿವೃತ್ತರಾದ ಮೇಲೆ ನಿವೃತ್ತಿಗೆ ಮೊದಲಿದ್ದ ಬಂಗಲೆಯನ್ನು ಕೂಡಲೇ ಬಿಟ್ಟು ಹೊರ ಬಂದಾಗ ಬಾಡಿಗೆಗೆ ಮನೆ ದೊರೆಯುವುದೂ ಕಷ್ಟಸಾಧ್ಯವಾಗಿ ಕೊನೆಗೆ ಯಾವುದೋ ಒಂದು ಸಾಮಾನ್ಯ ವಾಸದ ಮನೆಯಲ್ಲಿಯೆ ಬಾಡಿಗೆ ಹಿಡಿದು ಸಂತೋಷವಾಗಿ ಇರತೊಡಗಿದರು. ಇದನ್ನು ತಿಳಿದ ಸರ್ ಮಿರ್ಜಾ ಇಸ್ಮಾಯಿಲ್ ಅವರು ವಿಶ್ವೇಶ್ವರಯ್ಯನವರನ್ನು ಭೇಟಿಯಾಗಿ ಅವರಿಗೆ ಸರಕಾರಿ ಜಾಗವನ್ನು ಮಂಜೂರು ಮಾಡಿ ಮನೆ ಕಟ್ಟಿಸಿ ಕೊಡುವುದಾಗಿ ಹೇಳಿದರು. ಆಗಲೂ ವಿಶ್ವೇಶ್ವರಯ್ಯನವರದು ಅದೇ ಹಟ, "ಬಾಡಿಗೆ ಕೊಟ್ಟಾದರೆ ಅದರಲ್ಲಿರುತ್ತೇನೆ," ಎಂದು.

ಕೃ. ನಾರಾಯಣರಾವ್



సంగీత

మారియా ఘాన్ ట్రాప్‌ల ఆత్మచరిత్ర

ಸಂಗೀತ ನಾದ

'ಟ್ರ್ಯಾಪ್ ಕುಟುಂಬದ ಸಂಗೀತಗಾರರು' ಎಂದು ಹೆಸರುವಾಸಿಯಾದ ಪಾಶ್ಚಿಮಾತ್ಯ ಗಾನಮೇಳವು ಅದೆಷ್ಟು ಜನಪ್ರಿಯವಾಯಿತೆಂದರೆ, ಅವರ ಬಗ್ಗೆ 'The Sound of Music' ಎಂಬ ಮನೋಹರ ಚಲನಚಿತ್ರ ನಿರ್ಮಿಸಲ್ಪಟ್ಟು ಜಗತ್ತಿನಾದ್ಯಂತ ಆಬಾಲವೃದ್ಧರ ಮನಸ್ಸೆಳೆಯಿತು. ಈ ಕುಟುಂಬದ ಸಂಗೀತ ಸ್ಫೂರ್ತಿಯಾದವಳು ಮಾರಿಯಾ. ಇಪ್ಪತ್ತನೆಯ ಎಳೆ ವಯಸ್ಸಿನಲ್ಲಿ ಆಸ್ಟ್ರಿಯದ ಸಂನ್ಯಾಸಿನಿ ಆಶ್ರಮದಲ್ಲಿ ಅಭ್ಯರ್ಥಿನಿಯೆಂದು ಸೇರಿದವಳು. ವಿಧುರನಾದ ಕ್ಯಾಪ್ಟನ್ ಫಾನ್ ಟ್ರ್ಯಾಪ್‌ನ ಮಕ್ಕಳನ್ನು ನೋಡಿಕೊಳ್ಳಲು ಅವನ ಮನೆಗೆ ಹೋಗಬೇಕಾದಾಗ, ತನ್ನ ಗಿಟಾರ ಮತ್ತು ಅತ್ಯುಲ್ಲಾಸದ ಕೊಡುಗೆಯೊಡನೆ ಅಲ್ಲಿ ಹೋಗಿ ಇದ್ದು, ನಂತರ ಅವನನ್ನು ವಿವಾಹವಾಗಿ, ಪ್ರೇಮ, ಶ್ರದ್ಧೆಗಳ ಆನಂದಮಯ ತಳಪಾಯದ ಮೇಲೆ ಸುಖ-ಸಮೃದ್ಧಿಯ ಆಪ್ತ ಕುಟುಂಬವನ್ನು ರೂಪಿಸಿ, ಸಂಗೀತ ಶಿಖರವನ್ನೇರಿದಳು.

ಇದು ಮಾರಿಯಾ ಫಾನ್ ಟ್ರ್ಯಾಪ್‌ಳ ಸುಂದರ ಆತ್ಮಚರಿತ್ರೆ; ಪ್ರೇಮ ಮತ್ತು ಸಂಗೀತದ ಎಳೆಗಳಿಂದ ಹೆಣೆದ ಹೃತ್ಪೂರ್ವಕ ಕಥೆ; ದೇವರ ದಿವ್ಯಾನುಗ್ರಹಕ್ಕಾಗಿ ಅನಂತ ಮಮತೆ, ಕೃತಜ್ಞತೆಯನ್ನು ಅರ್ಪಿಸುವ ಅಪೂರ್ವ ಭಕ್ತಿಗೀತೆ.

೧

ಆಸ್ಟ್ರಿಯದ ಸೋನ್‌ಬರ್ಗಿನಲ್ಲಿ ನಾನು ಆಗಷ್ಟೇ ಹೊಸ ಅಭ್ಯರ್ಥಿಯಾಗಿ ಕಾಲಿರಿಸಿದ್ದೆ. ಹನ್ನೆರಡುನೂರು ವರ್ಷಗಳಷ್ಟು ಪುರಾತನವಾದ ಬೆನೆಡಿಕ್ಟೈನ್ ಪಂಥದ ಈ ಪ್ರಪ್ರಥಮ ಸಂನ್ಯಾಸಿನಿಯರ ಆಶ್ರಮ ಆಲ್ಪ್ಸ್ ಪರ್ವತಾವಳಿಯ ಉತ್ತರ ದಿಕ್ಕಿನಲ್ಲಿದ್ದು, ಜಗತ್ತಿನಲ್ಲಿಯೇ ಅಲೌಕಿಕ ಸೌಂದರ್ಯ, ಪ್ರಶಾಂತ ವೈಭವದ ರಮ್ಯಧಾಮವಾಗಿದೆ.

ಒಂದು ದಿನ, ಪೂಜ್ಯ ಮಹಾಮಾತೆಯ ಖಾಸಾ ಕೋಣೆಯಲ್ಲಿ ನಾನು ಅವರನ್ನು ಕಾಣಬೇಕೆಂದು ನನಗೆ ಸಂದೇಶ ಬಂದಾಗ, ನಾನು ನನ್ನ ಕಿವಿಗಳನ್ನೇ ನಂಬದಾಗಿದೆ. ನಾವು ಅಭ್ಯರ್ಥಿಗಳು ಮಹಾಮಾತೆಯನ್ನು ಕಾಣುವುದು ದೂರದಿಂದ ಮಾತ್ರ. ಅವರೂ ಅಭ್ಯರ್ಥಿಗಳನ್ನು ಕರೆಕಳಿಸುತ್ತಿರುವುದು ತುಂಬ ಅಸಂಭವ. ಯಾವ ಕಾರಣಕ್ಕಾಗಿ ನನ್ನನ್ನು ಬರ ಹೇಳಿರಬಹುದೆಂದು ಯೋಚಿಸಿದೆ. ಈ ಸಮಾಜದಲ್ಲಿ ನಾನು ನಂಬಲನರ್ಹಳಾಗಿರುವುದೇನೋ ನಿಜ: ಆಶ್ರಮದ ಆವಾರದಲ್ಲಿ ವೇಗದಿಂದ ಓಡುವುದು, ಮಾಳಿಗೆಯ ಮೇಲೆ ಜಿಗಿದಾಡುವುದು, ಸಿಳ್ಳು ಹಾಕುವುದು (ಪವಿತ್ರ ವಾತಾವರಣ ಧಾಟಿ ಖೂಡದರೂ ಸಿಳ್ಳುಹಾಕುವುದು ನಿಷಿದ್ಧ) ಸೋಪಾನ ಮಾರ್ಗದಲ್ಲಿ ಜಾರುವುದು ಇತ್ಯಾದಿ ಅಶಿಸ್ತಿನ ವರ್ತನೆಗಳಿಗಾಗಿ ನನಗೆ ಮೇಲಿಂದ ಮೇಲೆ ಎಚ್ಚರಿಕೆ ಕೊಡಲಾಗುತ್ತಿತ್ತು.

ಈಗ ಯಾವ ತಪ್ಪಿಗಾಗಿ ಈ ಕರೆ? ಎಂದು ಚಿಂತಿಸುತ್ತಲೇ ಮಹಾನ ಮಾತೃಶ್ರೀ ಮೇರೆಗೆ

ಮೆಲ್ಲನೆ ಹೆಜ್ಜೆ ಹಾಕಿದೆ. ಆಶ್ರಮದ ಈ ಭಾಗವನ್ನು ನಾನು ನೋಡುತ್ತಿರುವುದು ಇದೇ ಮೊದಲ ಸಲ. ಮನಸ್ಸು ಉದ್ವೇಗಗೊಂಡಿದ್ದರೂ ಪ್ರಪಂಚದಲ್ಲಿಯೇ ಅತ್ಯಂತ ಮನೋಹರವೆನಿಸಿದ ಈ ನೆಲೆಯ ಸೊಬಗಿನಿಂದ ಮಂತ್ರಮುಗ್ಧಳಾಗಿ ಮುಂದೆ ಸಾಗಿದೆ.

ತಿರುಗು ಮೆಟ್ಟಲನ್ನು ನಿಧಾನವಾಗಿ ಹತ್ತಿ ಕೊಂಚ ದೂರ ಹೋದಮೇಲೆ ಮಹಾಮಾತೆಯ ಕೋಣೆಯ ಭಾರವಾದ ಓಕ್ ಮರದ ಮಹಾದ್ವಾರದ ಮುಂದೆ ಒಂದು ನಿಮಿಷ ತಡೆದು ನಿಂತು, ಸಂಕೋಚದಿಂದ ಬಾಗಿಲನ್ನು ತಟ್ಟಿದೆ.

"ಒಳಗೆ ಬಾ." ಎಂದು ಮೆಲ್ಲನೆಯ ಆದೇಶ ಕೇಳಿ ಆ ದೊಡ್ಡ ಕೋಣೆಯನ್ನು ಒಳಹೊಕ್ಕೆ.

"ಮಗು ಮಾರಿಯಾ, ಚೆನ್ನಾಗಿದ್ದೀಯಾ ?" ಮಹಾಮಾತೆ ಪ್ರೇಮದಿಂದ ಕೇಳಿದರು.

ಆ ಕರುಣಾಮಯಿಯ ಧ್ವನಿ ಕೇಳಿ ಮನಸ್ಸು ಹಗುರವಾಯಿತು. "ಬಾ ಮಗೂ, ಇಲ್ಲಿ ನನ್ನ ಹತ್ತಿರ ಕುಳಿತುಕೋ."

ಕೆಲ ನಿಮಿಷಗಳ ನಂತರ ನನ್ನ ಎರಡೂ ಕೈಗಳನ್ನು ಹಿಡಿದುಕೊಂಡು, ನನ್ನ ಕಣ್ಣುಗಳಲ್ಲೇ ಕಣ್ಣಿಟ್ಟು ಪ್ರಶ್ನಾರ್ಥಕವಾಗಿ ದಿಟ್ಟಿಸುತ್ತ ಕೇಳಿದರು: "ಈಗ ಹೇಳು ಮಗು. ನಮ್ಮ ಆಶ್ರಮದಲ್ಲಿ ನೀನು ಕಲಿತ ಅತಿ ಮುಖ್ಯವಾದ ಪಾಠ ಯಾವುದು ?"

ಕ್ಷಣಮಾತ್ರವೂ ಅನುಮಾನಿಸದೇ ಉತ್ತರಿಸಿದೆ: "ಜಗತ್ತಿನಲ್ಲಿ ದೈವಸಂಕಲ್ಪ ಯಾವುದೆಂದು ಪರಿಶೋಧಿಸಿ, ಅದನ್ನು ನೆರವೇರಿಸುವುದೇ ನಮ್ಮ ಅತಿ ಮುಖ್ಯವಾದ ಕರ್ತವ್ಯ."

"ಅದು ಅನಿಷ್ಟ, ಇಲ್ಲವೆ ಅತಿ ಕಠಿಣವಾದರೂ?"

"ಹೌದು ಮಹಾತಾಯಿ, ಹೇಗಿದ್ದರೂ ಅದನ್ನು ಮನಃಪೂರ್ವಕವಾಗಿ ಮಾಡಬೇಕು."

"ಸರಿಯಾಗಿ ಹೇಳಿದೆ ಮಗು...... ಈಗ ನೀನು ನಮ್ಮನ್ನು ಕೆಲಕಾಲ ಅಗಲಬೇಕೆಂದು ದೈವಸಂಕಲ್ಪವಾಗಿದೆ."

ಮಾತೆಯ ಮಾತಿನಿಂದ ನಾನು ಭೀತಳಾದೆ; ಮೂಕಳಾದೆ. ಕಂಬನಿಗಳುಕ್ಕಿ ಹರಿಯತೊಡಗಿದಂತೆ ಮಾತೃವಾತ್ಸಲ್ಯದ ಆ ತಾಯಿ ಕಂಪಿಸುತ್ತಿರುವ ನನ್ನ ಭುಜದ ಮೇಲೆ ಕೈಯಿಟ್ಟು, "ಹೆದರಬೇಡ ಬೇಡ ಮಗೂ, ಆ ಸ್ವಚ್ಛಂದ ವಾತಾವರಣದಿಂದ ಈ ಮಠದೊಳಗಿನ ಬಂಧನಕರ ವಾತಾವರಣಕ್ಕೆ ಅತೀ ಶೀಘ್ರವಾಗಿ ಹೊಂದಿಕೊಳ್ಳುವಂಥ ಸ್ಥಿತ್ಯಂತರವೇ ನಿನ್ನನ್ನು ಸತತವಾಗಿ ಬಾಧಿಸುತ್ತಿರುವ ತಲೆನೋವಿಗೆ ಕಾರಣವೆಂದು ವೈದ್ಯರ ಅಭಿಪ್ರಾಯ. ಆದಕಾರಣ ನಿನಗೆ ಕೆಲವು ತಿಂಗಳು ವಾತಾವರಣದ ಬದಲಾವಣೆ ಅವಶ್ಯವೆನ್ನುತ್ತಾರೆ ಅವರು. ಈ ದಿನ ಅಕಸ್ಮಾತ್ತಾಗಿ ಆಸ್ಟ್ರಿಯದ ನೌಕಾಪಡೆಯ ನಿವೃತ್ತ ಅಧಿಕಾರಿ ಒಬ್ಬ ನಮ್ಮನ್ನು ಭೇಟಿಯಾಗಲು ಬಂದಿದ್ದ. ಬ್ಯಾರನ್ ಜಾರ್ಜ್ ಫಾನ್ ಟ್ರ್ಯಾಪ್ ಅವನ ಹೆಸರು. ಅಸ್ವಸ್ಥಳಾಗಿರುವ ಅವನ ಚಿಕ್ಕ ಮಗಳಿಗೆ ಒಬ್ಬ ಶಿಕ್ಷಕಿ ಬೇಕಂತೆ. ಇಂದು ಮಧ್ಯಾಹ್ನ ನೀನು ಅವನ ಮನೆಗೆ ಹೋಗು. ಜೂನ್ ತಿಂಗಳ ವರೆಗೆ ಅಲ್ಲಿಯೇ ಇರು. ಅಲ್ಲಿಂದ ತಿರುಗಿ ಬಂದ ಮೇಲೆ ನೀನು ನಮ್ಮನ್ನು ಎಂದಿಗೂ ಅಗಲಲಾರೆ." ಎಂದು ಸಂತೈಸಿದರು.

"ಇದು ಅಕ್ಟೋಬರ ತಿಂಗಳು. ಜೂನ ವರೆಗೆಂದರೆ ಇನ್ನು ಒಂಭತ್ತು ತಿಂಗಳು ಈ ಆಶ್ರಮದಿಂದ ದೂರವಿರಬೇಕು."

ನಾನು ಒಂದು ಮಾತನ್ನೂ ಆಡಲಾರದವಳಾದೆ. ಮಂಡಿಯೂರಿ ಮಹಾಮಾತೆಯ ಆಶೀರ್ವಾದವನ್ನು ಪಡೆದೆ. ಅವರ ಕೋಮಲ ಹಸ್ತ ನನ್ನ ಹಣೆಯ ಮೇಲೆ ಶಿಲುಬೆಯ ಚಿಹ್ನೆಯನ್ನು ರೂಪಿಸುವಾಗ, ಕಷ್ಟ-ನಷ್ಟ ಗೋವು-ನೆಮ್ಮದಿಗಳ ಜ್ಞಾನವುಳ್ಳ ಆ ಶಾಂತ ನೇತ್ರಗಳನ್ನು ಅವಲೋಕಿಸುತ್ತಲೇ ಇದ್ದೆ. ದಿಗ್ಭ್ರಮೆಯಲ್ಲಿಯೇ ನನ್ನ ಕೊಠಡಿಗೆ ಹಿಂತಿರುಗಿ, ಬಟ್ಟೆಗಳನ್ನು ಬದಲಾಯಿಸಿದೆ. ಅಲ್ಲಿ ಹೊಸಬರ ಅಧಿಕಾರಿಣಿ, "ನೀನು ಸರಿಯಾದ ವಿರಾಮ ಮಿತವಾದ ವ್ಯಾಯಾಮ ಮಾಡಬೇಕು; ಬಿಡುವಿನ ದಿನದಂದು ಆಶ್ರಮಕ್ಕೆ ಬರಬೇಕು; ಲೌಕಿಕ ವ್ಯಕ್ತಿಗಳೊಡನೆ ನೀನು ವ್ಯವಹರಿಸುತ್ತಿದ್ದರೂ ನೀನು ಅವರಿಗೆ ಕೇವಲ ಅತಿಥಿ ಎಂಬುದನ್ನು ಎಂದಿಗೂ ಮರೆಯಬಾರದು," ಎಂದು ಬೋಧಿಸಿದಳು.

ಆಶ್ರಮದ ನನ್ನ ಆತ್ಮೀಯ ಸಹಪಾಠಿಗಳೆಲ್ಲರಿಗೂ ವಿಷಾದದಿಂದ ವಿದಾಯ ಹೇಳುವಾಗ

ಹೃದಯದಲ್ಲಿ ಹೇಳಲಾರದ ಅಳುಕು. ಮತ್ತೊಮ್ಮೆ ಪವಿತ್ರ ವೇದಿಕೆಯಿದುರು ಮಂಡಿಯೂರಿ ದೇವರನ್ನು ಆತ್ಮಶಕ್ತಿಗಾಗಿ ಬೇಡಿಕೊಂಡೆ. ಕೊನೆಗೊಮ್ಮೆ ಹನಿದುಂಬಿದ ಕಣ್ಣುಗಳಿಂದ ಆ ಪುರಾತನ ಹೆಬ್ಬಾಗಿಲಿನ ಹೊರಗೆ ಕಾಲಿಟ್ಟಾಗ ಅಲ್ಲಿಯೊಂದು ಹಳೆಯ ಸ್ಮಾರಕದ ಮೇಲೆ 'ದೇವರಿಚ್ಛೆಗೆ 'ಯಾಕೆ' ಅಂತಿಲ್ಲ' ಎಂಬ ಲಿಪಿಯು, ಹೊಳೆಯುವ ಸೂರ್ಯಪ್ರಕಾಶ ಹಾಗೂ ನನ್ನ ಕಣ್ಣೀರುಗಳ ಅಡ್ಡತೆರೆಯಿಂದ ಅಸ್ಪಷ್ಟವಾಗಿ ನನ್ನ ದೃಷ್ಟಿಗೆ ಬಿದ್ದಿತು. ನಿಜ; ದೈವೇಚ್ಛೆಗೆ ಪ್ರಶ್ನಾರ್ಥಕ ಚಿಹ್ನೆಯೇ ಇರುವದಿಲ್ಲ.

ಒಂದೆರಡು ಗಂಟೆಗಳ ನಂತರ ನಾನು ಸಾಲ್ಸ್‌ಬರ್ಗಿನಲ್ಲಿ ಚೆಸ್ಟ್‌ನಟ್ ಮರಗಳ ನೆರಳಿನಲ್ಲಿ ಹಸಿರು ಶಿಲಾಸನದ ಮೇಲೆ ಕುಳಿತು ಬ್ಯಾರನ್ ಫಾನ್ ಟ್ರ್ಯಾಪರ ಮನೆಯ ಕಡೆಗೆ ಹೋಗುವ ಬಸ್ಸಿಗಾಗಿ ದಾರಿ ಕಾಯುತ್ತಿದ್ದೆ: ಒಂದು ಕೈಯಲ್ಲಿ ಕ್ಯಾಪ್ಟನ್ನರ ವಿಚಾರ ಬರೆ[illegible] ಚಿಕ್ಕ ಕಾಗದವೊಂದನ್ನು ಗಟ್ಟಿಯಾಗಿ [illegible]ಕೊಂಡಿದ್ದೆ; ಇನ್ನೊಂದು ಕೈಯಲ್ಲಿ ನನ್ನ [illegible] ಸಣ್ಣ ಚೀಲ, ಕಂಕು[illegible] ನನ್ನ ಗಿಟಾರವಿತ್ತು. ನಾನಿನ್ನೂ [illegible] ಇದ್ದೆ. ಸ್ವಲ್ಪೇ ಸಮಯದಲ್ಲಿ [illegible] ಮನಸ್ವಪ್ನದಂತೆ ನಡೆದು [illegible].

*

[illegible] ಮೂರಂತಸ್ತಿನ [illegible]. [illegible] ದಟ್ಟವಾಗಿ ಬೆಳೆದ ಗಿಡಮರಗಳಿಂದ [illegible] ಗಡೆ ಹಸಿರು ಹುಲ್ಲುಗಾವಲು. [illegible] ಹೂದೋಟವಿದ್ದಿತು. [illegible] ವಿಶಾಲವಾದ ಹಜಾರದಲ್ಲಿ ಸೊಗಸಾದ [illegible] ಕುರ್ಚಿಯಲ್ಲಿ [illegible] ಕುಳಿತುಕೊಂಡು [illegible] ವಿಚಿತ್ರ [illegible]

[illegible]

ನನ್ನ ಹಿಂದುಗಡೆ ಒಮ್ಮೆಲೆ ಹೆಜ್ಜೆಯ ಸೂಕ್ಷ್ಮ ಸಪ್ಪಳಾಗಿ, ತಿರುಗಿ ನೋಡುವಷ್ಟರಲ್ಲಿ ಕ್ಯಾಪ್ಟನ್ ಫಾನ್ ಟ್ರ್ಯಾಪ್ ನನ್ನೆದುರಿಗೇ ನಿಂತಿದ್ದ. ನನ್ನ ಕಲ್ಪನೆಯ ಮುದಿಪದ್ದಿಗೂ, ನನ್ನೆದುರು ನಿಂತಿರುವ ಎತ್ತರವಾದ ಅಚ್ಚುಕಟ್ಟಾಗಿ ಬಟ್ಟೆ ಧರಿಸಿದ ಈ ರೂಪವಂತ ಸಭ್ಯಗೃಹಸ್ಥನಿಗೂ ಎಷ್ಟೊಂದು ಅಂತರ! ನಾನು ಬೆದರಿದೆನಾದರೂ ಅವನು ಹೃತ್ಪೂರ್ವಕವಾಗಿ ಕೈಕುಲುಕಿದಾಗ ಧೈರ್ಯ ತಂದುಕೊಂಡೆ.

"ನೀವು ಬಂದದ್ದು ನನಗೆ ತುಂಬ ಸಂತೋಷ ಎಂದ," ತುಂಬಿದ ಧ್ವನಿಯಲ್ಲಿ. ನಂತರ, "ಮೊದಲು ಮಕ್ಕಳನ್ನು ಭೇಟಿಯಾಗಿರಿ," ಎಂದವನೆ ತನ್ನ ಜೇಬಿನಿಂದ ಒಂದು ವಿಚಿತ್ರ ಆಕಾರದ ಹಿತ್ತಾಳೆಯ ಸೀಟಿಯನ್ನು ತೆಗೆದು, ಅದರಿಂದ ಅನೇಕ ಸ್ವರಕಂಪನದ ಸರಣಿಯನ್ನೊದಿದ.

ನಾನು ಆಶ್ಚರ್ಯಚಕಿತಳಾದುದನ್ನು ಕಂಡು "ನೋಡಿ ಇಷ್ಟೊಂದು ಮಕ್ಕಳನ್ನು ಹೆಸರು ಹಿಡಿದು ಕರೆಯುವುದು ವ್ಯರ್ಥ ಕಾಲಕ್ಷೇಪ. ಅದಕ್ಕೇ ಈ ಸೀಟಿಯ ನಾದ," ಎಂದ. ಇನ್ನು [illegible] ಗಟ್ಟಿಯಾಗಿ ಕೂಗಿಕೊಳ್ಳುತ್ತ, ಆ ಮಕ್ಕಳು [illegible]. ಅದೇನು! ನಾಲ್ವರು ಹುಡುಗಿಯರು, ಇಬ್ಬರು ಹುಡುಗರ ಗಂಭೀರ ಮೆರವಣಿಗೆ! ಮೌನ [illegible]ಲನ್ನು ಮೆಲ್ಲನೆ ಇಳಿದು ಬಂದು, "ಹೊಸ ಅಧ್ಯಾಪಿಕೆಗೆ ನಮಸ್ಕಾರ," ಎಂದರು. ಹಿರಿಯ ಮಗ ಹದಿನಾರು ವರ್ಷದವನಿರಬಹುದು; ಕೊನೆಯ ಹುಡುಗಿ ನಾಲ್ಕು ವರ್ಷ[illegible].

"ಇವರಲ್ಲಿ ನನ್ನ ಶಿಷ್ಯೆ ಯಾರು?" ಕ್ಯಾಪ್ಟನ್ನನ್ನು ಕೇಳಿದೆ. "ಬನ್ನಿ, ಅವಳ ಹತ್ತಿರ ಹೋಗೋಣ," ಎಂದು ಮಹಡಿಯ ಮೇಲೆ ಕರೆದುಕೊಂಡು ಹೋದ. ಆ ವಿಶಾಲವಾದ ಕೋಣೆಯಲ್ಲಿ ನಡುವಿನ ಹಾಸಿಗೆಯ ಮೇಲೆ [illegible]


ಮಾಡಿ ಹುಡುಗರ ಮಧ್ಯೆ ಬೆಳೆದ್ದರು. [illegible]

"ಇವಳೇ ನಿಮ್ಮ ಶಿಷ್ಯೆ ಮಾರಿಯಾ," ಕ್ಯಾಪ್ಟನ್ ಪರಿಚಯಿಸಿದ. ಓಹ್ ಅವಳೂ ಮಾರಿಯಾ! ನನ್ನನ್ನು ನೋಡಿ ಆಕೆಯ ಮುಖದಲ್ಲಿ ಮಂದ ಹಾಸ [illegible].

"ಮೆಟ್ಟಿಲಿಳಿಯುವಾಗ, ಕ್ಯಾಪ್ಟನ್ ಕೇಳಿದ: "ಮಕ್ಕಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

"ತುಂಬಾ ಗಂಭೀರವಾಗಿದ್ದಾರೆ. ಸಭ್ಯರಾಗಿ ಕಾಣುತ್ತಾರೆ."

"ಆದರೆ ಸದಾ [illegible]" ಕಣ್ಣು ಮಿಟುಕಿಸಿ, "ಅವರ ತಾಯಿ ತೀರಿಕೊಂಡಾಗಿನಿಂದ ಈ ನಾಲ್ಕು ವರ್ಷಗಳಲ್ಲಿ ನಾನು ನೇಮಿಸಿದ ಅಧ್ಯಾಪಕಿಯರ ಶ್ರೇಣಿಯಲ್ಲಿ ನೀವು ಇಪ್ಪತ್ತಾರನೆಯವರು. ನಿಮ್ಮ ಹಿಂದಿನವಳು ಎರಡೇ ತಿಂಗಳು ಇವರ ಕೈಯಲ್ಲಿದ್ದಳು. ಈ ಸಲ ಹಾಗಾಗಲಿಕ್ಕಿಲ್ಲವೆಂದು ನನಗನಿಸುತ್ತದೆ," ಎಂದ



"ಹೇಗೇನಯ್ಯಾ? ನಮ್ಮ ಹಳ್ಳಿಗೂ ವಿದ್ಯುತ್ ದೀಪ ಬರುತ್ತಂತೆ... ಕುಟುಂಬ ಯೋಜನ ಇಲಾಖೆಯವರ ಕಿತಾಪ ಹೊಸ ಇದ್ದೀತು!"

"ಹೌದು, ಇನ್ನೂ ಏಳು ತಿಂಗಳು ಜಾಸ್ತಿ ಇವರ ಕೈಯಲ್ಲಿರುತ್ತೇನೆ," ಎಂದು ನಸುನಕ್ಕೆ.

*

ಮುಂದೆ ಕೆಲ ದಿನ ನಾನು ಸತತ ದಿಗ್ಭ್ರಮೆಯಲ್ಲಿಯೇ ಕಳೆದೆ. ಆ ವಿಶಾಲವಾದ ಮನೆಯ ಸೇವಕ ಸೇವಕಿಯರು ಮತ್ತು ಬ್ಯಾರನ್ ಫಾನ್ ಟ್ರ್ಯಾಪ್ ಹಾಗು ಅವನ ಏಳು ಮಕ್ಕಳ ವಾಡಿಕೆ ಮಾಡಿಕೊಳ್ಳಬೇಕಾಗಿತ್ತು. ಇಂಥ ಅದ್ಭುತ ಬಂಗಲೆ, ಅಪಾರ ಸಂಪತ್ತು, ಅಮೂಲ್ಯ ಮಕ್ಕಳಿಂದ ಧನ್ಯನಾಗಿದ್ದರೂ ಆತ ಇಷ್ಟೇಕೆ ದುಃಖಿಯಾಗಿದ್ದಾನೆಂದು ನನಗೆ ಅರ್ಥವಾಗಲಿಲ್ಲ.

ಬ್ಯಾರನ್ ಫಾನ್ ಟ್ರ್ಯಾಪನದೊಂದು ಕೌತುಕದ ಕಥೆ. ತಂದೆಯೂ ನೌಕಾದಳದಲ್ಲಿ ಅಧಿಕಾರಿಯಾಗಿದ್ದರಿಂದ ಟ್ರ್ಯಾಪನಿಗೆ ಬಾಲ್ಯದಿಂದಲೇ ಸಮುದ್ರ, ಹಡಗುಗಳ ಸಹವಾಸವಿದ್ದಿತು. ಹದಿನೆಂಟರ ಚಿಕ್ಕವಯಸ್ಸಿನಲ್ಲಿಯೇ ಚೀನಾ ಯುದ್ಧದಲ್ಲಿ ಸೇವೆ ಸಲ್ಲಿಸಿ ಬಿರುದುಗಳನ್ನು ಪಡೆದಿದ್ದ. ನೌಕಾಪಡೆಯಲ್ಲಿ ಜಲಾಂತರ್ಗಾಮಿಗಳ ಮಹತ್ವ ಕಂಡುಹಿಡಿದ ಮೊದಲಿಗರಲ್ಲಿ ಈತನೂ ಒಬ್ಬನಾಗಿ ಆಸ್ಟ್ರಿಯಾದ ನೌಕಾದಳದ ಪ್ರಥಮ ಜಲಾಂತರ್ಗಾಮಿಯ ಸರ್ವಾಧಿಪತಿಯಾಗಿ ನೇಮಕಗೊಂಡಿದ್ದ.

ಅವನ ಕೈಹಿಡಿದ ಯುವತಿ, ಅನುಪಮ ಸುಂದರಿ, ಸದ್ಗುಣಿ, ಅಲ್ಲದೆ ಅಪರಿಮಿತ ಭಾಗ್ಯದ ನಿಧಿಯಾಗಿದ್ದಳು. ಯಕ್ಷಲೋಕದಲ್ಲಿ ವಿಹರಿಸಿದಂತೆ ಸಾಗಿತ್ತು ಅವರ ಆನಂದಮಯ ಸಂಸಾರ. ಆದರೆ ಮೊದಲ ಮಹಾಯುದ್ಧ ಪ್ರಾರಂಭವಾದೊಡನೆ ಅವರ ಮಾಯಾಲೋಕ ಕುಸಿಯಿತು. ಆ ಕಾಲದ ಹೊಸ ಜಲಾಂತರ್ಗಾಮಿಗಳು ದೋಷಯುಕ್ತವಾಗಿದ್ದು ಯುದ್ಧದಲ್ಲಿ ಅನಾನುಕೂಲಗಳು ಉದ್ಭವಿಸುತ್ತಿದ್ದರೂ ಕ್ಯಾಪ್ಟನ್ ಪವಾಡ ಸದೃಶ ಚಾತುರ್ಯದಿಂದ ತನ್ನ ದೇಶಕ್ಕೆ ಜಯಗಳಿಸಿ, ರಾಷ್ಟ್ರದ ಪರಮಬಿರುದನ್ನೂ ಪಡೆದಿದ್ದ. ಯುದ್ಧ ನಡೆದಂತೆ ಆತ ವೀರಾಧಿವೀರರಲ್ಲಿ ಐತಿಹಾಸಿಕ ಕೀರ್ತಿಯಿಂದ ಶೋಭಾಯಮಾನನಾಗಿದ್ದ. ಆದರೆ ಬಹುಬೇಗನೆ ಆಸ್ಟ್ರಿಯಾ ಪರಾಜಿತವಾಗಿ ಅವನ ಕೀರ್ತಿ ಪರಾಕ್ರಮಗಳೆಲ್ಲ ಬಿರುಗಾಳಿಗೆ ಹಾರುವ ತರಗೆಲೆಯಂತಾದವು. ಟ್ರ್ಯಾಪ್ ಈಗ ಹಡಗಿಲ್ಲದ ನೌಕಾಧಿಪತಿ; ಆತನೀಗ ಅಸ್ತಿತ್ವವಿಲ್ಲದ ಹೆಸರಾಗಿಬಿಟ್ಟಿದ್ದ.

ಅವನ ಪ್ರೇಮದ ಪತ್ನಿ ಗೊಬ್ಬರಜ್ವರದ ಸಾಂಕ್ರಾಮಿಕ ರೋಗದಿಂದ ಬಳಲಿ ತೀರಿಹೋದಳು. ಕ್ಯಾಪ್ಟನ್ನನ ಅರ್ಧ ಆಯುಷ್ಯ ನೌಕಾ ಪಡೆಯೊಡನೆ ಕಳೆದುಹೋಗಿತ್ತು. ಇನ್ನುಳಿದ ಅರ್ಧ ಹೆಂಡತಿಯೊಡನೆ ಮಣ್ಣುಗೂಡಿತು.

ಆತನಿಗೀಗ ತನ್ನ ಏಳು ಮಕ್ಕಳೇ ಬದುಕಿನ ಆಸರೆ. ಲಭಿಸುವ ಸೌಖ್ಯಗಳನ್ನೆಲ್ಲ ಅವರಿಗೆ ಒದಗಿಸಿ ತಾಯಿಯಿಲ್ಲದ ತಬ್ಬಲಿಯಾದ ಅವರ ಲಾಲನೆ ಪೋಷಣೆಗಾಗಿ ಅನೇಕ ಸೇವಕಿಯರು ಅಧ್ಯಾಪಕಿಯರನ್ನು ನೇಮಿಸುತ್ತಿದ್ದ. ಆದರೆ, ಈ ಮಕ್ಕಳೊಂದಿಗೆ ಹೊಂದಿಕೊಳ್ಳಲಾಗದೆ ಶಿಕ್ಷಕಿಯರು ಮೇಲಿಂದ ಮೇಲೆ ಬದಲಾಗುತ್ತಿದ್ದರು. ಮಕ್ಕಳಿಗೋಸ್ಕರ ತಾಯಿಯಾಗುವಂಥವಳನ್ನು ಹುಡುಕಲು ಅವನ ಬಂಧುಗಳು ಆಗ್ರಹಪಡಿಸುತ್ತಿದ್ದರು. ಹೀಗಾಗಿ ಆತ ರಾಜಕುಮಾರಿ ಈವೋನ್ ಎಂಬವಳನ್ನು ಮದುವೆಯಾಗಲು ನಿರ್ಧರಿಸಿದ.

*

ದಿನಗಳುರುಳಿದವು. ನಾನು ಹೊಂದಿಕೊಂಡು ಹೋಗುತ್ತಲಿದ್ದೆ. ಮಕ್ಕಳ ತೊದಲ್ನುಡಿ, ಅವರಿಗೆ ಪಾಠ ಹೇಳಿಕೊಡುವುದು ನನಗೆ ಅಪರಿಮಿತ ಆನಂದದ ಅನುಭವ ನೀಡುತ್ತಿದ್ದವು. ಮಕ್ಕಳು ನನ್ನನ್ನು ತುಂಬಾ ಪ್ರೀತಿಸತೊಡಗಿದರು.

ಒಂದು ಸಂಜೆ ನನ್ನ ಕೋಣೆಯಲ್ಲಿದ್ದಾಗ, ಗಿಟಾರನ್ನು ನೋಡಿ ಆಸಕ್ತಿಯಿಂದ, "ಇದನ್ನು ನುಡಿಸುವಿರಾ ?" ಎಂದು ಹಿರಿಯ ಹುಡುಗ ಕೇಳಿದ.

"ಅಗತ್ಯವಾಗಿ; ಹಾಡನ್ನೂ ಹೇಳುತ್ತೇನೆ" ಎಂದು ತೆಗೆದುಕೊಂಡು, ಗಿಟಾರನ್ನು ಕೈಯಲ್ಲಿ ನುಡಿಸುತ್ತ ಲೋಕಗೀತೆಯೊಂದನ್ನು ಹಾಡಿದೆ. ಮಕ್ಕಳೆಲ್ಲ ಆಸಕ್ತಿಯಿಂದ, ಮೌನವಾಗಿ ಕೇಳಿದರು. ನನ್ನ ಜೊತೆಯಲ್ಲಿ ಅವರನ್ನೂ ಹಾಡಲು ಕೇಳಿದೆ. ಮಕ್ಕಳೆಲ್ಲ ನನ್ನ ಜೊತೆಗೆ ಹಾಡತೊಡಗಿದರು.

ನಂತರ ಪ್ರತಿ ಸಾಯಂಕಾಲ ಹಾಡು ಹೇಳುತ್ತಿದ್ದೆವು. ಮಕ್ಕಳೆಲ್ಲ ನಿತ್ಯ ಹೊಸ ಹಾಡು ಕಲಿಯುವುದರಲ್ಲಿ [illegible]

ದಿನಗಳಲ್ಲಿ ನನ್ನ ಅಚ್ಚು ಮೆಚ್ಚಿನ ಹಾಡುಗಳನ್ನೆಲ್ಲ ಅವರಿಗೆ ಹೇಳಿಕೊಟ್ಟೆ.

ಕ್ರಿಸ್‌ಮಸ್ ಹಬ್ಬ ಸಮೀಪಿಸುತ್ತಿರುವುದರಿಂದ ನಾವು ಕ್ರೈಸ್ತ ಕೀರ್ತನೆಗಳನ್ನು ಕಂಠಪಾಠ ಮಾಡುತ್ತಿದ್ದೆವು. ಒಂದು ಸಂಜೆ ನಾವು ಹಾಡುತ್ತಿದ್ದಲ್ಲಿಗೆ ಆಕಸ್ಮಿಕವಾಗಿ ಬಂದ ಕ್ಯಾಪ್ಟನ್ ಮಂತ್ರಮುಗ್ಧನಾಗಿ ಕೇಳುತ್ತ ನಿಂತು, "ನಾನೂ ಜೊತೆಗೂಡುವೆ" ಎಂದವನೆ ಉತ್ಸಾಹದಿಂದ ಪಿಟೀಲನ್ನು ತೆಗೆದುಕೊಂಡು ನುಡಿಸತೊಡಗಿದ. ಆ ಸಂಜೆಯು ಸುಶ್ರಾವ್ಯ ಸಂಗೀತ ಅತ್ಯಂತ ಆಹ್ಲಾದಮಯ ವಾತಾವರಣವನ್ನೇ ಸೃಷ್ಟಿಸಿತು.

ಕ್ರಿಸ್‌ಮಸ್ ಹಬ್ಬದ ರಾತ್ರಿ ನಾವೆಲ್ಲ 'ಸೈಲೆಂಟ್ ನೈಟ್' ಮತ್ತಿತರ ಕೀರ್ತನೆಗಳನ್ನು ಹಾಡಿದೆವು. ನಾನು ಗಿಟಾರಿನೊಂದಿಗೆ ನನ್ನ ಮೆಚ್ಚಿನ ಭಕ್ತಿ ಗೀತೆಗಳನ್ನೆಲ್ಲ ಮನಃಪೂರ್ತಿ ಹಾಡಿದೆ.

ಆ ದಿನ ಕ್ಯಾಪ್ಟನ್ ನನಗೆ ಹೇಳಿದ, "ಕಳೆದ ನಾಲ್ಕು ವರ್ಷದಲ್ಲಿ ಮರೆತೇಹೋದಂತಿದ್ದ ಈ ಕ್ರಿಸ್‌ಮಸ್ ಹಬ್ಬದ ರಮಣೀಯತೆ ನಿಮ್ಮ ಪುಣ್ಯದಿಂದ ಮರಳಿ ಬಂತು. ನಿಮಗೆ ನನ್ನ ಧನ್ಯವಾದಗಳು." ಅವನ ಕಪ್ಪು ಕಣ್ಣುಗಳು ಮಿನುಗುತ್ತಿದ್ದವು; ಅವನ ಪರಿಚಯವಾದಂದಿನಿಂದ ಇದೇ ಮೊದಲು ಅವನು ನೆಮ್ಮದಿ, ಶಾಂತಿಯಿಂದಿರುವುದನ್ನು ಕಂಡೆ.

*

ಮಾರ್ಚಿನಲ್ಲಿ ಒಂದು ದಿನ ಕ್ಯಾಪ್ಟನ್ ಮಕ್ಕಳನ್ನೆಲ್ಲ ಕೂರಿಸಿಕೊಂಡು, "ಮಕ್ಕಳೆ, ನಾಳೆ ಈವೋನ್ ಆಂಟಿ ಬರುತ್ತಾಳೆ" ಎಂದ.

ಒಂದು ಕ್ಷಣ ಎಲ್ಲರೂ ಸಂಪೂರ್ಣ ಸ್ತಬ್ಧರಾಗಿದ್ದರು. ಆ ಮೇಲೆ ನನ್ನ ಶಿಷ್ಯೆ ಮಾರಿಯಾ, "ಯಾಕೆ ಪಪ್ಪಾ? ನಮಗೆ ಈಗಲೂ ಅವಳ ಅವಶ್ಯಕತೆ ಇದೆಯೇ?" ಎಂದು ಕೇಳಿದಳು.

"ಹಾಗೆಂದರೇನು?" ಕ್ಯಾಪ್ಟನ್ ಆಶ್ಚರ್ಯದಿಂದ ಕೇಳಿದ.

"ಪಪ್ಪಾ, ನಮ್ಮನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಬೇಕೆಂದು ಅವಳನ್ನು ಮದುವೆಯಾಗುತ್ತೇನೆಂದು ಹೇಳಿದ್ದೆಯಲ್ಲವೇ? ಆದರೆ ಈಗ ಆ ಪರಿಸ್ಥಿತಿ ಇಲ್ಲ. ಅಲ್ಲವೇ ಪಪ್ಪಾ?" ಎನ್ನುತ್ತ ನನ್ನ ಕಡೆಗೆ ಮಂದಹಾಸವನ್ನು ಬೀರಿದಳು.

ಆ ಮಕ್ಕಳ 'ಈವೋನ್ ಆಂಟಿ'ಯನ್ನು ನೋಡಲು ನಾನೂ ಆತುರಳಾಗಿದ್ದೆ. ಬೆಳ್ಳಗೆ, ಎತ್ತರವಾಗಿ, ರೂಪವತಿಯಾದ ಯುವತಿಯನ್ನು ಕಲ್ಪಿಸಿಕೊಂಡಿದ್ದೆ. ಅವಳು ಸೌಮ್ಯವಾಗಿ ದೇವತೆಯಂತಿದ್ದು ಈ ತಬ್ಬಲಿ ಮಕ್ಕಳಿಗೂ ಏಕಾಂಗಿ ಕ್ಯಾಪ್ಟನ್ನನಿಗೂ ವಾತ್ಸಲ್ಯಮಯಿಯಾಗಿ ಬರುವಳೆಂದು ಭಾವಿಸಿದ್ದೆ. ಆದರೆ ಅವಳ ಆಗಮನದ ನಂತರ ಅಹಂಕಾರದ ಮೂರ್ತಿಯಾದ ಈವೋನ್ ನಿಜವಾಗಿ ಈ ತಬ್ಬಲಿಗಳಿಗೆ ತಕ್ಕವಳಾಗಬಹುದೆ ಎಂದು ಸಂದೇಹಪಟ್ಟೆ.

ಅದೇ ಮಧ್ಯಾಹ್ನ ರಾಜಕುಮಾರಿ ಈವೋನ್ ನನ್ನ ಕೋಣೆಗೆ ಬಂದು.

"ನಿನ್ನೊಡನೆ ನಾನು ಮಾತಾಡಬೇಕಾಗಿದೆ," ಎಂದಳು. ಮೌನವಾಗಿ ಅವಳೇನು ಮಾತಾಡುತ್ತಾಳೋ ಎಂಬ ಪ್ರತೀಕ್ಷೆಯಲ್ಲಿದ್ದಂತೆಯೇ ಚಾಟಿಯೇಟಿನಂಥ ಮಾತು ಹೊರಬಂತು; "ಕ್ಯಾಪ್ಟನ ನಿನ್ನನ್ನು ಪ್ರೇಮಿಸುತ್ತಾನೆಂದು ನಿನಗೆ ತಿಳಿದಿದೆಯೇ?"

ನಾನು ಗರಬಡಿದವಳಂತಾದೆ. ಆದರೂ "ಇಲ್ಲ" ಎಂದೆ.

"ಹೌದೂ. ಕ್ಯಾಪ್ಟನ್ನನೆ ನನಗೆ ಈ ವಿಷಯ ಹೇಳಿದ," ಎಂದಳು ಶಾಂತವಾಗಿ.

ನಾನು ಒಮ್ಮೆಲೆ ಶಕ್ತಿ ಸಾಲದವಳಂತೆ ಕುರ್ಚಿಯಲ್ಲಿ ಕುಸಿದುಬಿಟ್ಟೆ. ಈ ವರೆಗೆ ಯಾರೂ ನನ್ನನ್ನು ಪ್ರೇಮಿಸಿದ್ದಿಲ್ಲ; ನಾನು ಕೂಡ ಯಾರನ್ನೂ ಪ್ರೇಮಿಸಿಲ್ಲ. ಪ್ರೇಮವನ್ನು ನಾನು ಶೇಕ್ಸ್-ಪಿಯರ್ ದಾಂತೆ, ಗಾಯಟೇಯರ ಪುಟಗಳಲ್ಲಿ ಮಾತ್ರ ಸಂಧಿಸಿದ್ದೆ. ನನ್ನ ಮನೋದ್ವೇಗವನ್ನು ಸ್ತಿಮಿತಕ್ಕೆ ತರಲು ಪ್ರಯತ್ನಿಸುತ್ತ ಹೇಳಿದೆ, "ಹಾಗಿದ್ದರೆ ನಾನು ಇಂದೇ ಮಧ್ಯಾಹ್ನ ಆಶ್ರಮಕ್ಕೆ ತೆರಳುವೆ. ದಯಮಾಡಿ ಮಕ್ಕಳಿಗೆ ಇನ್ನೊಬ್ಬ ಅಧ್ಯಾಪಕಿಯನ್ನು ಹುಡುಕಿ."

"ಏಕೆ? ನೀನು ಓಡಿ ಹೋಗುವಂಥದೇನಾಗಿದೆಯೀಗ? ಕ್ಯಾಪ್ಟನ್ ನಿನ್ನನ್ನು ನಿಜವಾಗಿ ಪ್ರೇಮಿಸುವುದಿಲ್ಲ; ಮಕ್ಕಳಿಗಾಗಿ ನಿನ್ನನ್ನು ಮೆಚ್ಚುತ್ತಾನಷ್ಟೇ...ಗಾಬರಿಯಾಗಬೇಡ. ಅದನ್ನೆಲ್ಲ ನಾನು ಸರಿಪಡಿಸುತ್ತೇನೆ. ಇಷ್ಟರಲ್ಲೇ ನಮ್ಮ ವಿವಾಹದ ನಿಶ್ಚಿತಾರ್ಥವಾಗಲಿದೆ. ಹೀಗಿಗೆ

ಯಲ್ಲೇ ವಿವಾಹ ಜರಗುವುದು. ಆ ವರೆಗೂ ನೀನು ಮಕ್ಕಳನ್ನು ನೋಡಿಕೊಳ್ಳಬೇಕು. ನಾನು ಬಂದ ಮೇಲೆ ಅವರನ್ನೆಲ್ಲಾ ಪಾಠ ಶಾಲೆಗೆ ಕಳಿಸಿ ಬಿಡುತ್ತೇನೆ," ಎಂದಳು ರಾಜ ಕುಮಾರಿ, ಬಿಂಕ ದಿಂದ.

"ಮಕ್ಕಳನ್ನು ಮನೆಯಿಂದ ಅಟ್ಟಿಬಿಡುವುದಾ-ದರೆ ಏತಕ್ಕಾಗಿ ಮದುವೆಯಾಗುವಿರಿ?" ಕಾತರ ದಿಂದ ಕೇಳಿದೆ.

"ಮಕ್ಕಳನ್ನು ಮದುವೆಯಾಗುತ್ತೇನೆಂದು ತಿಳಿ ದಿರುವೆಯಾ?" ಅವಳು ಹುಬ್ಬೇರಿಸಿ ಹೇಳಿದಳು. 'ನೀನೆಂಥ ವಿಚಿತ್ರ ಪ್ರಾಣಿ!' ಎನ್ನುವಂತಿತ್ತು ಆಕೆಯ ಧ್ವನಿ. ಆಗಲೇ ನಾನು ಅಲ್ಲಿಂದ ಹೊರಟುಹೋಗಬೇಕೆಂದು ನಿರ್ಧಾರ ಮಾಡಿದೆ. ಮಕ್ಕಳಿಗೆ ವಿದಾಯ ಹೇಳುವುದಾದರೂ ಹೇಗೆ ಎಂದು ಮನಸ್ಸು ಕೊರೆಯುತ್ತಿತ್ತು. ಸಾಯಂ ಕಾಲ ನನ್ನ ಸಾಮಾನು ಸರಂಜಾಮನ್ನು ಕಟ್ಟಿ ಕೊಂಡು, ಅಲ್ಲಿಂದ ಕಾಲುಕಿತ್ತಲು ಅಣಿಯಾ ದಾಗ, ಓದುವ ಕೋಣೆಯಲ್ಲಿ ರಾಜಕುಮಾರಿ ಯನ್ನು ಭೇಟಿಯಾಗಲು ನನಗೆ ಕರೆಬಂತು. ಹೋದೆ. ಅಲ್ಲಿ ಅವಳೊಡನೆ ಇದ್ದ ಅಪರಿಚಿತ ವೃದ್ಧ ಪಾದ್ರಿಯೊಬ್ಬರು ನನ್ನನ್ನು ಕಂಡೊಡ ನೆಯೆ, "ಮಗಳೇ, ಈಗ ನೀನು ಇಲ್ಲಿಂದ ಹೊರಟುಹೋದರೆ ಇನ್ನೂ ಅನಾಹುತವಾಗು ವುದು. ಕ್ಯಾಪ್ಟನ್ನರ ವಿವಾಹವಾಗುವವರೆಗೆ ಹೋಗುವದಿಲ್ಲವೆಂದು, ಈಗ ಮಾತುಕೊಡು," ಎಂದರು.

"ಇಲ್ಲ ತಂದೆ. ನನ್ನಿಂದ ಇದು ಅಸಾಧ್ಯ..." ಎಂದೆ ಆಗ ನಾನೇ.

"ಹಾಗಿದ್ದರೆ ಮಗಳೇ, ಇದು ದೇವರ ಇಚ್ಛೆಯೆಂದು ತಿಳಿ..."

ಇದು ನನಗೆ ನಿಶ್ಚಿತ್ತ ಸಮ್ಮತಿ. ಅನಂತರ ದೈವಾಜ್ಞೆಗೆ ತಲೆಬಾಗಿದೆ.

*

ರಾಜಕುಮಾರಿ ಈವೋನ್ ಹೊರಟು ಹೋದ ಬಳಿಕ ನಮ್ಮ ನಿತ್ಯಕ್ರಮ ಮತ್ತೆ ಪ್ರಾರಂಭವಾ ದರೂ ಈಗ ನನ್ನ ಜೀವನದಲ್ಲಿ ವ್ಯತ್ಯಾಸವುಂಟಾ ಗಿತ್ತು. ವಸ್ತುಸ್ಥಿತಿ ನನ್ನನ್ನು ಬಾಧಿಸುತ್ತಿತ್ತು. ಕ್ಯಾಪ್ಟನ್ನನ ಸಾನ್ನಿಧ್ಯವನ್ನು ಆದಷ್ಟು ತಪ್ಪಿಸಿ

ಕೊಳ್ಳುತ್ತ, ಆತ ಅಕಸ್ಮಾತ್ ಭೇಟಿಯಾದಾಗ ಲೆಲ್ಲ ಬಿಗುವಿನಿಂದ ಇರತೊಡಗಿದೆ. ನನ್ನ ನಡ ತೆಯಲ್ಲಿನ ಪರಿವರ್ತನೆ ಕಂಡು ಅವನು ವಿಸ್ಮಯ ಗೊಂಡ.

ಈವೋನಳೊಡನೆ ಅವನ ವಿವಾಹ ನಿಶ್ಚಯ ಯಾವುದೋ ಕಾರಣದಿಂದ ಮುರಿದುಹೋಯಿತು. ಜೊತೆಗೆ, ಮನೆಯಲ್ಲಿರುವ ಮಕ್ಕಳ ಅಧ್ಯಾಪಿಕೆ ಯೊಡನೆ ಅವನ ಪ್ರಣಯ ಮಿತಿ ಮೀರಿದೆ ಎಂದು ಜನರು ಆಡಿಕೊಂಡರು.

ಸುಮಾರು ಒಂದು ತಿಂಗಳ ನಂತರ ಒಂದು ರಾತ್ರಿ ಕ್ಯಾಪ್ಟನ್ ನನ್ನೊಂದು ಮದುವೆಯ ಪ್ರಸ್ತಾಪವೆತ್ತಿದ.

"ಕ್ಯಾಪ್ಟನ್, ಇನ್ನು ಕೆಲವೇ ದಿನಗಳಲ್ಲಿ ನಾನು ನನ್ನ ಆಶ್ರಮಕ್ಕೆ ತಿರುಗಿ ಹೋಗುತ್ತೇನೆಂದು ನಿಮಗೆ ಗೊತ್ತು. ಹೀಗಾಗಿ ನಾನು ಮದುವೆಯಾಗ ಲಾರೆ"ಎಂದೆ. ಅವನ ಕಣ್ಣುಗಳಲ್ಲಿ ವಿಷಾದದ ಛಾಯೆ ಮೂಡಿತು.

"ಇದು ನಿಮ್ಮ ಕೊನೆಯ ಮಾತೇ?"

ಆಗ ನನಗೊಂದು ವಿಚಾರ ಹೊಳೆಯಿತು.

"ಕ್ಯಾಪ್ಟನ್, ನಾನು ಆಶ್ರಮಕ್ಕೆ ಹೋಗಿ, ಪೂಜ್ಯ ಮಾತೆಯನ್ನು ಈ ವಿಷಯವಾಗಿ ಕೇಳು ತ್ತೇನೆ. ಅವರ ಆಜ್ಞೆಯನ್ನು ನಾನು ದೇವರ ಇಚ್ಛೆಯೆಂದು ತಿಳಿಯುತ್ತೇನೆ," ಎಂದೆ,

ನಂತರ ತಡಮಾಡಲಿಲ್ಲ. ಲಗುಬಗೆಯಿಂದ ಒಂದು ಗಂಟೆಯಲ್ಲಿ ಆಶ್ರಮವನ್ನು ತಲುಪಿದೆ. ಅಲ್ಲಿದ್ದ ಅಧಿಕಾರಿಣಿ ಮಹಂತೆಯರು ನನ್ನ ಕೈ ಬಿಡುವುದಿಲ್ಲವೆಂಬ ದೃಢನಂಬಿಕೆಯಿತ್ತು ನನಗೆ. ನನ್ನ ಮಾತೆಯ ನನ್ನ [illegible] ಯೂರಿ ನಿಂತಾಗ ಅವರು ದೀರ್ಘಕಾಲ ಮೌನವಾಗಿ ಮಮತೆಯಿಂದ ನನ್ನನ್ನು ದಿಟ್ಟಿಸಿ ಅನಂತರ ಮೆಲ್ಲನೆ ನುಡಿದರು: "ಮಗೂ ಮಾರಿಯಾ, ನೀನು ಕ್ಯಾಪ್ಟನ್ನನನ್ನು ಮದುವೆಯಾಗಿ ಅವನ ಮಕ್ಕ-ಳಿಗೆ ಒಳ್ಳೆಯ ತಾಯಿಯಾಗಬೇಕೆಂದು ದೈವ ಸಂಕಲ್ಪವಿದ್ದಂತಿದೆ."

ನಿಮಿಷಗಳು ಕಳೆದುವು. ನಾನಿನ್ನೂ ಮಂಡಿಯೂರಿ ಕೊಂಡೇ ಇದ್ದೆ. ಇದೇ ಅಂತಿಮ ನಿರ್ಧಾರ! ದೇವರಿಗೆ ಅರ್ಪಿಸಬೇಕೆಂದು ನನ್ನ ಹೃದಯ ತಿರಸ್ಕ[illegible]-

ಯನ್ನು ನಾನು ತಿಳಿಯಬೇಕೆಂದಿದ್ದೆ ನಿಜ; ಆದರೆ ಅದು ಸ್ಪಷ್ಟವಾದಾಗಲೂ ಅದನ್ನು ಒಪ್ಪಲು ಅಸಮರ್ಥಳಾಗಿದ್ದೆ. ಕೊನೆಯಲ್ಲಿ 'ದೇವರಿಚ್ಛೆಗೆ ಯಾಕೆ ಅಂತಿಲ್ಲ' ಎಂಬ ಮಾತು ಮತ್ತೆ ಮೊರೆಯಿತು.

ನವೆಂಬರ್ ೨೬ ೧೯೨೭: ನನ್ನ ಮದುವೆಯ ದಿನ. ಅದೇ ನನ್ನ ಪ್ರಿಯ ನೋನ್‌ಬರ್ಗ್ ಆಶ್ರಮದ ದೇವಾಲಯದಲ್ಲಿ ಕ್ಯಾಪ್ಟನ್ ಟ್ರ್ಯಾಪ್‌ನೊಡನೆ ವಿವಾಹ ಪ್ರತಿಜ್ಞೆಯನ್ನು ಗಂಭೀರವಾಗಿ ಉಚ್ಚರಿಸಿದೆ; "ಸುಖದಲ್ಲಾಗಲಿ ದುಃಖದಲ್ಲಾಗಲಿ ಸಾವು ನಮ್ಮನ್ನಗಲಿಸುವವರೆಗೂ ನಾವು ಒಬ್ಬರನ್ನೊಬ್ಬರಿಗೆ ಅರ್ಪಿಸಿಕೊಳ್ಳುತ್ತೇವೆ."

ಮಂಜಿನ ಪರದೆಯಿಂದೆಂಬುವಂತೆ ಮಕ್ಕಳನ್ನೂ ನನ್ನ ಪತಿಯನ್ನೂ ಅಶ್ರುಪೂರಿತ ಕಣ್ಣುಗಳಿಂದ ನೋಡಿದೆ. ದೇವರಿಗೆ ನನ್ನ ಸೇವೆ ಎಲ್ಲಿ ಅತ್ಯವಶ್ಯವೆನಿಸಿದ್ದಿತೋ ಅಲ್ಲಿ ಪ್ರತಿಜ್ಞಾಪೂರ್ವಕವಾಗಿ ಪರಮಾತ್ಮನ ಸೇವೆ ಮಾಡಲು ಸಿದ್ಧಳಾದೆ.

೨

ಅದೇ ಮನೆ, ಅದೇ ಜನರ ಮಧ್ಯೆ ಇದ್ದರೂ ನನಗೆ ಮಾತ್ರ ಏನೋ ವ್ಯತ್ಯಾಸವುಂಟಾದಂತಿತ್ತು. ಈಗ ಅವರು ನನ್ನ ಮಕ್ಕಳಾಗಿರದಿದ್ದರೂ ನಾನು ಅವರ ತಾಯಿ; ನನ್ನ ಪತಿ ಕ್ಯಾಪ್ಟನ್ ಜಾರ್ಜ್ ಆಗಿದ್ದ.

ಮುಂದಿನ ಹದಿಮೂರು ವರ್ಷಗಳಲ್ಲಿ ನಮಗೆ ಇನ್ನೆರಡು ಮುದ್ದು ಮಕ್ಕಳನ್ನು ದೇವರು ಅನುಗ್ರಹಿಸಿದ.

ಇದ್ದಕ್ಕಿದ್ದಂತೆ ನಮ್ಮ ಬ್ಯಾಂಕು ದಿವಾಳಿ ತೆಗೆದು ನಮ್ಮ ಹಣ ಮುಳುಗಿತು. ಈ ಘಟನೆಯಿಂದ ನಮ್ಮ ಜೀವನಸಂಪುಟದಲ್ಲಿ ಶ್ರೀಮಂತಿಕೆಯ ಅಧ್ಯಾಯ ಸಮಾಪ್ತವಾಯಿತು. ಇನ್ನು ಮೇಲೆ ನಾವು ವಾಸ್ತವ ಜಗತ್ತನ್ನು ಎದುರಿಸಬೇಕು. ನಾವು ಉಪವಾಸವಿರುವ ಪ್ರಸಂಗವಿರದಿದ್ದರೂ ನಮ್ಮ ಐಷಾರಾಮಗಳನ್ನು ತ್ಯಜಿಸಬೇಕಾಯಿತು. ಆಳುಗಳನ್ನು ಬಿಟ್ಟುಕೊಟ್ಟು, ಕಾರನ್ನು ಮಾರಿ, ಕೆಳಗಿನ ಮನೆಯನ್ನೆಲ್ಲ ಮುಚ್ಚಿಕೊಂಡು ಮಹಡಿಯ ಮೇಲೆ ಬಾಡಿಗೆಯವರಂತೆ ಬಾಳಬೇಕಾಯಿತು. ಜಾರ್ಜ್ ಪಾಪ, ಭಿಕ್ಷುಕನಾದೆನೆಂದು ಭಾವಿಸಿ ನಿರುತ್ಸಾಹಗೊಂಡ; ಎದೆಗುಂದಿದ.

ಸಿರಿವಂತರಲ್ಲಿ ಅನೇಕರು ಕಾರಣಾಂತರಗಳಿಂದ ಒಮ್ಮೆಲ್ಲೊಮ್ಮೆ ತಮ್ಮ ಸಂಪತ್ತನ್ನೆಲ್ಲ ಕಳೆದುಕೊಳ್ಳುವುದುಂಟು. ನಾನು ಮಾತ್ರ ನಮ್ಮ ಹಣವೆಲ್ಲ ನಷ್ಟವಾಯಿತೆಂದು ತಿಳಿದಾಗ ಧೈರ್ಯಗುಂದಲಿಲ್ಲ. ಇದು ನಮ್ಮ ಬಾಳ ಸಂಗೀತದ ಪ್ರಥಮ ಶ್ರುತಿ. ಇನ್ನು ಮುಂದೆ ಅಡ್ಡಿ ಆತಂಕಗಳಿಲ್ಲದೆ ಸತತವಾಗಿ ತಾರಸ್ವರವನ್ನೇರಬಹುದೆಂದು ಅನಿಸಿತು.

ನಮ್ಮ ಮಕ್ಕಳು ಪರಿಸ್ಥಿತಿಯನ್ನು ಅರಿತುಕೊಂಡರು. ಕಾರು, ಸೇವಕರು ಇತ್ಯಾದಿ ಸುಖಭೋಗಗಳ ಅಭಾವವನ್ನು ಸಂಪೂರ್ಣ ಅಲಕ್ಷಿಸಿದರು. ತಮ್ಮ ಪಾಲಿಗೆ ಬಂದ ಹೊಸ ಕಾರ್ಯ, ಜವಾಬ್ದಾರಿಗಳಿಗಾಗಿ ಸಿದ್ಧರಾದರು. ಒಮ್ಮೆಯಾದರೂ ಗೊಣಗಲಿಲ್ಲ, ಆಕ್ಷೇಪಿಸಲಿಲ್ಲ. ಹೀಗಾಗಿ ನಮ್ಮ ಸಂಸಾರ ಮತ್ತಷ್ಟು ಒಗ್ಗಟ್ಟಿನಿಂದ ಬಿಗಿದಾಯಿತು. ಮಕ್ಕಳಿಗೆ ಇಂಥ ಸದ್ಗುಣ ಮತ್ತು ಯೋಗ್ಯತೆ ನೀಡಿದ್ದಕ್ಕಾಗಿ ದೇವರಿಗೆ ಕೃತಜ್ಞರಾದೆವು.

ಆದರೆ ನಾವು ಎಷ್ಟು ಉತ್ಸಾಹದಿಂದಿದ್ದರೂ ನಮ್ಮ ಜೀವನೋಪಾಯದ ಚಿಂತೆ ಪೀಡಿಸುತ್ತಲೇ ಇತ್ತು: "ಮುಂದೆ ಏನು? ಹೇಗೆ?"

ಕೆಳಗಿನ ಮಹಡಿಯ ಕೋಣೆಗಳನ್ನು ಕಥೋಲಿಕ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಬಾಡಿಗೆಗೆ ಕೊಟ್ಟೆವು. ಒಂದೇ ವರ್ಷದಲ್ಲಿ ನಮ್ಮ ಮನೆ ಅನೇಕ ಲೇಖಕರು ವಿಜ್ಞಾನಿಗಳು ವಿದ್ಯಾರ್ಥಿಗಳು ಅಧ್ಯಾಪಕರಿಂದ ತುಂಬಿಬಿಟ್ಟಿತು. ಈ ಸಮಯದಲ್ಲಿ ನಾವು ಒಟ್ಟಿಗೆ ಹಾಡುವುದನ್ನು ನಿಲ್ಲಿಸಿರಲಿಲ್ಲ. ನಮ್ಮ ಸಾಮೂಹಿಕ ಸಂಗೀತ ಮನೆಯಲ್ಲಿಯ ಎಲ್ಲ ನಿವಾಸಿಗಳ ಮನಸೆಳೆಯಿತು. ಬಾಡಿಗೆಯವರಲ್ಲಿ, ಒಬ್ಬ ತರುಣ ಪಾದ್ರಿ ಪ್ರಮುಖ ಸಂಗೀತಗಾರನಾಗಿದ್ದ; ಪಿಯಾನೋ ಹಾಗೂ ಆರ್ಗನ್‌ಗಳನ್ನು ಸುಮಧುರವಾಗಿ ನುಡಿಸುತ್ತಿದ್ದ. ಅವನ ಸಂಗೀತದಲ್ಲಿ ಅಡಕವಾಗಿರುವ ಶುದ್ಧ ಸರಳತೆ, ಮಾಧುರ್ಯಗಳೇ ಅವನ ಕೌಶಲದ ರಹಸ್ಯ. ಅವನ ವ್ಯಕ್ತಿತ್ವವೇ ಸಂಗೀತಮಯ. ಆತ ನಮ್ಮ ಸಂಗೀತ ಕೇಳಿದ ಆ ಸುಮುಹೂರ್ತದಲ್ಲಿ 'ಟ್ರ್ಯಾಪ್ ಕುಟುಂಬದ ಸಂಗೀತಗಾರ'ರ ಜನ್ಮವಾಯಿತು.

ಆ ದೀರ್ಘವಾದ ತಿಂಗಳುಗಳು ನಮ್ಮ ಪಾಲಿಗೆ ಅತ್ಯಮೂಲ್ಯ ಚಿರಸ್ಮರಣೀಯ. ನಮ್ಮ ಹೃದಯಗಳಲ್ಲಿ ಶುದ್ಧ ಸಂಗೀತ ಪ್ರೇಮ ತುಂಬಿ ತುಳುಕುತ್ತಿತ್ತು. ನಮ್ಮ ಸಂಗೀತವನ್ನು ತಡೆಗಟ್ಟಲು ಎಂಥ ಬಲದಿಂದಲೂ ಸಾಧ್ಯವಿರಲಿಲ್ಲ. ನಮಗೆ ಯಾವ ಪ್ರೇಕ್ಷಕ ವೃಂದದ ಅಗತ್ಯವೂ ಇರಲಿಲ್ಲ. ಬೇಕಾಗೆದ್ದ ನಾವು ದೇವರಿಗಾಗಿಯೇ ಹಾಡುತ್ತಿದ್ದೆವು. ಪರಮಾತ್ಮನ **ಮಹಿಮೆ**, ವೈಭವಗಳಿಗಾಗಿ ಪ್ರಾರ್ಥನೆ ಸಲ್ಲಿಸುತ್ತಿದ್ದೆವು. ಸಾಯಂಕಾಲ ಪುರಾತನ ಲಘುಕಾವ್ಯ, ಲೋಕಗೀತೆಗಳನ್ನು ಹಾಡುತ್ತಿದ್ದೆವು. ಮನೆಯ ಹೊರಗಡೆ ಉದ್ಯಾನಗಳಲ್ಲಿ, ಬೆಟ್ಟ ಕಣಿವೆಗಳಲ್ಲಿ, ಹಸಿರು ಹುಲ್ಲುಗಾವಲಿನಲ್ಲಿ, ಆತ್ಮತೃಪ್ತಿಯಾಗುವವರೆಗೂ ಹಾಡಿ ನಲಿಯುತ್ತಿದ್ದೆವು. ನಮಗೆ ಸಂಗೀತದ ಅಮಲೇರಿ, ಗಾನಪ್ರತಿಭೆಯಿಂದ ಉನ್ಮತ್ತರಾಗುತ್ತಿದ್ದೆವು.

ಆಗಸ್ಟ ೧೯೩೬ರ ಒಂದು ಸಂಜೆ, ಉದ್ಯಾನದಲ್ಲಿ ಪೈನ್‌ಮರಗಳ ನೆರಳಿನಲ್ಲಿ ನಾವು ಕುಳಿತು ಹಾಡು ಹೇಳುತ್ತಿದ್ದೆವು. ಅದೊಂದು ಇಂಗ್ಲೀಷ್ ಹಾಡು. ಅದು ಮುಗಿದ ಮೇಲೆ ಒಮ್ಮೆಲೆ ಅನಿರೀಕ್ಷಿತ ಕರತಾಡನ ಕೇಳಿ, ನಮಗೆ ಆಶ್ಚರ್ಯ ದಿಗ್ಭ್ರಮೆಗಳು ಏಕಕಾಲದಲ್ಲಿ ಆದವು. ಪೈನ್ ಮರಗಳ ಪರದೆಯ ಸುತ್ತಲೂ ಹೋಗಿ ನೋಡಿದಾಗ ಅಲ್ಲಿ ನಿಂತಿರುವ ವ್ಯಕ್ತಿ ನಮ್ಮ ಮನೆಯ ನಿವಾಸಿ ಲೋಟಿ ಲೆಹ್ಮಾನ್. ಆಕೆಯೂ ಸಂಗೀತ ಪ್ರೇಮಿಯಾಗಿದ್ದಳು. ನಮ್ಮ ಸಂಗೀತವನ್ನಾಕೆ ಆನಂದ ಉತ್ಸಾಹಗಳಿಂದ ವರ್ಣಿಸಿದಳು!

"ಓಹ್! ಇಂಥ ಕಲೆಯನ್ನು ನಿಮ್ಮೊಳಗೇ ಬಚ್ಚಿಟ್ಟುಕೊಳ್ಳಬಾರದು" ಎಂದು ಪುನಃ ಪುನಃ ಹೇಳಿದಳು. "ನೀವು ಸಂಗೀತ ಕಛೇರಿಗಳನ್ನು ನಡೆಸಬೇಕು. ನಿಮ್ಮ ಅಮೋಘ ಕಲೆಯಲ್ಲಿ ಜನಸಾಮಾನ್ಯರೂ ಪಾಲುಗೊಳ್ಳಬೇಕು. ನೀವು ಪ್ರಪಂಚದಲ್ಲಿ ಸುತ್ತಾಡಬೇಕು. ನಿಮ್ಮ ಗೀತಗಳಲ್ಲಿ ಚಿನ್ನದ ಗಣಿಯಿದೆಯೆಂದು ಮರೆಯಬೇಡಿ!"

ಆಕೆ ಮನಃಪೂರ್ವಕ ಪ್ರಶಂಸೆ ನಮ್ಮ ಮೇಲೆ ಪರಿಣಾಮ ಬೀರಿತು. ಆದರೆ ವೇದಿಕೆಯ ಮೇಲೆ ನಿಂತು ಹಾಡುವದೆಂದರೆ ನಮಗೆ ಭಯ.

ನನ್ನ ಪತಿ ಜಾರ್ಜನಂತೂ ಬೆರಗಾಗಿ ಬೆಪ್ಪನಾಗಿ ಬಿಟ್ಟ. ಆತನಿಗೂ ನಮ್ಮ ಸಂಗೀತ ಪ್ರಿಯವಾಗಿತ್ತು; ನಮ್ಮ ಹಾಡುಗಾರಿಕೆಯನ್ನು ತುಂಬಾ ಮೆಚ್ಚುತ್ತಿದ್ದ.

ಆದರೆ ನಮ್ಮ ಅತಿಥಿ ಅತ್ಯಂತ ಆಸಕ್ತಿಯಿಂದ ನಮ್ಮನ್ನು ಪುಸಲಾಯಿಸಿ, ಮರುದಿನವೇ ನಡೆಯಲಿದ್ದ ಸಾಮೂಹಿಕ ಸಂಗೀತೋತ್ಸವದಲ್ಲಿ ಭಾಗವಹಿಸಲು ಒತ್ತಾಯಿಸಿದಳು. ಅಂದು ಮೊದಲ ಬಾರಿ ವೇದಿಕೆಯ ಮೇಲೆ ನಿಂತಿರುವಾಗ ನಮ್ಮ ಎದೆ ಬಡಿದುಕೊಳ್ಳುತ್ತ, ಗಂಟಲೆಲ್ಲ ಒಣಗಿ ಹೋಗಿತ್ತು. ಟ್ರ್ಯಾಪ್ ಕುಟುಂಬಕ್ಕೆ ಪ್ರಥಮ ಬಹುಮಾನವೆಂದು ಘೋಷಿಸಿದಾಗ ನಮ್ಮ ವಿಸ್ಮಯ ಅಷ್ಟಿಷ್ಟಲ್ಲ.

ಕೆಲವು ದಿನಗಳ ನಂತರ, ಸಾಲ್ಜ್‌ಬರ್ಗ್ ಆಕಾಶವಾಣಿಯಿಂದ ನಮಗೆ ಹಾಡಲು ಕರೆ ಬಂದಾಗ ಜಾರ್ಜ್ ಚಕಿತನಾದ. [illegible] ಅವನಿಗೆ ಇದೆಲ್ಲ ಒಂದು ದುಃಸ್ವಪ್ನವಾಗಿತ್ತು. "ನೀವು ಹೊರಗೆ ಹಾಡುವುದು ನನಗೆ ಮನಸ್ಸಿಲ್ಲ." ಎಂದು ಗೊಣಗಿದ.

"ಬಹುಶಃ ನಾವು ಆಕಾಶವಾಣಿಯಲ್ಲಿ ಹಾಡಬೇಕೆಂದು ದೇವರ ಇಚ್ಛೆ ಇರಬಹುದು," ನನ್ನ ಮಗಳು ತುಂಟಾಟಿಕೆಯಿಂದ ನುಡಿದಳು.

ನಮಗಾದರೂ ಬಹಿರಂಗದಲ್ಲಿ ಹಾಡಬೇಕೆಂಬ ಮನಸ್ಸಿರಲಿಲ್ಲ. ಏಕಾಂತ ನಮಗೆ ಪ್ರಿಯವೆನಿಸುತ್ತಿತ್ತು. ಆದರೆ ಆಕಾಶವಾಣಿಯಲ್ಲಿ ಹಾಡುವುದು ತಪ್ಪೇನಲ್ಲ; ಆಸ್ಟ್ರಿಯದ ಅನೇಕರು ನಮ್ಮ ಸಂಗೀತ ಕೇಳಿ ಆನಂದಪಡಬಹುದೆಂದು ಅನಿಸಿತು.

ಕಟ್ಟಕಡೆಗೆ ನಾವು ಆಕಾಶವಾಣಿಯಲ್ಲಿಯೂ ಹಾಡಿದೆವು; ಸಾರ್ವಜನಿಕರೆದುರು ಕಛೇರಿಗಳನ್ನೂ ನಡೆಸಿದೆವು; ಸಾಲ್ಜ್‌ಬರ್ಗ್ ಸಂಗೀತೋತ್ಸವದಲ್ಲಿ ಭಾಗವಹಿಸಿದೆವು; ಫ್ರಾನ್ಸ್, ಹಾಲೆಂಡ್, ಇಟಲಿ ಬೆಲ್ಜಿಯಂ ಸ್ವೀಡನ್–ಇತ್ಯಾದಿ ಯುರೋಪ ಖಂಡದ ಅನೇಕ ಕಡೆ ಕಾರ್ಯಕ್ರಮ ನೀಡಲು ಆಮಂತ್ರಿತರಾದೆವು.

ಈಗ ನಾವು ನಿತ್ಯ ಸಾಯಂಕಾಲ ಮನೆಯಲ್ಲಿ ಹಾಡುವುದು, ಸಂಗೀತ ಸಾಧನೆಯಾಯಿತು. ಹವ್ಯಾಸ ಕಸುಬಾಯಿತು. ವಿನೋದಕ್ಕಾಗಿ ಪ್ರಾರಂಭವಾದ ಚಟುವಟಿಕೆ ಮಹತ್ವದ ಕಾರ್ಯವಾಗಿ ಬೆಳೆಯಿತು. ಇದೇ ದೈವ ಸಂಕಲ್ಪವೆಂದು ದೃಢ

ವಾಗಿ ಸಂಚಿದಾಗ ನಮ್ಮ ಮಾರ್ಗದಲ್ಲಿನ ಎಲ್ಲ ವಿಘ್ನಗಳು ಮಾಯವಾದವು.

ಯುರೋಪ ಖಂಡದಲ್ಲಿನ ನಮ್ಮ ಸಂಗೀತ ಪ್ರವಾಸ ಅತ್ಯಂತ ಯಶಸ್ವಿಯಾಯಿತು. ನಾವು ಹೋದಲ್ಲೆಲ್ಲ ಪ್ರೇಕ್ಷಕ ಸಮೂಹ ಉತ್ಸಾಹದಿಂದ ಬರಮಾಡಿಕೊಂಡು ಅಭಿನಂದಿಸಿತು. ವರ್ತಮಾನ ಪತ್ರಿಕೆಗಳು 'ಸಂಗೀತ ಅಂತರಿಕ್ಷದಲ್ಲಿ ಮೂಡಿದ ಮಿನುಗು ತಾರೆಗಳು' 'ಸಂಗೀತ ಕುಟುಂಬದ ಅದ್ಭುತ ಪವಾಡ' ಎಂದೆಲ್ಲ ನಮ್ಮನ್ನು ಪ್ರಶಂಸಿದವು.

ಈ ಪ್ರವಾಸದಲ್ಲಿ ನಮಗ ಅರಿವಾದ ಸಂಗತಿಗಳೇನೆಂದರೆ, ಸಂಗೀತ ಹೃದಯದಿಂದ ಹೃದಯಕ್ಕೆ ಸ್ಪಂದಿಸುವ ಕಲೆ; ಅದೊಂದು ಅಂತಾರಾಷ್ಟ್ರೀಯ ಭಾಷೆ ಎಂಬುದು.

ಸಂಗೀತ–ಎಂಥ ಸಾಮರ್ಥ್ಯವುಳ್ಳ ಸಾಧನ! ಎಂಥ ಬಲವಾದ ಅಸ್ತ್ರ!

ಮಾರ್ಚ್ ೧೧, ೧೯೩೮. ಆಸ್ಟ್ರಿಯಾದ ಮೇಲೆ ಜರ್ಮನಿ ದಾಳಿ ಮಾಡಿದೆಯೆಂದು ಆಕಾಶವಾಣಿಯಲ್ಲಿ ವಾರ್ತೆ.

ನಾವೆಲ್ಲ ದಿಗ್ಭ್ರಮರಾದೆವು. ಮಕ್ಕಳೆಲ್ಲ ಗಾಬರಿಯಿಂದ ಅಳಹತ್ತಿದರು.

"ಆಸ್ಟ್ರಿಯಾ ಜರ್ಮನ್ ವಿಮೋಚಕರನ್ನು ಸ್ವಾಗತಿಸುತ್ತಲಿದೆ; ಆಸ್ಟ್ರಿಯಾದ ಪ್ರತಿಯೊಂದು ಹಳ್ಳಿ–ಶಹರದ ನಿವಾಸಿಗಳು ಜರ್ಮನ್ ಸೈನಿಕರನ್ನು ಭಾವೋದ್ರೇಕದಿಂದ ಬರಮಾಡಿಕೊಳ್ಳುತ್ತಿದ್ದಾರೆ; ಇಡೀ ದೇಶವು ಹರ್ಷೋನ್ಮಾದದಲ್ಲಿ ಜಯಘೋಷ ಮಾಡುತ್ತಿದೆ," ಎಂದು ಅಸತ್ಯವಾರ್ತೆಯೊಂದು ಆಕಾಶವಾಣಿಯಲ್ಲಿ ಪ್ರಸಾರವಾಯಿತು. ಜಗತ್ತೆಲ್ಲ ಈ ಮಾಮೂಲಿ ವರದಿಯನ್ನು ಕೇಳುತ್ತಿದೆ; ವಿದೇಶದ ಜನರಿಗೆ ಇದು ಶುದ್ಧ ಸುಳ್ಳೆಂದು ತಿಳಿಯಲಾರದು ಎಂದು ನಾವು ವ್ಯಥೆಪಟ್ಟೆವು.

ಇಲ್ಲಿಯ ವರೆಗೆ ದೇಶಪ್ರೇಮ ಎಂಬ

ಪ್ರಬಲವಾಗಿರಬಹುದೆಂದು ನಾವು ಅರಿತಿರಲಿಲ್ಲ. ನಮ್ಮಲ್ಲೀಗ ರಾಷ್ಟ್ರಪ್ರೇಮ ಉಕ್ಕಿ ಹರಿಯಿತು.

"ಇನ್ನು ಮುಂದೆ ಆಸ್ಟ್ರಿಯದ ರಾಷ್ಟ್ರಗೀತೆಯನ್ನು ಹಾಡುವದು ನಿಷೇಧಿಸಲ್ಪಟ್ಟಿದೆ: **Heil Hitler** (ಹಿಟ್ಲರನಿಗೆ ಜಯವಾಗಲಿ) ಎಂಬುದೊಂದೇ ನಮಸ್ಕರಣೆಯ ಪದವು. ಪ್ರತಿಯೊಂದು ಮನೆಯೆದುರು ಸ್ವಸ್ತಿಕ ಚಿಹ್ನೆಯಿರುವ ಕೆಂಪು ನಿಶಾನೆ ಪ್ರದರ್ಶಿತವಾಗಬೇಕು" ಎಂಬ ಕೇಳಿದಾಗ, ಒಟ್ಟಿನಲ್ಲಿ ಜಗತ್ತಿನ ನಕ್ಷೆ ಪಟದಲ್ಲಿ ಆಸ್ಟ್ರಿಯಾ ಅಳಿಸಿಹೋಯಿತೆಂಬ ಕಟು ಸತ್ಯವನ್ನು ತಿಳಿದಾಗ, ನಮ್ಮ ಎದೆಯಲ್ಲಿ ಅಲಗು ನೆಟ್ಟಂತಾಗುತ್ತಿತ್ತು. ದೇಶಪ್ರೇಮವು ಕುಟುಂಬ ಪ್ರೇಮಕ್ಕಿಂತ ಮಿಗಿಲಾದದ್ದೆಂದು ಕಲಿತೆವು. ನಮ್ಮ ಉತ್ಸಾಹವುಳ್ಳ ಮನೆತನ ಸಮಗ್ರ ಶೋಕಗ್ರಸ್ತವಾಗಿ ಬಿಟ್ಟಿತು.

ಅಷ್ಟರಲ್ಲಿ ನೌಕಾಪಡೆಯಿಂದ ನನ್ನ ಪತಿಗೆ ದೊಡ್ಡ ಹೊಸದಾದ ಜಲಾಂತರ್ಗಾಮಿಯೊಂದರ ಅಧಿಪತಿಯಾಗಿ ಅಧಿಕಾರ ಸ್ವೀಕರಿಸಬೇಕೆಂಬ ಪತ್ರ ಬಂತು. ಮೆಡಿಟರೇನಿಯನ್ ಹಾಗೂ ಆಡ್ರಿಯಾಟಿಕ್ ಸಮುದ್ರಗಳಲ್ಲಿ ಜಲಾಂತರ್ಗಾಮಿಯನ್ನು ಸ್ಥಾಪಿಸುವದಕ್ಕಾಗಿ ಅವನನ್ನು ನೇಮಿಸಬೇಕೆಂದಿತ್ತು. ವೈದ್ಯಕೀಯ ಪದವಿ ಪಡೆದ ನಮ್ಮ ಹಿರಿಯ ಮಗನಿಗ ವಿಯೆನ್ನಾದ ಆಸ್ಪತ್ರೆಯೊಂದರಲ್ಲಿ ಒಳ್ಳೇ ಉದ್ಯೋಗ ದೊರೆಯಲಿತ್ತು. ಹಿಟ್ಲರನ ಜನ್ಮದಿನದಂದು ಗಾಯನ ಕಾರ್ಯಕ್ರಮಕ್ಕಾಗಿ 'ಟ್ರ್ಯಾಪ್ ಕುಟುಂಬದ ಸಂಗೀತಗಾರ'ರನ್ನು ಆಯ್ಕೆಮಾಡಲಾಗಿತ್ತು. ನಮಗೆ ಭಾಗ್ಯದ ಬಾಗಿಲು ತೆರೆದು, ನಾವು ಬೇಕಾದಷ್ಟು ಐಶ್ವರ್ಯವಂತರಾಗಬಹುದಿತ್ತು.

ಅದೇ ರಾತ್ರಿ ನಮ್ಮ ಮನೆತನದ ಸದಸ್ಯರೆಲ್ಲ ಸಭೆ ಸೇರಿ, ಈ ಉದ್ಯೋಗಗಳ ಆಕರ್ಷಣೆ ಮತ್ತು ಹಾಡುಗಾರಿಕೆಯ ಪ್ರಶಂಸನಾತ್ಮಕ ಆಮಂತ್ರಣದವನ್ನು ಕುರಿತು ಚರ್ಚೆ ಮಾಡಿದೆವು.

ಮಕ್ಕಳು ಒಬ್ಬೊಬ್ಬರೊಂದೊಂದು ಪ್ರಶ್ನೆ ಕೇಳಿದರು:

"ವೇದಿಕೆಯ ಮೇಲೆ ನಾವು Heil Hitler ಎಂದು ಹೇಳಬೇಕೆ?"

"ನಮ್ಮ ರಾಷ್ಟ್ರಗೀತೆಯ ಬದಲ ನಾಜೀ ಗೀತೆಯನ್ನು ಹಾಡಬೇಕೆ"

"ಯೇಸು ಕ್ರಿಸ್ತನ ಸ್ತುತಿ ಮತ್ತಿತರ ಧಾರ್ಮಿಕ ಹಾಡುಗಳನ್ನು ಹೇಳಲಿಕ್ಕಾಗುವದಿಲ್ಲವೆ!"

"ಇಲ್ಲ; ನಮ್ಮಿಂದ ಸಾಧ್ಯವೇ ಇಲ್ಲ" ಎಂಬುದೆ ಎಲ್ಲರ ದೃಢ ನಿರ್ಧಾರ.

"ಮಕ್ಕಳೇ, ನಮಗೆ ಲೌಕಿಕ ಸುಖ ಸಂಪತ್ತು, ಈ ಪುರಾತನ ಮನೆ, ಮಿತ್ರರು, ಹಣ, ಪ್ರಶಂಸೆ ಬೇಕಾಗಿದ್ದರೆ, ನಾವು ಮಾನಸಿಕ ಶಾಂತಿ, ನಮ್ಮ ಶ್ರದ್ಧೆ-ಗೌರವಗಳನ್ನು ತ್ಯಜಿಸಬೇಕಾಗುವದು. ನಮಗೆ ಸೌಖ್ಯವಿಲ್ಲದ ಸಿರಿವಂತಿಕೆ ಸಾಕಷ್ಟು ಸಿಗಬಹುದು. ಆದರೆ ನಾವು ಬಡವರಾಗಿದ್ದರೂ ಪ್ರಾಮಾಣಿಕರಾಗಿರಬೇಕೆಂದು ನನ್ನ ಅಪೇಕ್ಷೆ. ಸತ್ಯ, ಸುಖವನ್ನು ಆಯ್ಕೆಮಾಡಿದರೆ ನಾವು ಎಂದೆಂದಿಗೂ ನಮ್ಮ ಆಸ್ಟ್ರಿಯವನ್ನು ತೊರೆದು ಹೋಗಬೇಕಾಗುತ್ತದೆ. ನೀವೆಲ್ಲರೂ ಇದಕ್ಕೆ ಒಪ್ಪುವಿರಾ?"

"ಹೌದು. ಪ್ರಾಮಾಣಿಕರಾಗಿರೋಣ. ಎಂಥ ಕಷ್ಟ ಬಂದರೂ ನಾವು ಸಿದ್ಧ." ಎಂದು ಒಕ್ಕೊರಲಿಂದ ಹೇಳಿದರು ನಮ್ಮ ಮಕ್ಕಳು.

೩

ಸೆಪ್ಟೆಂಬರ್ ೧೯೩೮. ನಿಜವಾಗಿಯೂ ನಾವು ಅಮೇರಿಕದ ನಾಗರಿಕರಾಗುತ್ತೇವೆಂಬುದನ್ನು ನಂಬಲಿಕ್ಕಾಗಲಿಲ್ಲ!

ಅಮೇರಿಕದಲ್ಲಿ ವಾಗ್ನರ್ ಎಂಬವರೊಬ್ಬರು ನಮ್ಮ ಸಂಗೀತ ಕಛೇರಿಗಳನ್ನು ಏರ್ಪಡಿಸಲು ಇಷ್ಟಪಟ್ಟಾಗ ನಮ್ಮ ಪ್ರವಾಸ ವೆಚ್ಚ ಮುಂಗಡ ಹಣ ಹಾಗೂ 'ಅಮೇರಿಕನ್ ಫಾರ್ಮರ್' (ಹಡಗ)ದಲ್ಲಿ ಪ್ರಯಾಣಕ್ಕಾಗಿ ತಿಕೀಟುಗಳನ್ನು ಕಳಿಸಲು ನನ್ನ ಪತಿ ಪತ್ರ ಬರೆದು ಬಿನ್ನೈಸಿಕೊಂಡಿದ್ದ. ಸುದೈವದಿಂದ ಅವರು ಈ ಯೋಜನೆಗೆ ಒಪ್ಪಿದರು. ನಾವು ಆದಾಗಲೇ ಆಸ್ಟ್ರಿಯಾ ಬಿಟ್ಟಿದ್ದು ನಮ್ಮ ಅದೃಷ್ಟ: ನಾವು ಹೊರಟ ಮಾರನೆಯ ದಿನ, ದೇಶದ ಗಡಿಗಳೆಲ್ಲ ಮುಚ್ಚಲ್ಪಟ್ಟವು. ಯಾರೂ ಸೀಮೋಲ್ಲಂಘನ ಮಾಡುವಂತಿರಲಿಲ್ಲ.

ಹಡಗದಲ್ಲಿ ಪ್ರಯಾಣ ಪ್ರಾರಂಭವಾಗಲೇ ನಾವು ಇಂಗ್ಲೀಷ್ ಭಾಷೆ ಕಲಿಯಲು ಪ್ರಾರಂಭಿಸಿದೆವು. ನಾನು ಪೆನ್ನು, ಪುಸ್ತಕ ಹಿಡಿದುಕೊಂಡು ಸದಾ

ಪ್ರಯಾಣಿಕರಿಂದ (ಅವರೆಲ್ಲ ರಜೆಗಾಗಿ ಸ್ವದೇಶಕ್ಕೆ ಹಿಂತಿರುಗುವ ಅಮೇರಿಕನ್ನರಾಗಿದ್ದರು.) ಅನೇಕ ಇಂಗ್ಲೀಷ್ ಪದಾರ್ಥಗಳನ್ನು ಹೆಸರುಗಳನ್ನು ತಿಳಿದುಕೊಂಡು ನನ್ನ ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದೆ. ಅಲ್ಲಿಯೇ ನಾವು ಕೆಲವು ಅಮೇರಿಕನ್ ಹಾಡುಗಳನ್ನು ಕಲಿತೆವು. ಅಮೇರಿಕನ್ನರು ತುಂಬಾ ಸಹೃದಯಿಗಳು, ಉದಾರಿಗಳು, ಸಹಕಾರ ಪ್ರವೃತ್ತಿಯುಳ್ಳವರು.

ನಾವು ನ್ಯೂಯಾರ್ಕ್ ತಲುಪಿದಾಗ ಆ ಗಗನಚುಂಬಿ ಕಟ್ಟಡಗಳು ಗರ್ಜಿಸುವ ರೈಲು ಗಾಡಿಗಳು, ಬೃಹದಾಕಾರದ ಅಂಗಡಿಗಳಲ್ಲಿ ತಂತಾನೇ ಚಲಿಸುವ ಮೆಟ್ಟಿಲುಗಳು ಇದೆಲ್ಲ ವಿಷ್ಟು ಭಯಾನಕವಾಗಿ ಕಂಡಿತೆಂದರೆ ನಾನು ಈ ಭೂಮಿಂದನ ನಡ ಸೇರಬೇಕಾದದಿತ್ತೆಂದು ಅಂದುಕೊಂಡೆ. ಮೇಲಾಗಿ ಆ ದಿನ ರಾತ್ರಿಯ ಊಟಕ್ಕಾಗಿ ನಮ್ಮೆಲ್ಲರ ಜೇಬಿನಲ್ಲಿಯ ದುಡ್ಡನ್ನೆಲ್ಲ ಸೇರಿಸಿದರೂ ನಾಲ್ಕೇ ಡಾಲರುಗಳು ಇದ್ದವು.

ಮರುದಿನ ಮುಂಜಾನೆ ವಾಗ್ನರರನ್ನು ಭೇಟಿಯಾಗಲು ಹೋದಾಗ ಅವರು ಸಹಾನುಭೂತಿಯಿಂದ ನಮಗೆ ಮುಂಗಡವಾಗಿ ಇನ್ನಷ್ಟು ಹಣ ನೀಡಿದರು. ಮರುವಾರವೇ ನಮ್ಮ ಕಚೇರಿಗಳು ಪ್ರಾರಂಭ. ಹದಿನಂಟು ಕಾರ್ಯಕ್ರಮಗಳು ನಿಶ್ಚಿತವಾಗಿದ್ದವು.

"ಮೊದಲನೇ ಹತ್ತು ವರ್ಷಗಳು ಬಹು ಕಠಿಣ," ಎಂದು ವಾಗ್ನರ್ ಸೂಚಿಸಿದರು.

ಆ ಸಮಯದಲ್ಲಿ ನಾನು ಮತ್ತೆ ತಾಯಿಯಾಗಲಿದ್ದೆ. ವೇದಿಕೆಯ ಮೇಲಿರುವಾಗ ಜನರಿಂದ ಈ ಸಂಗತಿಯನ್ನು ಹೇಗೆ ಮರೆಮಾಡುವುದೆಂಬುದೆ ನನ್ನ ಚಿಂತೆಯಾಗಿತ್ತು. ಅದ ಕಾರಣ ನಾನು ಅತಿಸಡಿಲವಾದ ಬಟ್ಟೆಗಳನ್ನು ಧರಿಸಿ ಸ್ಥೂಲ ಕಾಯದ ಗಂಭೀರ ತಾಯಿಯ ಹಾಗೆಯಂತೆ ಕಾಣಿಸುತ್ತಿದ್ದೆ. ಹೊಸ ಪರಿಸರದಲ್ಲಿ ನಮ್ಮ ಮೊದಲ ಕಾರ್ಯಕ್ರಮದ ದಿನ. ನಾವೆಲ್ಲರೂ ಈ ಮೊದಲ ಕಚೇರಿ ಏನಾಗುವದೋ ಏನೋ ಎಂದು ಹೆದರಿಕೊಂಡಿದ್ದೆವು. ವೇದಿಕೆಯ ಮೇಲೆ ಹೆಜ್ಜೆಯಿಟ್ಟಾಗ, ಆ ಪ್ರಖರ ಪ್ರಕಾಶದಲ್ಲಿ ಮತ್ತೆ ಸಾಲ್ಗಿ ಬಗ್ಗಿದಲ್ಲಿಯಂತೆಯೇ ನಾವು ಲಜ್ಜೆ, ಸಂಕೋಚದಿಂದ ಕಾಲಿಟ್ಟಾಗ ನಮಗೆ ಕ್ಷೀಣವಾದ ಕರತಾಡನದ ಸ್ವಾಗತ.

ಕರತಾಡನದಲ್ಲಿ ಅನೇಕ ನಮೂನೆಗಳುಂಟು. ಕಲಾವಿದನ ಕಿವಿಗಳಿಗೆ ಅದರ ಸೂಕ್ಷ್ಮ ವ್ಯತ್ಯಾಸ ಗೊತ್ತಾಗುತ್ತದೆ. ಹೊಸಬರಿಗೆ ಅಷ್ಟು ಸಹಾಯಕವಲ್ಲದ ಕರತಾಡನ. ಪ್ರಸಿದ್ಧರಿಗೆ ಸಿಗುವಂಥ ಸ್ಫೂರ್ತಿದಾಯಕ ಚಪ್ಪಾಳೆ: ಒಳ್ಳೆ ಕಾರ್ಯಕ್ರಮದ ನಂತರ ಪ್ರಾಮಾಣಿಕ ರಸಿಕ ಪ್ರೇಕ್ಷಕ ವೃಂದದಿಂದ ಸುದೀರ್ಘ ಉತ್ಸಾಹಪೂರ್ಣ 'ಒನ್ಸ್‌ಮೋರ್' ಗಳಿಗಾಗಿ ಇರುವ ಹೃತ್ಪೂರ್ವಕ ಕರತಾಡನ; ಮತ್ತು ಕಚೇರಿಗಳಲ್ಲಿ ಸದಾ ಹಾಜರಿರುವ ಸುಶಿಕ್ಷಿತ ಪ್ರೇಕ್ಷಕರ ಉತ್ತೇಜಕ ಚಪ್ಪಾಳೆ. ಈ ಕೊನೆಯವರು ಸಂಗೀತಲೋಕದ ಹೊಸಬರಿಗೆ ಸಹಾಯಕರು. ಕಲಾವಿದನು ಇವುಗಳ ಅಂತರ ಅರಿಯಲು ಸಮರ್ಥನಾಗಬೇಕು.

ನಮ್ಮ ಮೊದಲ ಕಾರ್ಯಕ್ರಮವನ್ನು ಸ್ಮರಿಸಿದಾಗ ಅದು ತುಂಬಾ ದೀರ್ಘವೂ ಅತಿ ಗಂಭೀರವಾಗಿಯೂ ಇದ್ದಿತೆಂದು ಈಗ ತಿಳಿದು ಬರುತ್ತದೆ. ಅದು ಯಶಸ್ವಿಯಾದದ್ದು ಒಂದು ಚಮತ್ಕಾರವೇ; ಅಂದು ನಮಗೆ ದೊರೆತ ಪ್ರೋತ್ಸಾಹಕ್ಕೆ, ಪ್ರಶಂಸೆಗೆ ನಾವು ಹೃತ್ಪೂರ್ವಕವಾಗಿ ಹಾಡಿದ್ದೇ ಕಾರಣ. ಕೇಳುಗರೂ ತೆರೆದ ಹೃದಯದಿಂದ ನಮ್ಮನ್ನು ಅಭಿನಂದಿಸಿದರು.

ಮುಂದೆ ನ್ಯೂಯಾರ್ಕಿನಲ್ಲಿ ವಾಗ್ನರರಿಗೆ ನಮ್ಮ ಕಾರ್ಯಕ್ರಮಗಳ ಸುಗಮ ಪ್ರಗತಿಯ ವರದಿ ಒಪ್ಪಿಸಲು ಭೇಟಿಯಾದಾಗ ಮಾತಾಡುತ್ತ ನಾನು ಸಹಜವಾಗಿ ಅಂದೆ. "ಹೆರಿಗೆಯ ನಂತರವೇ ನಾನು ನಿಮ್ಮ ದಿಯಿಂದಿರಬಹುದು."

"ಯಾರ ಹೆರಿಗೆ?" ಆಶ್ಚರ್ಯದಿಂದಾತ ಕೇಳಿದ.

"ಯಾಕೆ? ನನ್ನದೇ" ಎಂದು ಸರಳವಾಗಿಯೇ ಹೇಳಿದೆ.

ಇದರ ಪರಿಣಾಮ ದುರಂತವಾಯಿತು. ಆತನು ನಮ್ಮ ಉಳಿದೆಲ್ಲ ಕಾರ್ಯಕ್ರಮಗಳನ್ನು ಕೂಡಲೇ ರದ್ದುಪಡಿಸಿಬಿಟ್ಟ. ನಮಗೆ ಮತ್ತೆ ದುಡ್ಡಿನ ಅಭಾವ: ವಿಯೆನ್ನಾದಲ್ಲಿ ನಮಗೆ ಮೊದಲೇ ಪರಿಚಯವಿದ್ದ ಒಬ್ಬ ಸ್ನೇಹಿತೆ ಒಮ್ಮೆ ಹೇಳಿದಳು: "ಅಮೇರಿಕದಲ್ಲಿ ಯಶಸ್ವಿಯಾಗಬೇಕಾದರೆ, ನೀವೊಂದು Town Hall concertಅನ್ನು ಏರ್ಪಡಿಸಬೇಕಾಗುತ್ತದೆ. ಅದಕ್ಕಾಗಿ ನಿಮಗೊಬ್ಬ

ಜಾಹೀರಾತಿನ ಏಜೆಂಟನ ಅಗತ್ಯವಿದೆ."

ಇದೆಲ್ಲ ನಮಗೆ ಅರ್ಥವೇ ಆಗಲಿಲ್ಲ. ಅನಂತರ ಅವರು ನಮಗೊಬ್ಬ ಛಾಯಾ ಚಿತ್ರಕಾರರನ್ನು ನೇಮಿಸಿದರು. ಅವರು ನಮ್ಮ ಹಿಂದುಗಡೆಯೇ ಅಲೆದಾಡುತ್ತಿದ್ದರು. ವೃತ್ತಪತ್ರಿಕೆಯಲ್ಲಿ ನಾವು ಎಲ್ಲಿ ಹೋದೆವು, ಏನು ಮಾಡಿದೆವು ಎಂಬುದೆಲ್ಲ ಪ್ರಕಟವಾಯಿತು.

'ಹೊಸ ಹೋಟೆಲಿನಲ್ಲಿ ಟ್ರ್ಯಾಪ್ ಕುಟುಂಬ ಊಟಮಾಡುತ್ತಿರುವುದು'; 'ಟ್ರ್ಯಾಪ್ ಕುಟುಂಬ ನಾಯಿಗೆ ಕೊಡುತ್ತಿರುವುದು'; 'ಟ್ರ್ಯಾಪ್ ಕುಟುಂಬ ಹೇರುಗಳನ್ನು ಹಾಕುತ್ತಿರುವುದು' ಇತ್ಯಾದಿ ಛಾಯಾಚಿತ್ರಗಳು ಪತ್ರಿಕೆಗಳಲ್ಲಿ ಬರುತ್ತಿದ್ದವು. ನಮ್ಮ ಶಾಂತಿ, ಏಕಾಂತ ಎಲ್ಲ ಮಾಯವಾಗಿ ಹೋಯಿತು. ಜೊತೆಗೆ ಟೈಮ್ಸ್, ಲೈಫ್ ಇತ್ಯಾದಿ ಪತ್ರಿಕೆಗಳ ವರದಿಗಾರರಿಂದ ನಮಗೆ ಪ್ರಶ್ನೆಗಳ ಮಳೆ:

'ನಿಮ್ಮ ಬಾಲ್ಯದೇಶವನ್ನು ಏಕೆ ಬಿಟ್ಟು ಬಂದಿರಿ?'

'ನಿಮಗೆ ಅಮೆರಿಕ ಹೇಗೆ ಅನ್ನಿಸುತ್ತಿದೆ?'

'ನಿಮ್ಮ ದೇಶದ ಮತ್ತು ಇಲ್ಲಿಯ ಊಟದಲ್ಲಿರುವ ವ್ಯತ್ಯಾಸವೇನು?'

'ನಿಮ್ಮ ಇಂಥ ವಿಚಿತ್ರ ಬಟ್ಟೆಗಳನ್ನೇಕೆ ಧರಿಸುವಿರಿ?'

ನಮ್ಮ ಸಂಗೀತ ಕಾರ್ಯಕ್ರಮಗಳು ಮತ್ತು ನಮ್ಮ ಸಾಧನೆಗಳನ್ನು ಬಿಟ್ಟು ಉಳಿದೆಲ್ಲ ವಿಷಯಗಳಲ್ಲಿಯೇ ಜನರಿಗೆ ಹೆಚ್ಚಿನ ಆಸ್ಥೆಯೆಂದು ತಿಳಿಯಿತು.

ನಮ್ಮ 'ಹನಿಮೂನ್ ಬೋಯಿಟ್' ಅತ್ಯಂತ ಜನಪ್ರಿಯವಾಯಿತು. ಪತ್ರಿಕೆಗಳು ಪ್ರತಿದಿನ ಲೇಖನಗಳನ್ನು ಪ್ರಕಟಿಸಿದವು. ನಮ್ಮ ಸಾಮಾಜಿಕ ಸಂಗೀತ ಈ ಅಪೂರ್ವ ಕುಟುಂಬದ ಸಹಕಾರ ಕೌಶಲ ಅದ್ಭುತವೆಂದು. ಅದ್ಭುತ, ಅಮೆರಿಕದ ಸಮಗ್ರತೆ, ಆನಂದದ, ಸಂಗೀತದ ಪ್ರತಿನಿಧಿಯೆಂದೂ ವರ್ಣಿಸಿದವು. ನಾವು ಪರಮಾನಂದದಿಂದ ಕುಣಿದಾಡಿ ದೇವರ ಅನುಗ್ರಹಕ್ಕಾಗಿ ಪ್ರಾರ್ಥನೆ ಸಲ್ಲಿಸಿದ್ದು.

ನಾವು ಸರಿದ ಹೋಟೆಲಿನಲ್ಲಿದ್ದು ಬೇಸರವಾಗಿದ್ದರಿಂದ ಒಬ್ಬ ಸ್ನೇಹಿತ ನಮಗಾಗಿ ಚಿಕ್ಕ ಮನೆಯೊಂದನ್ನು ಗೊತ್ತು ಮಾಡಿದರು. ನಮ್ಮ ಮಕ್ಕಳು

ಮಂಡಳಿಯು ಆ ಮನೆಯಲ್ಲಿ ನಮಗೆಲ್ಲ ಸೌಕರ್ಯಗಳನ್ನು ಒದಗಿಸಿ ಕೊಟ್ಟಿತು. ಜೀವನದಲ್ಲಿಯ ಇನ್ನೊಂದು ಉತ್ಕೃಷ್ಟ ಉಡುಗೊರೆಯಾದ ಸ್ನೇಹವೂ ನಮಗೀಗ ಲಭಿಸಿತ್ತು.

ಕ್ರಿಸ್‌ಮಸ್ ಮರುದಿನ ಆ ಹೊಸಮನೆಯಲ್ಲಿಯೇ ನನ್ನ ಗಂಡುಮಗುವಿನ ಜನನವಾಯಿತು.

ಸಂಗೀತ ಕಾರ್ಯಕ್ರಮದಿಂದಲೇ ನಾವು ಹಣ ಸಂಪಾದನೆ ಮಾಡಲು ಅನುಮತಿ ಕೊಟ್ಟಿರುವ ನಮ್ಮ ಪ್ರವಾಸಿಕರ 'ವೀಸಾ' ಮಾರ್ಚಿನಲ್ಲಿ ಮುಕ್ತಾಯಗೊಳ್ಳುತ್ತಿತ್ತು. ಆ ವೇಳೆಗೆ ಎರಡನೆಯ ಕಾರ್ಯಕ್ರಮದ ಒಪ್ಪಂದವಾಗಿ ಬರುವ ನಿಶ್ಚಯದಲ್ಲಿ ಅದು ನಿಶ್ಚಿತವಾಗಿತ್ತು. ನಾವು ತಾತ್ಕಾಲಿಕ ವಾಸ್ತವ್ಯದ ವಿಸ್ತರಣೆಗಾಗಿ ಬಿನ್ನವಿಸಿಕೊಂಡರೂ ದುರ್ದೈವದಿಂದ ನಮ್ಮ ಬೇಡಿಕೆ ಈಡೇರಲಿಲ್ಲ.

ಆ ಸಮಯದಲ್ಲಿ ಹಿಂದೆಯೇ ಸ್ಕ್ಯಾಂಡಿನೇವಿಯನ್ ದೇಶದಲ್ಲಿ ಕಛೇರಿ ನಡೆಸಲು ನಮಗೆ ಬಂದ ಆಮಂತ್ರಣ ಸ್ಮರಣೆಗೆ ಬಂದಿತು. ಕೂಡಲೇ ಅಲ್ಲಿಯ ವ್ಯವಸ್ಥಾಪಕನಿಗೆ ತಂತಿ ಕಳಿಸಿ ಅವನ ಉತ್ತರಕ್ಕಾಗಿ ಕಾತುರದಿಂದ ದಾರಿ ನೋಡಿದೆವು. ದೇವರಿಗೆ ಸಂಪೂರ್ಣ ಶರಣಾಗತರಾಗಿ ಸತತವಾಗಿ ಬೇಡಿಕೊಂಡೆವು. ಕೊನೆಯಲ್ಲಿ ನಮ್ಮ ಪ್ರಾರ್ಥನೆಗೆ ಅನುಕೂಲವಾದ ಉತ್ತರ ಬಂದಾಗ ನಮ್ಮ ಹಿಗ್ಗು ಹೇಳತೀರದು. ಮಾರ್ಚ್ ೪ರಂದು 'ನಾರ್ಮಂಡಿ' ಎಂಬ ಹಡಗಿನಲ್ಲಿ ಯುರೋಪಿಗೆ ಹೊರಟೆವು.

ಮುಂದಿನ ಆರು ತಿಂಗಳ ಕಾಲ ನಾವು ಹನ್ನೆರಡು ಜನರು [illegible] (ಆರು ತಿಂಗಳ ಮಗು ಸಹಿತ) [illegible]. [illegible] ನಲ್ಲಿನ ಆರು ಕಾರ್ಯಕ್ರಮಗಳ ನಂತರ [illegible] [illegible] [illegible] ಮಹಾಯುದ್ಧ ಘೋರ ಕ್ರಾಂತಿಗೆ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ೧೯೩೮ರಲ್ಲಿ [illegible] [illegible] [illegible]

ಬಿಟ್ಟುಹೋಗಲು ನಮಗೆ ಆಜ್ಞೆಯಾಯಿತು. ಸಾಧ್ಯವಿದ್ದ ಮಟ್ಟಿಗೆ ಚಿಂತಾಕ್ರಾಂತರಾಗಬಾರ ದೆಂದು ಪ್ರಯತ್ನಿಸುತ್ತ ಪರಮಾತ್ಮನಿಗೆ ಪ್ರಾರ್ಥಿಸುತ್ತ ದಿನದೂಡಿದೆವು. ಅಷ್ಟರಲ್ಲಿ ಮತ್ತೊಮ್ಮೆ ವಾಗ್ನರ್ ನಮಗೆ ಮುಂಗಡಹಣದೊಂದಿಗೆ ಅಮೇರಿಕಕ್ಕೆ ಹಿಂತಿರುಗಲು ಟಿಕೇಟುಗಳನ್ನು ಕಳಿಸಿದರು.

■

ಅಮೇರಿಕದಲ್ಲಿ ಈ ಸಲ ಒಟ್ಟು ಇಪ್ಪತ್ತಾಲ್ಕು ಕಚೇರಿಗಳಾದರೂ ಒಂದೂ ಯಶಸ್ವಿಯಾಗಲಿಲ್ಲ. ನಾವು ಚೆನ್ನಾಗಿಯೇ ಹಾಡುತ್ತಿದ್ದೆವಾದರೂ ಸಭಾಂಗಣಗಳೆಲ್ಲ ಬರಿದಾಗಿರುತ್ತಿದ್ದವು. ನಮ್ಮಲ್ಲಿ ರುವ ಕೊರತೆಯಾದರೂ ಏನೆಂಬುದು ತಿಳಿಯ ಲಿಲ್ಲ. ನಾವು ಪ್ರಥಮ ಶ್ರೇಣಿಯ ಕಲಾವಿದ ರೆಂದು ಗೌರವಿಸಲ್ಪಟ್ಟಿದ್ದರೂ ಅಮೇರಿಕದ ಪ್ರೇಕ್ಷಕ ವೃಂದಕ್ಕೆ ನಾವು ಬೇಕಾಗಿರಲಿಲ್ಲ; ಕಾರಣ ನಮ್ಮ ಒಪ್ಪಂದವನ್ನು ಮತ್ತೆ ನವೀಕರಿಸಲಿಕ್ಕಾಗುವದಿಲ್ಲ ವೆಂದು ಕಟ್ಟಕಡೆಗೆ ವಾಗ್ನರ್ ತಿಳಿಸಿದಾಗ ನಮಗೆ ಆಘಾತವೇ ಆಯಿತು.

ನಾನು ಮತ್ತೊಬ್ಬ ವ್ಯವಸ್ಥಾಪಕರನ್ನು ವಿಚಾರಿಸಿದಾಗ ಅವರು ಧ್ವನಿಪರೀಕ್ಷೆಗಾಗಿ ಬರುವ ವಾರದಲ್ಲಿ ಬರಹೇಳಿದರು. ಎಂಟು ದಿನ ಸತತ ಸಾಧನೆ ಮಾಡಿ ಅತಿ ಕಠಿಣ ಹಾಡುಗಳನ್ನು ಆಯ್ಕೆ ಮಾಡಿ ಆದಷ್ಟು ಗಂಭೀರವಾಗಿ ಹಾಡಿದೆವು. ಆದರೆ ಮತ್ತೆ ನಿರಾಕರಣೆಯ ಉತ್ತರ. ನಾನು ಧೈರ್ಯ ದಿಂದ 'ಇನ್ನೊಂದು' ಧ್ವನಿಪರೀಕ್ಷೆಗಾಗಿ ವಿನಂತಿ ಸಿದೆ. ಈ ಸಲ ಮತ್ತೂ ಕಠಿಣವಾದ ಪುರಾತನ ಹಾಡುಗಳನ್ನು ಸಾಧನೆ ಮಾಡಿದೆವು. ಇದು ವಿಫಲವಾದರೆ ನಾವು ಅನಾಗರಿಕರಾಗಿಯೋ ಪರಿ ಚಾರಿಕೆಯರಾಗಿಯೋ ದುಡಿಯಬೇಕಾಗು- ತ್ತಿತ್ತು!

ಮತ್ತೆ "ಸಾಧ್ಯವಿಲ್ಲ" ಎಂಬ ಉತ್ತರ.

"ಯಾಕೆ?" ಧೈರ್ಯದಿಂದ ಕೇಳಿದೆ.

"ನಿಮ್ಮಲ್ಲಿ ಆಕರ್ಷಣೆ ಎಲ್ಲಿದೆ? ನಿಮ್ಮ ರೂಪ ದಲ್ಲಿ ಯಾವುದೂ sex appeal ಇಲ್ಲ. ನೀವು ಒಳ್ಳೆಯ ಕಲಾವಿದರೆಂದು ಒಪ್ಪಿದರೂ ಜನ ಸಾಮಾನ್ಯರು ನಿಮ್ಮ ದ್ವಾಪರ ಯುಗದ ಹಾಡು ಗಳನ್ನು ಕೇಳಲು ಬಯಸುವರೆಂದು ತಿಳಿಯು ವಿರಾ? ನಿಮ್ಮ ಮುಖಮುದ್ರೆ ಎಷ್ಟೊಂದು ಗಂಭೀರ, ನಿಮ್ಮ ಬಟ್ಟೆಗಳು ಎಷ್ಟು ಹಳೆಯ ವಿನ್ಯಾಸದವು! ನೀವು ಅಂಗಪ್ರದರ್ಶನವಾಗುವಂಥ ಪಾರದರ್ಶಕ ಬಟ್ಟೆ ತೊಟ್ಟು ಮುಖ ತುಟಿಗಳಿಗೆ ಬಣ್ಣ ಹಚ್ಚಿಕೊಂಡರೆ ಎಲ್ಲರ ಮನಸೆಳೆಯು ವಿರಿ" ಎಂದಾತ ಹೇಳಿದ.

"ಇಲ್ಲ, ಇಲ್ಲ, ನಮ್ಮಿಂದ ಇದು ಸಾಧ್ಯವಿಲ್ಲ," ನಾನು ಗಂಭೀರವಾಗಿ ನುಡಿದೆ. ಈ ಹೋರಾಟ ದಲ್ಲಿ ಸೋಲು ಕಂಡಿದ್ದೆವು. ಮತ್ತೊಮ್ಮೆ ನನಗೆ ಅತೀವ ನಿರಾಶೆ ಆವರಿಸಿತು.

ಅರ ಮತ್ತೊಮ್ಮೆ ವಿಚಾರ ಮಾಡಿದ. ನಮ್ಮ ಜಾಹೀರಾತಿಗೆ ನಾನು ಮುಂಗಡವಾಗಿ ಐದು

ಮೇಲಿನ ಲಾಭದಾಯಕ ಅಂಶಗಳಲ್ಲದೆ, ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್ ಯೋಜನೆಯ ಇತರ ಸೌಲಭ್ಯಗಳು :

* ಸುಲಭ — ಯಾವುದೇ ಅಂಚೆ ಕಛೇರಿಯಲ್ಲಿ ಸರ್ಟಿಫಿಕೇಟ್‌ಗಳನ್ನು ನೀವು ಕೊಳ್ಳಬಹುದು. ನೀವು ಠೇವಣಿ ಇಡುವ ಮೊತ್ತಕ್ಕೆ ಯಾವುದೇ ಮಿತಿ ಇಲ್ಲ. ಇತರರ ಸಹಭಾಗಿತ್ವದೊಂದಿಗೆ ಅಥವಾ ವೈಯಕ್ತಿಕವಾಗಿ.

* ಅನುಕೂಲ — 3 ವರ್ಷಗಳ ನಂತರ ನಿಮ್ಮ ಠೇವಣಿಯನ್ನು ಬಡ್ಡಿ ಸಮೇತ ಹಿಂದೆಗೆದುಕೊಳ್ಳಬಹುದು.

* ಕೋರ್ಟು ವ್ಯವಹಾರಗಳಿಂದ ದೂರ — ಅನಿರೀಕ್ಷಿತ ಮರಣದ ಸಂದರ್ಭಕ್ಕೆಂದು, ನಾಮಕರಣ ಮಾಡಬಹುದು. ಕಾಲ ಮತ್ತು ಹಣವನ್ನು ವ್ಯಯಮಾಡುವ ಮೊಕದ್ದಮೆಗಳ ತೊಂದರೆಯಿರುವುದಿಲ್ಲ.

6ನೇ ಮಾಲಿಕೆಯಲ್ಲಿ, 12% ದರದಲ್ಲಿ ನಿಮ್ಮ ಚಕ್ರಬಡ್ಡಿ ಕೂಡಿಕೊಳ್ಳುತ್ತಿರುವುದು. ಆರು ವರ್ಷಗಳ ನಂತರ ಒಟ್ಟು ಮೊತ್ತ ನಿಮ್ಮ ಕೈಸೇರುವುದು.

7ನೇ ಮಾಲಿಕೆಯಲ್ಲಿ 12% ದರದಲ್ಲಿ ಪ್ರತಿ 6 ತಿಂಗಳಿಗೊಮ್ಮೆ ನಿಮ್ಮ ಬಡ್ಡಿಯನ್ನು ಪಡೆಯಬಹುದು. ಆರು ವರ್ಷಗಳ ನಂತರ ನಿಮ್ಮ ಅಸಲನ್ನು ಹಿಂದಿರುಗಿಸಲಾಗುವುದು.

ಆರನೇ ಮಾಲಿಕೆ		ಏಳನೇ ಮಾಲಿಕೆ	
ವರ್ಗ (ರೂ.)	6 ವರ್ಷಗಳನಂತರದ ಒಟ್ಟು ಮೊತ್ತ (ರೂ.)	ವರ್ಗ (ರೂ.)	6 ತಿಂಗಳಿಗೊಮ್ಮೆ ಬಡ್ಡಿ (ರೂ.)
10	20.15		
50	100.75		
100	201.50	100	6
500	1007.50	500	30
1000	2015.00	1000	60
5000	1007[illegible].00	5000	300

ನಿಮ್ಮ ಇಂದಿನ ಮತ್ತು ಮುಂದಿನ ಜೀವನ — ಎರಡು ದೃಷ್ಟಿಯಿಂದಲೂ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್ ಲಾಭದಾಯಕ ಮತ್ತು ಸುರಕ್ಷಿತ.

ವಿವರಗಳಿಗೆ

- ಯಾವುದೇ ಅಂಚೆ ಕಛೇರಿ
- ಅಧಿಕೃತ ಏಜೆಂಟ್
- ಉಳಿತಾಯ ಅಧಿಕಾರಿ c/o ಜಿಲ್ಲಾಧಿಕಾರಿಗಳ ಕಛೇರಿ

ಸಣ್ಣ ಉಳಿತಾಯಗಳ ನಿರ್ದೇಶನಾಲಯ

14/3-A ನೃಪತುಂಗ ರಸ್ತೆ, ಬೆಂಗಳೂರು-560 001

ಸಾವಿರ ಡಾಲರು ಖರ್ಚು ಮಾಡಲು ಸಾಧ್ಯವಿದ್ದರೆ ತಾನು ಪ್ರೇಕ್ಷಕರ ಮನವೊಲಿಸಲು ಪ್ರಯತ್ನ ಮಾಡಬಹುದೆಂದು ಹೇಳಿದನು.

ಇಷ್ಟೊಂದು ಹಣ ಸಂಗ್ರಹಿಸುವುದು ನಮಗೆ ಸಾಧ್ಯವೆ? ಒಂದಿನಿತೆ ದೇವರ ಮೇಲೆ ಭಾರ ಹಾಕಿ ಪ್ರಾರ್ಥಿಸಿದಾಗ ಆ ಚಮತ್ಕಾರ ಘಟಿಸಿತು: ನಮ್ಮ ಇಬ್ಬರು ಸ್ನೇಹಿತರು ಹಣವನ್ನು ಕೈಗಡ ಕೊಡಲು ಒಪ್ಪಿದರು. ನಮ್ಮಲ್ಲಿ ವಿಶ್ವಾಸವಿಟ್ಟರಾದ ಮಿತ್ರರಿಗಾಗಿ ಕೃತಜ್ಞತಾಭಾವನೆಯೊಡನೆ ಬೇರೆ ಗಾಯಕಿಯ ಅಗತ್ಯ ಮಾಡಿದೆವು. ಇನ್ನು ಅವರ ಗೌರವಕ್ಕಾದರೂ ನಾವು ಅತ್ಯುತ್ತಮ ಕಾರ್ಯಕ್ರಮ ರೂಪಿಸಬೇಕಾಯಿತು.

ಅಮೇರಿಕದಲ್ಲಿ ನಾವು ಕಲಿತ ಇನ್ನೊಂದು ಪಾಠವೆಂದರೆ ಯಾವ ಉದ್ಯೋಗವೂ ಅಪಮಾನಕರವಲ್ಲವೆಂಬುದು. ನಮ್ಮ ಯುರೋಪಿಯನ್ನರ ದುರಭಿಮಾನವು ನಿಧಾನವಾಗಿ ಕಡಿಮೆಯಾಗಿ ಉದ್ಯೋಗದಿಂದ ಗೌರವ, ಸ್ವಾತಂತ್ರ್ಯ ಲಭಿಸುವದೆಂದು ಮನವರಿಕೆಯಾಯಿತು. ಮತ್ತೇನೆಂದರೆ ದುಡಿಯಲು ಅಪೇಕ್ಷಿಸುವವರಿಗೆ ಅಮೇರಿಕದಲ್ಲಿ ಅಸಂಖ್ಯಾತ ಸದವಕಾಶಗಳು ದೊರೆಯುವವೆಂದು ಸ್ಪಷ್ಟವಾಯಿತು. ಈ ಅಗ್ರಗಾಮಿಗಳ ದೇಶದ ಒಂದಂಶವಾಗಬೇಕಾದವರು ತಾವೂ ಅಗ್ರಗಾಮಿಗಳಾಗಿಯೇ ಮುನ್ನಡೆಯಬೇಕು.

ಆ ಬೇಸಿಗೆಯಲ್ಲಿ ಜೀವನ ಸಾಗಿಸಲು ನಮಗೆ ಬ್ಯಾಂಕಿನಲ್ಲಿದ್ದುದು ಐವತ್ತು ಡಾಲರುಗಳು ಮಾತ್ರ. ಅಷ್ಟು ಹಣ ಯಾತಕ್ಕೂ ಸಾಲದು. ಆದ್ದರಿಂದ ಹಣ ಸಂಪಾದಿಸಲು ಒಂದು ಕೈಗಾರಿಕಾ ಪ್ರಯತ್ನವನ್ನು ಪ್ರಾರಂಭಿಸಿದೆವು. ಮಕ್ಕಳೆಲ್ಲ ಕ್ರಿಸ್‌ಮಸ್ ಹಬ್ಬದ ಕೊಡುಗೆಗಳನ್ನೂ ಹುಟ್ಟು ಹಬ್ಬಗಳ ಉಡುಗರೆಗಳನ್ನೂ ತಾವೇ ತಮ್ಮ ಕೈಯಾರೆ ತಯಾರಿಸುವುದನ್ನು ನೋಡಿದರೆ ನಮ್ಮ ಕುಟುಂಬದಲ್ಲಿ ಕೈಗಾರಿಕಾ ಕೌಶಲವಿರುವಂತಿತ್ತು. ಮುಂದಿನ ಏಳು ವಾರಗಳಲ್ಲಿ ಮಕ್ಕಳೆಲ್ಲ ಕಲಾ ಪ್ರವೃತ್ತಿ, ಚಿತ್ತೈಕಾಗ್ರತೆಯಿಂದ ಚರ್ಮ, ಅಂಟು, ಮಣ್ಣು ಕಟ್ಟಿಗೆ, ಲಿನೋಲಿಯಂ ಹಾಗೂ ಬೆಳ್ಳಿಯ ವಿವಿಧ ವಸ್ತುಗಳನ್ನು ತಯಾರಿಸಿದಾಗ ಮಾರಾಟಕ್ಕೆ ಅಸಾಧಾರಣ ಸಂಗ್ರಹವೇ ಆಗಿತ್ತು. ಮಾರಾಟವೂ ಚೆನ್ನಾಗಿತ್ತು. ಈ ಹಣದಿಂದ ಮುಂದಿನ ಕಾರ್ಯಕ್ರಮಗಳ ಆರಂಭವಾಗುವವರೆಗೆ ನಮ್ಮ ಜೀವನ ಸಾಗಿತು.

ಸಪ್ಟೆಂಬರ್ ತಿಂಗಳೊಡನೆ ನಮ್ಮ ಸಂಗೀತ ಪ್ರವಾಸದ ಪ್ರಾರಂಭ. ಕಾರ್ಯಕ್ರಮದಲ್ಲೀಗ ಪ್ರತಿಯೊಬ್ಬರಿಗೂ ಅಭಿರುಚಿಯಾಗುವಂಥ ಐದು ವಿಭಾಗಗಳು: ಪವಿತ್ರಗೀತೆಗಳು, ಪುರಾತನ ಹಾಡುಗಳು, ವಾದ್ಯಸಂಗೀತ, ಕವಿತಾ ಗಾಯನ, ಮತ್ತು ಆಸ್ಟ್ರಿಯಾ, ಇಂಗ್ಲೆಂಡ್ ಹಾಗೂ ಅಮೇರಿಕದ ಲೋಕಗೀತೆಗಳು. ಮೊದಲನೇ ಕಚೇರಿಯಲ್ಲಿ ನಸುನಗುತ್ತ, ಅನೌಪಚಾರಿಕವಾಗಿ ಮುಕ್ತ ಮನಸ್ಸಿನಿಂದ ಕಲಾಪ್ರೇಮಕ್ಕಾಗಿಯೇ ಹಾಡಿದರೂ ಇನ್ನೂ ಏನೋ ಕೊರತೆ ಇರುವಂತೆ ಅನಿಸಿತು. ನಾವೆಲ್ಲ ಕೂಡಿಕೊಂಡು, ನಮ್ಮಲ್ಲಿರುವ ಕೊರತೆಯೇನೆಂದು ವಿಮರ್ಶಿಸಿ, ಏನುಮಾಡಬೇಕೆಂದು ಚರ್ಚಿಸಿದೆವು. ಅಂಥ ದಕ್ಷತೆಯಿಂದ ವರ್ತಿಸಿದರೂ ಸಮಸ್ಯೆ ಪರಿಹಾರವಾಗಲಿಲ್ಲ. ಕಾರ್ಯಕ್ರಮಗಳು ಅತ್ಯುತ್ತಮವಾಗಿರುವುದರಲ್ಲಿ ಸಂದೇಹವೇ ಇರಲಿಲ್ಲ; ಆದರೂ ತಪ್ಪಿದ ಕೊಂಡಿಯು ಗೋಚರವಾಗಲಿಲ್ಲ.

ಈ ಪ್ರವಾಸದಲ್ಲಿದ್ದಾಗ ಅಮೇರಿಕದ ಅನೇಕ ಭವ್ಯದೃಶ್ಯಗಳನ್ನು ವೀಕ್ಷಿಸಿದೆವು; ಈ ದೇಶದ ವಿಪುಲ ಸಂಪತ್ತು ಹಾಗೂ ಹೆಮ್ಮೆಯ ಪ್ರವೃತ್ತಿಗಳನ್ನು ಕಂಡು ಬೆರಗಾದೆವು.

ಕೊಲರಾಡೋದಲ್ಲಿ ಒಂದು ಕಚೇರಿಯ ಮಧ್ಯೆ ನಾನು ಸ್ವರಹಿಡಿಯಲು ದೀರ್ಘಶ್ವಾಸ ತೆಗೆದುಕೊಂಡಾಗ, ನನ್ನ ಮುಖದೆದುರು ಹಾರಾಡುತ್ತಿರುವ ನೊಣವೊಂದು ಒಮ್ಮೆಲೆ ಬಾಯಲ್ಲಿ ಹೊಕ್ಕು ಗಂಟಲಲ್ಲಿ ಸಿಕ್ಕಿಕೊಂಡಿತು. ನನಗೆ ಉಸಿರು ಕಟ್ಟಿ ಹಾಡಲು ಅಸಮರ್ಥಳಾದೆ. ಪ್ರೇಕ್ಷಕರ ಕ್ಷಮೆಕೋರಬೇಕೆಂದು ಮನಸ್ಸಾಗಿ ವೇದಿಕೆಯ ಮುಂದುಗಡೆ ಹೋಗಿ ಸಹಜವಾಗಿ ನುಡಿದೆ:

"ಮಿತ್ರರೆ, ಹಿಂದೆಂದೂ ನಡೆಯದ ಘಟನೆ ಈಗ ನಡೆದಿದೆ. ನಾನೊಂದು ನೊಣ ನುಂಗಿದ್ದೇನೆ."

ಈ ಸರಳೋಕ್ತಿಯ ಸಫಲತೆಯಿಂದ ವಿಸ್ಮಯಗೊಂಡೆ. ಪ್ರೇಕ್ಷಕರು ಹೊಟ್ಟೆಹುಣ್ಣಾಗುವಂತೆ ನಕ್ಕು ನಕ್ಕು ತಮಾಷೆಯಲ್ಲಿ ನಲಿದಾಡಿದರು. ಆ

ಅಂತರವೆಲ್ಲ ಮಾಯವಾಗಿಹೋಗಿತ್ತು. ನಾವು ಪ್ರೇಕ್ಷಕರೊಂದಿಗೆ ಒಂದಾಗಿ ಬಿಟ್ಟಿದ್ದೆವು.

ಇದರ ಬಳಿಕ ನಮ್ಮ ಕಾರ್ಯಕ್ರಮಗಳಿಗೆ ಹೆಚ್ಚು ಕೋರಿಕೆಗಳು ಬಂದು ನೂರಾರಕ್ಕೂ ಮೇಲ್ಪಟ್ಟು ಕಚೇರಿಗಳನ್ನು ನಡೆಸಿ ಅಂತೂ ನಮ್ಮ ಶ್ರೋತೃಗಳ ವಿಶ್ವಾಸವನ್ನು ಗಳಿಸಿದೆವು. ಸಾಲಾಗಿ ಹಣ ನೀಡಿದವರ ವಿಶ್ವಾಸಕ್ಕೆ ಪಾತ್ರರಾದೆವು. ವಿಹಿತವೇಳೆಯಲ್ಲಿ ಸಾಲಗಳನ್ನೆಲ್ಲ ತೀರಿಸಿದ ಮೇಲೆಯೂ ಬ್ಯಾಂಕಿನಲ್ಲಿ ಹಣ ಉಳಿದಿರುವದರಿಂದ ಸ್ವಲ್ಪ ಆಸ್ತಿಯನ್ನೂ ಖರೀದಿಸಿದೆವು. ಈ ಜಮೀನು ವೆರ್ಮೊಂಟಿನಲ್ಲಿ ಪ್ರಕಾಶಮಾನವಾದ [illegible] ಪ್ರದೇಶದಲ್ಲಿರುವ ರಮಣೀಯ ಸ್ಥಳ. ಕೆಳಗೆ [illegible] ಮನೋಹರ ದೃಶ್ಯ; [illegible] ಶೋಭಿಸುವ ಸುಮಾರು ಒಂಭತ್ತು [illegible] ಸಾಲಿನ ಅನಂತ ವಿಸ್ತಾರ. ಪಕ್ಕದಲ್ಲಿರುವ ಜಮೀನನ್ನೂ ಕೊಂಡುಕೊಂಡಾಗ ಏಳುನೂರು ಎಕರೆಗಳ ಒಡೆಯರಾದೆವು. ನಮ್ಮ ಜಾಗದಲ್ಲಿರುವ ಚಿಕ್ಕ ಒಕ್ಕಲುತನದ ಮನೆಯನ್ನು ನಾವೇ ಎಲ್ಲರೂ ಕೂಡಿ ಅತ್ಯಂತ ಉತ್ಸಾಹದಿಂದ [illegible] ಸಿಂಗಾರಿಸಿದೆವು. ಅಲ್ಲೊಂದು ಪ್ರಾರ್ಥನಾ ಮಂದಿರವನ್ನು ಕಟ್ಟಿಕೊಂಡೆವು. ಸಂಗೀತದ ನಾದದ ಈ ಸೃಷ್ಟಿ ಕೇಂದ್ರವೇ ನಮಗೆ ಮುಖ್ಯವಾದ ಆಸ್ತಿ.

ಪಟ್ಟಣಗಳಲ್ಲಿ [illegible] ಅಸಂಸ್ಕೃತವಾಗಿ ಕಂಡುಬರುತ್ತದೆ. ಆದರೆ ಹಳ್ಳಿಗಾಡಿನಲ್ಲಿಯ [illegible] ಲಾವಣ್ಯದಿಂದ ಹೃದಯ ಸೂರೆಗೊಂಡು ಹೋಗುತ್ತದೆ.

ಅಮೇರಿಕದಲ್ಲಿ ನಾವು ಕಳೆದ ಈ ಮೂರು ವರ್ಷಗಳು ಸಾಮಾನ್ಯವಾಗಿರಲಿಲ್ಲ. ನಮ್ಮಲ್ಲಿ ಸಮಾಧಾನ [illegible]. [illegible] ನಾವು ಅಮೇರಿಕದ ಒಂದಂಶವಾಗಲು ಆಕಾಂಕ್ಷೆಯುಳ್ಳವರಾದೆವು. ಈ [illegible]. ಅಮೇರಿಕ ನಮ್ಮ ಮನೆ ಆಗಿತ್ತು; ಈ ನಾಡು, ಈ ಜನತೆಯ ಬಗ್ಗೆ ನಮ್ಮ ಹೃದಯದಲ್ಲಿ ಸೌಹಾರ್ದ ಭಾವ ಬೆಳೆಯಿತು.

ಇಷ್ಟರಲ್ಲಿ ನಮ್ಮ ಹಿರಿಯ ಗಂಡು ಮಕ್ಕಳಿಬ್ಬರಿಗೂ ಯುದ್ಧದಲ್ಲಿ ಸೇರಿಕೊಳ್ಳಲು ಕರೆ ಬಂದಿತು. ನಾವೆಲ್ಲ ಧೃತಿಗೆಟ್ಟೆವು. ಆದರು ಧೈರ್ಯದಿಂದಲೇ ಪರಿಸ್ಥಿತಿಯನ್ನು ಎದುರಿಸಿ, "[illegible] ದೇವರು ಬಾಗಿಲು ಮುಚ್ಚಿದರೂ ಕಿಟಕಿಯೊಂದನ್ನು ತೆರೆಯುತ್ತಾನೆ. ಎಂಬ ಗಾದೆ ಮಾತನ್ನು ಮರೆಯಬೇಡ," ಎಂದು ಸಂತೈಸಿದರು. ಮಾರ್ಚ್ ತಿಂಗಳಲ್ಲಿ ಅತಿಭಾರವಾದ ಮನಸ್ಸಿನಿಂದ ಪ್ರಾರ್ಥನಾ ಆಶೀರ್ವಾದಗಳೊಂದಿಗೆ ಅವರಿಗೆ ವಿದಾಯ ಹೇಳಿದೆವು.

ನಮ್ಮ ಕಾರ್ಯಕ್ರಮಗಳನ್ನೀಗ ಗಂಡು ಧ್ವನಿಯಿಲ್ಲದೇ ನೀಡಬೇಕಾಯಿತು. ಮೊದಲಿಗೆ ಇದು ಅಸಾಧ್ಯವೆನಿಸಿತು. ಸಂಪೂರ್ಣ ಹೆಣ್ಣು ಧ್ವನಿಗಾಗಿ [illegible] ಸಂಗೀತವನ್ನು ಪರಿಶೋಧಿಸಿ ಅದನ್ನು ಅಲ್ಪಾವಧಿಯಲ್ಲಿ ಕಂಠ ಪಾಠಮಾಡಿ [illegible]. ಅವರಿಬ್ಬರ ಅನುಪಸ್ಥಿತಿಯಿಂದ ನಮ್ಮ ಹಾಡುಗಾರಿಕೆ ಗುಣದಲ್ಲಿ [illegible]. ಆದರೂ ದೇವರ ಕೃಪೆಯಿಂದ ಕಚೇರಿಗಳೆಲ್ಲ ಸುಗಮವಾಗಿಯೇ ಸಾಗಿದವು. ಪ್ರೇಕ್ಷಕ ವೃಂದವು ಬಹು ಕಣ್ಣೀರು ಸುರಿಸಿತ್ತು. ಮತ್ತೊಮ್ಮೆ ಮನೋಲಹರಿಯಲ್ಲಿ ಆನಂದಿಸಿತ್ತು. [illegible] ಭಾವನಾತರಂಗಗಳ [illegible] ನಮ್ಮ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣ. ಇದೇ ಸಂಗೀತದ ಮುಖ್ಯ ಸ್ವಾರಸ್ಯ. ಕೇಳುವವರ ಮನಮುಟ್ಟಿ ಅವರು ಮೈಮರೆತು, ಸ್ವರ್ಗಾನಂದವನ್ನು ಅನುಭವಿಸುವಂತೆ ಮಾಡುವದೇ ಗಾನದ [illegible].

ಹೀಗೆ ನಾವು ಅನೇಕ ಸಂಗೀತ ಕಚೇರಿಗಳು, ಧರ್ಮಾರ್ಥ ಕಾರ್ಯಕ್ರಮಗಳು. ಸೈನಿಕರ ಶಿಬಿರದಲ್ಲಿ ಯೋಧರಿಗಾಗಿ ಮನರಂಜನಾ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದೆವು. ೧೯೪೪ರಲ್ಲಿ ಯುದ್ಧಾವೇಶವು ಉಗ್ರವಾದಾಗ ನಮ್ಮ ಶಾಂತ, ಸಂತೈಸುವ ಸಂಗೀತ ಜನರ ಮನಸ್ಥಿತಿಯನ್ನು ಎತ್ತಿಹಿಡಿಯುವದರಲ್ಲಿ ಪ್ರಮುಖ ಪಾತ್ರ ವಹಿಸಿತು. ಕ್ರೂರ ಯುದ್ಧವು ಮಾನವೀಯತೆಯ ಮೇಲೆ ಕಠೋರವಾದ ಬರೆಗಳನ್ನೆಳೆಯುತ್ತಿರುವಾಗ ಮೂಲೆಯಲ್ಲಿರುವ ನಮ್ಮ ಚಿಕ್ಕ ಸಂಗೀತ ಮಂಡಲಿಯು ಭೂಮಿಯ ಮೇಲೆ ಶಾಂತಿ, ಧರ್ಮ

ಶಾಂತಿಯ ಸಂದೇಶವನ್ನು ಸಾರುತ್ತಿತ್ತು.

ಬರುವ ವರ್ಷ ಟ್ರ್ಯಾಪ್ ಕುಟುಂಬದ ಸಂಗೀತ ಶಿಬಿರವನ್ನು ಪ್ರಾರಂಭಿಸಿದೆವು.

ನಾನು ಚಿಕ್ಕವಳಿದ್ದಾಗ ಆಸ್ಟ್ರಿಯದಲ್ಲಿ ಸಂಗೀತ ಸಪ್ತಾಹಗಳನ್ನು ನಡೆಸುತ್ತಿದ್ದೆವು. ನೂರಾರು ಜನರಿರುವ ಅನೇಕ ಗುಂಪುಗಳನ್ನು ರಚಿಸಿ ಯಾತ್ರಾರ್ಥಿಗಳೊಂದು ಹಳ್ಳಿಗಾಡಿನಲ್ಲಿ ಕೂಡಿ ಕೊಂಡು. ಒಂದು ವಾರದವರೆಗೆ ಸಂಗೀತ, ಲೋಕ ನೃತ್ಯಗಳಲ್ಲಿ ಕಾಲಕ್ಷೇಪವಾಗುತ್ತಿದ್ದವು. ಇಂಥ ಯೋಜನೆಗಳು ಅಮೇರಿಕದಲ್ಲಿ ಇನ್ನೂ ಪ್ರಾರಂಭವಾಗಿರಲಿಲ್ಲ.

ನಮ್ಮ ವಾಸಸ್ಥಳದ ಸಮೀಪದಲ್ಲಿಯೇ ಇದ್ದ ಒಂದು ವಿಶಾಲ ಸೈನಿಕ ಶಿಬಿರವು ತೆರವಾಗುತ್ತಿದೆಯೆಂಬ ವಾರ್ತೆ ಕೇಳಿ ಅಲ್ಲಿ ನಮ್ಮ ಸಂಗೀತ ಶಿಬಿರವನ್ನು ಪ್ರಾರಂಭಿಸುವ ಉದ್ದೇಶದಿಂದ ರಾಜ್ಯದ ಅರಣ್ಯಾಧಿಕಾರಿಗೆ ಮನವಿ ಕಳಿಸಿದೆವು. ಇಂಥ ಸಂಗೀತ ಶಿಬಿರದ ಕಲ್ಪನೆ ಆತನಲ್ಲಿ ಪರಿಣಾಮವುಂಟುಮಾಡಿ ತನ್ನ ರಾಜ್ಯದ ಜನರಿಗೆ ಹಿತಕರವಾದ ಮನರಂಜನೆಯನ್ನು ನೀಡುವ ಇಂಥ ಕಾರ್ಯಕ್ರಮಕ್ಕೆ ಆತನು ನಮಗೆ ಪ್ರೋತ್ಸಾಹಿಸಿದ.

ಆ ಸೈನಿಕ ಶಿಬಿರದ ಸ್ಥಳವನ್ನು ದೊರಕಿಸಿ ಕೊಂಡು ಎಲ್ಲ ಸಂಗೀತ ಪ್ರೇಮಿಗಳಿಗೆ ತಿಳಿಸಿದೆವು. "ಬರುವ ಬೇಸಿಗೆಯಲ್ಲಿ ವರ್ಮಾಂಟ್‌ನ ವೆರ್ಮಾಂಟಿನ ಟ್ರ್ಯಾಪ್ ಕುಟುಂಬದ ಸಂಗೀತ ಶಿಬಿರದಲ್ಲಿ ದೊರೆಯುವ ಗಾಯನ ಮನರಂಜನೆಗಾಗಿ ಅಗತ್ಯವಾಗಿ ಬನ್ನಿ." ಎಂದು ಸುಮಾರು ಒಂದು ಲಕ್ಷ ಆಮಂತ್ರಣ ಪತ್ರಿಕೆಗಳನ್ನು ರವಾನಿಸಿದೆವು.

ಈ ನವೀನ ಸಂಗೀತಯೋಜನೆ ಸುಲಭವಾಗಿರಲಿಲ್ಲ. ಆ ಸೈನಿಕ ಶಿಬಿರದಲ್ಲಿ ಸುಮಾರು ಹನ್ನೆರಡು ಸಾಲುಮನೆ (ಬರಾಕು)ಗಳಿದ್ದು ಅವುಗಳನ್ನು ಪಾಕಶಾಲೆ, ಭೋಜನಶಾಲೆ, ಸಂಗೀತ ಸಭಾಂಗಣ, ಪ್ರಾರ್ಥನಾಮಂದಿರ ಶಯನ ಗೃಹಗಳಾಗಿ ಪರಿವರ್ತಿಸಲು ಎರಡೇ ತಿಂಗಳ ಸಮಯವಿತ್ತು. ಸರಿಯಾದ ನೀರಿನ ವ್ಯವಸ್ಥೆ ಮಾಡುವುದು, ಅಡಿಗೆಯ ಉಪಕರಣಗಳನ್ನು ಕೊಳ್ಳುವುದು, ಎಲ್ಲಾ ಕೋಣೆಗಳನ್ನು ಅವಶ್ಯವಿದ್ದ ಪೀಠೋಪಕರಣಗಳಿಂದ ಸಜ್ಜುಗೊಳಿಸುವುದು ಇತ್ಯಾದಿ ಅನೇಕ ಕಾರ್ಯಗಳಿದ್ದು, ಎಲ್ಲವನ್ನೂ ನಮ್ಮ ಕುಟುಂಬದವರೇ ನಿರ್ವಹಿಸಿದರು.

ಜುಲೈ ೧೦ ರಂದು ಸಂಗೀತಶಿಬಿರದ ಸಾಂಪ್ರದಾಯಿಕ ಉದ್ಘಾಟನಾ ಸಮಾರಂಭ. ಸಂಜೆ ಏಳು ಗಂಟೆಗೆ ವೆರ್ಮಾಂಟಿನ ರಾಜ್ಯಪಾಲರಿಂದ ಧ್ವಜಾರೋಹಣದ ನಂತರ ಸ್ಥಳೀಯ ಮುಖ್ಯಸ್ಥರು. ಪುರಜನರು ಹಾಗೂ ಶಿಬಿರದ ಅತಿಥಿಗಳ ಸಮ್ಮುಖದಲ್ಲಿ ನಕ್ಷತ್ರಭರಿತ ಆಕಾಶದ ಕೆಳಗೆ ಆಹ್ಲಾದಕರ ಬಯಲಿನಲ್ಲಿ ನಮ್ಮ ಕಚೇರಿಯನ್ನು ಸಾದರಪಡಿಸಿದೆವು.

ಸುಮಾರು ಒಂದು ನೂರು ಅತಿಥಿಗಳು ಭಾಗವಹಿಸಿದ ಈ ಸಂಗೀತ ಶಿಬಿರ ಅತ್ಯಂತ ಯಶಸ್ವಿಯಾಯಿತು. ಪ್ರತಿದಿನ ಮುಂಜಾನೆ ಸಂಕೀರ್ಣ ಆದರೆ ಮಧುರವಾದ ಸಂಗೀತಜ್ಞರ ಆರ್ಕೆಸ್ಟ್ರಾಗಳನ್ನೂ, ಅನೇಕ ದೇಶಗಳ ಲೋಕಗೀತೆಗಳನ್ನೂ ಪ್ರಾರಂಭದ ಅಭ್ಯಾಸ

ಮೋಹಗೀತೆಗಳನ್ನೂ ಹಾಡಿದೆವು. ಹಿಂದೆಂದೂ ಹಾಡದೇ ಇದ್ದ ಜನರು ಈಗ ಇಂಥ ಆನಂದದಾಯಕ ಸಂಗೀತ ಸಾಧನೆಯಿಂದ ಅಗಾಧ ತೃಪ್ತಿಯನ್ನು ಅನುಭವಿಸುತ್ತಿರುವುದನ್ನು ಕಂಡು ನಮ್ಮಲ್ಲಿ ಸಾರ್ಥಕಭಾವ ಮೂಡಿತು. ಪ್ರತಿದಿನ ರಾತ್ರಿ ಹಾಸ್ಟೆಲುಗಳಲ್ಲಿ ಲೋಕನೃತ್ಯ ಮಾಡಿ ನಲಿದಾಡಿದೆವು. ಸಮೀಪದಲ್ಲಿರುವ ಉನ್ನತ ಬೆಟ್ಟಗಳಿಗೆ, ಸುಂದರ ಸರೋವರಗಳಿಗೆ ವಿಹಾರಾರ್ಥ ಸಂಚಾರ ಮಾಡಿದೆವು. ಪ್ರತಿರಾತ್ರಿ ಕೊನೆಯಲ್ಲಿ ಎಲ್ಲರ ಹೃದಯಗಳಿಗೆ ಪ್ರಾರ್ಥನಾವಾತಾವರಣವನ್ನು ಕೊಡಲು ದೇವರ ನಾಮಗಳನ್ನು ಹಾಡುತ್ತಿದ್ದೆವು.

"ನಮ್ಮ ಮನೆಗಳಲ್ಲಿಯೂ ಹೀಗೆ ಮಾಡುವುದು ಸಾಧ್ಯವೇ?" ಎಂದು ನಮ್ಮನ್ನು ಎಲ್ಲರೂ ಸದಾ ಕೇಳುತ್ತಿದ್ದ ಪ್ರಶ್ನೆಗೆ ಸಂಗೀತ ಶಿಬಿರವು ಉಚಿತ ಉತ್ತರವಾಯಿತು. ಈ ಹತ್ತುದಿನದ ಸಂಗೀತಾಭ್ಯಾಸದ ಕ್ರಮದಲ್ಲಿ ನಾವು ಜನರಿಗೆ ಸಾಧ್ಯವಿದ್ದಷ್ಟು ಸಂಗೀತ ಹಾಗೂ ಸಂಗೀತ ಸಾಹಿತ್ಯದ ಪರಿಚಯ ಮಾಡಲು ಪ್ರಯತ್ನಿಸಿದೆವು: ಜಗತ್ತಿನ ಎಲ್ಲ ಪುರಾತನ ಲೋಕನೃತ್ಯಗಳನ್ನು ಪುನರುಜ್ಜೀವಿತಗೊಳಿಸಲು ಅವುಗಳನ್ನು ಪ್ರಯೋಗಿಸಿದೆವು ಮತ್ತು ಎಂಥ ಸಾದಾ ಉಚಿತ ಕಾರ್ಯಕ್ರಮದಲ್ಲಿಯೂ ನಾವು ಅದರಲ್ಲಿ ಪಾಲುಗೊಳ್ಳುವುದೇ ಅತ್ಯುತ್ತಮ ಮಾರ್ಗವೆಂದು ಶಿಬಿರದಲ್ಲಿನ ಮಿತ್ರರಿಗೆಲ್ಲ ಮನವರಿಕೆಮಾಡಿಕೊಟ್ಟೆವು. ಒಟ್ಟಿಗೆ ಹಾಡುವ, ಒಟ್ಟಿಗೆ ಪ್ರಾರ್ಥಿಸುವ ಕುಟುಂಬ ಎಂದಿಗೂ ಒಟ್ಟಿಗೇ ನೆಲೆಸುವ ಕುಟುಂಬವಾಗುವುದೆಂದು ಅವರಿಗೆ ತೋರಿಸಿಕೊಟ್ಟೆವು.

ಹೀಗೆ ನಮ್ಮ ಸಂಗೀತ ಶಿಬಿರವು ಒಂದು ಸಂಪ್ರದಾಯವನ್ನು ಸ್ಥಾಪಿಸಿ ಪ್ರತಿ ವರ್ಷವೂ ಜರುಗುವ ನಿಯತಕ್ರಮವಾಯಿತು. ಮೊದಲನೇ ಸಲ ಬಂದಾಗ ಮಕ್ಕಳಿಗೆ ಯೋಗ್ಯಪದಗಳನ್ನಷ್ಟೇ ಹಾಡಬಲ್ಲ ಅಭ್ಯರ್ಥಿಗಳು ಕ್ರಮೇಣ ಬಾಕ್. ಬೀಥೋವನ್ನರ ಸ್ವರ ಸಾಧನೆಯಲ್ಲಿ ಸಮರ್ಥರಾದರು.

*

ಜನವರಿ ೧೯೪೬. ಆಸ್ಟ್ರಿಯಾದಲ್ಲಿರುವ ಅಮೇರಿಕದ ಸೇನಾಪತಿಯಿಂದ ನಮಗೆ ಬಂದ ಪತ್ರದಲ್ಲಿ ಯುದ್ಧದ ಪರಿಣಾಮವಾಗಿ ಆಸ್ಟ್ರಿಯದ ಜನತೆ ಅನುಭವಿಸುತ್ತಿರುವ ಪರಿಪಾಟಲಿನ ಮನಕರಗಿಸುವ ವಿವರಣೆಯಿದ್ದಿತು. ಆ ಜನರಿಗೆಲ್ಲ ಆಹಾರ, ಬಟ್ಟೆ, ಔಷಧಿಗಳ ಅಗತ್ಯವಿದ್ದಿತು. ಆದರೆ ನಾವು ಟ್ರ್ಯಾಪ್ ಕುಟುಂಬದ ಸಂಗೀತಗಾರರು ಅಮೇರಿಕದಲ್ಲಿನ ನಮ್ಮ ಸಂಗೀತ ಕಾರ್ಯಕ್ರಮಗಳಿಂದ ಬಂದ ಹಣದಿಂದ ಆಸ್ಟ್ರಿಯದ ಜನರಿಗೆ ಏನಾದರೂ ಸಹಾಯ ಮಾಡಬಹುದೇ ? ಎಂಬ ಕೋರಿಕೆ ಅದರಲ್ಲಿತ್ತು.

ನಾವು ಕೂಡಲೇ ಕಾರ್ಯತತ್ಪರರಾಗಿ 'ಟ್ರ್ಯಾಪ್ ಕುಟುಂಬದ ಆಸ್ಟ್ರಿಯಾ ಪರಿಹಾರನಿಧಿ ಸಂಘ'ವನ್ನು ಸ್ಥಾಪಿಸಿದೆವು. ಈ ಸಂಘದ ಅಧ್ಯಕ್ಷ ಜಾರ್ಜ್, ಉಪಾಧ್ಯಕ್ಷೆಯಾಗಿ ನಾನು. ಮಗಳೊಬ್ಬಳು ಕಾರ್ಯದರ್ಶಿನಿ. ಮಗ [illegible] ಹಾಗೂ ಪಾದ್ರಿ ಮಿತ್ರರು ಕೋಶಾಧ್ಯಕ್ಷರಾಗಿ ಕಾರ್ಯನಿರ್ವಹಣೆ ಮಾಡಿದರು.

ನಮ್ಮ ಸಂಗೀತಪ್ರವಾಸದಾದ್ಯಂತ ಎಲ್ಲ ಕಚೇರಿಗಳಲ್ಲಿ ಆಸ್ಟ್ರಿಯಾ ಪರವಾಗಿ ಅಮೇರಿಕದ ಜನರಿಗೆ ಮೊರೆಯಿಟ್ಟೆವು: ಅವರ ಉದಾರ ಸಹಾಯವನ್ನು ಯಾಚಿಸಿದೆವು. ನಾವು ಹೋದಲ್ಲೆಲ್ಲ ಜನರು ಮನಃಪೂರ್ವಕವಾಗಿ ಉತ್ತಮ ಪ್ರತಿಕ್ರಿಯೆ ತೋರಿದರು. ನಮ್ಮ ಹಾಡಿನಲ್ಲಿ ಆಹಾರ ವಸ್ತುಗಳು, ಬಟ್ಟೆ, ಮತ್ತಿತರ ಕೊಡುಗೆಗಳು ಅಪಾರವಾಗಿ ಸಂಗ್ರಹವಾದವು. ಅನಂತರ ಆ ಸಾಮಾನುಗಳನ್ನೆಲ್ಲ ಹೊಂದಿಸಿ, ಸರಿಯಾಗಿ ಕಟ್ಟಿ, ಆ ಪೆಟ್ಟಿಗೆಗಳನ್ನು ಹಡಗಿನಲ್ಲಿ ಆಸ್ಟ್ರಿಯಕ್ಕೆ ಕಳಿಸಿಕೊಟ್ಟೆವು. ಈ ಕೆಲಸವು ಯಶಸ್ವಿಯಾಗಿ ನಮಗೆ ತೃಪ್ತಿ ಸಂತೋಷವನ್ನುಂಟುಮಾಡಿತು.

*

ಅದೇ ವರ್ಷ ಬೇಸಿಗೆಯಲ್ಲಿ ನಮಗೆ ನನ್ನ ಪತಿ ಕ್ಯಾನ್ಸರಿನಿಂದ ಬಳಲುತ್ತಿರುವರೆಂಬ ಭಯಂಕರ ಸತ್ಯ ಅರಿವಾಯಿತು. ಎಲ್ಲ ಔಷಧೋಪಚಾರಗಳಾಯಿತು. ಇನ್ನುಳಿದಿರುವುದು ಅವರ ಶಾಂತ ಸಾವಿಗಾಗಿ ಪ್ರಾರ್ಥನೆಯೊಂದೇ.

ಜಾರ್ಜರು ದಿನೇ ದಿನೇ ನಿತ್ರಾಣರಾಗುತ್ತಿರುವುದು ಸ್ಪಷ್ಟವಾಗಿ ಕಂಡುಬಂದಿತು

ಕೆಲವು ದಿನಗಳ ನಂತರ ಒಂದು ರವಿವಾರ ಮಧ್ಯಾಹ್ನ ಅವನಿಗೆ ಉಸಿರುಗಟ್ಟಲು ಪ್ರಾರಂಭವಾಯಿತು. ಇದೇಕೆ ಹೀಗಾಗುತ್ತದೆ ಎಂದು ಅತ ನನ್ನತ್ತ ವ್ಯಥೆಯಿಂದ ಅಂಗಲಾಚುವಂತೆ ದೃಷ್ಟಿಯನ್ನು ಬೀರಿದ.

ಮಧ್ಯರಾತ್ರಿಯ ನಂತರ ಡಾಕ್ಟರರು ಮತ್ತೆ ಅವನ ಹೃದಯಸ್ಥಿತಿ ಪರೀಕ್ಷಿಸಿ, ಇನ್ನು ಕೊನೆ ಸಮೀಪಿಸಿತೆಂದು ನನಗೆ ತಿಳಿಸಿದರು.

ಬಹಳ ವರ್ಷಗಳ ಹಿಂದೆ ನಾವು ಒಂದು ನಿರ್ಧಾರ ಮಾಡಿದ್ದೆವು—ನಮ್ಮಿಬ್ಬರಲ್ಲಿ ಯಾರಿಗೆ ಮೊದಲು ಸಾವು ಸಮೀಪಿಸಿದೆಯೋ ಅವರಿಗೆ ಇನ್ನೊಬ್ಬರು ಸ್ಪಷ್ಟ ಸೂಚನೆ ಕೊಡಬೇಕು ಎಂದು. ಈಗ ನನ್ನ ಕರ್ತವ್ಯವೇನೆಂದು ನನಗೆ ಗೊತ್ತು. ನಿಧಾನವಾಗಿ ಎದ್ದು ಹೋಗಿ, "ಜಾರ್ಜ್, ಇದೇ, ಅಂತ್ಯವೆಂದೆನಿಸುತ್ತದೆ," ಎಂದು ಮೆಲ್ಲನೆ ಅವನ ಕಿವಿಯಲ್ಲಿ ಉಸುರಿದೆ. ಗದ್ಗದಿತನಾಗಿ. ಉಸಿರಿಗಾಗಿ ಬಡಿದಾಡುತ್ತಿರುವ ಅವನ ಹೃದಯವನ್ನು ದಾರುಣ ಪಕ್ಷಿಕೆ-ಯೊಂದು ನಡುಗಿಸಿತು. ಕೊನೆಯ ಪ್ರಯಾಸದಿಂದ ತನ್ನ ಬಲಗೈಯನ್ನು ನನ್ನ ಕುತ್ತಿಗೆಯ ಸುತ್ತ ನೇವರಿಸಿ, ಹಣೆಯ ಮೇಲೆ ಒಂದು ಅಂತಿಮ ಆಶೀರ್ವಾದವನ್ನಿತ್ತ. ಆದರೆ ನನ್ನ ಕಾರ್ಯ ಇನ್ನೂ ಮುಗಿದಿರಲಿಲ್ಲ. "ಪ್ರಿಯ ಜಾರ್ಜ್, ದೇವರ ಇಚ್ಛೆಯೆಂದು ನೀನು ಸಾವನ್ನು ಸ್ವಾಗತಿಸುವೆಯಲ್ಲವೇ?" ಎಂದು ಕೇಳಲಾರದೆ ಕೇಳಿದೆ.

ಕೊನೆಯುಸಿರಿಗಾಗಿ ಹೋರಾಡುತ್ತ ಘೋರ ನೋವಿನಿಂದ ಕಂಪಿಸುತ್ತ, "ಹೌದು" ಎಂದವನೇ ದೀರ್ಘವಾದ ಉಸಿರೆಳೆದುಕೊಂಡ.

ಅದೇ ಅವನ ಅಂತಿಮ ನುಡಿ. ತನ್ನ ಅಂತ್ಯಕಾಲದಲ್ಲಿ ದೈವಾನುಗ್ರಹವೆಂದೇ ಸಾರುವ ನಿಷ್ಠೆಯು ಮಾನವನ ಪರಮಗುರಿ.

ನಮ್ಮ ಕೃಷಿ ಕ್ಷೇತ್ರದಲ್ಲಿಯೇ, ಮನೆಯ ಅನತಿ ದೂರದಲ್ಲಿ ಬಿಶಪ್ಪರ ವಿಶೇಷ ಪರವಾನಿಗೆಯಿಂದ ಜಾರ್ಜನ ಪಾರ್ಥಿವ ಶರೀರಕ್ಕೆ ಶಾಸ್ತ್ರೋಕ್ತ ಅಂತ್ಯಕ್ರಿಯೆಗೈದೆವು. ಆ ಪವಿತ್ರ ದಿಬ್ಬಣದ ಅನಂತ ನಿದ್ರಾತಾಣದಿಂದ ಮೌನವಾಗಿ ನಮ್ಮನ್ನೆಲ್ಲ ನಿರಂತರವಾಗಿ ಅವಲೋಕಿಸುತ್ತ ನಮ್ಮನ್ನು ಅಲ್ಲಿಗೆ ಆಹ್ವಾನಿಸುತ್ತಿದ್ದಾನೆ ಜಾರ್ಜ್.

•

ಟ್ರ್ಯಾಪ್ ಸಂಗೀತ ಕುಟುಂಬ ಎಂಥ ಅಸಾಮಾನ್ಯ ಯಶಸ್ವಿ ಕುಟುಂಬ! ಎಂದು ಅನೇಕ ಸಲ ವೃತ್ತಪತ್ರಿಕೆ ಲೇಖನಸಂಗ್ರಹಗಳಲ್ಲಿ ನಮ್ಮ ವಿಷಯವಾಗಿ ಹೇಳಲಾಗಿದೆ. ಆದರೆ ನಮ್ಮ ಕುಟುಂಬದಲ್ಲಿಯೂ ಕಷ್ಟನಷ್ಟಗಳು, ಸುಖ-ದುಃಖ ಸಾವು-ನೋವುಗಳ ಪಾಲು ಇಲ್ಲದೇ ಇಲ್ಲ. ಜಗತ್ತಿನಲ್ಲಿ ಸರ್ವತ್ರ ಜನಸ್ತೋಮಕ್ಕೆ ಉತ್ಕೃಷ್ಟ ಸಂಗೀತವನ್ನು ಪ್ರಸ್ತುತಪಡಿಸಬೇಕೆಂದು ನಮ್ಮ ಧ್ಯೇಯವಿದ್ದು ಆ ಕಾರ್ಯವನ್ನು ಒಂದು ಹೃದಯ, ಒಂದು ಮನಸ್ಸಿನಿಂದ ಸಾಧಿಸಿದೆವು. ಕಾಲಚಕ್ರ ತಿರುಗಿದಂತೆ ಜೀವನದಲ್ಲಿ ಸುಖ ಶಾಂತಿಗಾಗಿ ಅಗತ್ಯವಾಗಿರುವುದು ಒಂದೇ ಒಂದು ವಸ್ತುವೆಂದು ನಮಗೆ ಹೆಚ್ಚೆಚ್ಚು ಮನವರಿಕೆಯಾಗುತ್ತಿದೆ! ಅದು ಹಣವಲ್ಲ: ಕೀರ್ತಿಯಲ್ಲ, ದೇಹಾರೋಗ್ಯವೂ ಅಲ್ಲ, ಅದು ಪ್ರೇಮ, ಮಮತೆ. ಪರಮಾತ್ಮನು ತನ್ನ ಮಕ್ಕಳಿಗಾಗಿ ದಯಪಾಲಿಸುವ ಮಾರ್ಗದರ್ಶಕ ಸಂರಕ್ಷಣಾತ್ಮಕ ದಿವ್ಯಪ್ರೇಮ. ●

ಸಾರ್ವಜನಿಕ ಸಭೆಯಲ್ಲಿ ಕ್ಲಿಷ್ಟವಾದ ವಿಷಯದ ಮೇಲೆ ಭಾಷಣ ಮಾಡಿದ ನಂತರ ಪ್ರೊಫೆಸರರು ಏನಾದರೂ ಸಂದೇಹಗಳಿದ್ದರೆ ಕೇಳಬಹುದೆಂದು ಸಭಿಕರಿಗೆ ಹೇಳಿದರು.

ಪ್ರೊಫೆಸರರನ್ನು ಇರುಕಿನಲ್ಲಿ ಸಿಕ್ಕಿಸಬೇಕೆಂದು ಕಾಯುತ್ತಿದ್ದ ಕಿಡಿಗೇಡಿಯೊಬ್ಬ ಎದ್ದು ನಿಂತು, ಅವರೇ ಹೇಳಿದ್ದ ಕೆಲವು ವಾಕ್ಯಗಳನ್ನು ಪುನರುಚ್ಚರಿಸಿ, "ಇವುಗಳಿಗೆ ತಕ್ಷಣ ಆಧಾರ ಕೊಡಬೇಕು," ಎಂದು ಆಗ್ರಹಪಡಿಸಿದ.

ಮೇಲು ತೋರಿಕೆಗೆ ಆ ವಾಕ್ಯಗಳು ಸರಿಯೆನಿಸುತ್ತಿದ್ದುದರಿಂದ ಅವುಗಳಿಗೆ ತಕ್ಷಣ ಆಧಾರ ಕೊಡುವುದು ಅಸಾಧ್ಯವೆಂದು ಪ್ರೊಫೆಸರರು ಉತ್ತರಿಸಿದರು.

"ಹಾಗಾದರೆ ನೀವು ಆಧಾರವನ್ನು ಸಾರ್ವಜನಿಕವಾಗಿ ಸಿದ್ಧಮಾಡಿ ತೋರಿಸುವ ತನಕ ನಾನು ನಿಮ್ಮನ್ನು ನಾನು ಸುಳ್ಳು ಹೇಳುವವ ಎಂದು ಕರೆಯಬಹುದೆ?" ಎಂದು ಆ ಯುವಕ ಕೆಣಕಿದ. ಈಗ ಸಭೆ ಶಾಂತವಾಗಿ ಪ್ರೊಫೆಸರರ ಉತ್ತರಕ್ಕಾಗಿ ಎದುರು ನೋಡುತ್ತಿತ್ತು.

ಯಾವ ಉದ್ವೇಗಕ್ಕೂ ಒಳಗಾಗದೆ ಪ್ರೊಫೆಸರರು, "ನಿಮ್ಮ ಹೆಸರೇನು ಮತ್ತು ನಿಮ್ಮ ತಂದೆ-ತಾಯಿಗಳು ಯಾರು?" ಎಂದು ಕೇಳಿದರು. ಆತ ಉತ್ತರಿಸಿದ ಮೇಲೆ, "ನಾನು ಕೇಳಿದ್ದಕ್ಕೆ ಇದೇನು ಸಂಬಂಧ?" ಎಂದು ಮರು ಪ್ರಶ್ನಿಸಿದ.

ಅವರೇ ನಿಮ್ಮ ನಿಜವಾದ ತಂದೆ-ತಾಯಿಗಳು ಎನ್ನುವದಕ್ಕೆ ತಕ್ಷಣ ಆಧಾರಗಳನ್ನು ತೋರಿಸೆಂದು ಪ್ರೊಫೆಸರರು ಒತ್ತಾಯಿಸಿದರು. ಆತ, ಇದು ಹೇಗೆ ಸಾಧ್ಯ? ಎಂದೊಡನೆಯೆ, ಪ್ರೊಫೆಸರರು ಗಂಭೀರವಾಗಿ, "ಹಾಗಾದರೆ, ನೀವು ಆಧಾರಗಳನ್ನು ಸಾರ್ವಜನಿಕವಾಗಿ ತೋರಿಸುವತನಕ, ನಾನು ನಿಮ್ಮನ್ನು ಏನೆಂದು ಕರೆಯಲಿ?" ಎಂದು ಕೇಳಿದರು.

—ವಿ. ಎಂ. ಜೋಶಿ

Printed & published by N. T. Nazare on behalf of Administrator, Loka Shikshana Trust, at Samyukta Karnataka Press, Koppikar Road, Hubli–580 020. Rept : Bombay : V. Satyamurthy Phone : 522412; Calcutta : H. Majumdar Phone: 46–4233; Madras : K. A. Subramanian Phone : 842201; New Delhi : P. R. Chopra Phone : 714130

KASTURI PRICE: 2-50 Regd. No. KRNG 43
Registered with the Registrar of Newspapers for India under No. 3533/57

